ಪರ್ಣಕುಟಿ

ಪರ್ಣಕುಟಿ

ಸಿದ್ದವನಹಳ್ಳಿ ಕೃಷ್ಣಶರ್ಮ

ಗಾಂಧೀ ಸಾಹಿತ್ಯ ಭಂಡಾರ
ಮಲ್ಲೇಶ್ವರಂ, ಬೆಂಗಳೂರು

ಎರಡೂವರೆ ರೂಪಾಯಿ

ಉಬ್ಬರದಲ್ಲೂ ಇಳಿತದಲ್ಲೂ
ಜೊತೆಗೇ ತೇಲುತ್ತ
ಸವಿಗೊಡುವ ಬಾಳಸಂಗಾತಿ
ಪ್ರಮೀಲಾಗೆ

★

ಮುನ್ನುಡಿ

ಶ್ರೀಮಾನ್ ಸಿದ್ದವನಹಳ್ಳಿ ಕೃಷ್ಣಶರ್ಮರವರು ತಮ್ಮ ಈ ಗ್ರಂಥಕ್ಕೆ ನನ್ನದೊಂದು ಮುನ್ನುಡಿ ಇರಬೇಕೆಂದು ಅಪೇಕ್ಷಿಸಿದ್ದಾರೆ. ಶ್ರೀ ಕೃಷ್ಣಶರ್ಮರು ನನಗೆ ಬಹಳ ಪ್ರಿಯರಾದ ತರುಣಮಿತ್ರರು. ಗ್ರಂಥವು ಲೋಕವಿಖ್ಯಾತರಾದ ಭಾರತೀಯರ ಗುರುವರ್ಗದಲ್ಲಿ ಸೇರಿರುವ ಮಹಾತ್ಮರನ್ನು ಕುರಿತದ್ದು. ಈ ಎರಡು ಕಾರಣದಿಂದ ಈ ಪುಸ್ತಕದೊಂದಿಗೆ ನನ್ನ ನಾಲ್ಕು ಮಾತನ್ನು ಸೇರಿಸುವುದರಲ್ಲಿ ನನಗೆ ತುಂಬ ಸಂತೋಷ ಮತ್ತು ಹೆಮ್ಮೆ.

ಮಹಾತ್ಮಾ ಗಾಂಧಿಯವರು ಲೋಕವಿಖ್ಯಾತರು. ಲೋಕವಿಖ್ಯಾತರಾಗಿ ಎಲ್ಲಾ ಕಾಲದಲ್ಲೂ ಕೆಲವು ಜನ ಇರುತ್ತಾರೆ. ಒಂದೊಂದು ಕಾಲಕ್ಕೆ ಒಂದೊಂದು ದೇಶಕ್ಕೆ ಲೋಕ ಎನ್ನುವುದು ಒಂದೊಂದು ಪರಿಮಿತಿಯದಾಗಿರುತ್ತದೆ. ಹಿಂದೆ ಯಾವ ಕಾಲದಲ್ಲಿ ಇದ್ದುದಕ್ಕಿಂತಲೂ ಇಂದು ಎಲ್ಲ ದೇಶದಲ್ಲಿಯೂ 'ಲೋಕ' ಹೆಚ್ಚು ವಿಸ್ತಾರವಾಗಿದೆ. ಲೋಕವಿಖ್ಯಾತಿಗೆ ಕೆಲವು ಜನಾಂಗಗಳಲ್ಲಿ ಸೌಕರ್ಯ ಹೆಚ್ಚು. ಪದವಿಯಲ್ಲಿರುವ ಪಾಶ್ಚಾತ್ಯ ಜನಾಂಗಗಳು ವಿಖ್ಯಾತಿಯ ಸಾಧನಗಳನ್ನು ಉಪಯೋಗಿಸುವ ಸ್ಥಿತಿಯಲ್ಲಿರುವುದರಿಂದ ಅವುಗಳ ಪ್ರಮುಖರಿಗೆ ಖ್ಯಾತಿ ಸುಲಭ. ಪೂರ್ವದೇಶಗಳ, ಅದರಲ್ಲಿಯೂ ಬಡತನದಿಂದಿರುವ, ಅದರಲ್ಲಿಯೂ ಪರಾಧೀನವಾಗಿರುವ ಭರತವರ್ಷದಂಥ ದೇಶದ ಪ್ರಮುಖರು ಲೋಕವಿಖ್ಯಾತರಾಗುವುದಕ್ಕೆ ಸೌಕರ್ಯ ಕಡಿಮೆ. ಇಂಥ ಪ್ರತಿಕೂಲ ಸನ್ನಿವೇಶದಲ್ಲಿದ್ದರೂ ಲೋಕವಿಖ್ಯಾತಿಯನ್ನು ಪಡೆದವರು ನಮ್ಮ ದೇಶದಲ್ಲಿ ಇರುವುದೇ ಅದು ಸಜೀವವಾಗಿರುವುದಕ್ಕೆ ಸಾಕ್ಷಿ. ಇವರಲ್ಲೆಲ್ಲ ಹೆಚ್ಚಿನ ಹೆಸರುವಾಸಿ ಮಹಾತ್ಮಾ ಗಾಂಧಿಯವರದು. ಲೋಕದ ಯಾವ ಖ್ಯಾತಿವಂತರೊಂದಿಗಾದರೂ ಇವರನ್ನು ತೂಗಬಹುದು. ಇವರು ಆ ಯಾರಿಗೂ ಕಡಿಮೆಯೆಂದು ಕಾಣುವುದಿಲ್ಲ.

ಆದರೆ ನಮಗೆ ಇಷ್ಟು ಸಾಲದು. ಒಂದು ದೇಶದ ಬೆಲೆ, ಒಂದು ಸಂಸ್ಕೃತಿಯ ಬೆಲೆ, ಒಂದು ನಡತೆಯ ಬೆಲೆ, ಮತ್ತೊಂದರ ಬೆಲೆಯನ್ನು ಅವಲಂಬಿಸಿ ನಿಲ್ಲಬಾರದು. ಪುಣ್ಯಕರ್ಮದ ಪ್ರಶಂಸೆ ಭೂಮಿಯನ್ನೂ ಸ್ವರ್ಗವನ್ನೂ ಮುಟ್ಟುತ್ತದೆ. ಹಾಗೆ ಅದು ಮುಟ್ಟಿದಾಗ ಅದನ್ನು ಮಾಡಿದವನು ಪುರುಷನಾಗುತ್ತಾನೆ, ಎಂದು ಯುಧಿಷ್ಠಿರ ಯಕ್ಷ ಸಂಭಾಷಣೆಯಲ್ಲಿ ಹೇಳಿದೆ. ಒಳ್ಳೆಯತನ ಭೂಮಿ ಅಷ್ಟನ್ನು ಒಪ್ಪಿಸಿದರೆ ಸಾಲದು. ಅದು ಸ್ವರ್ಗವನ್ನೂ ಒಪ್ಪಿಸಬೇಕು. ಈ ಸ್ವರ್ಗವೆನ್ನುವುದು ನಮ್ಮ ಅಂತರ್ಯವು ಇನ್ನೊಬ್ಬರ ಸಲುವಾಗಿ ಅಲ್ಲದೆ ಸ್ವಾಂತದ ಸಲುವಾಗಿ ಬಯಸುವ ಶ್ರೇಷ್ಠತೆ. ಈ ಶ್ರೇಷ್ಠತೆಯನ್ನು ಸ್ವಪ್ನದಲ್ಲಾದರೂ ಕಂಡ ಜೀವ ತಾನು ಮತ್ತೊಂದಷ್ಟು ಚೆನ್ನಾಗಿದೇನೆಂದು ಹೇಳಿ ತೃಪ್ತಿ ಪಡಲಾರದು ; ನನ್ನಿಂದ ಸಾಧ್ಯವಾದಷ್ಟೂ ಒಳ್ಳೆಯವನಾಗಿದೇನೆ ಎನ್ನುವುದರಲ್ಲಿ ತೊಡಗು

ತ್ತದೆ. ನಡೆದು ನಡೆದಂತೆ ಇದರ ದಿಗಂತ ದೂರ ದೂರ ಸಾರುತ್ತದೆ. ನಾನು ಎನ್ನುವುದು ಅಡಗಿ ಯಾವ ಹೊತ್ತಿನಲ್ಲಿ ವಿಶ್ವ ಎನ್ನುವುದು ಮಾತ್ರ ಮನುಷ್ಯನ ಗುರಿಯಾಗಿ ನಿಲ್ಲುತ್ತದೋ ಅಂದು ಮನುಷ್ಯನು ತಾನಿರುವ ಸ್ಥಳದಲ್ಲಿ ದಿಗಂತವನ್ನು ಸಾಧಿಸಿಕೊಳ್ಳುತ್ತಾನೆ; ‘ಯಾಸಾವಸೌ ಪುರುಷಃ ಸೋಹಮಸ್ಮಿ’ ಎನ್ನುವ ಧೈರ್ಯವನ್ನು ಪಡೆಯುತ್ತಾನೆ. ನಾನುಂಟೋ ಮೂರು ಲೋಕವುಂಟೋ ಎನ್ನುವುದು ಇಂಥ ಸಿದ್ಧ ಜೀವನದ ಸ್ಥಿತಿ. ಮಾನವನ ಮುಂಬರಿವಿನ ಎಲ್ಲೆ ಇದು. ಇದನ್ನು ಬಿಟ್ಟು ಮನುಜವರ್ಗಕ್ಕೆ ತಕ್ಕ ಧ್ಯೇಯವಿಲ್ಲ. ಇದನ್ನು ಮುಟ್ಟದೆ ಉನ್ನತ ಜೀವಿಗಳಿಗೆ ತೃಪ್ತಿಯಿಲ್ಲ.

ಈ ಯುಗಕ್ಕೆ ಈ ಧ್ಯೇಯವನ್ನು ಒಂದು ಗುರಿಯೆಂದು ತೋರಿಸಿಕೊಡುವ ಪುಣ್ಯ ಮಹಾತ್ಮಾ ಗಾಂಧಿಯವರದಾಯಿತು. ಮಾನವಕುಲ ಮೊದಲಲ್ಲಿ ಸಣ್ಣ ಸಣ್ಣ ಗುಂಪಾಗಿದ್ದು ಆಮೇಲೆ ದೊಡ್ಡ ದೊಡ್ಡ ಗುಂಪಾಗಿರುವುದನ್ನು ಕಲಿತು, ಒಂದು ದೇಶದ ಮಕ್ಕಳೆಂದು, ಒಂದು ಸಂಸ್ಕೃತಿಯ ಅನುಯಾಯಿಗಳೆಂದು, ಮತ್ತಷ್ಟು ದೊಡ್ಡ ಸಮೂಹಗಳೊಳಗೆ ಮೈತ್ರಿಯಿಂದಿರುವುದನ್ನು ಅಭ್ಯಾಸ ಮಾಡುತ್ತಿದೆ. ಆದರೆ ಮನುಜರು ಪ್ರಪಂಚದ ಶಾಲೆಯಲ್ಲಿ ಕಲಿಯಬೇಕಾದ ಪಾಠ ಇಷ್ಟರಲ್ಲಿ ಮುಗಿಯುವುದಿಲ್ಲ. ಪಾಠ ಮುಂದರಿದು ಎಲ್ಲ ಬಣ್ಣವೂ ಒಂದು ಬಣ್ಣದ ಭೇದಗಳು, ಎಲ್ಲ ದೇಶವೂ ಒಂದು ಭೂಮಿಯ ಅಂಗಾಂಗ ಭಾಗಗಳು, ಎಲ್ಲ ಸಂಸ್ಕೃತಿಯೂ ಒಂದು ಸಂಸ್ಕೃತಿಯ ಸಾಧನೆಯಲ್ಲಿ ಸಿದ್ಧಿಸಿರುವ ಅದರ ಅಂಶಗಳು, ಎಲ್ಲ ಮತವೂ ಒಂದು ಮತವನ್ನು ಅರಿಯುವ ಯತ್ನದಲ್ಲಿ ಕಂಡ ಶಾಖೆಗಳು, ಎನ್ನುವುದು ಈ ಕುಲಕ್ಕೆಲ್ಲ ತಿಳಿಯಬೇಕು. ಮಾನವ ಕುಲದ ಇತಿಹಾಸ ಈ ಮುಖವಾಗಿ ಹೊರಟಿದೆ. ಒಂದೊಂದು ಹೊತ್ತು ಇದು ಹೌದೊ ಅಲ್ಲವೊ ಎಂಬ ಶಂಕೆ ಹುಟ್ಟುವಂತೆ ಜನಾಂಗಗಳು ನಡೆದುಕೊಳ್ಳುತ್ತವೆ. ಆದರೆ ಅದೇ ಜನಾಂಗಗಳ ಬೆಳವಣಿಗೆಯನ್ನು ಒಟ್ಟಿನಲ್ಲಿ ನೋಡಿದರೆ ಅವು ಕೂಡ ಈ ಮುಖದಲ್ಲಿ ಬೆಳೆದಿರುವುದು ಕಾಣುತ್ತದೆ. ಲೋಕವೇ ಒಂದು ಎನ್ನುವ ಸೂತ್ರ ಮನುಜಕುಲದ ಸತ್ಯಸೂತ್ರ, ಮಂಗಳಸೂತ್ರ. ಇದನ್ನು ಬಹು ಪೂರ್ವದಿಂದ ನಮ್ಮ ದೇಶ ಜಪಿಸಿದೆ, ತಕ್ಕಮಟ್ಟಿಗೆ ಅನುಷ್ಠಾನ ಮಾಡಿದೆ. ಅವನತಿಯ ದೆಸೆಯಲ್ಲಿ ನಮ್ಮ ಜನತೆ ಇದನ್ನು ಮರೆತಂತಿತ್ತು; ಅನ್ನದ ಬಡತನ ಧರ್ಮದ ಬಡತನ ಎಂದು ತಿಳಿದಂತಿತ್ತು. ಇದನ್ನು ಸರಿಪಡಿಸುವುದಕ್ಕೆ ಸ್ವಾಮಿ ವಿವೇಕಾನಂದರು ಮೊದಲುಮಾಡಿದರು, ಅವರು ಆರಂಭಿಸಿದ ಕಾರ್ಯವನ್ನು ಇನ್ನೊಂದು ದಾರಿಯಲ್ಲಿ ಬೆಳೆಸಿ ಮಹಾತ್ಮರು ಭರತವರ್ಷದ ಧ್ಯೇಯ ಲೋಕದ ಧ್ಯೇಯ ಎಂದು ತೋರಿಸಿಕೊಟ್ಟು ತಾವು ಧನ್ಯರಾದರು; ದೇಶಕ್ಕೆ ಕೀರ್ತಿ ತಂದರು; ಮನುಜ ವರ್ಗಕ್ಕೇ ಮಹಿಮಾಪುರುಷರೆಂದು ಪ್ರಖ್ಯಾತರಾದರು.

ಇಂಥ ಮಹನೀಯರ ಜೀವನದ ಒಂದು ಚಿತ್ರವನ್ನು ಶ್ರೀಮಾನ್ ಕೃಷ್ಣಶರ್ಮರವರು ಇಲ್ಲಿ ರಚಿಸಿದಾರೆ. ಹಿರಿಯ ಒಂದು ಜೀವನವನ್ನು ಅರಿಯುವ ಅಧಿಕಾರದ ಮುಖ್ಯ ಅಂಶ ಅದನ್ನು ಕುರಿತ ಗೌರವ. ಜೊತೆಗೆ ಆ ಹಿರಿಯ ಜೀವನ ಯಾವ ಗುಣಗಳಿಂದ

ಕೂಡಿದೆ ಎಂದು ಗ್ರಹಿಸಬಲ್ಲ ಸೂಕ್ಷ್ಮಬುದ್ಧಿ ಇರಬೇಕು. ಇದರ ಮೇಲೆ ಲೋಕಾನುಭವ ಆವಶ್ಯಕ. ವಿಷಯಸಂಗ್ರಹವಂತೂ ಆವಶ್ಯಕವೆಂದು ಬೇರೆ ಹೇಳಬೇಕಿಲ್ಲ. ಶ್ರೀಮಾನ್ ಕೃಷ್ಣಶರ್ಮರವರಿಗೆ ಈ ಅಧಿಕಾರ ಸಂಪತ್ತು ಎಲ್ಲ ಇದೆ. ಇವರು ನಮ್ಮ ಜನತೆಯನ್ನು ಬಲ್ಲವರಾಗಿರುತ್ತ ದೇಶಪ್ರೇಮ ಭಾಷಾಪ್ರೇಮದಿಂದ ಪ್ರೇರಿತರಾಗಿ ದೇಶಸೇವೆ ಭಾಷಾಸೇವೆಯಲ್ಲಿ ನಿರತರಾಗಿದಾರೆ. ಕಷ್ಟನಿಷ್ಠುರದಲ್ಲಿ ಜೀವನವನ್ನು ನಡೆಸಬೇಕಾಗಿ ಬಂದು ಇವರು ಕ್ಷಮಾಶೀಲರೂ ಪ್ರಸನ್ನಮಾನಸರೂ ಆಗಿದಾರೆ. ಗಾಂಧೀಜಿಯವರ ಸಾಮಿಪ್ಯದಲ್ಲಿ ನಡೆದು ನುಡಿದು ಅವರ ನಡೆ ನುಡಿಗಳನ್ನು ನೋಡಿ ಕೇಳಿ ಅವರ ಬಾಳನ್ನು ವರ್ಣಿಸಲು ಅವಶ್ಯಕವಾದ ವಿಷಯಸಂಗ್ರಹವನ್ನೂ ಮಾಡಿದ್ದಾರೆ. ಈ ಕಾರಣದಿಂದ ಇವರ ಈ ಗ್ರಂಥ ಮಹಾತ್ಮರ ಜೀವನದ ಅಂತಸ್ಸತ್ವವನ್ನೇ ತಿಳಿಸಿಕೊಡಬಲ್ಲುದಾಗಿದೆ.

ಕೇವಲ ವಿಷಯದ ದೃಷ್ಟಿಯಷ್ಟರಿಂದಲೇ ಅಮೂಲ್ಯವಾಗಿ ಇರಬಹುದಾಗಿದ್ದ ಈ ಗ್ರಂಥ ಶ್ರೀ ಕೃಷ್ಣಶರ್ಮರ ಸಾಹಿತ್ಯಕೌಶಲದಿಂದ ಮತ್ತಷ್ಟು ಶ್ರೇಷ್ಠತೆಯನ್ನು ಪಡೆದಿದೆ. ಯಾವ ಸಾಹಿತ್ಯದಲ್ಲಿಯೂ ಗದ್ಯ ಅಥವಾ ವಚನ ಸಾಹಿತ್ಯ ಸಾವಕಾಶವಾಗಿಯೇ ಬರುತ್ತದೆ. ನಮ್ಮ ಸಾಹಿತ್ಯದ ಗದ್ಯರಚನೆ ಚಂಪೂಗ್ರಂಥಗಳ ಕಾಲದಿಂದಲೂ ವಾಡಿಕೆಯಲ್ಲಿ ಇದ್ದಿದೆಯಾದರೂ ಅದು ಬಹುಮುಖವಾದದ್ದು ಈಚೆಗೆ. ಬಹುಮುಖವಾದ ಕಾರಣದಿಂದ ನಮ್ಮ ಈಗಣ ಗದ್ಯಲೇಖನ ಬಹುವಿಧದ ಸೌಂದರ್ಯವನ್ನು ಬೆಳೆಸಿಕೊಂಡಿದೆ. ಶ್ರೀ ಕೃಷ್ಣಶರ್ಮರ ಈ ಗ್ರಂಥದ ಲೇಖನದಲ್ಲಿ ಅದು ವಿಚಿತ್ರವಾದ ಒಂದು ಸೌಂದರ್ಯವನ್ನು ಪಡೆದಿದೆಯೆಂದು ನನಗೆ ಕಾಣುತ್ತಿದೆ. ಶ್ರೀ ಶರ್ಮರವರು ಕಥನ ವರ್ಣನ ಟೀಕೆ ಇವನ್ನು ಯಾವುದೂ ಅತಿಯಾಗದಂತೆ ಒಂದು ಹದದಲ್ಲಿ ಬೆರೆಸಿ ಬರೆದಿರುವ ಈ ಗ್ರಂಥದ ರೀತಿ ಇಂಥ ಕೃತಿಗೆ ಚೆನ್ನಾಗಿ ಒಪ್ಪುವ ಅತ್ಯುತ್ತಮ ರೀತಿ. ಈ ವಿಷಯವನ್ನು ನಾನು ಬರೆಯುವುದಾಗಿದ್ದರೆ ಇಲ್ಲಿ ಅಲ್ಲಿ ಒಂದು ಮಾತು ಹೊರತಾಗಿ ಹೀಗೆ ಬರೆಯಲಪೇಕ್ಷಿಸಿದ್ದೇನು, ಹೀಗೆ ಬರೆದರೆ ತೃಪ್ತಿಗೊಂಡಿದ್ದೇನು. ಇಂಥ ಉತ್ಕೃಷ್ಟ ವಿಷಯವನ್ನು ಕುರಿತು ಇಷ್ಟು ಉತ್ಕೃಷ್ಟ ರೀತಿಯ ಈ ಗ್ರಂಥವನ್ನು ರಚಿಸಿದ ಬಗ್ಗೆ ನಾನು ಶ್ರೀ ಕೃಷ್ಣಶರ್ಮರವರನ್ನು ಅಭಿನಂದಿಸುತ್ತೇನೆ.

ದೇಶದ ಅಭ್ಯುದಯಕ್ಕೂ ಭಾಷೆಯ ಅಭ್ಯುದಯಕ್ಕೂ ಮಹನೀಯರನ್ನು ಕುರಿತ ಇದೇ ರೀತಿಯ ಅನೇಕ ಗ್ರಂಥಗಳು ಅವಶ್ಯಕ. ಈ ಗ್ರಂಥದ ಲೇಖಕರೂ ಇವರಂಥ ಇತರ ಮಿತ್ರರೂ ಈ ಕೆಲಸವನ್ನು ಮಾಡಬೇಕಾದರೆ ನಮ್ಮ ಜನರಿಂದ ಪ್ರೋತ್ಸಾಹ ದೊರೆಯಬೇಕು. 'ಪರ್ಣಕುಟಿ'ಗೆ ನಮ್ಮ ಜನ ತೋರಿಸುವ ಆದರಣೆ ಈ ಪ್ರೋತ್ಸಾಹದ ಸೂಚನೆ ಆಗಲಿ, ಮುಂಗಡವಾಗಲಿ, ಎಂದು ನಾನು ಹಾರೈಸುತ್ತೇನೆ.

ಬೆಂಗಳೂರು, ವಿಕ್ರಮ ಸಂವತ್ಸರ
ಮಾರ್ಗಶಿರ ಬಹುಳ ನವಮೀ
ಸೋಮವಾರ

ಶ್ರೀನಿವಾಸ

ಬಿನ್ನಹ

ಈ ಪುಸ್ತಕ ಬಂದುದರ ತಪ್ಪು ಎಲ್ಲವೂ ಶ್ರೀ ಬೇಂದ್ರೆಯವರದು. ‘ವರ್ಧಾ ಯಾತ್ರೆ’ಗೆ ಮುನ್ನುಡಿ ಬರೆದಾಗ ಅವರು ಅದನ್ನೇ ಹಿಗ್ಗಿಸಲು ಹೇಳಿದರು. ಕೊನೆಗೆ ಬೇರೆ ಪುಸ್ತಕವಾಗಿಯಾದರೂ ಬರೆಯಲು ಹೇಳಿದರು. ಅವರು ಆ ಮಾತನ್ನೇ ನಾಲ್ಕಾರುಸಲ ಒತ್ತಿ ಹೇಳಿರದಿದ್ದರೆ ಈ ಪುಸ್ತಕ ಬರೆಯಬೇಕಾದ ಸಂದರ್ಭ ಏನೂ ಇರಲಿಲ್ಲ. ಅಂತೇ ಆ ತಪ್ಪು ಏನಿದ್ದರೂ ಅವರದು. ನಾನು ನಿಮಿತ್ತಮಾತ್ರ.

‘ಪರ್ಣಕುಟಿ’ಯನ್ನು ಓದಿ ಮುಗಿಸಿದ ಮೇಲೆ ಇದು ಗಾಂಧೀವಿಚಾರ ವಿಮರ್ಶೆ ಅಲ್ಲ, ಅದರ ದೋಹನವೂ ಅಲ್ಲ ಅನಿಸಬಹುದು. ಹಾಗೆ ಅನಿಸಿದರೆ ಅದು ಸರಿ. ‘ಗಾಂಧೀ ದರ್ಶನ’ದ ಬಗ್ಗೆ ಬರೆವ ಯೋಗ್ಯತೆ ನನ್ನದಲ್ಲ. ಕನ್ನಡ ನಾಡಿನಲ್ಲಿ ಗಾಂಧೀಜಿಯನ್ನು ಅರಿತು, ಅವರ ಧರ್ಮವನ್ನು ಅರಗಿಸಿಕೊಂಡ ಹಿರಿಯರು ಅನೇಕರು ಇದಾರೆ. ಆ ಕೆಲಸ ಅವರಿಗೆ ಸೇರಿದುದು. ಇದು ಬರೀ ಒಂದು ಚಿತ್ರ. ವರ್ಧಾಯಾತ್ರೆಯಲ್ಲಿ ಮೂಡಿದ್ದ ಚಿತ್ರವನ್ನೇ ಅರಳಿಸಲಾಗಿದೆ. ವರ್ಧಾದಿಂದ ಇಲ್ಲಿ ಸೇವಾಗ್ರಾಮಕ್ಕೆ ‘ಪರ್ಣಕುಟಿ’ಗೆ ಯಾತ್ರೆ ನಡೆದಿದೆ.

ಪರ್ಣಕುಟಿಯಲ್ಲಿ ನಾನು ಕಂಡುದು ಏನು ಎಂಬುದನ್ನು ಇಲ್ಲಿ ಚಿತ್ರಿಸಿಲ್ಲ. ಯಾತ್ರಿಕನಂತೆ ಆ ಸನ್ನಿವೇಶವನ್ನು ವರ್ಣಿಸಿಲ್ಲ. ಗಾಂಧೀಜಿಯನ್ನು ನಾನು ನೋಡಿದುದು ಅದೇ ಮೊದಲು ಅಲ್ಲ. ಇಪ್ಪತ್ತು ವರುಷದ ಹಿಂದೆಯೇ. ಗಾಂಧೀಜೀ ಬೆಂಗಳೂರಿಗೆ ಬಂದಿದ್ದಾಗ ಶಾಲೆ ತಪ್ಪಿಸಿ ನಾವು ಎಷ್ಟೋ ಜನ ಮೈಸೂರಿಂದ ಬಂದಿದ್ದೆವು. ಆ ದಿನ ರಾತ್ರಿ ರೈಲಿನಲ್ಲಿ ನಾವು ಪಟ್ಟ ಉತ್ಸಾಹ; ಮರುದಿನ ದಂಡಿನಲ್ಲಿ ಸಭೆ ನಡೆದಾಗ ಮಹಾಕಾಯ ಷೌಕತ್ ಆಲಿಯೊಡನೆ ಈ ಇಲಿಯಂಥ ಮನುಷ್ಯ ಬಂದುದು; ರಪರಪ ಮಳೆ ಹೊಡೆಯುತ್ತಿದ್ದರೂ ಯಾರೂ ಕದಲದೆ ಕೂತು ಕೇಳಿದುದು; ಎಲ್ಲವೂ ಕಣ್ಣಿಗೆ ಕಟ್ಟಿದಂತಿದೆ. ಅಲ್ಲಿಂದ ಮುಂದೆ ಗಾಂಧೀಕಿ ಜೈ ಎಂಬ ಕೂಗು ಕೇಳಿಸದ ಗಳಿಗೆಯೇ ಇಲ್ಲ.

ಮುಂದೆ ಪರದೇಶೀ ವಸ್ತ್ರದಹನದ ಉತ್ಸವಗಳಲ್ಲಿ, ಕಚೇರಿ ಶಾಲೆಗಳ ಬಹಿಷ್ಕಾರ-ರಾಷ್ಟ್ರೀಯ ಶಾಲೆಗಳ ಸ್ಥಾಪನೆಯಲ್ಲಿ, ೧೯೨೨ರ ಐತಿಹಾಸಿಕ ಸಂದರ್ಭದಲ್ಲಿ, ಗಾಂಧೀಜಿಯ ಚಿತ್ರವೊಂದು ಮನಸ್ಸಿನಲ್ಲಿ ಮೂಡುತ್ತ ಬಂತು. ಬೆಳಗಾಂವಿಯ ಕಾಂಗ್ರೆಸ್ಸು ಅದಕ್ಕೆ ಅಲ್ಲೊಂದು ಇಲ್ಲೊಂದು ಬಣ್ಣ ಕೊಟ್ಟಿತು. ಆ ಬೆಳಕಿನಲ್ಲಿ ಗಾಂಧೀ ಸಾಹಿತ್ಯವನ್ನು ಓದುವ ಆಸೆ ಆಯಿತು. ಇದೆಲ್ಲದರ ಪರಿಣಾಮವನ್ನು ‘ಪರ್ಣಕುಟಿ’ಯಲ್ಲಿ ಕಾಣಬಹುದು.

ಆದರೂ ‘ಪರ್ಣಕುಟಿ’ ಮುಖ್ಯವಾಗಿ ೧೯೩೮-೩೯ರಲ್ಲಿ ನನ್ನ ಮನಸ್ಸಿನಲ್ಲಿ ಮೂಡಿದ ಭಾವಗಳ, ಭಾವನೆಗೆ ಬಂದ ಬಣ್ಣಗಳ, ಚಿತ್ರ. ಆಗ ನಮ್ಮದು ಬಲವಾದ ರಾಜಕೀಯ ಆಂದೋಳನ. ಹೈದರಾಬಾದಿನ ಆ ಪ್ರಕರಣ ಎಲ್ಲರಿಗೂ ತಿಳಿದಿದೆ. ಆ ಕಾರಣ

ನಿಂದ ಹೈದರಾಬಾದಿನಿಂದ ಗಡೀಪಾರಾಗಿ ವರ್ಧಾಕ್ಕೆ ಹೋದರೂ ಹಿಂದಿನಿಂದ ಮನಸ್ಸಿನಲ್ಲಿ ಮನೆಮಾಡಿಕೊಂಡಿದ್ದ ವಿಚಾರಭಾವಗಳನ್ನು ಮೆಲಕುಹಾಕಬೇಕಾಯಿತು. ಆ ಪ್ರಯತ್ನದಲ್ಲಿ ಕಾಣಬಂದ ಚಿತ್ರಗಳಲ್ಲಿ ಇವು ಕೆಲವು ಗೆರೆ ಮಾತ್ರ.

ಗಾಂಧೀಜೀ ಅನಂತರೂಪಿ. ಅವರನ್ನು ಬೇರೆ ಬೇರೆಯಾಗಿ ಗುರುತಿಸಿಕೊಂಡವರಿದಾರೆ. ರಾಜಕೀಯ ಸಲಹೆ ಕೇಳಲೆಂದೇ ಹೋಗಿದ್ದರೂ ಮನಸ್ಸಿನಮೇಲೆ ಮುದ್ರಿತವಾದುದು ಅವರ ಧಾರ್ಮಿಕ ಜೀವನ, ಅವರ ಸಂಸ್ಕೃತಿ. ಪರ್ಣಕುಟಿಯ ಅಂಗಳದಲ್ಲಿ ನಡೆದ ಪ್ರಾರ್ಥನೆಯೇ ಆ ಗುಡಿಯ ಮಹಾದ್ವಾರ. ಅಲ್ಲಿಂದ ಒಳಹೊಕ್ಕು ವಿಶಾಲವಾದ ಪ್ರಾಕಾರದಲ್ಲಿ ಅಲೆದಾಡಿದೇನೆ. ಅಲ್ಲಿ ಕಂಡುಬಂದ ಬೇರೆ ಬೇರೆ ಪ್ರತಿಮೆಗಳನ್ನೂ ನೋಡಿದೇನೆ.

ಪ್ರಾರ್ಥನೆಯ ಬಲದ ಮೇಲೆ ನಿಂತ ಆ ಬಾಳಿನಲ್ಲಿ ದರಿದ್ರನಾರಾಯಣನೇ ಆರಾಧ್ಯದೇವತೆ. ಖಾದಿಯೇ ಆ ದೇವತೆಯ ಪೂಜಾವಿಧಾನ. ಆ ಪೂಜೆಯಲ್ಲಿ ಕಣ್ಣಿಗೆ ಸುಲಭವಾಗಿ ಕಾಣದ ಒಂದು ಸೊಬಗು ಇದೆ. ಇದೇ ಸೊಬಗು, ಅದೇ ಸೊಗಸು ಎಂದು ಹೇಳಬಲ್ಲವರು ಯಾರು ? ಹೀಗೆ ಆಲೋಚನೆ ಮಾಡುತ್ತ ಸೊಬಗು ಎಂಬುದರ ಮೂಲಕ ಏನು, ಗಾಂಧೀಜೀ ಏನು ಹೇಳುತ್ತಾರೆ ಎಂದುಕೊಂಡಾಗ ಗಾಂಧೀಜಿಯ ಬಾಳಿನಲ್ಲಿ ನಿಜವಾದ ಕಲೆ ಇದೆ ಅನಿಸುತ್ತದೆ. ಆ ಅಂತಃಕರಣದ ರಸಿಕತೆ ಸತ್ಯದಲ್ಲಿ ಹುಟ್ಟಿ ಸತ್ಯದಿಂದ ಬೆಳೆದುದು ಎಂಬುದು ಹೊಳೆಯುತ್ತದೆ.

ಹಾಗೆಯೆ ಕಲೆಯ ಕಣ್ಣಿಂದ ಗಾಂಧೀಜಿಯನ್ನು ನೋಡಿದರೆ ಉಳಿದ ಎಲ್ಲ ಪ್ರಕರಣಗಳೂ ತಿಳಿಯಾಗುತ್ತವೆ. ಆ ಕಲಾಪುರುಷನ ಬದುಕು ಮಾನವ ಸಂಬಂಧಗಳಲ್ಲಿ-ಹೆಂಗಸರೊಡನೆ ಮಕ್ಕಳೊಡನೆ, ತನ್ನ ಕುಟುಂಬದೊಡನೆ-ಹೇಗೆ ರೂಪುಗೊಂಡಿದೆ ; ಹೇಗೆ ಆ ರೀತಿಯಲ್ಲಿ ಒಂದು ಉಚ್ಚ ಸಂಸ್ಕೃತಿ, ಆಳವಾದ ಸಿದ್ಧಾಂತ ಇದೆ ಎಂಬುದು ಅರ್ಥವಾಗುತ್ತದೆ.

ಆ ಕಲೆಗೆ, ಆ ಸಾಹಿತ್ಯಕ್ಕೆ, ಆ ವಿನೋದದ ರುಚಿಗೆ, ಆ ಸಲಿಗೆಯ ಸ್ವಭಾವಕ್ಕೆ, ವಿಶ್ವಕುಟುಂಬದ ಭಾವನೆಗೆ - ಎಲ್ಲಕ್ಕೂ ಆ ಸತ್ಯದೃಷ್ಟಿಯೇ ಆಧಾರ. ಎಲ್ಲಕ್ಕೂ ಸತ್ಯಶೋಧನೆಯ ಹದ ಇದೆ. ಕಸ್ತೂರಿಬಾನೊಡನೆ ಅವರು ನಡಸಿದ ಸಂಸಾರದಲ್ಲಿಯೂ ಅದೇ ಹೆಜ್ಜೆ. ದರಿದ್ರನಾರಾಯಣ ಅವರ ವ್ಯವಹಾರ ದೇವತೆಯಾದರೆ ಸತ್ಯನಾರಾಯಣ ಅವರ ಅಂತರಂಗದ ಇಷ್ಟದೇವತೆ.

ಆ ದೇವತೆಯ ಕಲ್ಪನೆ ಅವರಿಗೆ ಸ್ಪಷ್ಟವಾಗಿದೆ. ಅದರ ಸ್ಥಿರವಾದ ಅರಿವೇ ಅವರ ಕೈದೀಪ. ತಮ್ಮ ಗುರಿ, ತಮ್ಮ ಸಾಧನೆಯ ಹಾದಿ, ಎಲ್ಲಾ ಅದೇ. ಆ ಸತ್ಯದ ಬೆಳಕು ಅವರಿಗೆ ಗೀತೆಯಲ್ಲಿ ನಂದಾದೀಪವಾಗಿ ಸದಾ ಕಾಣಬರುತ್ತಿದೆ. ಗೀತೆಯನ್ನು ಅವರು ಅಷ್ಟು ಬಲವಾಗಿ ನಂಬಿದಾರೆ.

ಹೀಗಾಗಿ ‘ಪರ್ಣಕುಟಿ’ಯ ಈ ಕೆಲವು ಗೆರೆಗಳ ಮುಸುಕು ಚಿತ್ರದಲ್ಲಿ ಕಾಣುವ ವ್ಯಕ್ತಿತ್ವ ಸತ್ಯಾರಾಧಕನಾದ ಒಬ್ಬ ಮಹಾಕವಿಯದು, ಕುಲರಸಿಕನದು. ಆತನ ರಾಜಕೀಯ ಸಿದ್ಧಾಂತಗಳ ಚರ್ಚೆಯ ಗೋಜಿಗೆ ಹೋಗಿಲ್ಲ. ಆ ಉದ್ದೇಶವೂ ಇಲ್ಲ.

ಅಂತಲೇ ಈ ಪುಸ್ತಕ ಓದುವವರು ಇದನ್ನು ನನ್ನ ವರ್ಧಾ ದಿನಚರಿಯೆಂದಾಗಲಿ, ಪ್ರವಾಸ ಸಾಹಿತ್ಯವೆಂದಾಗಲಿ ತಿಳಿದು ಓದಬಾರದು. ಪರ್ಣಕುಟಿಯಲ್ಲಿ ಗಾಂಧೀ ವಿಚಾರ ಸಂಗ್ರಹದ ಆಸೆಯಿಲ್ಲ. ವಿಮರ್ಶೆ ಮಾಡುವ ಚಪಲವೂ ಇಲ್ಲ. ಎರಡರಲ್ಲಿಯೂ ನನ್ನ ಮನಸ್ಸನ್ನೇ ಬಯಲಿಗೆಳೆದು ಓದುಗರ ಕಣ್ಣೆದಿರು ಒಡ್ಡಿದೇನೆ.


ಹಿರಿಯರಾದ ಮಾಸ್ತಿಯವರು ಕನ್ನಡದ ಕಿರಿಯರಿಗೆ ಅನೇಕ ರೀತಿಗಳಲ್ಲಿ ದೊಡ್ಡ ನಿಧಿ. ಅವರು ಮುನ್ನುಡಿಯ ಕುಂಕುಮವನ್ನು ಇಟ್ಟರೆ ಕಾವ್ಯಕನ್ಯೆ ದೀರ್ಘಸುಮಂಗಲಿಯಾಗುತ್ತಾಳೆ. ಆ ಕೈಗುಣ ಅವರಲ್ಲಿದೆ. ಆ ಹರಕೆ ಹಿರಿಯ ಮನಸ್ಸಿನದು. ಅದರ ಸಾಫಲ್ಯ ಆ ಮನಸ್ಸಿನ ಗುಣ. ಅಂಥವರು ಈ ಪುಸ್ತಕಕ್ಕೆ ಮುನ್ನುಡಿ ಬರೆಯಲೊಪ್ಪಿದುದು ನನ್ನ ಭಾಗ್ಯ. ಇದಕ್ಕೂ ಗೆಳೆಯ ಬೇಂದ್ರೆಯವರೇ ಕಾರಣ. ಇಬ್ಬರಿಗೂ ನಾನು ಕೃತಜ್ಞ.

ಕೃಷ್ಣಶರ್ಮ

ಹ ರ ಕೆ

Your exquisite pen-portrait prime
Of Bapoo, simple, sweet sublime,
Gladdens soul and saddens heart!
Surest sign of supreme art!

a' toi



10—4—42 Dindigul.

...ಪರ್ಣಕುಟಿ

ಗಾಂಧೀಜೀ ಎಂದರೆ ಒಬ್ಬ ವ್ಯಕ್ತಿಯಲ್ಲ. ಅದು ಒಂದು ಪಂಥ. ...ಶಿಲ್ಪದಲ್ಲಿ ಜಕಣಾಚಾರಿ ಇದ್ದಹಾಗೆ. ಜಕಣಾಚಾರಿ ಎಂಬ ಒಬ್ಬ ವ್ಯಕ್ತಿ ಇದ್ದಿರಬಹುದು. ನಮಗೆ ಆ ನಾಮರೂಪಗಳಲ್ಲಿ ಈಗ ರುಚಿಯಿಲ್ಲ. ಜಕಣಾಚಾರಿ ಶಿಲ್ಪದ ಒಂದು ಹಾದಿ.

ಗಾಂಧೀಜಿಯ ವ್ಯಕ್ತಿಯನ್ನು ವರ್ಣಿಸುವುದು ಕಷ್ಟವಲ್ಲ. ಅದರ ಅಗತ್ಯವೂ ಕಡಿಮೆ. ನಮ್ಮ ದೇಶದಲ್ಲಿ ಕೋಟ್ಯಾನುಕೋಟಿ ಜನ ಅವರನ್ನು ಪ್ರತ್ಯಕ್ಷವಾಗಿ ನೋಡಿದಾರೆ. ಅವರ ಹಾಗೆ ಹಿಂದೂಸ್ಥಾನದ ಹಳ್ಳಿಗಳನ್ನು ತಿರುಗಿದವರು ಯಾರೂ ಇಲ್ಲ. ಕೋಟಿ ಗುಡಿಸಿಲಲ್ಲಿ ಅವರ ಚಿತ್ರ ಇದೆ. ಕೋಟಿ ಬಾಯಿಂದ ಮಹಾತ್ಮಾ ಗಾಂಧೀಕಿ ಜೈ ಎಂಬ ಹರಕೆ ಸದಾ ಕೇಳಿಸುತ್ತದೆ. ದೊಡ್ಡದೊಡ್ಡ ಸಭೆಗಳಲ್ಲಿ ಲಕ್ಷೋಪಲಕ್ಷ ಜನ ಗಾಂಧೀಜಿಯ ಬರವಿಗಾಗಿ ಕಣ್ಣಲ್ಲೇ ಜೀವ ತುಂಬಿಕೊಂಡು ಕೂತಿರುತ್ತಾರೆ. ಆ ಉತ್ಸಾಹದಲ್ಲಿ ಅವರ ಉಸಿರೇ ನಿಂತ ಹಾಗೆ ಇರುತ್ತದೆ. ಮಾತು ಆ ಭಾವಕ್ಕೆ ಭಂಗ. ಮನಸ್ಸೆಲ್ಲ ಬರಿದುಮಾಡಿ ನಿಶ್ಶಬ್ದವಾಗಿ ಗಳಿಗೆಯೊಂದು ಯುಗದಂತೆ ಕುಳಿತಿರುತ್ತಾರೆ. ಇದೇನು? ಜನವೆಲ್ಲ ಒಂದೇ ಮೈಯ ಹಾಗೆ ಎದ್ದು ನಿಂತರು. ಓಹೋ! ಗಾಂಧೀಜೀ ಬಂದರು; ಬಂದರು ಎನ್ನುವುದರೊಳಗಾಗಿ ಬಂದೇ ಬಿಟ್ಟರು.

ಹಿಂದೂಸ್ಥಾನದ ಜನಕ್ಕೆ ಗಾಂಧೀಜೀ ಒಂದು ಸಮ್ಮೋಹನ ಮಂತ್ರ ಅವರು ನಡೆದ ದಾರಿಯ ಧೂಳನ್ನು ಜನ ಹಣೆಗೆ ಹಚ್ಚುತ್ತಾರೆ. ಸಾವಿರಾರು

ಹರದಾರಿಯಿಂದ ಅವರ ದರ್ಶನಕ್ಕಾಗಿ ಬರುತ್ತಾರೆ. ಆ ದರ್ಶನದಿಂದ ತಮ್ಮ ಸಕಲ ಪಾಪವೂ ಹರಿಯಿತೆಂದು ತಿಳಿಯುತ್ತಾರೆ. ಬುದ್ಧದೇವನ ಹಾಗೆ ಗಾಂಧೀಜಿಗೆ ಪೂಜೆ ಸಲ್ಲುತ್ತದೆ. ಶ್ರೀರಾಮಚಂದ್ರನ ಹಾಗೆ ಗಾಂಧೀಜೀ ಒಂದು ಅವತಾರ ಎಂದು ತಿಳಿಯುತ್ತಾರೆ. ಈ ಆದರ, ಈ ಭಕ್ತಿ ಹಿಂದೂಸ್ಥಾನದ ನಾಲ್ಕು ದಿಕ್ಕುಗಳನ್ನು ದಾಟಿ ಜಗತ್ತಿನಲ್ಲಿ ಮೊಳೆತಿದೆ. ಮಿದುವಾದ ಕಪ್ಪುಗಂಣಿನ ಈ ಬಡಕಲು ಬೈರಾಗಿಯ ಹೆಸರು ಜಗತ್ತಿನ ಮೂಲೆಮೂಲೆಗೂ ತಿಳಿದಿದೆ.

ಮೈಸೂರಿನ ಸನ್ಯಾಸಿಯೊಬ್ಬರು ಫ್ರಾನ್ಸ್ ದೇಶಕ್ಕೆ ಹೋಗಿದ್ದರು. ಅಲ್ಲಿ ಒಂದು ಕಡೆ ರೈಲು ನಿಲುತಾಣದಲ್ಲಿ ಇವರ ಸಾಮಾನು ಹೊತ್ತ ಪೋರ್ಟರ್ ಒಬ್ಬನು ಹೊರಗೆ ಬಂದು ಸಾಮಾನು ಇಳಿಸಿದಮೇಲೆ, ಇವರು ಕೂಲಿ ಕೊಟ್ಟರೆ ಬೇಡ ಎಂದು ನಿರಾಕರಿಸಿದನಂತೆ. ಇವರಿಗೆ ಅವನ ನಡತೆ ಅರ್ಥವಾಗಲಿಲ್ಲ. ಏಕೆ ಎಂದು ಕೇಳಿದರು. 'ಹಾ, ನೀವು ಗಾಂಧೀ ದೇಶದವರು!' ಎಂದನಂತೆ. ಗಾಂಧೀಜೀ ದೇವರು, ಅವತಾರ! ಅವರ ಮನೆಯವರಿಗೆ ಅಷ್ಟಾದರೂ ಗೌರವ ಬೇಡವೆ? ಯಾರೋ ಒಬ್ಬ ಮನುಷ್ಯ ಲಂಕೆಗೆ ದಾರಿತಪ್ಪಿ ಬಂದು ಬಿದ್ದಿದಾಗ ಅವನನ್ನು ವಿಭೀಷಣ ಪಲ್ಲಕ್ಕಿಯಲ್ಲಿ ಮೆರೆಸಿ ಕಳಿಸಿದನಂತೆ, ಹಾಗೆಯೇ.

ಒಬ್ಬ ಹಿಂದೀ ಕ್ರೈಸ್ತರ ಬಿಷಪ್ ಇಟಲಿಗೆ ಹೋದಾಗ ಅಲ್ಲಿ ಪೋಪರ ಅರಮನೆಯ ಬಾಗಿಲು ಕಾಯುವವನು ಇವರ ಭೇಟಿ-ಚೀಟಿ ನೋಡಿ 'ಇಂಡಿಯಾವೆ?' ಎಂದು ಕೇಳಿದ. ಇವರು ಹೌದು ತಂದರು. 'ಗಾಂಧೀ........?' ಎಂದು ಕೇಳಿದ ಅವನು. ಗಾಂಧೀ ದೇಶವಲ್ಲವೆ ಎಂದು ಅವನ ಭಾವ. ಭಾರತ ಕಾರ್ಯದರ್ಶಿಯ ಸಲಹೆಗಾರರಾದ ಸರ್ ಅಬ್ದುಲ್ ಕಾದರ್, ವಿಯನ್ನಾ ಪಟ್ಟಣದ ಒಂದು ಹೋಟಲಿಗೆ ಹೋದಾಗ ಅಲ್ಲಿ ಪರಿಚಾರಕ ಒಬ್ಬ 'ನೀವು ಗಾಂಧೀ ದೇಶವರಲ್ಲವೆ?' ಎಂದು ಕೇಳಿದ. 'ಹೌದು. ನನಗೆ ಗಾಂಧೀ ಚೆನ್ನಾಗಿ ಗೊತ್ತು. ನಾನು ಅವರ ಸಂಗಡ ಮಾತಾಡಿದೇನೆ' ಎಂದರು ಇವರು. ಅವನ ಸಂತೋಷಕ್ಕೆ ಪಾರವೇ ಇಲ್ಲ ವಾಯಿತು. 'ಹೋ! ಗಾಂಧಿಯನ್ನು ನೋಡಿ ಮಾತಾಡಿಸಿದವರು ಒಬ್ಬ ರನ್ನು ನಾನು ನೋಡಿದ್ದೆ ಎಂತ ಎಲ್ಲರಿಗೂ ಹೇಳಬಹುದು' ಎಂದು ಹೇಳಿದ.

ವ್ಯಕ್ತಿಮಾತ್ರಕ್ಕೆ ಈ ಗೌರವ ಸಾಧ್ಯವಲ್ಲ. ಅಂತಲೇ ಗಾಂಧೀಜೀ ಒಂದು ಪಂಥ ಎಂಬದ್ದು. ಆದರೂ ಗಾಂಧೀಜಿಯನ್ನು ವ್ಯಕ್ತಿ ಎಂಬ ಬೆಳಕಿನಲ್ಲಿ ಅರಸದೆ ಇದ್ದರೆ ಆ ಪಂಥವೂ ಕೈಜಾರಿ ಹೋದೀತು, ಆ ಪಂಥದ ಒಳಬೆಳಕು ಪರಿಶುದ್ಧ, ಅದರಲ್ಲಿ ಮಾನವತ್ವ ತುಂಬಿದೆ ಎಂಬುದು ತಿಳಿಯದಾದೀತು. ಆ ಎರಡೂ ಮಾತು ಒಂದರ ಹೊರವೈ–ಬೇರೆ; ಬೇರೆ ಬೇರೆ ಅಲ್ಲ.

ಗಾಂಧೀಜಿಯನ್ನು ಹೀಗೆ, ಅವರು ಇಂಥವರು, ಎಂದು ಹೇಳಲು ಯಾರಿಗಾದರೂ ಎದೆ ಬಹಳ ಬೇಕು. ಅವರನ್ನು ನೆನೆದರೆ ಬೇರೆ ಬೇರೆ ಚಿತ್ರ ಕಣ್ಣಮುಂದೆ ನಿಂತಾವು; ನಾನಾ ಭಾವ ಮನಸ್ಸಿನಲ್ಲಿ ಮೂಡಿಯಾವು. ಸರೋಜಿನೀದೇವಿ ಹೇಳಿದ ಹಾಗೆ ಗಾಂಧೀಜೀ ಬಹುರೂಪಿ. ಕೆಲವರಿಗೆ ನಗೆಗಾರ ಗಾಂಧೀ ನೆನಪಾದರೆ ಕೆಲವರಿಗೆ ಹಟಗಾರ ಗಾಂಧಿಯ ನೆನಪಾಗುತ್ತದೆ. ಒಬ್ಬರಿಗೆ ಗಾಂಧೀ ಶುದ್ಧ ಬೈರಾಗಿ; ಇನ್ನೊಬ್ಬರಿಗೆ ಉತ್ತಮ ಗೃಹಸ್ಥ. ಚಾಣಾಕ್ಷ ರಾಜಕಾರಣಿ ಎಂದು ಕೆಲವರಿಗೆ; ಖಾದೀ ಗೊಡ್ಡು ಎಂದು ಕೆಲವರಿಗೆ, ಜಗದ್ವಂದ್ಯ ಕರ್ಮಯೋಗಿ ಎಂದು ಕೆಲವರಿಗೆ ಅನಿಸಿದರೆ ಬರೀ ಹುಚ್ಚು ಎಂದು ಕೆಲವರು ತಿಳಿದಿದಾರೆ. ಒಬ್ಬೊಬ್ಬರದು ಒಂದು ನೋಟ. ಎಲ್ಲರೂ ಆನೆಯನ್ನು ಮುಟ್ಟಿದವರೆ!

ಆ ಮಹಾಜೀವ ನಡೆದ ಹಾದಿಯೂ ಅಷ್ಟೇ; ಒಂದು ಚಳುವಳಿಯಲ್ಲ. ಒಂದು ಕೆಲಸವಲ್ಲ, ಕಡೆಗೆ ಒಂದು ದೇಶವೂ ಅಲ್ಲ. ಸಾಧನೆಯ ಮಾರ್ಗವೂ ಎಂಥದು? ಒಂದು ಖಾದೀಯೇ; ಒಂದು ಹರಿಜನ ಸೇವೆಯೇ; ಅಸಹಕಾರವೇ, ಶಾಸನೋಲ್ಲಂಘನವೇ; ಸಹಕಾರವೇ, ಶಾಸನ ನಿರ್ಮಾಣವೆ; ಬಹಿಷ್ಕಾರವೆ, ಉಪವಾಸವೇ; ಬ್ರಹ್ಮಚರ್ಯವೆ, ಭಕ್ತಿಯೆ? ಒಂದು ವಿಧವಲ್ಲ, ಒಂದು ರೂಪವಲ್ಲ. ಕೋದಂಡಧಾರಿಯಾಗಿ ಸೀತಾ ವಿಮೋಚನೆಗಾಗಿ ಹೊರಟ ರಾಮನಂತೆ ದಂಡಧಾರಿಯಾಗಿ ಸತ್ಯಾಗ್ರಹಿಗಳ ಗುಂಪಿನೊಡನೆ ಒಂದು ದಿನ ದಾಂಡೀಯಾತ್ರೆಗೆ ಹೊರಟರು. ಇನ್ನೊಂದು ಹೊತ್ತಿನಲ್ಲಿ ಪರದೇಶೀ ಬಟ್ಟೆಗಳನ್ನು ರಾಶಿಹಾಕಿಸಿ ಸುಡುತ್ತ ಊರಿಂದೂರಿಗೆ ಲಂಕಾದಹನದ ಕಥೆ ನೆನಪಿಗೆ ತರುತ್ತ ತಿರುಗಾಡಿದರು. ಬಡವರನ್ನು ತಲೆಯ ಮೇಲೆ ಹೊತ್ತು ದರಿದ್ರನಾರಾಯಣನನ್ನು ಪೂಜಿಸಿದರು.

ಶ್ರೀಮಂತರ ಬೆನ್ನು ತಟ್ಟಿ ಸತ್ಯದ ಹಾದಿಗೆ ಎಳೆದು ಲಕ್ಷ್ಮೀನಾರಾಯಣನನ್ನು ಗುರುತಿಸಿದರು.

ಇಂಥ ಜೀವಿಯ ಸನ್ನಿಧಿಯಲ್ಲಿ ಹಿಂದೂಸ್ಥಾನಕ್ಕೆ ಹಿಂದೂಸ್ಥಾನವೇ ತಲೆಬಾಗಿ ನಿಂತಿರುವುದರಲ್ಲಿ ಏನು ಆಶ್ಚರ್ಯ? ಹಿಂದೂಸ್ಥಾನಕ್ಕೂ ಗಾಂಧೀಜಿಗೂ ಒಂದು ವಿಲಕ್ಷಣ ಸಂಬಂಧ ಬೆಳೆದಿದೆ. ಮಾತೇ ಇಲ್ಲದೆಯೆ ಭಾವ ಅರಿತುಕೊಳ್ಳುವ ಬಲ ಎರಡೂ ಕಡೆಯಲ್ಲೂ ಇದೆ. ಅದರ ಪರಿಣಾಮ ಗಾಂಧೀಜೀ ಎಂದರೆ ಹಿಂದೂಸ್ಥಾನ, ಹಿಂದೂಸ್ಥಾನ ಎಂದರೆ ಗಾಂಧೀಜೀ ಎಂಬ ಹಾಗೆ ಆಗಿದೆ.

ಗಾಂಧೀಜಿಯ ಈ ಅವರ್ಣನೀಯ ಪ್ರಭಾವವನ್ನು ನೆನೆವರೆ ಒಂದು ಚಿತ್ರ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ. ಅವರ ಜೀವನದ ಈ ವಿಲಕ್ಷಣ ಶಕ್ತಿಯ ಸೆಲೆ ಎಲ್ಲಿದೆ ಎಂಬ ವಿಚಾರ ಬಂದಾಗ, ಒಂದು ನೋಟ ನೆನಪಿಗೆ ಬರುತ್ತದೆ. ಗಾಂಧೀಜಿಯ ಹೆಸರನ್ನು ಕೇಳಿದರೆ ಸಾಕು. ನೂರಾರು ಮೈಲು ದಾಟಿ ಆ ಧ್ವನಿ ಕೇಳಿ ಬರುತ್ತದೆ.

ಒಂದೇ ಮನಸ್ಸಿನಿಂದ, ಅಖಂಡ ಶ್ರದ್ಧೆಯಿಂದ ಗುಂಪಿಗೆ ಗುಂಪೇ ರಾಮಧುನ್ ಹಾಡುತ್ತಿದಾರೆ. ರಾಮನಾಮವು ಕಡಲಿನ ತೆರೆಗಳಂತೆ ಉಕ್ಕಿ ಬರುತ್ತಿದೆ; ಪರಿಮಳ ಗಾಳಿಯಲ್ಲಿ ಹರಡಿದಂತೆ ಸುತ್ತಲಿನ ಬಯಲಿನಲ್ಲಿ ಸವಿಯಾಗಿ ಕರಗಿಹೋಗುತ್ತಿದೆ. ಯಜ್ಞನಾರಾಯಣನ ಕುಡಿಗಳು ಮೇಲೇರಿ ಹೋಗುವಂತೆ ಮುಗಿಲಿನ ಕಡೆಗೆ ಸಾಗಿಹೋಗುತ್ತಿದೆ. ನಸುಕಿನ ಕತ್ತಲು. ಮೇಲೆ ಕಾಣುವ ಚಿಕ್ಕೆಗಳ ಬೆಳಕಿನಲ್ಲಿ ಮೋರೆ ಅಸ್ಪಷ್ಟವಾಗಿವೆ. ಜಗತ್ತಿಗೆ ಜಗತ್ತೇ ನಿಶ್ಶಬ್ದವಾಗಿದೆ. ಸಾವಿನಲ್ಲೂ ಜೀವ ಕೊನರಿ ನಿಲ್ಲುವ ಹಾಗೆ ಸರ್ವವ್ಯಾಪಿಯಾದ ಮೌನದಲ್ಲಿ ಈ ರಾಮನಾಮ!

ಪಕ್ಕದಲ್ಲೇ ಪರ್ಣಕುಟಿ. ಸುತ್ತಲೂ ಶಿಷ್ಯವರ್ಗ. ಅಥವಾ ಜೊತೆಗಾರರು. ನಡುವೆ ಪದ್ಮಾಸನದಲ್ಲಿ ಬಾಪೂಜಿ. ಆಶ್ರಮದ ಗುಡಿಸಲಾಗಲಿ ದೂರದ ಗಿಡಮರಗಳಾಗಲಿ ಕಾಣವು. ಗಾಂಧೀಜಿಯ ಮೋರೆ ಪೂರಾ ಅರಳಿದ ಕಮಲದ ಹೂವಿನಂತೆ ವರ್ಣಿಸಲು ಬಾರದ ಒಂದು ಆನಂದದಿಂದ ತುಂಬಿದೆ. ಪ್ರಕಾಶಮಾನವಾದ ವಿದ್ಯುದ್ದೀಪದ ಬೆಳಕಿನ ಕಾಂತಿ ಸುತ್ತಲೂ ಹರಡಿದಂತೆ ಆ ಆನಂದದ ತೆರೆಗಳು ಸುತ್ತಲೂ ಹೊಳೆಹೊಳೆವ ರೂಪಿನಿಂದ

ಹರಿದಿವೆ. ಅಲ್ಲಿ ನೆನಪು-ತಿಳಿವು ಇದ್ದೂ ಇಲ್ಲದಂತೆ ಕರಗಿಹೋಗಿದೆ. ಆಟವಾಡಿ ಸೋತು ನಿದ್ದೆಗೆ ಬಂದ ಮಗುವಿನ ಮೈಯಮೇಲೆ ತಾಯಿ ಹೊದಿಸಿದ ತನ್ನ ಸೆರಗಿನಂತೆ ಅಖಂಡಶಾಂತಿಯ ಒಂದು ಭಾವ ತುಂಬಾ ಕವಿದಿದೆ.

ನೂರಾರು ಮೈಲು ದಾಟಿ ಈಗಲೂ ಕೇಳಿಸುತ್ತಿದ್ದಹಾಗೆ ಅನಿಸುತ್ತದೆ: ಅದೇ ಧ್ವನಿ, ಅದ್ದೇ ಗಾಂಭೀರ್ಯ!

"ರಘುಪತಿ ರಾಘವ ರಾಜಾರಾಂ
ಪತಿತ ಪಾವನ ಸೀತಾರಾಂ"

ತಳಹದಿ

'ದಿನಾಲೂ ಪ್ರಾರ್ಥನೆ, ಭಗವದ್ಗೀತೆಯ ಪಾರಾಯಣಗಳಿಂದ ದಿನ ಗೆಲಸ ಮೊದಲು ಮಾಡುತ್ತಾರೆ'-ಎಂದು ಗಾಂಧೀಜಿಯ ತಪ್ಪುಗಳನ್ನು ಎಣಿಸುತ್ತ ಜಿನ್ನಾಸಾಹೇಬರು ಮೊನ್ನೆ ಮೊನ್ನೆ ಹೇಳಿದರು. ಗಾಂಧೀಜಿಯ ತಪ್ಪೊಪ್ಪುಗಳ ನಿರ್ಣಯಮಾಡಲು ಜಿನ್ನಾಸಾಹೇಬರೇ ಶಕ್ತರು! ನಮಗೆ ಕಾಣುವುದು ಇಷ್ಟು: ಪ್ರಾರ್ಥನೆ ಆ ಪಟ್ಟಿಯಲ್ಲಿದೆ. ಗಾಂಧೀಜಿಯ ಮುಖ್ಯ ಅವಗುಣಗಳಲ್ಲಿ, ಚಾಳಿಗಳಲ್ಲಿ ಪ್ರಾರ್ಥನೆಯೂ ಒಂದು.

ಪ್ರಾರ್ಥನೆ ಇಲ್ಲದೆ ಗಾಂಧೀಜಿಗೆ ದಿನ ಬೆಳಗಾಗುವುದಿಲ್ಲ. ಒಂದು ದಿನ ಕೋಳಿ ಕೂಗದೆ ಬಿಟ್ಟರೂ ಬಿಟ್ಟೀತು. ಗಾಂಧೀಜಿಯ ಪ್ರಾರ್ಥನೆ ಮಾತ್ರ ನಿಲ್ಲಲಾರದು. ಬೆಳಕು ನೆಳಲುಗಳಂತೆ, ಪ್ರಾರ್ಥನೆ ಕರ್ಮಗಳು ಅವರ ಜೀವನದಲ್ಲಿ ಒಂದನ್ನೊಂದು ಎಡೆಬಿಡದೆ ಅನುಸರಿಸುತ್ತವೆ. ಅವರ ಎಲ್ಲ ಕರ್ಮದ ತಳಹದಿ-ತುದಿ, ಪ್ರಾರ್ಥನೆಯೇ. ಅರಿತು ಮಾಡಿದ ಕರ್ಮ, ಅನಾಸಕ್ತಕರ್ಮ, ಪ್ರಾರ್ಥನೆಯಂದೇ ಅವರ ನಂಬಿಗೆ. ಪ್ರಾರ್ಥನಾ ಬಲವೇ ಅವರಿಗೆ ಪರಮ ಬಲ.

ಪ್ರಾರ್ಥನೆಯಲ್ಲೇನಿದೆ? ಬರೀ ಮೂಢ ಸಂಪ್ರದಾಯ. ಆಸ್ತಿಕರು

ಮಾಡಿದ ಒಂದು ಕುಹಕ ಎಂಬುವರುಂಟು. ಅವರಿಗೆ ಪ್ರಾರ್ಥನೆ ಅರ್ಥವಿಲ್ಲದ ಸುಳ್ಳುವೇಷವಾಗಿ ತೋರುತ್ತದೆ. ಗಾಂಧೀಜಿಗೆ ಪ್ರಾರ್ಥನೆಯೇ ಸತ್ಯ, ಉಳಿದುದೆಲ್ಲ ಅಸತ್ಯ ಎಂದರೂ ಅತಿಶಯೋಕ್ತಿಯಾಗಲಾರದು. 'ಸ್ತುತಿ ಪ್ರಾರ್ಥನೆ ಧ್ಯಾನ-ಇವು ಕುರುಡು ನಂಬಿಗೆಯಲ್ಲ. ಅನ್ನ ನೀರಿಗಿಂತ, ಕೂಡುವುದು ಓಡಾಡುವುದಕ್ಕಿಂತ ಹೆಚ್ಚಿನ ಸತ್ಯ.' ಅದು ಕುಹಕವೂ ಅಲ್ಲ, ಕಪಟವೂ ಅಲ್ಲ. 'ಪ್ರಾರ್ಥನೆ ಬಿಕ್ಕೆ ಬೇಡುವುದಲ್ಲ. ಅದು ಆತ್ಮದ ಕಾಮನೆ. ನಮ್ಮ ದೌರ್ಬಲ್ಯ ಅಸಹಾಯತೆಗಳ ನೆನಪು. ಸಾವು ಬೇನೆ ಮುಪ್ಪು ಮುಂತಾದುವು ಶ್ರೇಷ್ಠಾತಿಶ್ರೇಷ್ಠರಿಗೂ ಕೂಡ ಅವರ-ನಮ್ಮ-ಅಲ್ಪತ್ವವನ್ನು ಯಾವಾಗಲೂ ನೆನಪು ಮಾಡುತ್ತವೆ. ಸಾವಿನ ನಡುವೆ ನಾವು ಬದುಕುತ್ತಿದೇವೆ. ಕಣ್ಣುಮುಚ್ಚಿ ತೆಗೆಯುವುದರೊಳಗಾಗಿ ನಾವು ಮಾಡಿದುದೆಲ್ಲ ಮಣ್ಣುಪಾಲಾಗುತ್ತಿದೆ. ಇದ್ದಕ್ಕಿದ್ದಂತೆಯೇ, ನಮಗೆ ತಿಳಿಯುವ ಮೊದಲೆ, ನಾವೆ ಹೋಗಿಬಿಡುತ್ತೇವೆ. ಹಣವಂತರಿಗೆ ಹಣ ಕೊಡಬಹುದಾದ ಸಕಲ ಸುಖವೂ ಉಂಟು; ಅಭಿಮಾನ ನೀಡಬಹುದಾದ ಸಕಲೋಪಚಾರವೂ ಉಂಟು. ಆದರೇನು? ಎಂಥ ಲಕ್ಷ್ಮೀಕುಮಾರರಿಗೂ ಮಹಾಸಂಕಟದ ಗಳಿಗೆ ಇವೆ. ಆಗ ಅವರಿಗೂ ಬಾಳು ಬೇಸರವಾಗುತ್ತದೆ. ಅಂಥ ಗಳಿಗೆಯಲ್ಲಿಯೇ ನಮಗೆ ದೇವರ ಅರಿವು ಆಗುವುದು. ನಮ್ಮ ಬದುಕಿನ ಅಡಿಯಡಿಯನ್ನು ತೋರಿಸುತ್ತ ನಡೆವವನ ನೆನಪು ಆಗುವುದು. ಅದೇ ಪ್ರಾರ್ಥನೆ.' ಸಂಕಟ ಬಂದರೆ ವೆಂಕಟರಮಣ ಅಲ್ಲವೆ!

ಅಂಥ ಪರೀಕ್ಷಾಸಮಯದಲ್ಲಿ ಭಕ್ತಿ ಪ್ರಪತ್ತಿಗಳು ನಮ್ಮ ಈಸುಗುಂಬಳಕಾಯಿ. 'ಆಗ ಎಲ್ಲವೂ ಬೆಳ್ಳಂಬೆಳಕು. ಯಾವುದೂ ನಾಶವಾಗದು. ನಾಶವೆಂಬುದು ಬರೀ ತೋರಿಕೆ. ಆಗ ಸಾವು ನಾಶಗಳು ಸುಳ್ಳು ಎಂಬುದು ತಿಳಿದೀತು.' ಆದರೆ ಭಕ್ತಿ ಪ್ರಪತ್ತಿಗಳು ಪಾಂಡಿತ್ಯದಲ್ಲಿ ಇಲ್ಲ, ಬುದ್ಧಿಯಲ್ಲಿಯೂ ಇಲ್ಲ. 'ಪಾಂಡಿತ್ಯ ವೇದಾಂತಗಳು ಸಮಯದಲ್ಲಿ ನೆರವಾಗಲಾರವು.' ಅವು ಒಡಕು ಈಸುಗುಂಬಳ. ಬೇಕಾದ ಹಾಗೆ ನಾವು ಶಾಸ್ತ್ರಗಳ ಚರ್ಚೆಮಾಡಬಹುದು, ವಾದಿಸಬಹುದು. ನಡುನೀರೊಳಗೆ ಇಳಿದಾಗ, 'ಕುತ್ತುಬಂದು ಇದಿರಿಗೆ ಕೂತಾಗ, ಹುಡುಗರಂತೆ ಆಡುತ್ತೇವೆ, ಅಳುತ್ತೇವೆ, ಬೇಡುತ್ತೇವೆ; ನಮ್ಮ ಬುದ್ಧಿ ಎಳ್ಳಷ್ಟೂ ಕೆಲಸಕ್ಕೆ ಬರುವು

ವಿಲ್ಲ.' ಬರೀ ಬುದ್ಧಿ ಸಾಲದು. ಬುದ್ಧಿಗೆ ಮೀರಿದ ಆತ್ಮಜ್ಞಾನ ಬೇಕು. ಅದೇ ನಿಜವಾದ ಸಮಾಧಾನ! *

ಅಂತಲೇ 'ಉಪಾಸನೆ ಪ್ರಾರ್ಥನೆಗಳು ಬರಿಯ ಮಾತಿನ ಮಾಲೆಯಲ್ಲ. ವಾಣಿ ವೈಭವವಲ್ಲ. ಅದರ ಹುಟ್ಟು ನಾಲಗೆಯಲಿಲ್ಲ, ಹೃದಯಾಂತರಾಳದಲ್ಲಿ. ಹೃದಯದ ಮೈಲಿಗೆಯೆಲ್ಲ ತೊಳೆದು ಭಕ್ತಿಯನ್ನು ತುಂಬಿ ಪರಿಶುದ್ಧವಾಗಿಸಿದರೆ, ಎಲ್ಲ ತಂತಿಗಳನ್ನೂ ಶೃತಿಮಾಡಿಟ್ಟರೆ ಅಶ್ರುತ ವೀಣಾರವ ಹೊರಟೀತು.' 'ಆ ಭಾಗ್ಯ ಬರದಿದ್ದರೂ ಕಾಮಕ್ರೋಧಾದಿ ವಿಕಾರಗಳನ್ನು ಹೃದಯದಿಂದ ತೊಳೆಯಲು ಪ್ರಾರ್ಥನೆ ಸೋಲುಗಾಣದ ಉತ್ತಮ ಸಾಧನೆ. ಆದರೆ ಅದರಲ್ಲಿ ಅತ್ಯಂತ ವಿನಯವಿರಬೇಕು.'

ನಮ್ಮ ಬಾಳಿನಲ್ಲಿ ಅನೇಕ ಸಲ ನಮ್ಮ ಪ್ರಯತ್ನವಿಲ್ಲದೆ ಕೆಲವು ಪ್ರಸಂಗ ನಡೆಯುವುದುಂಟು. ನಾವು ಏನೇನೋ ಬಯಸುತ್ತೇವೆ. ಕೋಟಿ ಆಸೆ ನಮ್ಮದು.

ಆದರೆ ಅದನ್ನು ಸಾಧಿಸುವ ಬಲ ನಮಗಿಲ್ಲ. ನಮ್ಮ ಪ್ರಯತ್ನ ಅದಕ್ಕೆ ಸಾಲದು. ಒಮ್ಮೊಮ್ಮೆ ಅಂಥ ಕೆಲಸಗಳೂ ಕೈಗೂಡಿ ಬರುತ್ತವೆ. 'ನನ್ನ ಪ್ರಯತ್ನದಿಂದಲೇ ಸಾಧ್ಯವಾಗಲಾರದ ಅನೇಕ ವಿಷಯ ನನ್ನ ಬಾಳಿನಲ್ಲಿ ನಡೆದಿವೆ. ಅದು ನನ್ನ ಪ್ರಾರ್ಥನೆಯ ಫಲ, ಬೇಡಿದ ಬೇಡಿಕೆಗೆ ಉತ್ತರ ಎಂದು ಜೊತೆಗಾರರಿಗೆ ಹೇಳಿದೇನೆ. ಅದೇ ಸರಿ. ಸಂಕಟ ಬಂದಾಗ ಅನಿರೀಕ್ಷಿತವಾಗಿ ಸಹಾಯ ಬಂದು ತೊಂದರೆ ಪರಿಹಾರವಾಗುತ್ತದೆ. ಅದಕ್ಕೆ ಏನೆನ್ನಬೇಕು? ದೇವರು ನನ್ನ ವಿಪತ್ತಿನಲ್ಲಿ ಆಶ್ರಯವಾದ. ಬದುಕಿನ ಬೇರೆ ಬೇರೆ ಮನೆಗಳಲ್ಲಿ ನನಗೆ ಈ ಅನುಭವ ಆಗಿದೆ. ಎಷ್ಟೋ ಆಧ್ಯಾತ್ಮಿಕ ಪ್ರಯೋಗಗಳಲ್ಲಿ, ವಕೀಲಿಯಲ್ಲಿ, ಸಂಸ್ಥಾ ಸಂಚಾಲನೆಯಲ್ಲಿ, ರಾಜಕೀಯ ವ್ಯವಹಾರಗಳಲ್ಲಿ ನನಗೆ ಒದಗಿದ ವಿಪತ್ತುಗಳಲ್ಲಿ ದೇವರು ನನ್ನನ್ನು ಕಾಯ್ದನೆಂದು ಹೇಳಬಲ್ಲೆ. ಉಪಾಯ ಒಂದೂ

---

* ಅಕ್ಕರವು ಲೇಖಕ್ಕೆ ತರ್ಕ ತಾ ವಾದಕ್ಕೆ ।
ಮಿಕ್ಕ ಓದುಗಳು ತಿರುಪೆಗೆ, ಮೋಕ್ಷಕ್ಕೆರ ।
ಡಕ್ಕರವೆ ಸಾಕು ಸರ್ವಜ್ಞ ॥

ಕಾಣದಾದಾಗ, ಗೆಳೆಯರು ಕೈಬಿಟ್ಟಾಗ, ಆಸರೆ ಕಳೆದಾಗ, ಎಲ್ಲಿಂದಲೋ ಹೇಗೋ ಆ ಸಹಾಯ ಬಂದೊದಗುತ್ತದೆ ಎಂದು ನನಗೆ ಅನುಭವವಾಗಿದೆ.' ಆರ್ತತ್ರಾಣಪರಾಯಣನಲ್ಲವೆ ದೇವರು!

ಇದೆಲ್ಲ ಬರಿಯ ಚಮತ್ಕಾರ. ಅವರವರ ಕರ್ಮದಂತೆ ಅವರವರಿಗೆ ಫಲ–ಎಂದು ಅನೇಕರಿಗೆ ಅನಿಸುತ್ತದೆ. ಗಾಂಧೀಜಿಗೆ ಇಂಥ ಕರ್ಮ ಸಿದ್ಧಾಂತ ಬರಡು. ಕರ್ಮಕ್ಕೇನು ಸರ್ವಶಕ್ತಿ ಇದೆಯೇ? 'ಕರ್ಮವೇ ಎಲ್ಲವೂ ಎಂದರೆ ಸರಿಯೆ? 'ಕರ್ಮ ನೆರವಾಗಲಾರದು. ಕರ್ಮವು ಅನುಲ್ಲಂಘನೀಯ ನಿಯಮ. ಅದನ್ನು ಮೀರಲಾಗದೆಂದು ಬಲ್ಲೆ. ಆದರೂ ಗಳಿಗೆಗಳಿಗೆಯೂ ಏನೋ ಒಂದನ್ನು ಮಾಡುತ್ತ, ಕರ್ಮಶೀಲನಾಗಿ ಹಳೆಯ ಗಂಟಿಗೆ ಹೊಸ ಕರ್ಮವನ್ನು ಸೇರಿಸುತ್ತಿದೇನೆ. ಹಳದನ್ನು ಕಳೆದು ಹೊಸದು ಕೂಡಿಹಾಕುತ್ತಿದೇನೆ ಹಿಂದೆ ಮಾಡಿದುದರ ಫಲ ಇಂದಿನ ಪುಣ್ಯ ಎನ್ನಬಾರದು. ನಿನ್ನೆಯದು ಬೇಗನೆ ಮುಗಿದೀತು, ಸಾಳೆಗಾಗಿ, ಮುಂದಿನ ಕಾಲಕ್ಕಾಗಿ, ಪ್ರಾರ್ಥನೆಯಿಂದ ಅದನ್ನು ಕಟ್ಟಬೇಕು.' 'ಕರ್ಮವನ್ನು ನಂಬಿ ಕೂತರೆ ಸುಖವಿಲ್ಲ. ಬರೀ ಕರ್ಮಕ್ಕೆ ಬಲವಿಲ್ಲ. ಈ ಬೆಂಕಿಯ ಕಡ್ಡಿ ಹಚ್ಚಬೇಕೆನ್ನುತ್ತೇನೆ. ಹೊರಗಿನಿಂದ ಸಹಾಯ ಬರದಿದ್ದರೆ ಅದು ಸಾಧ್ಯವಾಗದು. ಕಡ್ಡಿ ಗೀಚುವುದರೊಳಗಾಗಿ ನನ್ನ ಕೈ ಸ್ತಂಭಿತವಾದೀತು. ಇದ್ದುದು ಒಂದೇ ಕಡ್ಡಿ ಗಾಳಿಗೆ ಆರಿಹೋಗಬಹುದು. ಅದೇನು ಆಕಸ್ಮಿಕ ಪ್ರಸಂಗವೋ, ದೈವವೋ, ಮತ್ತೇನಾದರೂ ಶಕ್ತಿಯೋ? ಯಾವುದೇ ಇರಲಿ, ಅದನ್ನು ನಂಬದೆ ಇರುವುದು ಅಸಾಧ್ಯ. ದೇವರ ಬಲವಿಲ್ಲದೆ ಜಗತ್ತಿನ ಎಲ್ಲ ಕಷ್ಟಪರಂಪರೆಗಳನ್ನೂ ಬೇಸರದ ಉಸಿರು ಬಿಡದೆ ಸಹಿಸುವುದು ನರನಿಗೆ ಮೀರಿದುದು. ಅವನ ಬಲವೇ ನಮ್ಮ ಬಲ. ಆ ಸರ್ವಶಕ್ತಿಗೆ ನಮ್ಮ ದುಃಖದುಗಡಗಳನ್ನು ಒಪ್ಪಿಸಬಲ್ಲವರಿಗೇ ಆ ಬಲ!

'ನಾನು ದೇವರನ್ನು ನಂಬುವುದಿಲ್ಲ ಎಂದು ಹೇಳುವುದು ಬಹಳ ಸುಲಭ. ಇದೇ ಅಲ್ಲ, ಎಂಥ ಮಾತನ್ನಾದರೂ ತನ್ನ ಬಗ್ಗೆ ಆಡಲಿ, ದೇವರು ಸುಮ್ಮನೆ ಇರುತ್ತಾನೆ.' ಆತ ನಮ್ಮ ನುಡಿ ಕೇಳುವುದಿಲ್ಲ. 'ನಮ್ಮ ನಡೆ ನೋಡುತ್ತಾನೆ.' ಆತ ಇಲ್ಲವೆಂದು ತಿಳಿದು ಆತನ ನಿಯಮ ವನ್ನು ಮೀರಿದರೆ ಹಿಂದೆಯೇ ಶಿಕ್ಷೆ ಕಾದಿವೆ. ನಿಯಮ ಮುರಿದುದಕ್ಕೆ

ಕೋಪ ಬಂತು ಎಂದಲ್ಲ. 'ಶಿಕ್ಷೆ ಪ್ರತೀಕಾರದ್ದಲ್ಲ; ಮುಯ್ಯಿಗೆ ಮುಯ್ಯಿ ಅಲ್ಲ. ಅದು ಹಾದಿಗೆ ಹಚ್ಚುವ, ತಿದ್ದುವ ಶಿಕ್ಷೆ. ಪ್ರಾಯಶ್ಚಿತ್ತದ ಒತ್ತಾಯ.' ಸರಿ ಸರಿ, ಇದೆಲ್ಲ ಹಳೆಯ ಕಂತೆ. ದೇವರು ಇದ್ದರೆ ಪ್ರಮಾಣಿಸಿ ಕೊಡಬಹುದಲ್ಲ? ಹಾಗೆ 'ತೋರಿಸಿ ಕೊಡಲು ಸಾಧ್ಯವಿಲ್ಲ. ತೋರಿಸಿ ಕೊಡಬೇಕಾದ ಅಗತ್ಯವೂ ಇಲ್ಲ. ಆತನ ಇರವು ನಮಗೆ ಅನಿಸದೆ ಇದ್ದರೆ ನಮಗೇ ನಷ್ಟ.'

ಇದ್ದರೂ ಇರಲಿ. ನಾವೇಕೆ ಆ ದೇವರನ್ನು ಬೇಡಿಕೊಳ್ಳಬೇಕು. ಆಗಬೇಕಾದದ್ದು ಆಗಿಯೇ ತೀರುತ್ತದೆ ಎನ್ನುವವರೂ ಇದಾರೆ. ಬೌದ್ಧ ಪಂಡಿತರೊಬ್ಬರು ಒಂದು ಸಲ ಗಾಂಧೀಜಿಗೆ ಗಂಟುಬಿದ್ದರು. ಬೇಡಿ ಕಾಡಿ ದೇವರ ಮನಸ್ಸನ್ನು ಬದಲಾಯಿಸಬಹುದೇ? ದೇವರು ಅಷ್ಟು ಚಪಲ ಚಿತ್ತನೆ? ಎಂದು ಕೇಳಿದರು.

'ದೇವರ ಚಿತ್ತವನ್ನು ಹಾಗೆ ಬದಲಿಸಬಲ್ಲೆವೆ? ಎಲ್ಲೆಲ್ಲೂ ಎಲ್ಲದರಲ್ಲೂ ದೇವರು ಇದಾನಷ್ಟೆ. ನನಲ್ಲೂ ದೇವರೂ ಇದಾನೆ ಅಲ್ಲವೆ? ಧ್ಯಾನ, ಪ್ರಾರ್ಥನೆ ಎಂದರೆ ನನ್ನೊಳಗಿನ ದೇವರನ್ನು ಎಚ್ಚರಗೊಳಿಸುವುದು.'

ಆ ಪಂಡಿತರಿಗೆ ಸ್ವಲ್ಪ ದಡ ಸಿಕ್ಕಹಾಗಾಯಿತು. 'ಹಾಗಾದರೆ ಅದು ಪ್ರಾರ್ಥನೆಯಾದೀತೆ? ಪ್ರಾರ್ಥನೆ ಎಂದರೆ ಬೇಡಿಕೆ'–ಎಂದರು.

ಗಾಂಧೀಜಿ ತರ್ಕದಲ್ಲಿ ಬಹಳ ಹರಿತ. ಕೂಡಲೆ ಕೇಳಿದರು. 'ಯಾಕಾಗಬಾರದು? ನನ್ನೊಳಗೆ ಆತ್ಮ ಇಲ್ಲವೆ! ನನ್ನ ಪೂರ್ಣ ಅನುಭವಕ್ಕೆ ಇನ್ನೂ ಬಾರದ ಪುರುಷೋತ್ತಮ ಇಲ್ಲವೆ? ನನನ್ನೇ, ಎಂದರೆ ಆ ಪುರುಷೋತ್ತಮನನ್ನೇ ನಾನು ಬೇಡಿದೆ ಎನ್ನುವ. ಆದ್ದರಿಂದ ಪ್ರಾರ್ಥನೆ ಎಂದರೆ ಸರ್ವವ್ಯಾಪಿಯಾದ ದೈವದಲ್ಲಿ ಲೀನವಾಗಲು ಮಾಡಿದ ಸದಾ ಧ್ಯಾನ; ಬಯಸಿದ ಕೊನೆಯಿಲ್ಲದ ಬಯಕೆ.'

ನಾವೇ ಪುರುಷೋತ್ತಮರಾದರೆ, ನಮ್ಮೊಳಗೇ ದೈವವಿರುವುದು ನಿಜವಾದರೆ, ನಮ್ಮ ಹೊರಗಿರುವ ದೇವರನ್ನು ನಾವು ಪ್ರಾರ್ಥಿಸಲೇಕೆ? ತನ್ನ ನಾಭಿಯಲ್ಲಿಯೇ ಕಸ್ತೂರಿ ಇಟ್ಟುಕೊಂಡು ಸುತ್ತಲೂ ಅರಸಿನೋಡುವ ಕಸ್ತೂರಿಮೃಗದಂತೆ ಈ ಹೊರಗಣ ದೇವರ ಭಕ್ತಿಯೇಕೆ? ಆತ್ಮಪೂಜೆಯೇ

ಸಾಕು. ಆದರೆ ಈ ತರ್ಕ ಸರಿಯಲ್ಲ. ನಾವು 'ಅನಂತನಾದ ಬಹ್ಮನ ಅಂಶವೇ ನಿಜವಾದರೂ, ಕೇವಲ ಅಣು ಮಾತ್ರ. ಆದುದರಿಂದಲೇ ಆ ಬ್ರಹ್ಮನಿಂದ ಹೊರಗೆ ಇದ್ದಂತೆ ಭಾಸವಾಗುತ್ತದೆ. ಅದನ್ನು ನಾವು ಮಾಡಿದೆವು, ಇದನ್ನು ನಾವು ಮಾಡಿದೆವು ಎಂದು ಹೇಳಿದೊಡನೆಯೇ ನಮ್ಮ ಅಲ್ಪತ್ವವೂ ಅಯೋಗ್ಯತೆಯೂ ಮನಸ್ಸಿಗೆ ನಾಟುತ್ತವೆ. ಮತ್ತೊಂದು ಶ್ರೇಷ್ಠ ಶಕ್ತಿಯ ಸಹಾಯ ಬೇಕು ಎನಿಸುತ್ತದೆ.' ಹಾಗೆಯೆ ಆದರೂ ಇಲ್ಲಿಲ್ಲದ ದೇವರು ಅಲ್ಲೆಲ್ಲೊ ಇದಾನೆಯೇ? ನಮ್ಮ ಸುತ್ತಲೂ ಇಲ್ಲದವನು ಮುಗಿಲಲ್ಲಿ ಬರುತ್ತಾನೆಯೇ? ಮುಗಿಲನ್ನು ಬೇಡಿದರೆ ಏನು ಬಂತು? ಗಾಂಧೀಜಿಗೆ 'ಮುಗಿಲ ನಡುವೆ ದೇವರು ಇದಾನೆಂಬುದೂ ಆತನನ್ನು ಬೇಡುವುದೂ ಸರಿ.' ದೂರದ ನೆಂಟರ ಮೇಲೆಯೇ ಮಮತೆ ಹೆಚ್ಚಲ್ಲವೆ. 'ಆತನು ಎಷ್ಟೆಷ್ಟು ದೂರವೋ ಅಷ್ಟಷ್ಟು ಆತನ ಹಂಬಲ ಹೆಚ್ಚೀತು; ಅಷ್ಟಷ್ಟು ನನ್ನ ಭಾವನೆಯಲ್ಲಿ ಆತ ಮೂಡಿ ಬಂದಾನು. ಆತನ ಇದಿರಿನಲ್ಲಿ ನಾನು ನಿಂತೇನು. ಭಾವನೆ ಬೆಳಕಿಗಿಂತಲೂ ವೇಗ. ದೇವರಿಗೂ ನನಗೂ ನಡುವೆ ಲೆಕ್ಕಮಾಡಲಾರದಷ್ಟು ದೂರ ಇದ್ದರೂ ಅದೆಲ್ಲ ಮಾಯವಾಗುತ್ತದೆ. ದೇವರು ನಮಗೆ ಅತಿ ದೂರವಿದ್ದು ತೀರ ಸನಿಯದಲ್ಲೇ ಇದಾನೆ.'

ನಮ್ಮ ಸಂಸ್ಕೃತಿಯಲ್ಲಿ ಪ್ರಾರ್ಥನೆಗೆ ತುಂಬಾ ಮಹತ್ವವಿದೆ. ತತ್ತ್ವಂ ಅಸಿ ಎಂದು ತಿಳಿಸಿ, ಅಹಂ ಬೃಹ್ಮಾಸ್ಮಿ ಎಂದು ಡಂಗುರ ಹೊಡೆದ ಭಗವತ್ಪಾದ ಶಂಕರಾಚಾರ್ಯರೂ ಕೂಡ 'ಭಜ ಗೋವಿಂದಂ' ಎಂದು ಭೋಧಿಸಿದರು. ಅಷ್ಟೇ ಅಲ್ಲ; ಆರ್ತರಾಗಿ 'ಮಮದೇಹಿ ಕರಾವಲಂಬಂ' ಎಂದು ಆ ಬ್ರಹ್ಮವನ್ನು ಬೇಡಿದರು. ಅದ್ವೈತವನ್ನೇ ನಂಬಲಿ, ಚಾರ್ವಾಕವನ್ನೇ ಹೇಳಲಿ, ನಮಗಿಂತ ಹೆಚ್ಚಾದ ದೇವರು ಒಬ್ಬನಿದಾನೆಂದೂ ಆತನ ಕಾಯುವ ಕೈ ಸದಾ ನಮಗಾಗಿ ಕಾದೇ ಇದೆಯೆಂದೂ ನಂಬದವರು ಇಲ್ಲವೇ ಇಲ್ಲ ಎಂದರೂ ಸುಳ್ಳಾಗಲಿಕ್ಕಿಲ್ಲ. ದೇವರು ನಮ್ಮ ಹೃದ್ದೇಶದಲ್ಲಿ ನೆಲೆಸಿದಾನೆ. ದೇವರೇ ನಮ್ಮ ಜೀವ ಜೀವಾಳ. ನಮ್ಮ ಸರ್ವಸ್ವ. ಆದರೆ ನಾವೇ ದೇವರೆಂಬ ಮಾತು ಬರಿಯ ತರ್ಕದ ಮಾಯೇ. ಮಾನವನ ಅನುಭವಕ್ಕೆ ಅದು ಎಲ್ಲಿಯೋ ಕಡಿಮೆ ಬೀಳುತ್ತದೆ. ಪಾಶ್ಚಾತ್ಯರಲ್ಲಿ ಹೆಸರಾದ ನಾಸ್ತಿಕ ಒಬ್ಬ ತನ್ನ ಅಂತ್ಯಕಾಲದಲ್ಲಿ 'ದೇವರೇ! ನೀನು

ಇರುವುದೇ ನಿಜವಾದರೆ, ಜೀವ ಎಂಬುದೂ ಇರುವುದಾದರೆ, ನನ್ನ ಜೀವವನ್ನು ರಕ್ಷಿಸು'—Oh God! if there is a God, save my soul, if there is a soul—ಎಂದು ಪ್ರಲಾಪಿಸಿದನಂತೆ.

ಗಾಂಧೀಜೀ ಆಶ್ರಮದಲ್ಲಿರಲಿ ಪ್ರವಾಸದಲ್ಲಿರಲಿ; ಎಲ್ಲೇ ಇರಲಿ, ದಿನವೂ ಎರಡು ಸಲ–ಸಂಜೆ ಮುಂಜಾನೆ–ಪ್ರಾರ್ಥನೆ ನಡೆಸುತ್ತಾರೆ. ಬೆಳಕು ಇನ್ನೂ ಕತ್ತಲೆಯ ಬಸುರಿನಲ್ಲಿರುವಾಗಲೇ ಮುಂಜಾನೆಯ ಪ್ರಾರ್ಥನೆ. ಸೇವಾಗ್ರಾಮದಲ್ಲಿ ಪರ್ಣಕುಟಿಯ ಮುಂದೆ ದೊಡ್ಡ ಅಂಗಳವಿದೆ. ರಾತ್ರಿಯ ಹೊತ್ತು ಮುಗಿಲು ಸಾವಿರ ಕಣ್ಣಿಂದ ಆಶ್ರಮದ ಕಾವಲು ಕಾಯುತ್ತಿರುತ್ತದೆ. ಗಾಂಧೀಜಿಗೆ ಅದೊಂದು ಸ್ಫೂರ್ತಿ, ರಕ್ಷೆ. ಬಯಲು ಅವರಿಗೆ ಬಹಳ ಪ್ರೀತಿ. ಬಯಲಿನಲ್ಲಿ ಚಿಕ್ಕೆಗಳ ಕೆಳಗೆ ಅವನ್ನು ನೋಡುತ್ತ ಮಲಗುವುದು ಅವರ ರೂಢಿ. ಬೆಳಗ್ಗೆ ೪-೨೦ಕ್ಕೆ, ಸಂಜೆ ೭ಕ್ಕೆ ದಿನವೂ ಆ ಅಂಗಳದಲ್ಲಿ ಚಿಕ್ಕೆಗಳ ತಂಪಾದ ಬೆಳಕಿನಲ್ಲಿ ಪ್ರಾರ್ಥನೆ. ಆಗ ಆಶ್ರಮವಾಸಿಗಳೆಲ್ಲರೂ ಸೇರುತ್ತಾರೆ. ಹೊರಗಿನವರೂ ಬರಬಹುದು. ಯಾರಾದರೂ ಇರಲಿ ಬಿಡಲಿ ಗಾಂಧೀಜಿಯ ಪ್ರಾರ್ಥನೆ ಗೊತ್ತಾದ ವೇಳೆಗೆ ನಡೆಯಲೇಬೇಕು. ಲಂಡನ್ನಿಗೆ ಹೋಗಿದ್ದಾಗ ಬ್ರಿಟಿಷ ಬಿಷಪ್ಪರ ಗುಂಪು ಗಾಂಧೀಜಿಯ ದರ್ಶನವನ್ನು ಸಂಜೆ ಏಳುಗಂಟೆಗೆ ಮಾಡಿಕೊಳ್ಳುವುದಾಗಿ ಗೊತ್ತುಮಾಡಿದರು ದೀನಬಂಧು ಆಂಡ್ರೂಸರು ಆ ಸಮಾರಂಭವನ್ನು ಏರ್ಪಾಟುಮಾಡಿದ್ದರು.

'ಬಾಪು, ಏಳು ಗಂಟೆಗೆ ಬಿಷಪ್ಪರ ಸಭೆ' ಎಂದು ಆಂಡ್ರೂಸರು ನೆನಪು ಮಾಡಿದರು.

'ಪ್ರಾರ್ಥನೆಯ ಹೊತ್ತಲ್ಲವೆ ಅದು' ಎಂದರು ಬಾಪು ಗಾಬರಿಯಾಗಿ.

ಸ್ವಲ್ಪ ಮುಂಚೆಯೋ ಆಮೇಲೋ ಮಾಡಿದರಾಯಿತು' ಎಂದು ದೀನಬಂಧು ಸೂಚಿಸಿದರು. ಗಾಂಧೀಜೀ ತೀರ್ಮಾನಿಸಿದರು ; 'ದಾರಿಯಲ್ಲಿ ಮೋಟಾರಿನಲ್ಲಿ ನಡಿಸೋಣ.'

ಪ್ರಾರ್ಥನೆಗೆ ನಿಜವಾಗಿ ಒಂದೇ ನಿಯಮ. ಅದು 'ಐಕ್ಯಾನುಸಂಧಾನ. ದೇವರ ಅನುಗ್ರಹ ಯಾಚನೆ. ಉಳಿದುದೆಲ್ಲ ಮುಖ್ಯವಲ್ಲ, ಅನುಷಂಗಿಕ. ಪ್ರಾರ್ಥನೆಗೆ ಇಷ್ಟೇ ಹೊತ್ತೆಂದಾಗಲಿ ಇದೇ ರೀತಿ ಎಂದಾಗಲಿ

ನಿಯಮ ಇಲ್ಲ. 'ಮಾತೇ ಬೇಡ. ಯಾವ ಇಂದ್ರಿಯಸಾಧನವೂ ಬೇಡ.' ದೇವ ಮಾತೆಮಗೆ ಬೇಡ, ಭಾವವೊಂದಿರಲಿ ಎಂದು ಕವಿ ಹಾಡಿಲ್ಲವೆ? 'ಇವೆಲ್ಲ ಅವರವರ ರುಚಿಗೆ ತಕ್ಕಂತೆ ನಮ್ಮ ಬಾಳಿನಲ್ಲಿ ಪ್ರಾರ್ಥನೆಯ ಗಳಿಗೆಗಳು ಬೆಲೆ ಕಟ್ಟಲಾರದ ಗಳಿಗೆಗಳು. ಈ ವಿಧಾನಗಳೆಲ್ಲ ನಮಗೆ ವಿನಯ ವಿವೇಕಗಳನ್ನು ಕಲಿಸುವ ಸಾಧನ. ದೇವರ ಇಷ್ಟವಿಲ್ಲದೆ ಹುಲ್ಲುಕಡಿಯೂ ಅಲುಗಾಡಲಾರದೆಂದೂ ನಾವು ಆ ಕುಂಬಾರನ ಕೈಯ ಮಣ್ಣೆಂದೂ ತಿಳಿಸುವ ಸಾಧನ. ಹಿಂದೆ ಮಾಡಿದುದನ್ನು ಅಳೆದು ಸುರಿದು, ನಮ್ಮ ದೌರ್ಬಲ್ಯವನ್ನು ಅರಿತು ಕ್ಷಮೆ ಬೇಡಿ, ಮುಂದೆ ಉತ್ತಮವಾಗಿ ನಡೆದುಕೊಳ್ಳಲು, ಉತ್ತಮರು ಆಗಲು, ಬಲವನ್ನು ಅರ್ಥಿಸುವ ಸಂಧಿಗಳು ಇವು. ಒಬ್ಬರಿಗೆ ಒಂದೇ ನಿಮಿಷ ಸಾಕು. ಒಬ್ಬರಿಗೆ ಇಪ್ಪತ್ತು ನಾಲ್ಕು ತಾಸು ಆದರೂ ಸಾಲದು.'

ಪರಾಶರ ಭಟ್ಟರು ರಾಮಾನುಜೀಯ ಪಂಥದವರಲ್ಲಿ ಒಂದು ದೊಡ್ಡ ಜೀವ. ಅವರು ಭಗವದಾರಾಧನ ಕ್ರಮವನ್ನು ತಮ್ಮ ಶಿಷ್ಯನೊಬ್ಬನಿಗೆ ಹೇಳಿಕೊಟ್ಟರು. ಸರಿಯಾಗಿ ಒಂದು ಜಾವದ ಹೊತ್ತಿನ ಕೈಂಕರ್ಯ. ಆ ಶಿಷ್ಯ ಅದನ್ನು ನಡೆಸಿಕೊಂಡಿದ್ದ. ಒಂದು ದಿನ ಗುರುಶಿಷ್ಯರಿಬ್ಬರೂ ಮತ್ತೆ ಸೇರಿದರು. ಶಿಷ್ಯನ ಆರಾಧನೆ ಮೊದಲಾದಾಗ ಗುರುಗಳು ಇನ್ನೂ ಪ್ರಾರಂಭವೇ ಮಾಡಿರಲಿಲ್ಲ. ಇವನ ಆರಾಧನೆ ಮುಗಿಯುವುದರೊಳಗಾಗಿ ಯಾವಾಗಲೋ ಐದು ನಿಮಿಷದಲ್ಲಿ ತಮ್ಮ ಆರಾಧನೆ ಮುಗಿಸಿಬಿಟ್ಟರು. ಶಿಷ್ಯನಿಗೆ ಸಂದೇಹ ಬಿತ್ತು. ತನಗೆ ಜಾವ ಹೊತ್ತೇಕೆ? ಗುರುಗಳಿಗೆ ಐದು ನಿಮಿಷ ಸಾಕೆ? ಭಟ್ಟರನ್ನು ಕೇಳಿಯೇ ಬಿಟ್ಟ. ಭಟ್ಟರು ಹೇಳಿದರು– 'ಅದು ನಿನ್ನ ಯೋಗ್ಯತೆಗೆ ತಕ್ಕ ಹಾಗೆ.' ಜಾವ ಹೊತ್ತು ಮಾಡಿಯೂ ಶಿಷ್ಯನ ಮನಸ್ಸಿಗೆ ಆ ಏಕಾಗ್ರತೆ ಬಂದಿರಲಿಲ್ಲ.

ಗಳಿಗೆಯೋ ತಾಸೋ ಪ್ರಾರ್ಥನೆ ಮಾಡಿದರೆ ಮಾಡಬಹುದಾಗಲಿ, ಪ್ರಾರ್ಥನೆಯ ಭಾಷೆಯೇ ನಮಗೆ ತಿಳಿಯದಲ್ಲ. ಅರ್ಥವಾಗದ ಸಂಸ್ಕೃತದಿಂದ ನಮಗೇನು ಲಾಭ? ಈ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ನಮ್ಮ ನಮ್ಮ ತಾಯಿನುಡಿಯಲ್ಲೇ ಸ್ತೋತ್ರಗಳು ಇದ್ದರೆ ಒಳ್ಳೆಯದು ಎನಿಸುತ್ತದೆ. ನಮಗೆ ತಿಳಿಯದ ನುಡಿಯಲ್ಲಿ ನಾವೇನು ಬೇಡಬೇಕು? 'ಆದರೆ ಗಾಯತ್ರಿ

ಯಂಥ ಮಂತ್ರ ಮತ್ತೊಂದು ದೊರೆತೀತೆ? ಅದನ್ನು ಕನ್ನಡಕ್ಕೆ ಭಾಷಾಂತರಿಸಿ ಜಪಿಸಿದರೆ ಮೂಲಮಂತ್ರದ ಫಲ ದೊರೆತೀತೆ? ಮೂಲ ಮಂತ್ರದ ಛಂದೋನಾದದಲ್ಲೂ ಒಂದು ವಿಶೇಶ ಅರ್ಥವಿದೆ. ಭಾಷಾಂತರ ದಲ್ಲಿ ಅದು ಬರಬೇಕು ಹೇಗೆ? ಅದು ಏಕಮೇವವಾದುದು. ಪುರಾತನ ವಾದುದು.' 'ಶಬ್ದಕ್ಕೆ ಒಂದು ಪರಂಪರೆ ಇದೆ, ಇತಿಹಾಸವಿದೆ. ಆ ಪರಂಪರಾಪ್ರಾಪ್ತವಾದ ಒಂದು ಪೂಜ್ಯತೆ ಇದೆ.' ಆ ಸೊತ್ತು ಕಳೆಯ ಬಾರದು. 'ರಾಮನಾಮವು ಕೋಟ್ಯಾನುಕೋಟಿ ಹಿಂದೂ ಜನರ ಹೃದಯವನ್ನು ಮೀಟುವ ಹಾಗೆ ಖುದಾ, God ಶಬ್ದಗಳು ಅದರ ಅರ್ಥ ತಿಳಿದರೂ ಕೂಡ ಮೀಟಬಲ್ಲವೆ'? ಹೀಗೆಂದರೆ ಅರ್ಥವಿಲ್ಲದೆಯೆ ಶ್ಲೋಕ ಮಂತ್ರಗಳನ್ನು ವಟಗುಟ್ಟಬೇಕು ಎಂದಲ್ಲ. 'ಅದರ ಅರ್ಥ ಸರಿಯಾಗಿ ತಿಳಿಮುಕೊಳ್ಳಬೇಕೆಂದು ಹೇಳುವ ಅಗತ್ಯವೇ ಇಲ್ಲ.'*

ಪ್ರಾರ್ಥನೆ ದಿನದಿನದ ಆತ್ಮನಿವೇದನ. ಪದೇಪದೇ ಮಾಡುವ ಪ್ರಪತ್ತಿ. ಅದನ್ನು ಬರಿಯ ಜಪಮಾಲೆ ತಿರುಗಿಸಿಯೋ ಸ್ತೋತ್ರಗಳು

---

* ಆದರೆ ಕ್ರಮೇಣ ಗಾಂಧೀಜೀ ತಮ್ಮ ಅಭಿಪ್ರಾಯವನ್ನು ಬದಲಿಸಿದರು. ಮುಂಜಾನೆಯ ಪ್ರಾರ್ಥನೆಯಲ್ಲಿ ಗೀತಾಪಠನದ ಕ್ರಮವಿತ್ತು. ಗೀತೆ ಮೊದಲಾಯಿತೋ ಇಲ್ಲವೋ ಕೆಲವರು ಪ್ರಾರ್ಥನಾಸ್ಥಳದಿಂದ ಎದ್ದು ಹೋಗುತ್ತಿದ್ದರು. ಬಹುಕಾಲ ಗಾಂಧೀಜಿಗೆ ಇದು ಗೊತ್ತಾಗಲಿಲ್ಲ. ೧೯೪೫ರಲ್ಲಿ ಇದು ಅವರ ಗಮನಕ್ಕೆ ಬಂತು. ವಿಚಾರಿಸಿದರು. ಅವರಿಗೆ ಸಂಸ್ಕೃತ ತಿಳಿಯುತ್ತಿರಲಿಲ್ಲ. ಕೂಡಲೆ ಗಾಂಧೀಜೀ ಮರಾಠೀ ಗೀತೆ - ವಿನೋಬಾ ಅವರ 'ಗೀತಾಯಿ'- ಮೊದಲು ಮಾಡಿದರು. ಆ ಗೀತಾಯಿ ಮೂಲದ ಅನುಷ್ಟುಪ್ ಛಂದಸ್ಸೇ ಮೂಲದಷ್ಟೇ ಇಂಪಾಗಿದೆ. ಅಂದಿನಿಂದ ಸಂಸ್ಕೃತ ಗೀತೆಯಬದಲು ಮರಾಠಿ ಗೀತಾಯಿಯೇ ಹಾಡಲ್ಪಡುತ್ತಿದೆ. ಯಾರೂ ಸಂಸ್ಕೃತ ಕಲಿಯಲಿಲ್ಲ. ಏನು ಪ್ರಯೋಜನ? ಇದಾದರೆ ಸುಲಭವಾಗಿ ತಿಳಿಯುತ್ತದೆ. ಇದರಲ್ಲಿ ನಾ ಸೋತೆ. ಇಂಥ ಸೂಚನೆಗಳಿಗೆ ನಾನು ಒಪ್ಪಿರಲಿಲ್ಲ. ಆದರೆ ಈ ಸೋಲಿನಿಂದ ಹಿಂದೆ ನಾನು ಒಪ್ಪದಿದ್ದುದನ್ನೇ ಈಗ ಮಾಡುವ ಹಾಗಾಯಿತು. ಸಂಸ್ಕೃತ ಗೀತೆಗೆ ಬದಲು ಗೀತಾಯಿಯನ್ನು ನೆನ್ನೆಯಿಂದ ಹಾಡಿಸುತ್ತಿದೇನೆ! ಇದು ಬರೀ ಗೀತಾ ಶ್ಲೋಕವಾಯಿತು. ಆಚಾರ್ಯ ವಿನೋಬಾ ಈಶಾವಾಸ್ಯ ಉಪನಿಷತ್ತನ್ನು ಮರಾಠಿಗೆ ಮಾಡಿ ಅದನ್ನೂ ಜನಕ್ಕೆ ಹೇಳಿಕೊಡುತ್ತಾರೆ. ಪ್ರಾರ್ಥನೆ ಸಫಲವಾಗಲು, ರಸಮಯವಾಗಲು ಭಾಷೆ ತಿಳಿಯುವಂತಿರಬೇಕು ಎಂಬುದು ಅವರ ವಾದ.

ಕನ್ನಡದ ವಚನಕಾರರೂ ದಾಸರೂ ಈ ಹಾದಿ ತುಳಿದವರೇ. ಭಕ್ತಿಪಂಥವೆಲ್ಲ ದೇಶಭಾಷಾವಲಂಬಿಯೇ.

ಗಿಳಿಪಾಠ ಒಪ್ಪಿಸಿಯೋ ಮಾಡಿದರೆ ಫಲವಿಲ್ಲ, ‘ ಕತ್ತೆ ಬೂದಿಯಲಿ ಹೊರಳೆ ಭಕ್ತವಂತಪ್ಪುದೆ?’ ‘ಕೋತಿಗೆ ಜಪಸರ ಕೊಟ್ಟರೆ ಅದೂ ಮಣಿ ಎಣಿಸೀತು. ಬಂದ ಭಾಗ್ಯವೇನು ?’ ಆದರೆ ಮನುಷ್ಯ ಕತ್ತೆಯೂ ಅಲ್ಲ, ಕೋತಿಯೂ ಅಲ್ಲ; ಅಭ್ಯಾಸ ಅವನ ಸಾಧನೆಗಳಲ್ಲಿ ಒಂದು. ಅದು ಒಂದೇ ಎಂದರೂ ಸಂದೀತು. ಮಗು ಒಂದೊಂದೇ ಅಕ್ಷರ ಕಲಿತಾಗ ಗಿಳಿಪಾಠ. ವರ್ಣಮಾಲೆಯೆಲ್ಲ ಪಾಠ ವಾಗಿ ಅಕ್ಷರಗಳನ್ನು ಜೋಡಿಸಿ ಪದಗಳನ್ನು ಗುರುತಿಸುವಾಗ ಹಿಂದಿನ ಗಿಳಿ ಪಾಠವೆಲ್ಲ ಕಲಿತುಬರುತ್ತದೆ. ಮನವೆಂಬ ಮರ್ಕಟದ ಕುಣಿದಾಟಕ್ಕೆ ಜಪ ಧ್ಯಾನಗಳ ಮಹದೌಷಧ. ‘ ಮಕ್ಕಳಿಗೆ ಎಳೆತನದಲ್ಲಿಯೆ ಪ್ರಾರ್ಥನೆಯ ಪದ್ಧತಿಯನ್ನು ಕಲಿಸಬೇಕು. ಅವರು ಬೆಳೆದು ಬಾಳಿನಲ್ಲಿ ವಿಪತ್ತಿಗೆ ಗುರಿಯಾದಾಗ ಅದು ಅವರನ್ನು ಕಾಯುವ ಕೈಯಾದೀತು.’

ಹಿಂದೂ ಮುಸ್ಲಿಮ್ ಸಖ್ಯಕ್ಕಾಗಿ ಗಾಂಧೀಜೀ ೧೯೨೪ರಲ್ಲಿ ೨೧ ದಿನ ಉಪವಾಸಮಾಡಿದರು. ಅದರ ಫಲವಾಗಿ ಐಕ್ಯಸಭೆಯೊಂದು ದಿಲ್ಲಿಯಲ್ಲಿ ನಡೆಯಿತು. ದಿಲ್ಲಿಯಲ್ಲೇ ಮೌಲಾನಾ ಮಹಮ್ಮದಾಲಿಯ ಮನೆಯಲ್ಲಿ ಆಗ ಗಾಂಧೀಜೀ ಇದ್ದುದು. ಅವರ ಮನೆಯ ಮಾಳಿಗೆಯ ಮೇಲೆ ಮಲಗಿರುತ್ತಿದ್ದರು. ಅಲ್ಲಿ ನಡೆಯುತ್ತಿದ್ದ ಪ್ರಾರ್ಥನೆಯ ವರ್ಣನೆಯನ್ನು ದೀನಬಂಧು ಆಂಡ್ರೂಸರು ಮಾಡಿದಾರೆ.

‘ ಸಂಜೆಯ ಪ್ರಾರ್ಥನೆಯ ಹೊತ್ತು. ಮನೆಯೊಳಗೆ ಇದ್ದವರನ್ನೆಲ್ಲ, ಸ್ವಯಂಸೇವಕರನ್ನೂ ಸಹ, ಬಾಪು ಕರೆಸಿದರು. ದಿನಾಲೂ ಸಬರಮತಿ ಆಶ್ರಮದಲ್ಲಿ ಹೇಳುತ್ತಿದ್ದ ಗೀತಾ ಶ್ಲೋಕಗಳನ್ನು ಎಲ್ಲರೂ ಸೇರಿ ಹೇಳಿದರು. ಇಂದ್ರಿಯಾಭಿಲಾಷೆಯ ಸೆಳೆತದಿಂದ ಹೇಗೆ ಆತ್ಮವು ದೇಹವನ್ನು ತನ್ನ ಕಡೆಗೆ ಗೆದ್ದುಕೊಳ್ಳುತ್ತದೆ ಎಂಬುದನ್ನು ಆ ಶ್ಲೋಕಗಳಲ್ಲಿ ವರ್ಣಿಸಿದೆ. ಕೊನೆಗೆ ಬರುವುದು ಹಾಗೆ ಗೆದ್ದವರ ಹೃದಯದಲ್ಲಿ ತುಂಬಿ ಬರುವ ಶಾಂತಿಯ ಚಿತ್ರ. ಸುತ್ತಲೂ ಬೆಳುದಿಂಗಳು ಚೆಲ್ಲಿತ್ತು. ಹುಣ್ಣಿಮೆಗೆ ನಾಲ್ಕು ದಿನ ಉಳಿದಿವೆ. ನನ್ನ ಇದಿರಿನಲ್ಲಿದ್ದ ಮೂರ್ತಿಯ ತೇಜಃಪೂರ್ಣ ಮುಖವನ್ನು ದಿಟ್ಟಿಸಿ ನೋಡಿದೆ. ಹೇಳುತ್ತಿದ್ದ ಶ್ಲೋಕಗಳ ಅರ್ಥ ಚೆನ್ನಾಗಿ ಹೊಳೆಯಿತು. ಗೀತೆ ಓದಿದಮೇಲೆ ಕಬೀರನ ಕೃತಿಯೊಂದನ್ನು ಬಾಲಕೃಷ್ಣ ಹಾಡಿದ. ಕಬೀರ ದೈನ್ಯದಿಂದ ಕ್ಷಮಾಯಾಚನೆ ಮಾಡುತ್ತಿದಾನೆ. ತಾನು ಪಾಪಿಗಳ

ಖಂಡ. ತನಗೆ ಅನ್ಯಗತಿ ಇಲ್ಲ. ದೇವರೇ ಗತಿ. ವ್ರತ ಉಪವಾಸ
ಕ್ಷೆಗಳ ಕಾಲದಲ್ಲಿ ಇಂಥ ಕೀರ್ತನೆಗಳೇ ಗಾಂಧೀಜಿಗೆ ತುಂಬಾ ಇಷ್ಟ;
ಂಬಾ ಸಮಾಧಾನ. ತರುವಾಯ ವಿನೋಬಾರ ಕಠೋಪನಿಷತ್ತಿನ
ಷ್ಯ ಪ್ರವಚನ. ಆದಾದಮೇಲೆ ದೀರ್ಘಮೌನ. ಕಡೆಗೆ ಒಬ್ಬೊಬ್ಬರೇ
ದ್ದು ಹೋದರು. ಬಾಪು ಒಬ್ಬರೇ ಉಳಿದರು.

'ಬೆಳಗ್ಗೆ ನಾಲ್ಕು ಗಂಟೆಗೆ ಮೊದಲೇ ಪ್ರಾರ್ಥನೆಗೆ ಕರೆದರು. ಚಂದ್ರ
ಣಿಸುತ್ತಿರಲಿಲ್ಲ. ಬಹಳ ಕತ್ತಲೆ. ಮೂಡಲಗಾಳಿ ತಣ್ಣಗೆ ಕೊರೆಯು
ತ್ತು. ಶುಕ್ರೋದಯವಾಗಿ ಆ ಚಿಕ್ಕೆ ನಿಗಿನಿಗಿ ಹೊಳೆಯುತ್ತಿತ್ತು. ಗಾಳಿಗೆ
ಲುಗಾಡುತ್ತಿದ್ದ ಗಿಡ ಮರಗಳ ಅಸ್ಪಷ್ಟ ಆಕಾರ ಕಾಣುತ್ತಿದ್ದವು. ಆಗ
ಲ್ಲಿ ತುಂಬಿದ್ದ ಮೌನರಸವನ್ನು ವರ್ಣಿಸಲು ಸಾಧ್ಯವಿಲ್ಲ. ಗುಜರಾತಿಯ
ೀರ್ತನೆಯೊಂದನ್ನು ಪ್ರತ್ಯೇಕವಾಗಿ ಆ ದಿನ ಹಾಡಲಾಯಿತು. ಅದೇ
ಪವಾಸದ ಕೊನೆಯ ದಿನ. ಧೀರರದು ದೇವರ ದಾರಿ. ಹೇಡಿಯದಲ್ಲ.
ೂರಾ ಆತ್ಮತ್ಯಾಗ ಮಾಡಬಲ್ಲವರಿಗೇ ದೇವರು ಸಿಕ್ಕಾನು. ಅವನಿಗಾಗಿ
ಲ್ಲವನ್ನೂ ತೊರೆಯಬೇಕು. ಆಳವಾಗಿ ಕಡಲೊಳಗೆ ಮುಳುಗಿದವ
ುತ್ತು ತಂದಾನು. ಮೇಲೆ ಕೂತವನಿಗೆ ಏನಿದೆ? ಬರೀ ಮರಳು.
ದು ಆ ಕೀರ್ತನೆಯ ಭಾವ.'

ಗಾಂಧೀಜೀ ಪ್ರಾರ್ಥನೆಯಲ್ಲಿ ಕೂತಾಗ ಪದ್ಮಾಸನಾಸೀನನಾದ
ುದ್ಧದೇವನ ನೆನಪಾಗುತ್ತದೆ. ಆ ಮೋರೆಯಿಂದ ವಿಶ್ವಪ್ರೇಮ ಭ್ರಾತೃ
ಾವಗಳು ಕಿರಣಗಳಂತೆ ಸುತ್ತಲೂ ಹರಿಯುವ ಹಾಗೆ ಅನಿಸುತ್ತದೆ.

ಈ ಪ್ರಾರ್ಥನೆಗಳಲ್ಲಿ ಜಾತಿಮತ ವಿವಕ್ಷತೆ ಇಲ್ಲ. ಯಾವ ಪಂಗಡದ
ಭಿಮಾನವೂ ಇಲ್ಲ. ಕ್ರೈಸ್ತರ ಕೀರ್ತನೆಗಳೂ ಆಗಬಹುದು. ಕೊರಾನಿನ
ಯಾತಗಳೂ ಆಗಬಹುದು. ನಮ್ಮಲ್ಲೇ ಸಾವಿರ ಭೇದಗಳಿವೆಯಲ್ಲ;
ೇವರ ಹೆಸರಿನವು, ದೇವರ ರೂಪದವು ಮುಂತಾದವು. ಗಾಂಧೀಜೀ
ನ್ಮತಃ ವೈಷ್ಣವರು ವೈಷ್ಣವದ ಜೊತೆಗೆ ಜೈನರ ಪ್ರಭಾವವೂ ಎಳೆತನ
ಲ್ಲೆ ಇವರ ಮೇಲೆ ಬಿತ್ತು. ಇತರ ಧರ್ಮಗಳ ಗಾಢ ಪರಿಚಯವೂ
ುಂದೆ ಆಯಿತು. ಇದೆಲ್ಲ ಅವರ ಮನಸ್ಸನ್ನು ಪಂಥಾಭಿಮಾನದ
ಂಕೋಚದಿಂದ ಸತ್ಯಾಭಿಮಾನದ ಸಾರ್ವತ್ರಿಕತೆಗೆ ಒಯ್ದಿತು. ಆಶ್ರಮದ

ಪ್ರಾರ್ಥನೆಯ ವೈವಿಧ್ಯವು ಅದಕ್ಕೆ ಸಾಕ್ಷಿಯಾಗಿದೆ. ಅದಕ್ಕಿಂತಲೂ ಹೆಚ್ಚಾಗಿ ಆ ವೈಶಾಲ್ಯವನ್ನು ಪ್ರಾರ್ಥನೆಯಲ್ಲಿ ಸಾಧಾರಣವಾಗಿ ಮೊದಲಿಗೆ ಬರುವ ಶ್ಲೋಕ ತಿಳಿಸುತ್ತದೆ.

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನಃ ।
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ॥
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ ।
ಸೋಯಂವ್ರೋ ವಿದಧಾತು ವಾಂಛಿತಫಲಂ ತ್ರೈಲೋಕ್ಯನಾಥೋ ಹರಿಃ ॥

ಈ ಪ್ರಾರ್ಥನೆಗಳು ಸಾಮೂಹಿಕ ಪ್ರಾರ್ಥನೆಗಳು. ನಾಲ್ಕು ಜನ ಸೇರಿ ಮಾಡುವಂಥವು. ಗಾಂಧೀಜಿಗೆ ಸಾಮೂಹಿಕ ಪ್ರಾರ್ಥನೆಯಲ್ಲಿ ಬಲವಾದ ನಂಬಿಗೆ. 'ಅದು ಅದ್ಭುತವಾದುದು. ಒಂಟೊಂಟಿಯಾಗಿ ಮಾಡಲಾರದ ಕೆಲಸವನ್ನು ನಾವು ಗುಂಪುಕಟ್ಟಿ ಮಾಡುತ್ತೇವೆ. ದೃಢವಾದ ಭಕ್ತಿಯಿಲ್ಲದವರಿಗೆ ಸಾಮೂಹಿಕ ಪ್ರಾರ್ಥನೆ ಹಿರಿದಾದ ಶಾಂತಿ-ಸಮಾಧಾನ ವೆಂಬುದು ಸಾಧಾರಣ ಅನುಭವದ ಮಾತು.' ಕ್ರೈಸ್ತರಲ್ಲಿ, ಮುಸ್ಲಿಮರಲ್ಲಿ ಈ ತೆರೆದ ಪ್ರಾರ್ಥನೆ ಬಹಳ. ನಮ್ಮಲ್ಲೂ ಉತ್ಸವಾದಿಗಳಲ್ಲಿ ಗುಡಿಗಳಲ್ಲಿ ಜನ ಕಲೆತು ಭಗವತ್ಪ್ರಾರ್ಥನೆ ಪೂಜೆಗಳನ್ನು ಮಾಡುತ್ತಾರೆ. ವೇದಪಾಠ ವಂತೂ ಸಾಮೂಹಿಕವಾಗಿಯೇ ನಡೆಯುತ್ತದೆ 'ನಾಲ್ಕು ಜನರ ಬಲಾತ್ಕಾರಕ್ಕಾಗಲಿ ಸಮಾಜದ ಅಂಜಿಕೆಗಾಗಲಿ ಜನ ಈ ಸಮೂಹಗಳಲ್ಲಿ ಸೇರುವುದಿಲ್ಲ. ಬೇಡ ಎಂದವರನ್ನು ಬಲವಂತ ಮಾಡಲು ನಮ್ಮಲ್ಲಿ ಯಾವ ನಿಯಮವೂ ಇಲ್ಲ. ಆದರೂ ಜನ ಚರ್ಚಿಗೆ ಮಸೀದಿಗೆ ಮಂದಿರಕ್ಕೆ ಹೋಗುತ್ತಾರೆ. ಅವರೆಲ್ಲ ನಾಸ್ತಿಕರಲ್ಲ. ಕಪಟಿಗಳೂ ಅಲ್ಲ. ಪ್ರಾಮಾಣಿಕರು, ಸಜ್ಜನರು. ನಿತ್ಯಸ್ನಾನವಿದ್ದಂತೆ ಸಾಮೂಹಿಕ ಪ್ರಾರ್ಥನೆ ಅವರಿಗೆ ಜೀವನದ ಒಂದು ಅಗತ್ಯಕರ್ಮ.' ನಾಸ್ತಿಕತೆ ಬೆಳೆದು ಹೋಗುತ್ತಿರುವ ಈ ಕಾಲದಲ್ಲಿ ಸಾಮೂಹಿಕ ಪ್ರಾರ್ಥನೆಗೂ ಪ್ರಾರ್ಥನಾ ಸ್ಥಳಗಳಿಗೂ ಗಮನ ಕಡಮೆಯಾಗುತ್ತಿದೆ. ಗುಡಿಗುಂಡಾರಗಳು ಏಕೆ ಎನ್ನುವರಿದ್ದಾರೆ. 'ಆರಾಧನೆಗಾಗಿ ಮಾಡಿದ ಈ ಪವಿತ್ರ ಸ್ಥಳಗಳು ಕೆಲಸಕ್ಕೆ ಬಾರದ ಬರೀ ಮೌಢ್ಯದ ಸಂಕೇತವಲ್ಲ. ಕೊಂಚ ಅವಕಾಶ ದೊರೆತರೆ ಸಾಕು ಮೊದಲ ಹೊಡೆತಕ್ಕೇ ಅವನ್ನು ಉರುಳಿಸುವ ಚಪಲ ಸಲ್ಲದು. ಇಂದಿನತನಕ ಇಂಥ

ಎಷ್ಟೋ ದಾಳಿಗಳಿಗೆ ಅವು ಮಣಿದಿಲ್ಲ. ಕಡೆತನಕ ಮಣಿಯಲಿಕ್ಕೂ ಇಲ್ಲ.'
ಗಾಂಧೀಜೀ ಭೌತಿಕ ನಾಗರಿಕತೆಯ ರಂಗದಲ್ಲಿ ಪ್ರಳಯ ಭೈರವನಂತೆ ತಾಂಡವವಾಡಿದರೂ ಆಧ್ಯಾತ್ಮ ಸಂಸ್ಕೃತಿಯ ಕ್ಷೇತ್ರದಲ್ಲಿ ಯಾವುದನ್ನೂ ಉರುಳಿಸುವಂತೆ ಇಲ್ಲ. ಹಳದನ್ನು ಸಂಸ್ಕರಿಸಿ ಅದರಲ್ಲಿ ಹೊಸ ಪ್ರಾಣವನ್ನು ತುಂಬುತ್ತಾರೆ. ಸಾಮೂಹಿಕ ಪ್ರಾರ್ಥನೆಯ ಅವರ ಪದ್ಧತಿಯೂ ಅಂಥದೊಂದು ಪುನರುಜ್ಜೀವನ ಪ್ರಯತ್ನ.

ಗಾಂಧಿಜೀ ಪ್ರಾರ್ಥನೆಯಲ್ಲಿ ಮೌನವಾಗಿ ಕೂತಿರುತ್ತಾರೆ. ಮೊದ ಮೊದಲು ಅವರಿಗೆ ಮಾತು ಬೇಕಾಗಿತ್ತೋ ಏನೋ. ಈಗಂತೂ ಅವರ ಧ್ಯಾನ-ಪ್ರಾರ್ಥನೆಗಳು ಕೇವಲ ಭಾವಾತ್ಮಕ ಎನಿಸುತ್ತದೆ. ಹತ್ತಿಪ್ಪತ್ತು ವರ್ಷಗಳ ಹಿಂದೆ ಗಾಂಧೀಜೀ ರಾಮನಾಮದ ಬಗ್ಗೆ ಅಲ್ಲಲ್ಲಿ ಪ್ರಸ್ತಾಪ ಮಾಡುತ್ತಿದ್ದರು. ರಾಮನಾಮವನ್ನು ಉಪದೇಶಿಸುತ್ತಿದ್ದರು. ಮನೋನಿಗ್ರಹಕ್ಕಾಗಿ ಜಪ ಅಗತ್ಯವೆಂದು ಒಂದು ಸಲ ದ್ವಾದಶಾಕ್ಷರೀ ಮಂತ್ರವನ್ನೂ-ಓಂ ನಮೋ ಭಗವತೇ ವಾಸುದೇವಾಯ-ಉಪದೇಶ ಮಾಡಿದ್ದರು. ಆಗ ಅವರ ಜಪಯಜ್ಞ ನಿರಂತರವಾಗಿ ನಡೆದಿತ್ತು. ಅವರ ಖಾದೀ ಚೀಲದಲ್ಲಿ ಯಾವಾಗಲೂ ಒಂದು ಜಪಸರ ಇದ್ದೇ ಇರುತ್ತಿತ್ತು. ಅಸಹಕಾರದ ಒಳ್ಳೆಯ ಬಿಕ್ಕಟ್ಟಿನ ಪ್ರಸಂಗದಲ್ಲಿ ಅವರ ತಲೆದಿಂಬಿನ ಕೆಳಗೆ ಜಪಮಾಲೆ ಇದ್ದುದನ್ನು ಬೆಳಿಗ್ಗೆ ಅವರ ಹಾಸಿಗೆ ಸುತ್ತುವಾಗ ಕೃಷ್ಣದಾಸರು-ಗಾಂಧೀಜಿಯ ಬಂಗಾಲೀ ಕಾರ್ಯದರ್ಶಿ-ನೋಡಿದ್ದರು. ಆಗ ಗಾಂಧೀಜೀ ಜಪಮಾಲೆಯನ್ನು ಬಳಸುತ್ತಿದ್ದರು. ಕ್ರಮೇಣ ಅವರಿಗೆ ರಾಟಿ ತಿರುಗಿಸುವಾಗ ದೇವರ ನಾಮ ಸ್ಮರಿಸುವುದೇ ಸುಲಭವಾಗಿಯೂ ಚಲೋದಾಗಿಯೂ ಕಂಡಿತು. ಅದೇ ಅವರ ಜಪಸಾಮಗ್ರಿ ಆಯಿತು. ಬರಬರುತ್ತ ಎಲ್ಲರಿಗೂ ಈ ಹೊಸ ರೀತಿಯ ಜಪವನ್ನೇ ಬೋಧಿಸಿದರು. ಈಗಲೂ ರಾಟಿ ತಿರುಗಿಸುತ್ತ ಕುಳಿತಾಗ ಒಂದೊಂದು ಸಲ ಆ ಏಕಾಗ್ರತೆ ಕಾಣಬರುತ್ತದೆ.

ಅವರ ಪ್ರಾರ್ಥನೆಯಲ್ಲಿ ಈಗ ಮಾಲೆ ಮಣಿಗಳು ಯಾವುವೂ ಇಲ್ಲ. ಮಾಲೆ ಎಣಿಸುವ ಜಪಧ್ಯಾನವಿರಲಾರದು ಅದು. ನಮ್ಮ ಉಚ್ಛ್ವಾಸ ನಿಶ್ವಾಸಗಳನ್ನು ಅನುಸರಿಸಿ ನಡೆಸುವ ಅಜಪಧ್ಯಾನ ಎಂಬ ಜಪಯಜ್ಞ

ಒಂದಿದೆ. ಅದರಲ್ಲಿ ಹೊರಗಣ ಯಾವ ಪದಾರ್ಥವೂ ಬೇಕಾಗಿಲ್ಲ. ಗಾಂಧೀಜಿಯ ಧ್ಯಾನ ಅಂಥ ಅಜಪಧ್ಯಾನದ ಮೂಕ ಪ್ರಾರ್ಥನೆ ಇರಬೇಕು ಅನಿಸುತ್ತದೆ. 'ಅದು ವೈಯಕ್ತಿಕ ಪ್ರಾರ್ಥನೆ. ಅದಕ್ಕೆ ಮಾತಿಲ್ಲ. ಸಂತತವಾಗಿ ನಡೆದಿರುವ ಜಪ ಅದು. ನಮಗೆ ತಿಳಿಯದೆಯೇ ಕೂಡ ನಡೆದಿರುತ್ತದೆ. 'ನಾನು ಮಾಡಿದುದೆಲ್ಲ–ಎಲ್ಲ ಕೆಲಸವೂ–ನಿನ್ನ ಪೂಜೆ' ಎಂದು ಹಿರಿಯರೊಬ್ಬರು ಹಾಡಿದ್ದಾರೆ. ಏನೇ ಮಾಡಲಿ; ಊಟ, ಹವನ ಹೋಮ, ದಾನ ತಪಸ್ಸು, ಎಲ್ಲವನ್ನೂ ನನಗೆ ಸಮರ್ಪಿಸುತ್ತ ಹೋಗು–ಎಂದು ಶ್ರೀಕೃಷ್ಣ ಅರ್ಜುನನಿಗೆ ಹೇಳಿದಾನೆ. ಗಾಂಧೀಜಿಯ ವೈಯಕ್ತಿಕ ಪ್ರಾರ್ಥನೆಯ ಭಾವವೂ ಅದೇ. ಆ ಹಿರಿಯರು ಹೇಳಿದ ಆರಾಧನೆ. ಭಗವಾನನು ಹೇಳಿದ ಸಮರ್ಪಣೆ.

ಇಷ್ಟೆಲ್ಲ ಆದಮೇಲೆ ದೇವರು ನಮ್ಮ ಪ್ರಾರ್ಥನೆಗೆ ಕಿವಿಗೊಡುತ್ತಾನೆಯೇ ಎಂದು ಕೇಳುವವರು ಇಲ್ಲದೆ ಇಲ್ಲ. ಹಣ ಕೊಟ್ಟರೆ ಪ್ರಪಂಚದಲ್ಲಿ ಬೇಕಾದ ವಸ್ತುವೆಲ್ಲ ಸಿಗುತ್ತದೆ. ಭೌತಿಕವಲ್ಲದ ಪ್ರಪಂಚದಲ್ಲಿ ಪ್ರಾರ್ಥನೆಯೇ ಹಣದ ಹಾಗೆ ನಾಣ್ಯವಿರಬೇಕು ಎಂಬ ತಪ್ಪು ತಿಳುವಳಿಕೆ ಆ ಪ್ರಶ್ನೆಯಲ್ಲಿದೆ. ಹೋಟಲಿನಲ್ಲಿ ಕೂತು ವಿದ್ಯುಚ್ಛಕ್ತಿಯ ಗುಂಡಿ ಒತ್ತಿದರಾಯಿತು, ಬಂದು ನಿಲ್ಲುವ ಮಾಣಿಗಳ ಹಾಗೆಯೇ, ದೇವರು? ಗಾಂಧೀಜಿಯನ್ನು ಎಷ್ಟೋಜನ ಆ ಪ್ರಶ್ನೆ ಕೇಳಿದಾರೆ; 'ನಿಮ್ಮ ಪ್ರಾರ್ಥನೆಗೆ ದೇವರು ಕಿವಿಗೊಡುತ್ತಾನೆಯೇ?' ಇಂಥ ಪ್ರಶ್ನೆಗೂ ಗಾಂಧೀಜೀ ಬೇಸರಗೊಂಡಿಲ್ಲ. ಅದಕ್ಕೂ ಉತ್ತರ ಕೊಟ್ಟಿದಾರೆ. 'ಈ ವಿಷಯದಲ್ಲಿ ನಾನು ಬಹಳ ಅದೃಷ್ಟಶಾಲಿ. ಆತ ಎಂದೂ ಓಗುಡದೆ ಹೋಗಿಲ್ಲ. ವಿಪತ್ತು ಘೋರವಾದಾಗಲಂತೂ ಆತ ಸಮೀಪದಲ್ಲಿಯೇ ಕಂಡಿದಾನೆ. ನನ್ನ ಬಾಳಿನಲ್ಲಿ ನಾನು ದೇವರಿಂದ ಪರಿತ್ಯಕ್ತನಾದೆ ಎಂಬ ಅನುಭವ ನನಗೆ ಒಂದೇ ಒಂದು ಗಳಿಗೆಯಾದರೂ ಬಂದಿಲ್ಲ.'

ಈ ಅನುಭವ ಸಾಮಾನ್ಯವಾಗಿ ಲಭಿಸೀತೆ? 'ನಾಯಮಾತ್ಮಾ ಬಲಹೀನೇನಲಭ್ಯಃ.' ಅಳ್ಳೆದೆಯವರಿಗೆ ಆತ್ಮಸಿದ್ಧಿ ಆದೀತೆ? ಧೀರರದು ದೇವರ ದಾರಿ. ಪ್ರಿತಮದಾಸ ಹೇಳಿದಾನೆ. 'ಆಳವಾಗಿ ಮುಳುಗಿದವಗೆ ಮುತ್ತು. ಮೇಲೆ ಕೂತವಗೆ ಬರೀ ಮಣ್ಣು.'

ಧರ್ಮಸಾರಥಿ

ಸೀತಾದೇವಿ ವಿನೋದಕ್ಕಾಗಿ ನಾರುಡೆ ಉಟ್ಟಿದಾಳೆ. ಶ್ರೀರಾಮಚಂದ್ರ ಅದನ್ನು ನೋಡಿ ನಕ್ಕು ತಾನೂ ಉಡುತ್ತಿದಾನೆ. ಮುಂದೆ ತಮಗೆ ವನವಾಸ ಕಾದಿದೆ. ಈ ನಾರುಡೆ ರಾಮಾಯಣಕ್ಕೆ ಪೀಠಿಕೆಯೇ ಆಗಲಿದೆ. ಅದು ಯಾವುದನ್ನೂ ರಾಘವನು ಯೋಚಿಸುತ್ತಿಲ್ಲ. ಹರ್ಷದಿಂದ ನಾರುಡೆಯನ್ನು ವರ್ಣಿಸುತ್ತಿದಾನೆ.

ತಪಸ್ಸಂಗ್ರಾಮ ಕವಚಂ ನಿಯಮದ್ವಿರದಾಂಕುಶಃ ।
ಖಲೀನಮಿಂದ್ರಿಯಾಶ್ವಾನಾಂ ಗೃಹ್ಯತಾಂ ಧರ್ಮಸಾರಥಿಃ ॥

ಇದು ತಪಸ್ಸೆಂಬ ಯುದ್ಧಕ್ಕೆ ಕವಚ; ನಿಯಮವೆಂಬ ಆನೆಗೆ ಅಂಕುಶ; ಇಂದ್ರಿಯಗಳೆಂಬ ಕುದುರೆಗಳಿಗೆ ಕಡಿವಾಣ; ಧರ್ಮಕ್ಕೆ ಸಾರಥಿ. ಸರಲಜೀವನ ದೀಕ್ಷಾಜೀವನ. ದೀಕ್ಷಾಜೀವನಕ್ಕೆ ಶಾರೀರ ತಪವೂ ಅಗತ್ಯ. ಈ ಮಾತನ್ನ ರಾಘವನು ತನ್ನ ಸತಿಗೆ ತಿಳಿಸುತ್ತಾನೆ. ಭಾಸ ಕವಿಯ ಪ್ರತಿಮಾ ನಾಟಕದಲ್ಲಿ ಈ ಸನ್ನಿವೇಶ ತುಂಬ ಹೃದ್ಯವಾಗಿದೆ.

ಗಾಂಧೀಜೀ ಶ್ರೀರಾಮನನ್ನು ನಂಬಿದವರು. ವ್ರತಜೀವನದಲ್ಲಿ ಪೂರಾ ನಿಷ್ಠೆಯುಳ್ಳವರು. ಜೀವನವೇ ಅವರಿಗೊಂದು ವ್ರತ; ಒಂದು ದೀಕ್ಷೆ. ಆದುದರಿಂದ ಅವರಿಗೆ ಬಾಳಿನಲ್ಲಿ ತಪಸ್ಸೇ ಪ್ರಧಾನ. ಅಂಥವರಿಗೆ ಖಾದೀ ಬಟ್ಟೆಯಲ್ಲಿ ಪವಿತ್ರತೆ ನಿಯಮ ನಿಷ್ಠೆಗಳು ಕಂಡರೆ ಏನಾಶ್ಚರ್ಯ? ರಾಘವನಿಗೆ ಇದ್ದಂತೆ ಗಾಂಧೀಜಿಗೂ ಖಾದಿ ತಮ್ಮ ತಪಸಂಗ್ರಾಮದ ಕವಚ; ಪವಿತ್ರಜೀವನದ ಅಂಕುಶ; ಸ್ವಾರ್ಥ ಲೋಭಗಳಿಗೆ ಕಡಿವಾಣ; ಅಹಂಕಾರ ಮಮಕಾರಗಳಿಗೆ ಮುಳ್ಳು. ಖಾದಿ ಇಲ್ಲದೆ ಅವರಿಗೆ ಬಾಳೇ ಶೂನ್ಯ. ರಾಟೆಯಿಂದಲೇ ಅವರಿಗೆ ಮುಕ್ತಿ. ಆಗ ನಾರು; ಈಗ ದಾರ. ಎರಡೂ ಸಂದರ್ಭಗಳಲ್ಲಿ ಕಾಣುವುದು ಒಂದೇ ಮನೋವೃತ್ತಿ.

ಶ್ರೀರಾಮಚಂದ್ರನಿಗಿಂತ ಮಹಾತ್ಮರ ಕೈ ಒಂದು ಮೊಳ ದೂರ ಬಂದಿದೆ. ರಾಮನಿಗೆ ನಾರುಡೆ ವೈಯಕ್ತಿಕ ನಿಷ್ಠೆಯಾಗಿತ್ತು. ಇವರು ಇಡೀ ಸಮಾಜಕ್ಕೇ ಆ ನಿಷ್ಠೆಯನ್ನು ಕೊಡುತ್ತಿದ್ದಾರೆ; ಆ ವ್ರತವನ್ನು ತೋಡಿಸುತ್ತಿದಾರೆ. ಖಾದಿಯೇ ಸಮಾಜಸೌಭಾಗ್ಯದ ತಳಹದಿ ಎನ್ನುತ್ತಾರೆ. ರಾಮನಿಗೆ ವನವಾಸಕ್ಕೆ ಮಾತ್ರ ಅದರ ಉಪಯೋಗ. ಗಾಂಧೀಜಿಗೆ ಯಾವಜ್ಜೀವವೂ ಅದೇ ಆಸರೆ. ನಿಜವಾಗಿಯೂ ಗಾಂಧೀ ಧರ್ಮಕ್ಕೆ–ಅಂಥದೊಂದು ಇದ್ದರೆ–ಖಾದಿಯೇ ಸರಿಯಾದ ಸಾರಥಿ!

ಖಾದಿಯ ಬಗ್ಗೆ ಗಾಂಧೀಜಿಗೆ ಎಷ್ಟು ನಂಬಿಕೆ ಇದೆ ಎಂಬುದನ್ನು ನಾಡಿಗೆ ನಾಡೇ ಬಲ್ಲದು. ಖಾದಿ ಬಡಬಗ್ಗರ ಸ್ವರಾಜ್ಯಮಂತ್ರ! ಲೋಕಮಾನ್ಯ ಟಿಳಕರು 'ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು' ಎಂದು ಸ್ವರಾಜ್ಯಮಂತ್ರದ ಮೊದಲ ಅರ್ಧವನ್ನು ಹೇಳಿದರೆ, 'ರಾಟೆಯೇ ಸ್ವರಾಜ್ಯಹಾದಿ' ಎಂದು ಗಾಂಧೀಜೀ ಉತ್ತರಾರ್ಧವನ್ನು ಹೇಳಿದರು. ಸ್ವಾತಂತ್ರ್ಯ ಸಾಧನೆಗಾಗಿ ನಾನಾ ದೇಶಗಳಲ್ಲಿ ನಾನಾ ಕಾರ್ಯಕ್ರಮಗಳನ್ನು ಅವಲಂಬಿಸಿದಾರೆ. ನಮ್ಮ ದೇಶದಲ್ಲೇ ಬೇರೆ ಬೇರೆ ಗುಂಪುಗಳು ಬೇರೆ ಬೇರೆ ಹಾದಿಗಳನ್ನು ಹುಡುಕುತ್ತಿವೆ. ಗಾಂಧೀಜಿಗೆ ಮಾತ್ರ ರಾಟೆ ಇಲ್ಲವೆ ಸ್ವರಾಜ್ಯವಿಲ್ಲ. ಸ್ವರಾಜ್ಯವೆಂದರೆ ಇಂಗ್ಲೀಷರ ಅಧಿಕಾರ ತಪ್ಪಿಸಿ, ದೇಶೀಯರಲ್ಲಿ ಶ್ರೀಮಂತರಾದವರ, ಬಲಿಷ್ಠರಾದವರ ಕೈಗೆ ರಾಜ್ಯ ಕೊಡುವುದು ಅಲ್ಲ. ರಾಗಿ ಬೀಸುವ ಕೈಗೂ ಸ್ವತಂತ್ರತೆ ಬೇಕು; ಬರಿಯ ರಾಯರಿಗಷ್ಟೆ ಅಲ್ಲ ರೈತರಿಗೆ, ಬಡಬಗ್ಗರಿಗೆ ಸ್ವಾತಂತ್ರ್ಯವಿಲ್ಲದ ಸ್ವರಾಜ್ಯ ಸ್ವರಾಜ್ಯವಲ್ಲ ರಾವಣರಾಜ್ಯ ತಪ್ಪಿ ಕುಂಭಕರ್ಣ ರಾಜ್ಯ ಆದೀತು. ಗಾಂಧೀಜಿಗೆ ಅಂಥಮ ಬೇಕಿಲ್ಲ. ಹಾಗೆ ಮಾಡುವುದು 'ಜನರಿಗೆ ದ್ರೋಹವಾದೀತು.' ಅವರು ಮೂಕ ಜನಜಂಗುಳಿಯ ಪ್ರತಿನಿಧಿ. ಎಲ್ಲ ತರದ ಅನ್ಯಾಯಗಳಿಂದ ತುಳಿಯಲ್ಪಟ್ಟ ಬಡ ಕುರಿಗಳಿಗಾಗಿಯೇ ಅವರ ಇಡೀ ಬಾಳು ದತ್ತವಾಗಿದೆ. ಬಾಳಿನಲ್ಲಿ ಗಳಿಗೆ ಗಳಿಗೆಯೂ ಅವರಿಗೆ ಅದೇ ಚಿಂತೆ. 'ಅವರಿಗಾಗಿ ಬದುಕಬೇಕು; ಅವರಿಗಾಗಿ ಮಡಿಯಬೇಕು. ಎಲ್ಲ ವಿಶ್ವಾಸ ಭಕ್ತಿಗಳಿಗಿಂತ ಬಡವರ ಮೇಲಿನ ಭಕ್ತಿ ವಿಶ್ವಾಸಗಳೇ ನನಗೆ ಹೆಚ್ಚಿನವು. ನೀವೆಲ್ಲರೂ ನನ್ನನ್ನು ಕೈಬಿಟ್ಟರೂ ಸರಿ, ಕೊಂದರೂ ಸರಿ. ಅವರಿಗಾಗಿ ನಾನು

ಈ ರಾಟಿಯನ್ನು ಹಿಡಿದೇನು; ಬಿಡಲಾರೆ. ರಾಟಿಯನ್ನು ಬಿಟ್ಟರೆ ಆ ಕೋಟ್ಯಾನುಕೋಟಿ ಮೂಕಜನ ನಾಶವಾದರು. ದೇವರ ಮುಂದೆ ನಾನು ಅದಕ್ಕೆ ಉತ್ತರ ಕೊಡಬೇಕಾದೀತು.'

'ಒರಿಸ್ಸಾಕ್ಕೆ ಹೋಗಿ ಅಲ್ಲಿನ ಜೀವಚ್ಛವಗಳನ್ನು ನೋಡಿ. ಎಂಥ ಭೀಷಣದಾರಿದ್ರ್ಯದಲ್ಲಿ ಮುಳುಗಿದಾರೆ ಅವರು. ಆ ಲಕ್ಷೋಪಲಕ್ಷ ಜನರಿಗೆ ಒಂದು ಹಿಡಿ ಅನ್ನ ದೊರೆವ ಮಾರ್ಗ ಹುಡುಕುವುದಲ್ಲವೆ ನಮ್ಮ ಮೊದಲ ಕೆಲಸ?' ಖಾದಿಯೇ ಆ ಮಾರ್ಗ. ಅದು ಬಡವರ ಕಾಮಧೇನು. ಅನಾಥ ವಿಧವೆಯರ ಜೀವನೋಪಾಯ. ಅದಕ್ಕೆ ಬೇಕಾದ ಬಂಡವಾಳವೂ ಅಷ್ಟರಲ್ಲೇ ಇದೆ.

ಹಿಂದುಸ್ಥಾನದ ಜನ ನಿರುದ್ಯೋಗದ ನರಕದಲ್ಲಿ ಬಿದ್ದಿದಾರೆ. ಮೊದಲು ಅವರಿಗೆ ರಾಟಿಯೇ ಧನವಾಗಿತ್ತು. ನಾಡಿನಲ್ಲಿ ಬಂಗಾರದ ಹೊಗೆ ಆಡುತ್ತಿದ್ದಾಗ ನಮಗೆ ಆಸರೆ ಆಗಿದ್ದುದು ರಾಟಿ. ಮತ್ತೆ ನಾಡಿಗೆ ಆ ಸ್ಥಿತಿ ಬರಲು ಅದೇ ಉಪಾಯ. ಹಿಂದೂಸ್ಥಾನದ ಸ್ವಾತಂತ್ರ್ಯ ಯುದ್ಧಭೂಮಿಯಲ್ಲಿ ಹೋಗಲಿಲ್ಲ. ನಮ್ಮ ರಾಜ್ಯ ಹಾಳಾದುದು ಇಂಗ್ಲೀಷರು ನಮ್ಮ ಕೋಟೆಗಳ ಮೇಲೆ ಗುಂಡಿನ ಮಳೆ ಸುರಿಸಿದಾಗಲಲ್ಲ. ನಮ್ಮ ನೂಲುವ ಜನರ ಹೆಬ್ಬೆರಳನ್ನು ಅವರು ಕತ್ತರಿಸಿದಾಗ; ಅವರಿಗೆ ಸಣ್ಣಪುಟ್ಟ ಸಾಲಗಳನ್ನು ಕೊಟ್ಟು ಅವರ ಕಸಬನ್ನು ಹಾಳು ಮಾಡಿದಾಗ. ಹಿಂದೂಸ್ಥಾನದ ಪಾರತಂತ್ರ್ಯದ ಕತೆ ಎಂದರೆ ದಲಾಲಿಗಳ ದರೋಡೆ; ಕಲಿಗಳ ಕದನವಲ್ಲ. ಇದೆಲ್ಲ ಗಾಂಧೀಜಿಯ ಕಣ್ಣಿಗೆ ಕಟ್ಟಿದ ಹಾಗೆ ಮತ್ತೊಬ್ಬರ ಕಣ್ಣಿಗೆ ಕಟ್ಟಲ್ಲ.

'ರಾಟಿಯೇ ಜನರ ಸರ್ವಸ್ವ. ಅದು ಮಾಯವಾದಾಗಲೇ ಜನರ ಸ್ವಾತಂತ್ರ್ಯ ಮಾಯವಾಯಿತು. ಬೇಸಾಯಕ್ಕೆ ಜೊತೆಯಾಗಿ, ಆಸರೆಯಾಗಿ ರಾಟಿ ಬೇಸಾಯಕ್ಕೆ ಒಂದು ಗೌರವ ಕೊಟ್ಟಿತು. ವಿಧವೆಯ ಗೆಳತಿ, ಹಸಿದವನಿಗೆ ಅನ್ನ, ಸೋಮಾರಿತನಕ್ಕೆ ಮದ್ದು; ರಾಟಿ ಗ್ರಾಮ ಜೀವನದ ತಿರುಗಲಿ. ಏಳು ಸಾವಿರ ಹಳ್ಳಿ ಅದರಿಂದ ಸ್ವಸಂಪೂರ್ಣವಾಗಿದ್ದವು. ರಾಟಿ ಹೋದಾಗ ಅದರೊಡನೆ ಕೋಟಿ ವಿದ್ಯೆ ಹೋದವು. ಹಳ್ಳಿಯ ಕೈಗಾರಿಕೆ ಅರಸನಿಲ್ಲದ ಸೇನೆಯಂತೆ ಆಯಿತು. ಇತರ ದೇಶ

ಗಳಲ್ಲಿ ರಾಟಿ ಹೋಯಿತಲ್ಲ. ಅಲ್ಲಿನ ಜನರು ಹೇಗೆ ಸುಖವಾಗಿದಾರೆ? ಎಂದು ಕೇಳಬಹುದು. 'ಅಲ್ಲಿ ಆ ಜನಕ್ಕೆ ಅದರ ಬದಲು ಬೇರೆ ಉದ್ಯೋಗ ಸಿಕ್ಕಿತು. ನಮಲ್ಲಿ ಏನಿದೆ?' ಅಲ್ಲಿ ಅವರು ರಾಟಿಯನ್ನು ತಾವೇ ಬಿಟ್ಟರು. ಇನ್ನೊಂದು ಸಿಕ್ಕಮೇಲೆಯೇ ಬಿಡುವ ಯತ್ನಮಾಡಿದ್ದು. ಇಷ್ಟೆಲ್ಲ ಆದರೂ ಅವರಿಗೆ ಸುಖವಿದೆಯೇ ಎಂಬ ಪ್ರಶ್ನೆ ಇದ್ದೇ ಇದೆ. ಅರ್ಥಶಾಸ್ತ್ರವು ಮುರಾರಿಯ ಹಾಗೆ ಮೂರಾಬಟ್ಟೆ ಹಿಡಿಯಬಾರದು. 'ಖಾದೀ ಅರ್ಥಶಾಸ್ತ್ರ ರಾಜಕಾರಣ, ಸಮಾಜ ಶಾಸ್ತ್ರಗಳಿಗೆ ತೀರಾ ಹತ್ತಿರ ಸಂಬಂಧವುಳ್ಳದ್ದು. ಆ ಸಂಬಂರ್ಧ ತರ್ಕ-ವಿಚಾರಕ್ಕೆ ಸಿಗಗಂಥದು ಅಲ್ಲ ರಾಟಿ ಒಂದೇ ಜಗತ್ತಿನಲ್ಲೆಲ್ಲ ಹರಡಿ ಶಸ್ತ್ರಾಸ್ತ್ರಗಳನ್ನು ಮೂಲೆಗೆ ಕೂಡಿಸಬಲ್ಲ ಮಹಾಶಕ್ತಿ!'

ಆಗಲೇ ನಿಜವಾದ ಮಾನವ-ಸಂಸ್ಕೃತಿ ಪ್ರಪಂಚದಲ್ಲಿ ಹರಡೀತು. ಹಿಂಸೆಯ ರಾಕ್ಷಸ ಹತವಾಗಿ ಹೋದಾನು. ಹಿಂದೂಸ್ಥಾನದ ಸಂಸ್ಕೃತಿ ಧರ್ಮವನ್ನು ನಂಬಿ ಅಂಥದೊಂದು ಸ್ವರ್ಣಯುಗವನ್ನು ಕಂಡಿತ್ತು. ಮತ್ತೆ ಬಂದೀತೇನು ಆ ಕಾಲ?

'ಹಿಂದೂಸ್ಥಾನದ ಸಂಸ್ಕೃತಿ ಹಿಂದೂಸ್ಥಾನದ ಹಳ್ಳಿಗಳಲ್ಲಿದೆ. ಯೂರೋಪು ಅಮೆರಿಕೆಗಳ ನಾಗರಿಕತೆ ನಮ್ಮ ನಾಡಿನ ನಾಲ್ಕು ನಗರಗಳಲ್ಲಿ ಕಂಡೀತಾಗಲಿ, ಅದು ಪರದೇಶೀಯರು ಕಟ್ಟಿದ ಗಾಳಿಗೋಪುರ. ಅದು ಬಹಳ ದಿನ ಬಾಳಲಾರದು. ಕಾಲಗತಿಗೆ ಮಣಿಯದೆ ನಿಲ್ಲಬಲ್ಲ ಸಂಸ್ಕೃತಿ ಎಂದರೆ ಹಳ್ಳಿಗಳ ಕೈಗಾರಿಕೆಯದೇ. ನಮ್ಮ ತ್ರಿಕರಣಸಂಕಲ್ಪ ಇಲ್ಲದೆ ಅದು ಮತ್ತೆ ಮೂಡುವುದು ಸಾಧ್ಯವಿಲ್ಲ. ನನ್ನ ಕಣ್ಣಿಂದ ನೋಡಿದರೆ, ನಿಮಗೆ ಖಾದಿಯ ಬೆಲೆ ತಿಳಿದೀತು. ಹಳ್ಳಿಹಳ್ಳಿಗೂ ಹೋಗಿ ರಾಟಿಯನ್ನೂ ಹಳ್ಳಿಯ ಕೈಗಾರಿಕೆಯನ್ನೂ ಹರಡಿ, ನಿಜವಾದ ಸಂಸ್ಕೃತಿಯನ್ನು ಬಿತ್ತಿರಿ.'

ಈ ಸಂಸ್ಕೃತಿಯಲ್ಲಿ ದೊಡ್ಡ ದೊಡ್ಡ ಯಂತ್ರಗಳಿಗೆ ಸ್ಥಾನವಿಲ್ಲ. ಭಾರಿ ಯಂತ್ರ ಭಸ್ಮಾಸುರನಂತೆ! ಮುಟ್ಟಿದುದನ್ನೆಲ್ಲ ಸುಡುತ್ತದೆ. ತನಗೂ ಸಾವು ತಪ್ಪಿದಲ್ಲ. ತನ್ನಿಂದಲೇ ತಾನು ನಾಶವಾದೀತು. ಸುಖಭೋಗದ ಮೋಹಿನಿ ಆಗಲೇ ಆ ಅಸುರನ ಕಣ್ಣಮುಂದೆ ಸುಳಿದಿದಾಳೆ. ಗಾಂಧೀಜಿಗೆ ಭಾರೀಯಂತ್ರ 'ಮಹಾಪಾಪ'; ಹಾವಿನ ಹುತ್ತದಂತೆ. ಅದರಲ್ಲಿ-ಒಂದೇನು ನೂರೇನು-ಹಾವು ಇದ್ದಾವು. ಆ ಹುತ್ತ ಹೋದಾಗಲೆ ಜಗತ್ತಿಗೆ

ಶಾಂತಿ. ಸಾಮ್ಯವಾದದ ಸಮವಿಭಾಗ ಪದ್ಧತಿ ಅದಕ್ಕೆ ಸರಿಯಾದ ಮದ್ದಲ್ಲ. ಹುತ್ತದಲ್ಲಿ ಹಾವಿರಲು ಕೋಲಿನಿಂದ ಹುತ್ತದ ಬಾಯನ್ನು ಬಡಿದರೆ ಹಾವು ಸತ್ತೀತೆ? * ಯಂತ್ರವು ನಮ್ಮ ಕಾಮದಾಟ ಇದ್ದಹಾಗೆ. ಕಾಮಕ್ಕೆ ಬಲಿಯಾದವರಿಗೆ ಒಂದು ತಾಳಿ ಕಟ್ಟಿದರೆ ಅವರ ಜೀವಕ್ಕೆ ಸರ್ವಾನುಕೂಲವೂ ಆಯಿತೇ? ಹಣ ಸಮವಿಭಾಗ ಮಾಡಿದ ಮಾತ್ರಕ್ಕೆ ಆತ್ಮಸ್ವಾತಂತ್ರ್ಯ ಸಿಕ್ಕೀತೇ?

ಹಾಗಾದರೆ ಮನುಷ್ಯ ಮೃಗದಂತೆ ಇರಬೇಕೆ? ಅವನಿಗೆ ಯಾವ ಉಪಕರಣವೂ ಬೇಡವೇ? ಅಡಿಗೆ ಮಾಡುವ ಒಲೆ, ಹೊಲ, ಉಳುವ ನೇಗಿಲು, ದಾರ ತೆಗೆವ ರಾಟೆ–ಇವೆಲ್ಲ ಯಂತ್ರಗಳಲ್ಲವೆ? ನೀರು ಸೇದಲು ಗಾಲಿ, ಕಟ್ಟಿಗೆ ಒಡೆಯಲು ಕೊಡಲಿ, ಹುಲ್ಲು ಕುಯ್ಯಲು ಕುಡಗೋಲು ಇಲ್ಲದಿದ್ದರೆ ಬದುಕು ಹೇಗೆ ಸಾಗಬೇಕು?

ಹೌದು, ಈ ಉಪಕರಣ ಬೇಕೇಬೇಕು. ಮನುಷ್ಯ ಜೀವನವನ್ನು ಉತ್ತಮಗೊಳಿಸಲು ಸಾವಿರಾರು ವರ್ಷಗಳಿಂದ ಮಾಡಿದ ಸಾಧನೆಯ ಫಲ ಅವು. ಗಾಂಧೀಜೀ ಹುಚ್ಚುಹುಚ್ಚಾಗಿ ಯಾವ ಯಂತ್ರವೂ ಬೇಡ ಎನ್ನುವುದಿಲ್ಲ. 'ಉಂಟೇ? ನಮ್ಮ ಮೈಯೇ ಒಂದು ಕುಶಲವಾದ ಯಂತ್ರವಲ್ಲವೆ! ರಾಟೆಯೂ ಯಂತ್ರ. ಹಲ್ಲಿನ ಸಂದಿಯೊಳಗೆ ಸೇರಿದ ಕಸ ತೆಗೆವ ಕಡ್ಡಿಯೂ ಒಂದು ಯಂತ್ರವೇ. ಯಂತ್ರವನ್ನೆಲ್ಲ ನಾ ಬೇಡ ಎನ್ನುವುದು; ಯಂತ್ರವೆಂಬ ಮಾಯಾಮೃಗದ ಭ್ರಾಂತಿಯನ್ನು. ಶರೀರ ಶ್ರಮವನ್ನು ಕಡಿಮೆಮಾಡಬೇಕೆಂಬ ಭ್ರಾಂತಿ ಬೆಳೆದುಹೋಗುತ್ತಿದೆ. ದುಡಿತ ಕಡಿಮೆ ಆಗಿ ಆಗಿ, ಜನ ಹಸಿವಿನಿಂದ ಸಾಯಲಾಗಿ ಬೀದಿಯಲ್ಲಿ ಬೀಳುತ್ತಾರೆ. ಸಾವಿರಾರು ಜನರ ಬೆನ್ನಿನ ಮೇಲೆ ಒಂದು ಹಿಡಿ ಜನ ಸವಾರಿ ಮಾಡಲು ಇಂದು ಯಂತ್ರ ಅನುಕೂಲ ಸಾಧನವಾಗಿದೆ. ಇದೆಲ್ಲದರ ಮೂಲ ಉದ್ದೇಶ ದುಡಿತ ಕಡಿಮೆಮಾಡುವ ಔದಾರ್ಯವಲ್ಲ; ಲೋಭ. ಇದನ್ನು ನಾನು ಸಹಿಸಲಾರೆ. ನನಗೆ ಮುಖ್ಯವಾದುದು

---

* ಒಡಲ ದಂಡಿಸಿ ಮುಕ್ತಿ ಪಡೆವನೆಂಬುವ ಹೆಡ್ಡ ।
ಬಡಿಗೆಯುಲ್ಲಿ ಹುತ್ತ ಹೊಡೆಯಲಡಗಿಹ ಸರ್ಪ ।
ಮಡಿಯುವುದೇ ಹೇಳು ಸರ್ವಜ್ಞ ॥

ಮಾನವ ಜೀವನ. ಯಂತ್ರ ತಾನು ಮನುಷ್ಯನ ಕೈಕಾಲು ಕಟ್ಟಿಹಾಕಿದರೆ ಅದು ಸರಿಯಲ್ಲ.'

ಯಂತ್ರಗಳಲ್ಲೂ ನಾನಾ ರೀತಿ. 'ಬಟ್ಟೆ ಹೊಲಿವ ಯಂತ್ರ ಜನರಿಗೆ ಉಪಕಾರಿ! ಅಂಥದು ಬೇಕು. ಹಾಗಾದರೆ ಬೈಸಿಕಲ್ ಮೋಟಾರುಗಳು ವೇಗದಿಂದ ಓಡಾಡಬೇಕಾದ ಅಗತ್ಯವೇನಿದೆ? 'ಸೂಜಿಯೋ, ಅದು ಹಾಗಲ್ಲ. ಬಹಳ ಮುಖ್ಯ.' ಈ ಸೂಜಿಗಳನ್ನೂ ಹೊಲಿವ ಯಂತ್ರಗಳನ್ನೂ ಮಾಡಲು ಕಾರಖಾನೆಗಳು ಬೇಡವೆ ಮತ್ತೆ? ಇದೊಂದು ಕೌಪೀನ ಸಂರಕ್ಷಣಾರ್ಥದ ಪಟಾಟೋಪದ ಕತೆಯೇ ಆದೀತಲ್ಲ. 'ನಿಜ. ಕಾರಖಾನೆ ಬೇಕಾದೀತು. ಅದನ್ನು ರಾಷ್ಟ್ರದ ಆಡಳಿತಕ್ಕೆ ಒಳಪಡಿಸಿ ನಡಿಸಬಹುದು. ಲೋಭ ದುರಾಸೆಗಳಲ್ಲದೆ ಮನುಷ್ಯನಿಗೆ ಸಹಾಯವಾಗುವುದು ಯಂತ್ರದ ಉದ್ದೇಶವಾಗಿರಬೇಕು. ವ್ಯೆಯೇ ಯಂತ್ರ. ಯಂತ್ರವಾಗಲಿ ವ್ಯೆಯಾಗಲಿ ಆತ್ಮವಿಕಾಶಕ್ಕೆ ಅನುಕೂಲವಾಗಬೇಕು. ಪ್ರತಿಕೂಲವಾದರೆ ತ್ಯಾಜ್ಯವೇ ಸರಿ.'

ಗಾಂಧೀಜಿಗೆ ಅಹಿಂಸೆಯೇ ಧರ್ಮ. ಭಾರೀ ಕಾರಖಾನೆಗಳು ಅಹಿಂಸೆಯ ಹಾದಿಗೆ ಹೊಂದುವುದಿಲ್ಲ. ಅದು ಆರ್ಥಿಕ ಹಿಂಸೆಯ ರಾಕ್ಷಸ. ಕಾರಖಾನೆಗಳ ತಳಪಾಯವೇ ಹಿಂಸೆ, ಆಕ್ರಮಣ. ಪಡುವಣ ನಾಗರಿಕತೆಗೆ ಅಂಟಿದ ರೋಗ ಇದು. ಅದನ್ನು ದೂರ ಇರಿಸಬೇಕು. ಅದಕ್ಕೆ ಬೆರಳೇ ಕೊಡಬಾರದು.

ಆದರೆ ದಿನದಿನಕ್ಕೆ ಯಂತ್ರ ನಮ್ಮನ್ನು ಸೆಳೆಯುತ್ತಿದೆ. ನಮ್ಮ ಅನುಕೂಲಕ್ಕಾಗಿ ಹೊಸ ಹೊಸ ಯಂತ್ರ ಬರುತ್ತಲೇ ಇವೆ. ಈ ಪ್ರವಾಹವನ್ನು ನಿಲ್ಲಿಸಲು ಸಾಧ್ಯವೆ? ಎಲ್ಲರೂ ಜಾಣರಾಗಿ ಉಣ್ಣುತ್ತಿರಲು ನಾವು ಮಾತ್ರ ಉಪವಾಸ ಬೀಳಬೇಕೇ ಈ ದರಬಾರಿನಲ್ಲಿ? ಈ ಉಪವಾಸ ಯಾವ ದೇವರಿಗೆ ಪ್ರೀತಿ? ಗಾಂಧೀಜಿಗೆ 'ಈ ದಾಳಿ ನಿಲ್ಲಿಸಲು ಅಸಾಧ್ಯವೆನಿಸಿಲ್ಲ. ಅದಕ್ಕೆ ಹಿಂದುಸ್ಥಾನಕ್ಕಿಂತ ಹೆಚ್ಚಿನ ಪುಣ್ಯಭೂಮಿ ಇಲ್ಲ. ಇಲ್ಲಿಯೂ ಆ ಹುಚ್ಚು ಹೊಳೆಗೆ ಅಡ್ಡ ಕಟ್ಟುವುದಾಗದಿದ್ದರೆ ಹಿಂದುಸ್ಥಾನವೂ ಅದರ ಹಿಂದೆಯೇ ಇಡೀ ಜಗತ್ತೂ ನಾಶವಾಗಿ ಹೋದೀತು.' ಗಾಂಧೀಜಿಗೆ ನಿಷ್ಠೆಯೇ ಗುರಿ. ಕೇವಲ ಕರ್ಮ ಸಾಕು, ಫಲದ ಗೋಜಿಲ್ಲ.

ಶ್ರದ್ಧೆಯಿಂದ ಮಾಡಿದ ಕಲ್ಯಾಣಕೃತಿ ಎಂದಿಗೂ ಬರಡಾಗಲಾರದು. ಇಂದಿಲ್ಲ ನಾಳೆ ಫಲಿಸಿಯೇ ತೀರಬೇಕು.'

ಪ್ರಪಂಚವೆಲ್ಲ ಕುದುರೆ ಸವಾರಿ ಮಾಡುತ್ತಿರುವಾಗ ನಮ್ಮ ಹುಡುಗರು ಮಾತ್ರ ಕೋಣದ ಬೆನ್ನಿನ ಮೇಲೆ ಮಲಗಬೇಕೆ? ಯಂತ್ರಯುಗದಲ್ಲಿ ಖಾದಿಯ ಮಾತು ನಮ್ಮ ಸುತ್ತ ನಾವೇ ಲಕ್ಷ್ಮಣನ ಗೆರೆ ಎಳೆದಂತಾಗದೇ? ಎಣ್ಣೆ ಬಂದಾಗ ಕಣ್ಣುಮುಚ್ಚುವ ಆಟ ಇದು. ಹೀಗೆ ನಮ್ಮಲ್ಲಿ ಅನೇಕರಿಗೆ ಅನುಮಾನ ಇದೆ. ಗಾಂಧೀಜಿಗೆ ಹಾಗೆ ಅನಿಸುವುದಿಲ್ಲ. ಖಾದಿ ಸಾಮ್ರಾಜ್ಯದಲ್ಲೂ ದೇಶದೇಶಗಳ ನಡುವೆ ಕೊಡತಕ್ಕೊಳ್ಳುವ ವ್ಯವಹಾರ ಉಂಟು. ಅವರಲ್ಲಿ ಇಲ್ಲದುದು ಇದರಿಂದ, ಇವರಲ್ಲಿ ಇಲ್ಲದುದು ಅವರಿಂದ ತೆಗೆದುಕೊಂಡಾರು–ಕೊಟ್ಟಾರು.

ಆದರೆ ಬದುಕನ್ನು ಅತಿ ಸರಳವಾಗಿ ಮಾಡಿದರೆ ಪರದೇಶದಿಂದ ನಮಗೆ ಬೇಕಾಗುವುದಾದರೂ ಏನು? ಈ ಸರಳತೆಯಲ್ಲಿ ಸೇಂದ್ರಾಯ ತಕ್ಷಕಾಯ ಸ್ವಾಹಾ ಎಂಬಂತೆ ಯಂತ್ರೋಪಕರಣಗಳನ್ನೇ ಹೊಡೆದು ಹಾಕುವಂತಿದೆಯಲ್ಲ. ಸರಳತೆಯ ಬಾಣದಿಂದ ಯಂತ್ರಕ್ಕೆ ಗುರಿಯಿಟ್ಟ ಹಾಗಿದೆ. ಅಮೆರಿಕದ ಅಧ್ಯಕ್ಷ ಹೂವರ್ ಮನೆಗೆರಡು ರೇಡಿಯೋ ತಲೆಗೆರಡು ಕಾರು ತನ್ನ ಗುರಿ ಎನ್ನುತ್ತಿದ್ದ. ಎರಡು ಬೇಡ, ಒಂದಾದರೂ ಬರುವ ದಿನ ಇದಿರು ನೋಡಬಾರದೆ?

ಗಾಂಧೀಜಿಗೆ ಈ ಮಾತಿನಲ್ಲಿ ಹುರುಳಿಲ್ಲ. ಪ್ರಪಂಚವೆಲ್ಲ ಕಾರೇ ತುಂಬಿ ಹೋದರೆ ನಮ್ಮ ಕಾಲೇ ನಮಗೆ ಬೇಡವಾದವು. ಉಪಯೋಗ ವಿಲ್ಲದೆ ಮೂಲೆಗೆ ಬಿದ್ದಂತಾಗಿ ವಿಜ್ಞಾನಿಗಳ ತತ್ವದಂತೆ ಅವು ಉದುರಿ ಹೋಗಬೇಕಾಗಿ ಬಂದೀತು. (ನಿರುಪಯೋಗವಾದ್ದರಿಂದ ನಮ್ಮ ಬಾಲ ಸವೆದುಹೋಗಿ ನಾವು ಮನುಷ್ಯರಾಗಿಲ್ಲವೆ?) 'ಹಿಂದೂಸ್ಥಾನದಲ್ಲಿ ಹಳ್ಳಿ ಹಳ್ಳಿಗೂ ರೇಡಿಯೋ ಆಗುವ ದಿನ ನನ್ನ ಕಾಲದಲ್ಲೇನು ಬಾರದು. ಮೂರು ಕೋಟಿ ಜನ ಮಾಡುವ ಕೆಲಸವನ್ನು ಮೂವತ್ತು ಸಾವಿರ ಜನ ಮಾಡಿದರೆ ನನಗೇನು ಆಕ್ಷೇಪಣೆ ಇಲ್ಲವಾಗಲಿ, ಇದರಿಂದ ಆ ಮೂರು ಕೋಟಿ ಜನ ಸುಮ್ಮನೆ ಕಾಲು ಚಾಚಿಕೊಂಡು ನಿರುದ್ಯೋಗಿಗಳಾಗ ಬಾರದು. ಅದೇ ಮುಖ್ಯ.'

'ಯಂತ್ರ ಬಂದರೆ ಆ ನೂರು ಕೋಟಿ ಜನಕ್ಕೆ ಕೆಲಸ ಹಗುರಾಗಿ ಬೇಕಾದಷ್ಟು ವಿರಾಮ ಸಿಗುತ್ತದೆ.' ಯಾರೋ ಹೇಳಿದರು.

'ಯಾಕೆ ವಿರಾಮ? ಏನು ಹಾಕಿ ಆಡಬೇಕೆ?' ಎಂದರು ಗಾಂಧೀಜೀ.

ಯಂತ್ರಗಳಿಂದ ಸಮೃದ್ಧಿಯ ಕಾಲ ಬರುತ್ತದೆ ಎಂದು ಬಂದವರು ಸೂಚಿಸಿದರು. ಗಾಂಧೀಜೀ ಅವರ ಮೇಲೆಯೆ ತಿರುಗಿಬಿದ್ದರು. ಬಂದವರು ಅಮೆರಿಕದವರು. 'ಏನು ಸಮೃದ್ಧಿ ಸಮೃದ್ಧಿ? ಕೋಟಿಗಟ್ಟಲೆ ಚೀಲ ಗೋಧಿ ಬೆಳೆದು ಅದನ್ನು ನಿಶ್ಚಿಂತೆಯಿಂದ ಸುಟ್ಟು ಬೂದಿಮಾಡುವುದು, ನಿಮ್ಮಲ್ಲಿ ಮಾಡಿದ ಹಾಗೆ. ಇದೇ ಅಲ್ಲವೆ ಸಮೃದ್ಧಿ?' ಗಾಂಧೀಜೀ ಕೇಳಿದರು.

'ಸುಡುವುದು ನಿಂತ್ತುಹೋಗಿದೆ.' ಅವರು ಹೇಳಿದರು. ಗೋಧಿ ಬೆಳೆಯಬೇಡಿರೆಂದು ರೈತರಿಗೆ ಲಂಚ ಕೊಡುತ್ತಿದಾರೆ ಈಗ. ಬಂಡವಾಳ ಸಿದ್ಧಾಂತ ತಂದ ವಿಪರೀತಕಾಲ ಅದು. ಈಗ ಕೋಳಿಯ ಮೊಟ್ಟೆಯ ದರ ಇಳಿದುದರಿಂದ ಜನರು ಹೊಡೆದಾಡುವಾಗ ಮೊಟ್ಟೆಯೇ ಕಲ್ಲಿನಂತೆ ಹಾರಾಡುತ್ತದೆ.'

'ಈ ಅವಸ್ಥೆಯೇ ನಾನು ಬೇಡ ಎನ್ನುವುದು. ಎಲ್ಲರಿಗೂ ಹೊಟ್ಟೆ ತುಂಬ ಹಿಟ್ಟು, ಮೈತುಂಬ ಬಟ್ಟೆ, ತಕ್ಕಮಟ್ಟಿಗೆ ವಿದ್ಯೆ-ಇಷ್ಟಾದರ ಸಮೃದ್ಧಿ, ಇದನ್ನೇ ಸಮೃದ್ಧಿ ಎಂದು ನೀವೂ ಕರೆದರೆ ಸರಿ. ಅದು ಬಿಟ್ಟು ಹೊಟ್ಟೆ ಒಡೆಯುವಂತೆ ಅನ್ನ ಕೂರುವುದು, ಉಪಯೋಗವಿಲ್ಲದಿದ್ದರೂ ಮನೆ ತುಂಬ ಸಾಮಾನು ಕೂಡಿಹಾಕುವುದು ಸರಿಯಲ್ಲ. ಹಾಗೆಯೆ ಹಿಂದೂಸ್ಥಾನದಲ್ಲಿ ಬಡತನ ಕೊಳಕು ಧೂಳು ಯಾವುದೂ ಬೇಕಾಗಿಲ್ಲ.'

ಈ ದೃಢಮನಸ್ಸಿಗೆ 'ನಮ್ಮ ಹೆಂಗಸರ ತೆಳುವಾದ ಸೀರೆ ನಮ್ಮ ಗಿರಿಣಿ ಪಂಚೆ ಎಲ್ಲಾ ನಮ್ಮ ನಾಡಿನ ಗುಲಾಮಗಿರಿಯ ಗುರುತು-ಅವಮಾನದ ಬಾವುಟ' ಆಗಿ ಕಾಣುತ್ತದೆ. 'ನನ್ನ ದುಃಖದ ಆಳವನ್ನು ನಿಮಗೆ ತಿಳಿಸಲಾರೆ. ನನಗೆ ಮುಪ್ಪಿನ ಮರುಳು ಕವಿದಿದೆ ಎನ್ನುತ್ತೀರಾ? ನಾನು ನಡೆದಿರುವ ದಾರಿ ತಪ್ಪು ಎನ್ನುತ್ತೀರಾ? ಯಾರಾದರೂ ಹಾಗೆ

ಪ್ರಮಾಣಿಸಿಕೊಡಿ. ನನ್ನ ಹೆಮ್ಮೆಯನ್ನೆಲ್ಲ ನುಂಗಿಕೊಂಡು ಅವರ ಕಾಲಿಗೆ ಬೀಳುತ್ತೇನೆ. ನಿಮಗೆ ಧೈರ್ಯ ಇದ್ದರೆ ನನನ್ನು ಸೋಲಿಸಿ ಇಲ್ಲದಿದ್ದರೆ ನನ್ನ ದಾರಿಗೆ ಬನ್ನಿ. ಖಾದೀ ಚಳುವಳಿಯಲ್ಲಿ ಸೇರಿಕೊಳ್ಳಿ.'

ಖಾದಿಯ ವಿಷಯವಾಗಿ ಗಾಂಧೀಜೀ ಇಪ್ಪತ್ತು ವರ್ಷದಿಂದ ಮಾತಾಡುತ್ತಿದಾರೆ, ದುಡಿಯುತ್ತಿದಾರೆ. 'ನಾನು ಇಲ್ಲಿಗೆ ಬಂದಿರುವುದು ಖಾದೀ ಮಾರಲಿಕ್ಕೆ, ಖಾದಿಗಾಗಿ ಭಿಕ್ಷೆ ಬೇಡಲಿಕ್ಕೆ' ಎಂದು ಮನಸು ಬಿಚ್ಚಿ ಹೇಳಿದಾರೆ. ಒಂದುಕಡೆ ಖಾದಿ ಭಂಡಾರ ಪ್ರಾರಂಭಿಸಬೇಕಾಗಿತ್ತು. ಗಾಂಧೀಜೀ ಬಂದರು. ಬಂದವರೇ ಗಜಕಡ್ಡಿ ಕತ್ತರಿ ಲೆಕ್ಕದ ಪುಸ್ತಕ ಮುಂದಿಟ್ಟು ಕೊಂಡು ಮಾರಲಿಕ್ಕೆ ಕೂತರು. ಭಾಷಣವಿಲ್ಲ ಸಂಭಾಷಣೆ ಇಲ್ಲ. ಮುಂದಿನ ಊರಿಗೆ ಹೋದಮೇಲೆ ಅಲ್ಲಿ ಹೇಳಿದರು. 'ಕೆಲಸವೇ ಮಾತು. ಅದಕ್ಕಾಗಿಯೇ ಅಲ್ಲಿ ಮಾತಾಡಲಿಲ್ಲ.' ಯಾರಾದರೂ ತಮ್ಮ ಹಸ್ತಾಕ್ಷರ- (autograph) ಕೇಳಿದರೆ ಸರಿ; ಖಾದೀ ಉಟ್ಟುಕೊಂಡು ಬನ್ನಿ ಕೊಡುತ್ತೇನೆ ಎಂದು ಹೇಳಿ ಅವರಿಗೆ ಖಾದೀ ಉಡಿಸಿ ಬಿಡುತ್ತಿದ್ದರು. ಎಷ್ಟೋ ಜನ ಶ್ರೀಮಂತಿನಿಯರು ಅಧಿಕಾರಿಗಳ ಮನೆಯವರು ಗಾಂಧೀಜಿಯ ಬಳಿಗೆ ಬಂದು ಹಿಂದಿರುಗುವಾಗ ಖಾದೀ ಉಡಿಸಿ ಬಿಡುತ್ತಿದ್ದರು. ಎಷ್ಟೋ ಜನ ಹೋದ ಕಡೆ ಗಾಂಧೀಜೀ ಖಾದಿಯ ಬಗ್ಗೆ ಹಟಹಿಡಿದು ಸಾಧಿಸಿದಾರೆ. ಮೆತ್ತೆಗೆ ಖಾದೀಚೀಲ ತೊಡಿಸಿದ್ದರೆ, ಕೂತಕಡೆ ಅದನ್ನು ಹರಿದು ಒಳಗಿನ ಮೆತ್ತೆ ಖಾದಿಯೋ ಅಲ್ಲವೋ ಪರೀಕ್ಷಿಸಿ ನೋಡಿದಾರೆ. ಬೇರೆ ಬೇರೆ ತರಗಳಲ್ಲಿ ಅದನ್ನು ನೆಡುತ್ತ ಬಂದಿದಾರೆ.

ಇಷ್ಟಾದರೂ ಈ ಖಾದಿಯ ಮಾತು ಸಾಕುಮಾಡಬಾರದೆ? ಏಕೆ ಈ ಗಂಟಲು ನೋವು ಎಂದವರಿದಾರೆ. ಅವರಿಗೆ ಇದೆಲ್ಲ ಭ್ರಾಂತಿಯಾಗಿ ಕಂಡಿದೆ. ಗಾಂಧೀಜಿಗೆ ಅದು ಸಾಧ್ಯವೇ? 'ಸಾವಿನ ದವಡೆಯೊಳಗೇ ಸಿಕ್ಕಿದಾಗಲೂ ಪ್ರಹ್ಲಾದ ಹರಿಯನಾಮ ಬಿಟ್ಟನೇ? ನನ್ನ ಇಷ್ಟಮಂತ್ರವನ್ನು ನಾನು ಬಿಡಲೇ? ಪ್ರಹ್ಲಾದನಿಗೆ ಬಂದ ಬಾಧೆ ನನಗೆ ಯಾವುದೂ ಇಲ್ಲವಲ್ಲ! ನನ್ನ ಒಲವಿನ ದೇಶದ ಗೋಳು ನನಗೆ ಉಸಿರುತ್ತಿರುವ ಈ ಒಂದೇ ಮಂತ್ರವನ್ನು ನಾನು ಬಿಟ್ಟು ಬಿಡಲೇ? ನಾಡು ನಿರುದ್ಯೋಗದಲ್ಲಿ ಮುಳುಗಿದೆ. ಈ ಸೋಮಾರಿತನ ನಾಡಿನ ಜೀವಾಳವನ್ನೇ ಕೊರೆಯುತ್ತಾ ಇದೆ. ಒಳನಾಡಿನ

ಹಳ್ಳಿಗಳಿಗೆ ಹೋದಾಗ ಅಲ್ಲಿನ ಜನರ ಕಳೆಯಿಲ್ಲದ ಬರಿಗಣ್ಣು ನೋಡಿ ಬೆದರಿದ್ದೇನೆ. ಬೇರೆ ಏನೂ ಮಾಡಲು ಕೆಲಸ ಇಲ್ಲದೆ ದನದ ಜೊತೆಯಲ್ಲಿ ದುಡಿದು ದುಡಿದು ದನಗಳ ಹಾಗೆಯೇ ಆಗಿದಾರೆ ಜನ. ಕೋಟಿಗಟ್ಟಲೆ ಜನ ತಮ್ಮ ಕೈಯನ್ನೇ ಮರೆತಿದಾರೆ. ಎಂಥ ದಾರುಣ ಚಿತ್ರ! ಪಶುಗಳಿಗೂ ನಮಗೂ ನಡುವೆ ಇಷ್ಟು ದೊಡ್ಡ ಭೇದ ಹೇಗೆ ಬಂತು? ಕೈ ಅಲ್ಲವೆ ಅದಕ್ಕೆ ಕಾರಣ ಕಾಲಿನ ಹಾಗೆಯೆ ಅದನ್ನೂ ಬರೀ ಯಂತ್ರದ ಅಂಗದಂತೆ ಉಪಯೋಗಿಸುತ್ತಿದೇವೆಯಲ್ಲ. ಪ್ರಕೃತಿಮಾತೆ ಕೊಟ್ಟ ವರವನ್ನು ಜರಿದಿದೇವೆ. ಫಲವಾಗಿ ನಮ್ಮ ಮೈ ಮನಸ್ಸುಗಳೆರಡೂ ಒಣಗಿಹೋಗುತ್ತಿವೆ. ರಾಟೆಯೊಂದೇ ಈ ಅನಾಹುತವನ್ನು ತಡೆಯಬಲ್ಲ ಸಾಧನೆ. ನಾಡಿನಲ್ಲಿ ಉದ್ಯೋಗಪ್ರಿಯತೆಯನ್ನು ಬೆಳಸಿ ಹಳ್ಳಿಗಳನ್ನು ಉದ್ಧಾರಮಾಡಿ ಬಡಬಗ್ಗರಿಗೆ ಒಂದು ಹೊತ್ತಿನ ಹಿಟ್ಟಾದರೂ ಕೊಡುವ ಉಪಾಯ ಬೇರೆ ಏನಿದೆ?'

ಒಂದು ಸಲ ಗಾಂಧೀಜಿಗೆ ಕಾಯಿಲೆ ಆದಾಗ ವೈದ್ಯರು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದರು. ಎಂದರೆ ನೂಲುವುದು ಕೂಡ ಬೇಡ ಎಂದು ಅವರ ಸಲಹೆ. 'ನೂಲುವುದನ್ನು ಬಿಡುವುದೇ? ನೂಲದೆ ನಾನು ಬದುಕಲಾರೆನಲ್ಲ. ತಿಂದು ಉಂಡು ಬದುಕಬೇಕಾದರೆ ನೂಲಲೇಬೇಕು ನಾನು.' ಇದರಿಂದ ರೋಗ ಬಲವಾದೀತು ಎಂದು ವೈದ್ಯರ ಅಂಜಿಕೆ. 'ಒಂದುವೇಳೆ ನೂಲುತ್ತ ನೂಲುತ್ತ ಹಾಗೆಯೇ ನಾನು ಕಣ್ಣುಮುಚ್ಚಿದರೆ ಅದಕ್ಕಿಂತ ದಿವ್ಯಮರಣ ಉಂಟೇ? ವೈದ್ಯರೆ! ನೂಲುಬೇಡ ಎಂದರೆ ಹೊಟ್ಟೆಗೆ ಏನೂ ತಿನ್ನಬೇಡ ಎಂದ ಹಾಗೆಯೆ ನನ್ನ ಪಾಲಿಗೆ.'

ನೂಲುವುದು ಯಜ್ಞಕರ್ಮ. ಯಜ್ಞಮಾಡದೆ ತಿನ್ನುವವನು ಕಳ್ಳ. ಪ್ರತಿಯೊಬ್ಬನೂ ತನ್ನ ಅನ್ನ ನೀರಿಗಾಗಿ ಅಷ್ಟೋ ಇಷ್ಟೋ ದುಡಿಯಲೇಬೇಕು. ಶರೀರಶ್ರಮವಿಲ್ಲದೆ ತಿಂದ ಅನ್ನ ಕಳ್ಳತನದ್ದು. ಎಂಥ ಶ್ರೀಮಂತನೇ ಇರಲಿ ತನ್ನ ಆಹಾರಕ್ಕಾಗಿ ಶರೀರಶ್ರಮ ಗೆಯ್ಯಬೇಕು. ಗಾಂಧೀಜಿಗೆ ಶರೀರಶ್ರಮ ಒಂದು ವ್ರತ. ರಷ್ಯಾದೇಶದ ಬೊಡ್ರಿನ್‌ನ - Bread Labour - ಅನ್ನಕ್ಕಾಗಿ ದುಡಿತ ಎಂಬ ಸಿದ್ಧಾಂತದ ಹಾಗೆ ಈ ವ್ರತ. ಈ ಹಾದಿಯ ಮೇಲೆಯೇ ಕಾಂಗ್ರೆಸ್ಸಿಗೆ ನೂಲುವವರೇ ಸದಸ್ಯರಾಗಬಹುದು

ಎಂದು ಏರ್ಪಾಡು ಮಾಡಿದ್ದುದು. No work, no vote - ಕೆಲಸವೂ ಇಲ್ಲ, ಓಟೂ ಇಲ್ಲ ಎಂಬ ತತ್ವ ಅದು.

ಖಾದೀ ಖಾದೀ ಎಂದು ಕೂಗಿದರೆ ಉಪಯೋಗವಿಲ್ಲ ಎಂದು ಪರ ದೇಶೀ ವಸ್ತ್ರ ಬಹಿಷ್ಕಾರವನ್ನು ಉಪದೇಶಿಸಿದರು. ಅದಕ್ಕಾಗಿ ಸಭೆ ಸೇರಿಸಿ ವಿದೇಶೀ ಬಟ್ಟೆಗಳನ್ನು ಸುಟ್ಟರು. ಇದು ಸರಿಯೇ? ಅವರ ಬಟ್ಟೆ ಬೇಡ ಎಂದರೆ ಅವರ ದೇಶದ ಕೂಲಿ ಜನಕ್ಕೆ ಉಪವಾಸ ತಾನೆ?

'ನಮ್ಮ ಕೈಗಾರಿಕೆಗೆ ಉದ್ಯೋಗಕ್ಕೆ ಮುಳಿವಾಗಬಹುದಾದ ಎಲ್ಲ ಪರ ದೇಶಿ ವಸ್ತುಗಳಿಗೂ ಬಹಿಷ್ಕಾರವೇ. ನಮ್ಮ ದೇಶದಲ್ಲೇ ಉತ್ಪತ್ತಿಯಾಗ ಬಹುದಾದ ಯಾವ ಪದಾರ್ಥವೂ ಹೊರನಾಡಿನಿಂದ ನಮ್ಮಲ್ಲಿ ಬರಬಾರದು. ನಮ್ಮಲ್ಲಿಯೇ ಹೇರಳವಾಗಿ ಗೋಧಿ ಬೆಳೆಯುತ್ತಿರುವಾಗ ಆಸ್ಟ್ರೇಲಿಯಾ ದೇಶದಿಂದ ಗೋಧಿ ತರಿಸಿದರೆ ಅದು ಮಹಾಪಾಪ. ನಮ್ಮಲ್ಲಿ ಬೆಳೆಯಿದೆ ಇರುವ ಧವಸ ನಮಗೆ ಅಗತ್ಯವಾದರೆ ಅದನ್ನು ತಪ್ಪದೆ ಹೊರಗಿನಿಂದ ತರಿಸ ಬೇಕು. ಈ ನಿಷೇಧದಲ್ಲಿ ಸ್ವಲ್ಪವೂ ದ್ವೇಷಭಾವನೆ ಇಲ್ಲ. ಹಾಗೆ ದ್ವೇಷಕ್ಕಾಗಿ ಯಾವ ಪದಾರ್ಥವನ್ನು ಬಹಿಷ್ಕರಿಸಿದರೂ ನಾನು ಅದನ್ನು ಒಪ್ಪುವುದಿಲ್ಲ. ಅದೇ ರೀತಿ ನಮ್ಮಲ್ಲಿ ತಯಾರಾಗುವ ವಸ್ತುವನ್ನು ಹೊರಗಿನಿಂದ ತರಿಸಿದರೆ ನಾನು ಸಹಿಸಲಾರೆ. ನಮ್ಮಲ್ಲಿ ಚರ್ಮಕ್ಕೇನು ಕಡಮೆ? ನಮ್ಮ ದೇಶದ ತೊಗಲಿನಿಂದ ಮಾಡಿದ ಕೆರ ಉಪಯೋಗಿಸುವುದೇ ನನ್ನ ಧರ್ಮ. ಪರದೇಶದ ಕೆರ ನಮ್ಮದಕ್ಕಿಂತ ಅಗ್ಗ ನಯ ಆಗಿದ್ದರೂ ಅಷ್ಟೇ. ನಮ್ಮ ದೇಶದಲ್ಲಿ ಸಾಕಷ್ಟು ಸಕ್ಕರೆ ಉತ್ಪತ್ತಿ ಆದರೆ ಹೊರಗಿನ ಸಕ್ಕರೆಗೆ ಬಹಿಷ್ಕಾರ ಹಾಕ ಬೇಕಾದುದೇ.' ಬಟ್ಟೆಯ ಮಾತು ಹೇಳುವ ಹಾಗೆಯೆ ಇಲ್ಲ.

ರವೀಂದ್ರನಾಥ ಠಾಕೂರರಿಗೆ ಈ ಬಹಿಷ್ಕಾರದ ಕಾರ್ಯ ಸಹಿಸಲಿಲ್ಲ. ಖಾದಿಯೇ ಒರಟು; ಅದರಲ್ಲಿ ಅಂದವಿಲ್ಲ. ಈ ಬಹಿಷ್ಕಾರವಂತೂ ಖಾದೀ ಚಳುವಳಿಯ ಒರಟುತನಕ್ಕೆ ಕಳಸವಿಟ್ಟಹಾಗೆ. ಹೀಗೆ ಯೋಚಿಸಿ ಅವರಿಗೆ ತುಂಬಾ ನೋವಾಯಿತು. ಗಾಂಧೀಜೀ ತಮಗೆ ಗೆಳೆಯರು; ಹಿಂದುಸ್ಥಾನದ ಪುಣ್ಯಫಲ. ಅಂಥವರು ಹೀಗಾದರಲ್ಲ ಎಂದು ಕಲೆಯ ಅವತಾರವೇ ಆದ ರವೀಂದ್ರರಿಗೆ ಎನಿಸಿತು. ಗಾಂಧೀಜಿಗೆ ಆ ನೋವನ್ನು ತಿಳಿಸಿದರು.

ಇದೇನು ಸ್ವದೇಶಿ” ಇದೇನು ದ್ವೇಷ? ಈ ಕಿಚ್ಚಿನಿಂದ ಎಲ್ಲವೂ ಉರಿದುಹೋಯಿತಲ್ಲ. ಬೆಳಗ್ಗೆ ಎದ್ದರೆ ಹಕ್ಕಿಗೆ ತಿನ್ನುವ ಯೋಚನೆಗಿಂತ ಮೊದಲು ಮುಗಿಲಿಗೆ ಹಾರುವ ಹಂಬಲವಲ್ಲವೆ? ಇದು ಒಂದು ಸಂಧಿಕಾಲ, ಅರುಣೋದಯ. ಹೊಸ ಜಗತ್ತು ಹುಟ್ಟುವ ಕಾಲ. ಇಂಥ ಹೊತ್ತಿನಲ್ಲಿ ಭಿನ್ನಭಾವವೇಕೆ? ಹೀಗೆ ರವೀಂದ್ರರು ಬರೆದರು.

ಗಾಂಧೀಜಿಗೆ ನಾಡಿನ ಬಡತನ ಕಣ್ಣಿಗೆ ಕಟ್ಟಿದೆ. ರವೀಂದ್ರಸಿಗೆ ಆತ್ಮದ ಹಸಿವು. ಗಾಂಧೀಜೀ ಬಹಳ ವಿನಯದಿಂದ ರವೀಂದ್ರಸಿಗೆ ಹೇಳಿದರು. ‘ನೀವು ಕವಿ. ಭವಿಷ್ಯದಲ್ಲಿ ವಿಹರಿಸುವವರು; ನಾವು ಹಾಗೆ ಮಾಡಬಲ್ಲೆವೆ? ನಸುಕಿನಲ್ಲಿ ನನ್ನಿ ವಾಡುಗಳನ್ನು ಉಲಿಯುತ್ತ ಮುಗಿಲಿಗೆ ಹಾರುವ ಹಕ್ಕಿಗಳ ಸೊಗಸಾದ ಚಿತ್ರವನ್ನು ತೋರಿಸುತ್ತೀರಿ. ನಮಗೂ ಅದು ಕಣ್ಣು ತುಂಬುತ್ತದೆ. ಆ ಹಕ್ಕಿ ಹಿಂದಿನದಿನ ಹೊಟ್ಟೆ ತುಂಬ ತಿಂದು ಹಾಯಾಗಿ ಇರುಳು ಮಲಗಿ, ಅವಕ್ಕೆ ಹೊಸ ಬಲ ಹೊಸ ರಕ್ತ ಬಂದಿದೆ. ಹಾರಲು ಆ ಬಲ ನೆರವಾಗುತ್ತದೆ. ನಾನು ನೋಡಿರುವ ಹಕ್ಕಿಗಳಿಗೆ ಹಾರಲು ಹಾಗಿರಲಿ, ರೆಕ್ಕೆ ಬಡಿಯಲೂ ಬಲವಿಲ್ಲ. ಆ ನೋಟ ತುಂಬಾ ನೋಯಿಸಿದೆ. ಹಿಂದುಸ್ಥಾನದ ಮುಗಿಲ ಕೆಳಗೆ ನರಪಕ್ಷಿಗೆ ನಿದ್ದೆ ವಿಶ್ರಾಂತಿ ಎಲ್ಲಿಯದು? ಅದೊಂದು ಸೋಗು, ‘ಸುಳ್ಳುನಾಟಕ. ಆ ನಾಟಕ ಮುಗಿಸಿ ಬೆಳಿಗ್ಗೆ ಎದ್ದಾಗ ಈ ನರಪಕ್ಷಿಗೆ ಮುನ್ನಾದಿನಕ್ಕಿಂತ ಬಲ ಇಳಿದು ಹೋಗಿರುತ್ತದೆ. ಕೋಟ್ಯಾನುಕೋಟಿ ಜನರಿಗೆ ಬಾಳು ನಿತ್ಯ ಜಾಗರಣೆ ಅಥವಾ ಶಾಶ್ವತ ಸಮಾಧಿ.’ ಆ ಸಂಕಟ ಅವರ್ಣನೀಯ. ಅದನ್ನು ಅರಿತುಕೊಳ್ಳಲು ಅನುಭವಿಸಬೇಕಲ್ಲದೆ ಬೇರೆ ಹಾದಿಯಿಲ್ಲ. ಸಂಕಟಪಡುವ ರೋಗಿಗಳಿಗೆ ಕಬೀರನ ಹಾಡು ಹಾಡಿ ಸಮಾಧಾನ ಕೊಡಬಂದೀತೇ? ಹಸಿವಿನಿಂದ ತಲ್ಲಣಿಸುವ ಈ ಅಸಂಖ್ಯ ಜನರು ಬೇಡುವ ಕಾವ್ಯ ಒಂದೇ; ಪುಷ್ಟಿಕರವಾದ ಅನ್ನ!

‘ಸುತ್ತಲೂ ಜನ ಹಸಿವಿನಿಂದ ಸಾಯುತ್ತಿರುವಾಗ ಅವರಿಗೆ ಅನ್ನ ಕೊಡುವುದಕ್ಕಿಂತ ಬೇರೆ ಏನು ಉದ್ಯೋಗ ಇದ್ದೀತು ನನಗೆ? ಬೇರೆ ಮಾಡಬಹುದೇ? ಭಾರತಕ್ಕೆ ಬೆಂಕಿಹತ್ತಿದೆ. ಹಿಟ್ಟಿಗಾಗಿ ದುಡಿಯೋಣ ಎಂದರೆ ಕೆಲಸವಿಲ್ಲ. ದತ್ತಮಂಡಲಕ್ಕೆ ಇದು ನಾಲ್ಕನೆಯ ವರ್ಷದ ಬರ.

ಋಲ್ನಿ ಉಪವಾಸ. ಉತ್ಕಲವಂತೂ ಸದಾ ಕ್ಷಾಮದ ದೇಶ. ಹಿಂದುಸ್ಥಾನ ದಿನೇದಿನೇ ಬಡವಾಗುತ್ತಿದೆ. ಕಾಲು ಆಗಲೇ ತಣ್ಣಗೆ ಆಗಿದೆ. ಹೀಗೆಯೇ ಬಿಟ್ಟರೆ ಪೂರಾ ತಣ್ಣಗೆ ಆದೀತು.

'ಬಡತನದಲ್ಲಿ ಮುಳುಗಿ ನಿರುದ್ಯೋಗದಿಂದ ಸವೆದುಹೋಗುತ್ತಿರುವ ಜನಕ್ಕೆ ದೇವರೇ ಪ್ರತ್ಯಕ್ಷವಾದರೂ ಅನ್ನಾವತಾರವಾಡಿ ಬರಬೇಕು. ಅವರಿಗೆ ಹಿಟ್ಟುಕೊಡುವ ಕೂಲಿಯ ರೂಪದಲ್ಲಿ ಬರಬೇಕು. ಬೇರೆ ರೀತಿಯಲ್ಲಿ ಬರಲು ಅವನಿಗೆ ಧೈರ್ಯ ಬರಲಾರದು. ದೇವರು ಮನುಷ್ಯನನ್ನು ಸೃಷ್ಟಿಸಿದಾಗ ಹೊಟ್ಟೆಗಾಗಿ ದುಡಿಯಲು ಹೇಳಿದ; ದುಡಿಯದೆ ತಿನ್ನುವವರು ಕಳ್ಳರು ಎಂದ. ಇಂದು ಕೋಟಿ ಕೋಟಿ ಜನ ದನಕ್ಕಿಂತ ಕಡೆಯಾಗಿ ಸಾಯಲಾಗಿದಾರೆ. ಅವರ ಹಸಿವೇ ಹಿಂದುಸ್ಥಾನಕ್ಕೆ ಕೋಟೆ ವಿದ್ಯೆಗಿಂತ ರಾಟಿ ಲೇಸು ಎಂಬ ಹಾದಿಗೊಯ್ಯುತ್ತಿದೆ.

'ಕವೀಂದ್ರನನ್ನೂ ಋಷಿಯನ್ನೂ ಯಜ್ಞಾರ್ಥವಾಗಿ ನೂಲಲು ಬೇಡುತ್ತೇನೆ. ಯುದ್ಧಕಾಲದಲ್ಲಿ ಕವಿ ತನ್ನ ಕೊಳಲು ಕೆಳಗಿಡುತ್ತಾನೆ. ವಕೀಲ ತನ್ನ ಪುಸ್ತಕಗಳನ್ನು ಬಿಡುತ್ತಾನೆ. ಮನೆಗೆ ಬೆಂಕಿ ಹತ್ತಿದಾಗ ಮನೆಯ ಜನರೆಲ್ಲ ಹೊರಗೆ ಓಡಿಬಂದು ಪ್ರತಿಯೊಬ್ಬರೂ ನೀರು ತರಲು ಹೋಗುತ್ತಾರೆ. ನನ್ನ ಸುತ್ತಲೂ ಜನ ಹೊಟ್ಟೆಗಿಲ್ಲದೆ* ಸಾಯುತ್ತಿರುವಾಗ ನನಗೆ ಒಂದೇ ಉದ್ಯೋಗ–ಅವರಿಗೆ ಹಿಟ್ಟು ದೊರಕಿಸುವುದು. ಅದೇ ವರ್ತಮಾನ ಧರ್ಮ. ನಾಳೆಯ ಚಿಂತೆ ದೇವರಿಗೆ ಸೇರಿದುದು.'

THE LIE

Poet I have heard you sing of purple shadows
Languidly passing over a rose bed
But have you ever sung of a hungry woman
Selling her body for a loaf of bread ?
I have heard you in your selfish isolation
Shut out from all the world, it's ghastly cares
Sing of the wondrous sunset on a mountain
But have you ever sung of the red of the sleepless exes !

ರವೀಂದ್ರನೆಂದರೆ ಗಾಂಧೀಜಿಗೆ ತುಂಬ ಆದರ. ಅವರನ್ನು ಗುರುದೇವ ಎನ್ನುತ್ತಾರೆ. ಶಾಂತಿನಿಕೇತನ ತಮಗೆ ಶಾಂತಿ ಸಿಗುವ ಸ್ಥಳ ಎಂದು ತಿಳಿದಿದಾರೆ. ಅಲ್ಲದೆ ರವೀಂದ್ರರು ಭಾರತ ಸಂಸ್ಕೃತಿಯ ಕಣ್ಣು. ಅವರ ಹಿತವಚನಕ್ಕೆ ಬಹಳ ಬೆಲೆಯಿದೆ. ಆದರೂ ಗಾಂಧೀಜಿಗೆ ಹಿಂದುಸ್ಥಾನದ ದಾರಿದ್ರ್ಯ ಕಣ್ಣಿಗೆ ಕಟ್ಟಿಕೊಂಡು ಕೂತಿದೆ. ಆ ಹಸಿವಿನ ನೋವು ತನಗೇ ಆಗುತ್ತಿದೆ. ತಾನೇ ದೇಶ; ದೇಶದ ಸುಖ ದುಃಖ ತನ್ನದು. ಭಕ್ತನ ಬೆನ್ನ ಮೇಲೆ ಬಿದ್ದ ಹೊಡೆತಕ್ಕೆ ದೇವರ ಬೆನ್ನ ಮೇಲೆ ಬಾಸಾಳ ಮೂಡಿದ್ದವಂತೆ. ಹಾಗೆಯೇ ಭಾರತದ ದರಿದ್ರಕೋಟಿಯ ಹಸಿವು ನೋವು ಗಾಂಧೀಜಿಗೆ.

ದರಿದ್ರರಿಗೆಲ್ಲಿಯ ಧರ್ಮ? ವಿವೇಕಾನಂದ ಸ್ವಾಮಿ ಹೇಳುತ್ತಿದ್ದರು: 'ನಾನು ವೇದಾಂತಿಯಲ್ಲ, ತತ್ವಜ್ಞಾನಿಯಲ್ಲ, ಸಾಧುವೂ ಅಲ್ಲ. ನಾನು ದೀನ, ದರಿದ್ರ. ಅಂಥವರನ್ನೇ ನಾನು ಪ್ರೀತಿಸುತ್ತೇನೆ. ಬಡತನದಲ್ಲಿ ಹೂತುಹೋಗಿರುವ ಕೋಟ್ಯಾಂತರ ಜನ ಭಾರತೀಯರಿಗಾಗಿ ಮರುಗು ವವರು ಯಾರು? ಅವರಿಗೆ ದಾರಿ ಏನು? ಯಾರು ಅವರಿಗೆ ಬೆಳಕು ತೋರಿಯಾರು? ಈ ಜನರೇ ನಿಮ್ಮ ದೈವವಾಗಲಿ. ಬಡವರಿಗಾಗಿ ತನ್ನ

Oh Fool, Fool, Fool! you poet singing of beauty;
Of midnight heavens starred and mooned
What are the stars to the hungry but the sores of a leper
What is the moon to the tired but dripping wound?
You dare to sing of beauty, you shameless poet
Of silver rivers and beautiful golden hills
While thousands are being broken in the workshops
And millions are being shattered in the mills.
You sit and chant of God, you well-fed parrot;
A good square meal is the mother of all your hymns
You and your God shall pass away like a vapour
Before the fact of starving children's limbs.

Harindranath Chattopadhyaya.

ಎದೆಯ ರಕ್ತ ಹಿಂಡಬಲ್ಲ ಧೀರನೇ ಮಹಾತ್ಮ. ಈ ಕೋಟ್ಯಾನುಕೋಟಿ ಜನ ಹಸಿವಿನಿಂದ ಬಳಲುತ್ತಿರುವ ತನಕ, ಅವರ ದುಡಿತದ ಬಲದಿಂದ ಓದು ಬರೆಹ ಗಳಿಸಿಕೊಂಡು ಅವರ ಬಗ್ಗೆ ಸ್ವಲ್ಪವೂ ಕನಿಕರ ತೋರದ ಪ್ರತಿಯೊಬ್ಬ ಮನುಷ್ಯನೂ ದ್ರೋಹಿ ವಿಶ್ವಾಸಘಾತಕ ಎನ್ನುತ್ತೇನೆ. ಸರ್ವಚೇತನ ಸ್ತೋಮವೇ ದೇವರು ಎಂದು ನನ್ನ ನಂಬಿಗೆ. ಪಾಪಿ ದೀನ ಪತಿತರೇ ಎಲ್ಲ ದೇಶದ ದರಿದ್ರರೇ ನನ್ನ ದೇವರು. ಆ ದೇವರನ್ನು ಆರಾಧಿಸಬಲ್ಲೆನಾದರೆ ಸಾವಿರ ಸಂಕಟಗಳನ್ನು ಸಹಿಸಿಯೂ ನಾನೂ ಪುನಃಪುನಃ ಜನ್ಮವೆತ್ತಲು ಬಯಸುತ್ತೇನೆ.'

ಇನ್ನೊಮ್ಮೆ ಬರಿಯ ಜಪತಪದ ಗಾಳಿಗಂಟನ್ನು ನೋಡಿ ಗರ್ಜಿಸಿದರು: 'ಏಳಿರಿ, ನಿಮ್ಮಲ್ಲಿ ಜನತೆಯ ಸೇವಗಾಗಿ ಬಾಳನ್ನು ಮುಡಿಪಾಗಿ ಸಲ್ಲಿಸಬಲ್ಲವರು ಯಾರೂ ಇಲ್ಲವೆ? ವೇದಾಂತ ಪಠನೆ, ಜಪಧ್ಯಾನ್ಯಗಳನ್ನು ಕಟ್ಟಿಡಿ. ಮುಂದಿನ ಜನ್ಮದಲ್ಲಿ ನೋಡಿಕೊಳ್ಳೋಣ. ಈ ಜನ್ಮ ಈ ದೇಹ ಜನತಾಸೇವೆಗಾಗಿ ಮೀಸಲಾಗಲಿ.

ಗಾಂಧೀಜಿಯ ಮನೋಭಾವಕ್ಕೆ ದರಿದ್ರನಾರಾಯಣ ಸೇವೆಯ ಹಂಬಲಕ್ಕೆ ವೇದಾಂತ ಸಿಂಹದ ಈ ವಾಣಿಗಿಂತ ಬೇರೆ ವ್ಯಾಖ್ಯಾನ ಏಕೆ? ವಿವೇಕಾನಂದಸ್ವಾಮಿ ಅಂದು ಬಯಸಿದ ಧೀರತೆ ಇಂದು ಇಲ್ಲಿ ಹೊಳೆದಿದೆ. ಅವರು ಕೋರಿದ ಮಹಾತ್ಮ ಇಂದು ಅವತರಿಸಿದಾನೆ.

ಗಾಂಧೀಜೀ ಬರೀ ಹಿಂದುಸ್ಥಾನಕ್ಕೆ ಮಾತ್ರವೇ ಖಾದಿ ಮಂತ್ರೋಪದೇಶ ಮಾಡಿಲ್ಲ. ಇಡೀ ಜಗತ್ತಿಗೆ ಅವರು ರಾಟೆಯ ದೀಕ್ಷೆ ಕೊಡಬಯಸುತ್ತಾರೆ. ಚೀನಾದ ಮುಖಂಡರು ಬಂದರೆ ಅವರಿಗೆ ಅದನ್ನೇ ಹೇಳಿದರು. ಪಡುವಲ ಜನರಿಗೂ ಅದನ್ನೇ ಹೇಳುತ್ತಾರೆ. ಮಹಾ ಯುದ್ಧದ ಬಾಂಬು ಯುಗವಾದ ಮೇಲೆ ಮತ್ತೆ ರಾಟೆಯ ಕಾಲ ಬಂದೀತೆಂಬ ನಂಬಿಗೆ ಅವರಿಗೆ ಇದೆ. ಪಡುವಲ ಅರ್ಥಶಾಸ್ತ್ರ ಬಹು ಜನರ ಸುಖ ಸಾಧನೆಯ ನಿಟ್ಟಿನಲ್ಲಿ ನಡೆದಿದೆ. 'ರಾಟೆ ಬಹುಜನರ ಅಧಿಕಸುಖದ ಮಾರ್ಗವಲ್ಲ; ಸರ್ವಜನರ ಸುಖದ ಹಾದಿ. ಇಂದು ಹಿಂದುಸ್ಥಾನದ ಜನರ ಪಾಲಿಗೆ ಮಾತ್ರ ಅದು ಸಂಜೀವಿನಿ. ನಾಳೆ ಪ್ರಪಂಚಕ್ಕೇ ಆದೀತು. ಯಾರಾದರೂ ತಪ್ಪು

ಮಾಡುವವರನ್ನು ಕಂಡರೆ ನಾನು ತಪ್ಪು ಮಾಡಿದೆ ಎಂದುಕೊಳ್ಳುತ್ತೇನೆ. ಕಾಮಿಯಾದವನನ್ನು ಕಂಡಾಗ ನಾನೂ ಹಿಂದೆ ಹಾಗೆ ಇದ್ದೆನೆಂದು ನೆನಪು ಗೊಳ್ಳುತ್ತೇನೆ. ಹೀಗೆ ಪ್ರಪಂಚದಲ್ಲಿ ಎಲ್ಲರೊಡನೆಯೂ ನನ್ನ ಬಳಗವನ್ನು ಕಟ್ಟಿಕೊಳ್ಳುತ್ತೇನೆ. ದೀನದರಿದ್ರರಿಗೆ ಸುಖವಿಲ್ಲದೆ ನಾನು ಸುಖವಾಗಿರಲಾರೆ ಎನಿಸುತ್ತದೆ. ಈ ದೃಷ್ಟಿಯಿಂದ ರಾಟೆಯ ಕಡೆಗೆ ನೋಡಿರಿ. ತುಲಸೀ ದಾಸನಿಗೆ ಕೃಷ್ಣವಿಗ್ರಹದಲ್ಲೂ ರಾಮನೇ ಕಾಣುತ್ತಿದ್ದನಂತೆ. ನಮ್ಮ ವಿಜ್ಞಾನ ಕಲೆ ಅರ್ಥಶಾಸ್ತ್ರ ಎಲ್ಲಾ ಬಡವರ ಪಾಲಿಗೆ ರಾಟೆಯನ್ನು ಆಧಾರ ವಾಗಿ ಮಾಡಲು ಉಪಯೋಗವಾಗಲಿ.'

ಗಾಂಧೀಜೀ ಸೆರೆಮನೆಯಿಂದ ಒಂದು ಸಲ ಹೊರಗೆ ಬಂದಾಗ ಜನ ರೆಲ್ಲ ಅವರನ್ನು ಮುತ್ತಿದರು. ದೇಶಕ್ಕೆ ಏನು ಸಂದೇಶ ಎಂದು ಕೇಳಿದರು. ಅಂಥ ಹೊತ್ತಿನಲ್ಲಿ ಒಂದೇ ಮಾತು: 'ಮನೆಗೆ ಹೋಗಿ ದಾರ ತೆಗೆಯಿರಿ.' ಅವರಿಗೆ ಬೇಕಾದ ಕೋಟ್ಯಾಧೀಶರೊಬ್ಬರು ಅವರನ್ನು ಕೇಳಿದರು ಒಂದು ದಿನ: 'ನಿಮಗೆ ನನ್ನ ಹಣ ಬೇಕೋ ನಾನೇ ಬೇಕೋ ನಾಡಿನ ಸೇವೆಗೆ?' 'ನೀನೇ ಬೇಕು' ನೇರಾಗಿ ಬಂತು ಉತ್ತರ. 'ನನ್ನ ಉದ್ಯೋಗ ವ್ಯವಹಾರ ಎಲ್ಲಾ ಬಿಟ್ಟುಬಂದರೆ ಏನು ಕೆಲಸ ಹೇಳುತ್ತೀರಿ ನನಗೆ?' 'ನೂಲುವುದು.' ಆ ಲಕ್ಷ್ಯಶುದ್ಧಿಗೆ ಏಟು ತಪ್ಪುವುದೇ ಇಲ್ಲ.

ರಾಮಕೃಷ್ಣ ಪರಮಹಂಸರು ಅನ್ನುತ್ತಿದ್ದರಂತೆ: 'ಹಸಿದ ಹೊಟ್ಟೆಗೆ ತತ್ವಬೋಧೆಯೇಕೆ?' ನಿಜ. ಧರ್ಮವು ಅರ್ಥವನ್ನು ಬಿಟ್ಟರೆ ಕುಂಟನಾ ದೀತು. ಅರ್ಥನೀತಿಗೆ ಹೊಂದದ ಧರ್ಮ ಧರ್ಮವಲ್ಲ. ಗಾಂಧೀಜಿಗೆ ಧರ್ಮದಲ್ಲಿ ಅರ್ಥವಿದ್ದಹಾಗೆಯೆ ಅರ್ಥದಲ್ಲಿ ಧರ್ಮವಿರಬೇಕು. 'ಧರ್ಮಕ್ಕೆ ಹೊಂದದ ಅರ್ಥ ಕಾಸಿಗೆ ತರವಲ್ಲ. ಅರ್ಥವು ಧರ್ಮಾವಿರೋಧಿಯಾಗಿರ ಬೇಕು. ಸುಲಿಗೆ ಕೊಳ್ಳೆ ಪರಶೋಷಣೆಗೆ ಅದರಲ್ಲಿ ಎಡೆಯಿಲ್ಲ. ಅಂತಲೇ ನಾನು ಖಾದೀ ಮಂತ್ರವನ್ನು ನಂಬಿರುವುದು."

ಅದು ಸತ್ಯಾಗ್ರಹಿಯ ದೃಢವಿಶ್ವಾಸ. ಈಗಂತೂ ಪ್ರಪಂಚ ಸುಂದೋಪಸುಂದರ ಮಲ್ಲಯುದ್ಧದಲ್ಲಿ ತೊಡಗಿದೆ. ಇಂಥ ಹೊತ್ತಿನಲ್ಲಿಯೂ ಗಾಂಧೀಜೀ ಖಾದಿಯನ್ನೇ ಶರಣುಹೋಗಿದಾರೆ. 'ಕೈನೂಲಿನ ಉಂಡೆಗಳೇ

ನಮ್ಮ ಸಿಡಿಗುಂಡು, ಹಂಜಿಗಳೇ ಬಿಲ್ಲು ಬಾಣ; ಖಾದಿಯೇ ಸ್ವರಾಜ್ಯದ ಹಾದಿ' ಎನ್ನುತ್ತಿದಾರೆ. ಖಾದಿಯಲ್ಲಿ ನಂಬಿಗೆ ಇಲ್ಲದವರನ್ನು ನೂಲಲು ಬಾರದವರನ್ನು ಸತ್ಯಾಗ್ರಹಕ್ಕೆ ಅನಧಿಕಾರಿಗಳೆನ್ನುತ್ತಾರೆ.

ಕೇವಲ ಸ್ವರಾಜ್ಯ ಸಂಗ್ರಾಮ ಶಸ್ತ್ರವಲ್ಲ ಖಾದೀ. ಅಹಿಂಸೆ ಸತ್ಯಗಳ ತಳಹದಿಯ ಮೇಲೆ ಕಟ್ಟದ ಮಾನವ ಜೀವನದ ಕುರುಹು. ಗಾಂಧೀ ಧರ್ಮಕ್ಕೆ ಅದು ಸಾರಥಿ.

ಗಾಂಧೀಜಿ—ಕಲೆ

ಗಾಂಧೀಜೀ ಮೈಸೂರಿನಲ್ಲಿ ಆರೋಗ್ಯಕ್ಕಾಗಿ ಕೆಲಕಾಲ ತಂಗಿದ್ದರು. ಗುಣವಾದ ಮೇಲೆ ಮೈಸೂರನ್ನೆಲ್ಲ ಸುತ್ತಿದರು. ಪ್ರಭುತ್ವವೇ ಅವರ ಸೇವೆಗೆ ನಿಂತಿತ್ತು. ಮೈಸೂರಿನಲ್ಲಿ ಮಲೆನಾಡು ಅಂದವಾದ ಸೀಮೆ. ಅದರಲ್ಲಿ ಗೇರುಸೊಪ್ಪೆಯ ಜಲಪಾತವಂತೂ ಅತಿ ರಮಣೀಯವಾದುದು. ಅದರ ಚೆಲುವು ಜಗತ್ತಿಗೇ ಒಂದು ಸೆಳೆತವಾಗಿದೆ. ಹಿಂದುಸ್ಥಾನಕ್ಕೆ ಬಂದ ಪ್ರವಾಸಿಗಳು ಜೋಗನ್ನು ನೋಡದೆ ಹಿಂದಿರುಗುವುದಿಲ್ಲ. ಗಾಂಧೀಜೀ ಸಾಗರಕ್ಕೆ ಹೋದರು. ಅಲ್ಲಿಂದ ಗೇರುಸೊಪ್ಪೆ ಆರೇ ಹರಿದಾರಿ. ಮೋಟಾರಿನಿಂದ ಅದೊಂದು ದೂರವೇ ಅಲ್ಲ. ಆದರೂ ಗಾಂಧೀಜೀ ಸಾಗರದಿಂದ ತೀರ್ಥಹಳ್ಳಿಗೆ ನೇರವಾಗಿ ನಡೆದುಬಿಟ್ಟರು. ಗೇರುಸೊಪ್ಪೆಯ ಸೊಬಗಿಗೆ ಅವರು ಮನುಸುಗೊಡಲಿಲ್ಲ.

ಮುಂದೆ ಹಾಸನ ಜಿಲ್ಲೆಗೆ ಹೋದರು. ಅಲ್ಲಿ ಬೇಲೂರಿಗೆ ಹೋದರು. ಹೋದುದು ಬೇಲೂರಿನ ಶಿಲ್ಪ ಕಲಾಸೌಂದರ್ಯವನ್ನು ನೋಡಲಿಕ್ಕಲ್ಲ. ಜಕಣಾಚಾರಿ ಕಲ್ಲಿನೊಳಗೆ ಹರಿಯಿಸಿದ ಆನಂದಾಮೃತವನ್ನು ಸವಿಯಲಲ್ಲ. ಅಲ್ಲಿದ್ದ ಜನ ಅವರಿಗೆ ಚೆನ್ನಕೇಶವನ ದಿವ್ಯ ದೇವಾಲಯದ ಮೂಲೆ ಮೂಲೆಯನ್ನೂ ಸಂದಿಗೊಂದಿಯನ್ನೂ ಹಿಗ್ಗಿನಿಂದ ಹೆಮ್ಮೆಯಿಂದ ತೋರಿಸುತ್ತಿದ್ದರು. ಗಾಂಧೀಜೀ ಎಲ್ಲ ವಿಗ್ರಹಗಳ ಮೇಲೂ ಕೆತ್ತನೆಯ ಮೇಲೂ

ಕಣ್ಣಾಡಿಸಿದರು. ಅವರ ಮನಸು ಮಾತ್ರ ಅಲ್ಲಿರಲಿಲ್ಲ. ಆ ಸೊಬಗನ್ನು ದಂಗುಬಡಿದು ನೋಡುತ್ತಿದ್ದ ಸುತ್ತಲಿನ ಜನರನ್ನು ನೋಡಿ 'ದೇವರೆ, ಜನರ ಮಂದಬುದ್ಧಿಗೆ ಮದ್ದುಂಟೆ?' ಎಂದು ಒಳಗೊಳಗೆ ಅವರ ಎದೆ ಮಿಡುಕುತ್ತಿದ್ದಿರಬೇಕು. ಕಡೆಗೆ ಆ ಮಿಡುಕು ಹೊರಗೆ ಹರಿಯಿತು. ಭಾರತೀಯ ಶಿಲ್ಪಕಲೆಯ ಅದ್ಭುತ ಕೀರ್ತಿಧ್ವಜವಾದ ಈ ಗುಡಿಯ ಸೆಳೆತಕ್ಕೆ ಸಿಕ್ಕದವರು ಯಾರು? ದರಿದ್ರನಾರಾಯಣನ ಭಕ್ತನಾದ ನಾನು ಇಂಥ ಕಣ್ಣಹಬ್ಬ ಸವಿಯುತ್ತಾ ಕಾಲ ಕಳೆಯಲುಬಹುದೇ? ನನ್ನ ಬದುಕೆಲ್ಲ-ಗಳಿಗೆ ಗಳಿಗೆಯೂ-ಬಡವರ ಸೇವೆಗಾಗಿಯೇ ಮೀಸಲಾಗಿದೆ, ಮುಡಿಪಾಗಿದೆ. ಕೇಶವದಾಸರು ೫೦೦ ರೂಪಾಯಿಯ ನಿಧಿ ಕೂಡಿಸಿಕೊಡುವ ಮಾತು ಕೊಟ್ಟಿರದಿದ್ದರೆ ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ.' ಭದ್ರಾವತಿಗೂ ಹೋಗಿದ್ದರು. ಅಲ್ಲಿಯ ಯಂತ್ರವೈಭವವನ್ನು ನೋಡಲಲ್ಲ. ಖಾದಿಯನ್ನು ತೊಡಿರೆಂದು ಅಲ್ಲಿಯ ಕೆಲಸಗಾರರಿಗೆ ಹೇಳಲಿಕ್ಕೆ.

ಇಂಥ ಪ್ರಸಂಗ ಗಾಂಧೀಜಿಯ ಬಾಳಿನಲ್ಲಿ ದಿನಾಲೂ ಕಂಡು ಬರುತ್ತವೆ. ಅವರ ಜೀವನದಲ್ಲಿ ಸರಲತೆ ತಾನೇತಾನಾಗಿ ಹರಡಿಕೊಂಡಿದೆ. ಅಸ್ವಾಮ್ಯ-ಅಪರಿಗ್ರಹದ ತಾಪಸ ವ್ರತವನ್ನು ತೊಟ್ಟವರಿಗೆ ಕಲೆಯ ಕ್ಷೇತ್ರ ಸಹಜವಾಗಿಯೇ ಹಿಗ್ಗುತ್ತದೆ. ಅಂಥ ಬಾಳಿನಲ್ಲಿ ಅಲಂಕಾರ ಪ್ರೀತಿಗೆ ಅವಕಾಶವಿಲ್ಲ; ಅಂದವಾದ ವಸ್ತುಗಳನ್ನು ಶೇಖರಿಸಿಡುವ ರುಚಿಯಿಲ್ಲ. ಆ ನಿಷ್ಠೆಗೆ ಲಕ್ಷ್ಯಶುದ್ಧಿಯಿದೆ; ಆ ಕಣ್ಣಿಗೆ ಗುರಿಯ ರೂಪ ಕಟ್ಟಿ ಉಳಿದುದು ಯಾವುದಕ್ಕೂ ಎಡೆಕೊಡದು. ಶ್ರೀರಾಮಚಂದ್ರನು ಒಮ್ಮೆ ತನ್ನ ಕೊರಳ ಸರವನ್ನು ತೆಗೆದು ಹನುಮಂತನಿಗೆ ಕೊಟ್ಟನಂತೆ ಅಭಿಮಾನದಿಂದ. ದಾನ ಕೊಟ್ಟ ದನದ ಹಲ್ಲು ಹಿಡಿದು ನೋಡಬಾರದೆಂಬ ವ್ಯವಹಾರಧರ್ಮವಿರಲಿ, ಕೊಟ್ಟವನ ಇದಿರಿಗೇ ನಿರ್ದಾಕ್ಷಿಣ್ಯದಿಂದ ಆ ಸರದ ಮುತ್ತನ್ನು ಒಡೆದು ನೋಡಲು ತೊಡಗುವುದೇ! ಒಂದೊಂದಾಗಿ ಅವನ್ನೆಲ್ಲಾ ಒಡೆದು ಪುಡಿ ಮಾಡಿದ ಹನುಮಂತ. ಸೀತಾದೇವಿಗೆ ಹನುಮಂತನ ಹುಡುಗಾಟ ಒಗ್ಗಲಿಲ್ಲ. ಭಕ್ತನನ್ನು ಬಿರುಗಣ್ಣಿನಿಂದ ನೋಡಿದಳು. ಹನುಮಂತ ವಿನಯದಿಂದ ಹೇಳಿದ: 'ರಾಮನಾಮ ಇದರಲಿಲ್ಲ. ರಾಮನಾಮವಿಲ್ಲದ ವಸ್ತು ರಾಮನ ಕತ್ತಿನದೇ ಆದರೂ ನನಗೆ ಬೇಡ.'

ಆ ಏಕಾಗ್ರಚಿತ್ತಕ್ಕೆ ಮತ್ತೊಂದು ಹೇಗೆ ರುಚಿಸಬೇಕು ? ಬಯಸಬಹುದಾದ ಅಖಂಡ ಸೌಂದರ್ಯ, ಸಮಸ್ತ ಸಂತೋಷ ಅಲ್ಲೇ ಹೆಪ್ಪುಗಟ್ಟಿರುವಾಗ ಉಳಿದುದು ಹೇಗೆ ಅದಕ್ಕೆ ಒಗ್ಗೀತು ? ತುಲಸೀದಾಸ ರಾಮಭಕ್ತ. ಅವನಿಗೆ ಕೃಷ್ಣವಿಗ್ರಹದಲ್ಲೂ ಕೂಡ ರಾಮನೇ ಕಾಣುತ್ತಿದ್ದನಂತೆ. ಗಾಂಧೀಜಿಯ ತಾಪಸ ಜೀವನದಲ್ಲಿ ಇಂಥ ವಿಲಕ್ಷಣ ಅನುಭವವೊಂದು ಕಾಣಬರುತ್ತದೆ. ತಮ್ಮ ನಿಷ್ಠೆಗೆ ನಿಯಮಕ್ಕೆ ಹೊಂದಬಹುದಾದುದೇ ಅವರಿಗೆ ಸತ್ಯ. ಆ ಸತ್ಯವೇ ಸೊಗಸು. ಒಮ್ಮೆ ಗಾಂಧೀಜೀ ಹೇಳಿದರು : ' ನನಗೆ ದೇವರನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬಾಸೆಯಿದೆ. ಸತ್ಯದ ಮೂಲಕ ಅಹಿಂಸೆಯನ್ನು ಸಾಧಿಸುವ ಬಯಕೆಯಿದೆ. ಸತ್ಯವಲ್ಲದ ಮಾರ್ಗದಿಂದ ಅಹಿಂಸೆಯನ್ನು ಸಾಧಿಸುವ ಉಪಾಯ ಇದ್ದರೂ ನನಗೆ ಬೇಡ. ನಾನು ದೇವರನ್ನು ಕಾಣಲಾಶಿಸುತ್ತೇನೆ. ನನ್ನ ದಾರಿಯಲ್ಲಿ ನನಗೆ ದೇವರು ಕಾಣುವುದಾದರೆ ಕಾಣಲಿ ದೇವರಿಗೆ ಮನಸೊಪ್ಪಿದ ಬೆಲೆ ಕೊಡಬೇಕೆಂದರೆ ನಾನು ಆ ದೇವರನ್ನೇ ನೋಡುವುದಿಲ್ಲ. ನಾನು ಕಟ್ಟುವ ಬೆಲೆಗೆ ದೇವರು ಸಿಗಲಿ. ಅವನ ಬೆಲೆಗಲ್ಲ. ಹಾಗೆಲ್ಲಾ ಚೌಕಾಸಿಮಾಡಿದರೆ ಆ ಬೆಡಗಿಗೆ ನಾನು ಮನಸೋಲುವುದಿಲ್ಲ. ಸತ್ಯವಲ್ಲದ ಉಪಾಯದಿಂದ ದೇವರು ಕಾಣಬರುವುದಾದರೆ ನನಗೆ ಆ ಉಪಾಯವೂ ಬೇಡ ಆ ದೇವರೂ ಬೇಡ, ಇದಿರಿಗೆ ಬಂದರೂ ನಾನು ನೋಡಲಿಕ್ಕಿಲ್ಲ. ನನ್ನ ಬೆಲೆ ನನ್ನ ಹಾದಿ—ಕಂಡುಬಂದರೆ ಬರಲಿ ಇಲ್ಲದಿದ್ದರೆ ಬಿಡಲಿ. ದೇವರು ಕಟ್ಟಿದ ಬೆಲೆಗೆ ನನಗೆ ಮೋಕ್ಷ ಬೇಕಾಗಿಲ್ಲ, ನಾನು ಕಟ್ಟಿದ ಬೆಲೆಗೆ ಪಡೆದರೆ ಸರಿ. ' ಬರಬಾರದ ವೇಷದಲ್ಲಿ ಬಂದರೆ ದೇವರಿಗೂ ಅಲ್ಲ ಒಳಗೆ ಬರಲು ಅಪ್ಪಣೆಯಿಲ್ಲ. ಪರ್ಣಕುಟಿಗೆ ಬರಬೇಕಾದರೆ ದೇವರಾದರೂ ಖಾದೀ ತೊಟ್ಟು ಬರಬೇಕು. ತಾನು ದೇವರೆಂದು ಹೇಳಿ ಬರಬೇಕು. ವೇಷ ಮರೆಯಿಸಿ ಬರುವ ಅಸತ್ಯಕ್ಕೆ ಮನ್ನಣೆಯಿಲ್ಲ. ಗರುಡಗರ್ವಭಂಗದಲ್ಲಿ ಕೃಷ್ಣನ ಹೆಸರನ್ನು ಹೇಳಿದರೆ ಆಂಜನೇಯ ' ಯಾರೋ ಗೊತ್ತಿಲ್ಲ ಹೋಗು ! ' ಎಂದನಂತೆ. ರಾಮನ ಹೆಸರು ಹೇಳಿದರೆ ಆಗ ಹದಕ್ಕೆ ಬಂದನಂತೆ. ಏಕಾಂತಭಕ್ತಿಯ ಏಕಾಗ್ರನಿಷ್ಠೆಯ ಪರಿಪಾಕ ಅದು.

ಗಾಂಧೀಜೀ ಒಮ್ಮೆ ಸೀತೆಯ ಚೆಲುವನ್ನು ವಿಮರ್ಶಿಸಿದರು. ಅದು ಹೆಂಗಸರ ಸಭೆ. ' ನಿಮ್ಮ ಹಾಗೆ ಒಡವೆವಸ್ತು ಮೈತುಂಬ ಹೇರಿ

ಕೊಂಡಿದ್ದಳೇ ಸೀತೇ? ಆಕೆಯ ಒಡವೆಯಲ್ಲ ಆಕೆಗೆ ಒಪ್ಪಿದುದು; ಆಕೆ ಉಟ್ಟಿದ್ದ ನಾರುಸೀರೆ. ನಿಮಗೂ ಖಾದೀ ಸೀರೆ ಒಪ್ಪಿದಷ್ಟು ಈ ಚೀನಾಂಬರ ಒಪ್ಪಲಾರವು.' ಅವರಿಗೆ ಒರಟು ಖಾದೀ ಕಂಡಷ್ಟು ಅಂದವಾಗಿ ಕಿನಕಾಪು ಬಟ್ಟೆಯೂ ಕಾಣದು. ಖಾದಿಯ ಎಳೆಗಳಲ್ಲಿ ಅವರಿಗೆ ವಿಧವೆಯೊಬ್ಬಳ ಕರುಣಕಥೆ ಕೇಳುತ್ತದೆ. ಅನಾಥೆಯೊಬ್ಬಳ ದೀನಚಿತ್ರ ಕಾಣುತ್ತದೆ. ದಿಕ್ಕಿಲ್ಲದ ಮುದುಕಿಯ ಹರಕೆಯ ಅನುಭವವಾಗುತ್ತದೆ. ಆ ಚಿತ್ರವೃತ್ತಿಗೆ ಅವಿದಿತ ವೇದ್ಯಾಂತರವಾದ ಏಕಸ್ಥಾಯಿ ಇವೆ. ಅದಕ್ಕೆ ಆನಂದ ಹೊರಗಣ ಪದಾರ್ಥಗಳಲಿಲ್ಲ, ಒಳಗಣ ಭಾವನೆಯಲ್ಲಿದೆ. ಆನಂದವೆಂದರೆ ಸುಖವಲ್ಲ. ಸುಖ ಇಂದ್ರಿಯ ಭೋಗ್ಯವಾದುದು. ಆನಂದ ಆಧ್ಯಾತ್ಮಿಕವಾದುದು. ನಾಮರೂಪಗಳು ಸುಖದ ಸಾಮುಗ್ರಿ. ಬಹುಭೇದಗಳಿಂದ ಭಿನ್ನಭಿನ್ನನಾದ ಈ ಪ್ರಪಂಚದಲ್ಲಿ ಅಭೇದಾನುಭವದ ಆತ್ಮರತಿಯೆ ಆನಂದಸಾಮುಗ್ರಿ. ಅದೇ ಆನಂದ.

ಆದರೆ ತಲೆಗೆಲ್ಲಾ ಒಂದೇ ಮಂತ್ರವೇ? ರಾಯರೂ ರೈತರೂ ಇಬ್ಬರೂ ನೂಲಬೇಕೇ? ಎಲ್ಲರೂ ಸರಲತೆ ಸರಲತೆಯೆಂದರೆ ಸೌಂದರ್ಯ ಅಡವಿ ಪಾಲಾದೀತು. ಗಾಂಧೀಜಿಗೆ ಸರಲತೆಯ ಹುಚ್ಚು ಹಿಡಿದಿದೆ. ಅವರು ಗುಡಿಸಲು ಕಟ್ಟಿಕೊಂಡರೆ ನಾವೇಕೆ ನಮ್ಮ ಭವ್ಯಪ್ರಸಾದಗಳನ್ನು ಜರಿಯಬೇಕು. ಅವರು ಹಾಸಿಕೊಳ್ಳುವ ಈಚಲ ಚಾಪೆಯಿಂದ ಸಿಗುವ ಆನಂದ ಚಪ್ಪರ ಮಂಚದಲ್ಲಿ ಸಿಗಲಾರದೇನು? ಅವರ ಗುಡಿಸಲಿನ ಮಣ್ಣು ಮೆತ್ತಿದ ಗೋಡೆ, ಸಗಣಿ ಸಾರಿಸಿದ ನೆಲ, ಬೋಳು ಅಂಗಳ ಇವೇಯೇನು ನಮ್ಮ ಆದರ್ಶ? ಗೋಡೆಗೆ ನಾಲ್ಕು ಪಟ ತೂಗುಹಾಕಬಾರದೆ, ನಯವಾದ ರೇಸಿಮೆ ಉಡಬಾರದೆ, ರುಚಿಯಾಗಿ ಊಟ ಮಾಡಬಾರದೆ? ಬೇಲೂರಿನ ಗುಡಿಯತನಕ ಹೋಗಿ ಅಲ್ಲಿಯ ಸೊಬಗನ್ನು ಸವಿಯದೆ ಬರುವುದು ರಸಿಕತೆಯೇ? ಆ ತರದ ಬಾಳಿನಲ್ಲಿ ಕಲೆಗೇನು ಬೆಲೆಯಿದೆ? ಹೀಗೆ ಎಷ್ಟೋ ಜನ ಕೇಳುತ್ತಾರೆ. ಅವರ ತುಂಡುಪಂಚೆ, ಬಕ್ಕತಲೆ ನೋಡಿ 'ಗಾಂಧೀ ಬರೀ ಗೊಡ್ಡು ನಿರಸ' ಎಂದಿದಾರೆ. 'ಗಾಂಧೀಜಿಗೂ ಕಲೆಗೂ ಏನಯ್ಯಾ ಸಂಬಂಧ, ಗೋಕುಲಾಷ್ಟಮಿಗೂ ಇಮಾಂಸಾಬರಿಗೂ ಇದ್ದಹಾಗೆ' ಎಂದು ನನ್ನ ಗೆಳೆಯರೊಬ್ಬರು ಹೇಳಿದರು. ಅವರು ಕಲಾವಿದರು, ಸಾಹಿತಿ.

ಅವರೇ ಏಕೆ? ನೂರಕ್ಕೆ ತೊಂಬಂತೊಂಬತ್ತು ಜನ ಹಾಗೆಯೇ ತಿಳಿದಿದಾರೆ.

ಗಾಂಧೀಜಿಗೆ ಈ ವಾದದಲ್ಲಿ ಹುರುಳು ಕಾಣುವುದಿಲ್ಲ. ಗುರಿಯನ್ನು ಬಿಟ್ಟು ಸುತ್ತಾಡುವುದು ವೃಥಾ ಕಾಲಹರಣ. ಅವರು ದರಿದ್ರನಾರಾಯಣನ ಭಕ್ತರು. 'ಏನೇ ಆಡಲಿ, ನಾನು ನಮ್ಮ ಮೂವತ್ತುಮೂರು ಕೋಟಿ ಜನರನ್ನು ಮರೆಯಲಾರೆ. ಹಗಲಿರಳು ಅವರ ಚಿಂತೆಯೇ ಚಿಂತೆ ನನಗೆ. ಚೆಲುವನ್ನು ನೋಡಿ ಆ ಚೆಲುವಿನ ನಡುವೆ ಸತ್ಯವನ್ನು ಕಾಣುವ ಹಾಗೆ ನಮ್ಮ ಜನಕೋಟಿಗೆ ನಾವು ಕಲಿಸಬಲ್ಲೆವೇ? ಆ ರೀತಿ ಶಿಕ್ಷಣ ಕೊಡುವುದು ಸಾಧ್ಯವೆ? ಅವರಿಗೆ ಮೊದಲು ಸತ್ಯ ತೋರಿಸುವ. ನನಗೆ ಉತ್ಕಲದ ಚಿತ್ರ ಕಣ್ಣಿಗೆ ಕಟ್ಟಿ ಕಾಣುತ್ತಿದೆ. ಆ ಹತಭಾಗ್ಯ ಜೀವಚ್ಛವಗಳಿಗೆ ಯಾವುದಾದರಿಂದಲೂ ಲಾಭವಾಗುವುದಾದರೆ ಅದೇ ನನ್ನ ಪಾಲಿಗೆ ಚೆಲುವು. ಮೊದಲು ಹೊಟ್ಟೆಗೆ ಹಿಡಿಹಿಟ್ಟು, ಆಮೇಲೆ ಉಳಿದುದು. ಸದ್ಯ ಬದುಕಲಿಕ್ಕೆ ಅತ್ಯಗತ್ಯವಾದುದನ್ನು ಮೊದಲು ಕೊಡೋಣ. ಅನಂತರ ಅಂದಚೆಂದಗಳೆಲ್ಲ ತಾವೇ ಬಂದಾವು. ಅವರ ಜೀವನ ರಾಗದ ಶ್ರುತಿ ತಿಳಿಯದೆ ಅವರ ರಸ ಜೀವನ ತಿಳಿಯುವುದಿಲ್ಲ.'

'ನಿಮ್ಮ ಬಾಳಿನ ರೀತಿಯಲ್ಲಿ ಕಲೆ ಕಾಣುವುದಿಲ್ಲ. ಕಲೆಗೆ ಬಹಿಷ್ಕಾರ ಹಾಕಿದೀರೇನು ನೀವು?' ಎಂದು ಒಬ್ಬರು ಆಪ್ತವರ್ಗದವರು ಗಾಂಧೀಜಿಯನ್ನು ಕೇಳಿಯೇಬಿಟ್ಟರು ಒಂದು ಸಲ.

ಗಾಂಧೀಜೀ ಹೇಳಿದರು: 'ಈ ವಿಷಯದಲ್ಲಿ ಜನ ನನ್ನ ಬಗ್ಗೆ ಬಹಳ ತಪ್ಪು ತಿಳಿದುಕೊಂಡಿದಾರೆ. ಎಲ್ಲ ವಸ್ತುಗಳಿಗೂ ಎರಡು ಅಂಗಗಳಿವೆ–ಅಂತರಂಗ, ಬಹಿರಂಗ. ಇವೆರಡರಲ್ಲಿ ನಾವು ಯಾವುದರ ಮೇಲೆ ಕಾಲೂರಿ ನಿಲ್ಲುತ್ತೇವೆಂಬುದೇ ಮುಖ್ಯ. ನಮಗೆ ಯಾವುದರಲ್ಲಿ ಅಭಿರುಚಿಯೆಂಬುದು ಪ್ರಶ್ನೆ. ಅಂತರಂಗವಿಕಾಸಕ್ಕೆ ನೆರವಾಗದಿದ್ದರೆ ಬಹಿರಂಗವು ವ್ಯರ್ಥ. ಅದಕ್ಕೆ ಬೆಲೆ ಇಲ್ಲ. ಸತ್ಯವಾದ ಕಲೆ ಅಂತರಂಗದಿಂದ ಒಡಮೂಡಿ ಬಂದುದು; ಆ ವಿಕಾಸದ ಆವಿರ್ಭಾವ ಒಳಗಿರುವ ಬೆಳಕನ್ನು ಎಷ್ಟೆಷ್ಟು ದೂರ ಹೊರಗೆ ಹರಿಯಿಸಬಲ್ಲವೋ ಅಷ್ಟಷ್ಟು ಬೆಲೆ ಹೊರಗಿನ ರೂಪಕ್ಕೆ. ಮಾನವನ ಅಂತರಂಗದ ಪ್ರತಿಬಿಂಬವಾದಷ್ಟು ಪ್ರಮಾಣದಲ್ಲೇ ಬಹಿರಂಗಕ್ಕೆ ಬೆಲೆ

ಆ ತರದ ಕಲೆ ನನಗೆ ತುಂಬಾ ಇಷ್ಟ. ಆದರೆ ಈಗೇನು, ಎಲ್ಲಾ ಕಲಾವಿದರೇ! ಅವರ ಕಲೆಯಲ್ಲಿ ಮಾತ್ರ 'ಆತ್ಮೋನ್ನತಿಯ ಪ್ರಯತ್ನವೂ ಇಲ್ಲ. ಆತ್ಮವಿಕಾಸದ ಗುರುತೂ ಇಲ್ಲ.'*

ಸ್ವಭಾವ ವಾದ, ವಾಸ್ತವ ವಾದ ಇವು ಇಂದು ಕಲೆಯ ರಾಜ್ಯದಲ್ಲಿ ಕಾಲು ಹಾಕಿವೆ.† 'ಕಲೆ ಕಲೆಗಾಗಿ' ಎಂಬ ವಾದವೊಂದು ಎದ್ದಿದೆ. ಸತ್ಯವನ್ನು ಕಾಣಬೇಕೆಂಬುದಕ್ಕಿಂತ ಕಂಡದ್ದೇ ಸತ್ಯವೆಂಬ ಸಂಥ ಮೊದಲಾಗಿದೆ. ಕೆಲವು ಕಡೆ ಅಶ್ಲೀಲತೆ ಕಲೆಯ ಹೆಸರಿನಲ್ಲಿ ತಾನೇತಾನಾಗಿ ಮೆರೆಯುತ್ತಿದೆ. 'ಅಂತರಂಗ ಹೇಗಾದರೂ ಇರಲಿ, ಬಹಿರಂಗ ಅಂದವಾಗಿದ್ದರೆ ಸಾಕು' ಎಂಬ ಅರ್ಥವಿಲ್ಲದ ತೃಪ್ತಿಯುಂಟಾಗಿದೆ. ಇಂಥ ಕಲೆ ಗಾಂಧೀಜಿಗೆ ಹಿಡಿಸುವುದಿಲ್ಲ.

'ಜೀವಿಗೆ ತನ್ನ ಅಂತರಾತ್ಮದರ್ಶನ ಮಾಡಿಸಿಕೊಡಲು ನೆರವಾಗದ ಕಲೆ ಕಲೆಯಲ್ಲ. ನನ್ನಮಟ್ಟಿಗೆ ಕಲಾ ಸಾಮಗ್ರಿಯೆನಿಸಿಕೊಂಡಿರುವ

---

* ಬಹಿರಂಗದ ಫಲ ಅಷ್ಟೇ. ನಮ್ಮ ಚಿತ್ತವೃತ್ತಿಯನ್ನು ವಸ್ತುವಿಶೇಷವಾದ ಅಂತರಂಗಕ್ಕೆ ಎಳೆದುಕೊಂಡು ಹೋಗಿ ಅಲ್ಲಿ ಬಿಟ್ಟು ತಾನು ಹಿಂದೆ ಸರಿದುಕೊಳ್ಳುತ್ತದೆ. ಕಲಾವಂತನ ಮುಖ್ಯವಾದ ಕೆಲಸ ಆ ಚಿತ್ತವೃತ್ತಿಯನ್ನು ಅಲ್ಲಿ ಏಕಾಗ್ರವಾಗಿ ನಿಲ್ಲಿಸುವುದೇ. ಆದುದರಿಂದ ಯಾವ ಕಲೆಯಲ್ಲಾಗಲಿ ಬಹಿರಂಗಾಭಿನಯ ಮಾಡುವವನಿಗಿಂತ ಅಂತರಂಗದ ಭಾವಭೇದಗಳನ್ನು ಸ್ಪಷ್ಟವಾಗಿ ಪ್ರದರ್ಶಿಸುವುದೇ ನಮ್ಮನ್ನು ಹೆಚ್ಚು ಸೆಳೆಯುತ್ತದೆ. ಕಲ್ಲಿನಲ್ಲಿ ಗಡಿಗೆ ಕೊರೆಯುವವನಿಗಿಂತ ಪ್ರತಿಮೆಯನ್ನು ಕಟೆಯುವವನಿಗೆ ಮರ್ಯಾದೆಯೂ ಬೆಲೆಯೂ ಹೆಚ್ಚು. ಕಾರಣ - ಮೊದಲನೆಯದರಲ್ಲಿ ಅಂತರಂಗ ಚರ್ಚೆ ಇಲ್ಲ. ಎರಡನೆಯದರಲ್ಲಿ ಅಂತರಂಗಸೃಷ್ಟಿ ಅನಿವಾರ್ಯ. ಇಲ್ಲದೆ ಇದ್ದರೆ ಮೊದ್ದುಗೊಂಬೆ ಎನ್ನುತ್ತೇವೆ. ಮುಖ್ಯವಾಗಿ ಕಲೆಗೆ ಸಾಧ್ಯ; ಚಿತ್ತೈಕಾಗ್ರತೆ– ಅದರ ಫಲ - ಶಾಂತಿ. ನಾಟಕೋಪನ್ಯಾಸಗಳು: **ಅನಂತಕೃಷ್ಣ ಶರ್ಮ.**

† ಸ್ವಭಾವವಾದ ಬಹಳ ಬೆಳೆದುಹೋಗಿದ್ದರೂ ಸ್ವಲ್ಪ ವಿಮರ್ಶೆ ಮಾಡಿದರೆ ಸಾಕು ಸಡಲಿಹೋಗುತ್ತದೆ. ಅನುಕರಣದಿಂದಲೆ ಕಲೆಯ ಪ್ರಾರಂಭ, ನಿಜ. ಆದರೆ ಸಂಪೂರ್ಣವಾಗಿ ಯಾವ ವಸ್ತುವನ್ನು ಅನುಕರಿಸಬಹುದು? ಒಂದು ಮಲ್ಲಿಗೆ ಹೂವನ್ನು ಬಟ್ಟೆಯಲ್ಲೋ ಕಾಗದದಲ್ಲೋ ಕತ್ತರಿಸಬಹುದು; ಲೋಹದಿಂದ ಎರಕ ಹುಯ್ಯಬಹುದು; ದಂತದಲ್ಲಿ ಕೆತ್ತಬಹುದು; ಪಟದ ಮೇಲೆ ಬಣ್ಣದಿಂದ ಚಿತ್ರಿಸಬಹುದು; ಬೆರಳು ಮಡಿಸಿ ತೋರಿಸಬಹುದು; ಅದರ ಮೇಲೆ ಪದ್ಯ ಬರೆಯ

ಹೊರಗಣ ರೂಪ-ವಸ್ತುಗಳ ಸಹಾಯ ನನ್ನ ಆತ್ಮಸಾಧನೆಗೆ ಅಗತ್ಯವಿಲ್ಲ. ನನ್ನ ಬಳಿ ಕಲಾಕೃತಿಗಳಾಗಲಿ ಕಲಾವಸ್ತುಗಳಾಗಲಿ ಕಾಣದಿದ್ದರೂ ನನ್ನ ಜೀವನವು ಕಲಾಪರಿಪೂರ್ಣವೆಂದು ನಾನು ಹೇಳುತ್ತೇನೆ. ನನ್ನ ಗುಡಿಸಿಲ ಗೋಡೆಗಳು ಶೂನ್ಯವಾಗಿರಬಹುದು. ನೆತ್ತಿಯ ಮೇಲೆ ನೀಳಾಗಿ ಕವಿದಿರುವ, ಅನಂತಸೌಂದರ್ಯದಿಂದ ತುಂಬಿದ ತಾರಾಮಂಡಲವನ್ನು ನೋಡಬೇಕೆಂದು ಗುಡಿಸಲಿನ ಚಪ್ಪರವನ್ನೂ ನಾನು ತೆಗೆದೇನು. ಮೇಲೆ ನೋಡಿದರೆ ಕಾಣುವ ನಕ್ಷತ್ರ-ಗ್ರಹಗಳ ಅಲೌಕಿಕಲೀಲೆಯ ಆನಂದವನ್ನು ಆ ರಮಣೀಯ ದೃಶ್ಯಗಳನ್ನು ಯಾವ ಮಾನವ ಕಲಾಕೃತಿ ಕೊಡಬಲ್ಲುದು? ಹೀಗೆಂದರೆ ನಾನು ಸಾಮಾನ್ಯ ಕಲಾ-ವಸ್ತುಗಳನ್ನೆಲ್ಲಾ ಬಹಿಷ್ಕರಿಸಿದ್ದೇನೆಂದು ತಿಳಿಯಬಾರದು. ನಿಸರ್ಗ ಸೌಂದರ್ಯದ ಚಿರಂತನ

ಬಹುದು. ಆದರೆ ಇವು ಯಾವುದರಲ್ಲೂ, ಎಲ್ಲದರಲ್ಲೂ ಸೇರಿಸಿ ನೋಡಿದರೂ ನಿಜವಾದ ಹೂವಿನ ಬಣ್ಣ, ಸ್ಪರ್ಶ, ಆಳತೆ, ಸುಗಂಧ, ರೂಪ ಮೊದಲಾದ ಸರ್ವಾಂಗಗಳನ್ನೂ ನಾವು ಅನುಕರಿಸಿದ ಹಾಗೆ ಆಗುತ್ತದೆಯೇ? ರಂಗಸ್ಥಳದ ಮೇಲೆ ಒಬ್ಬನನ್ನು ಇರಿದುಕೊಲ್ಲುವ ಸನ್ನಿವೇಶ ಬಂದಾಗ ನಿಜವಾಗಿಯೂ ಅವನನ್ನು ಇರಿದು ಕೊಂದ ಹೊರತು ಅವನು ಸತ್ತಹಾಗಾಯಿತೇ? ಹೀಗೆ ಅನರ್ಥದಾಯಕವೂ ಅಸಾಧ್ಯವೂ ಆಗುವುದು ಹಾಗಿರಲಿ, ಸಂಪೂರ್ಣಾನುಕರಣೆ ಕಲೆಗೆ ಅನವಶ್ಯಕ. ಏಕೆಂದರೆ ಕಲೆಯ ಕೆಲಸ, ವಸ್ತುವಿನ ವಿಶಿಷ್ಟ ಸ್ವರೂಪವನ್ನು – ಇದು ಇಂಥದು ಎಂದು ಗುರುತಿಸುವುದಕ್ಕೆ ಬೇಕಾದ ಮುಖ್ಯ ಧರ್ಮವನ್ನು – ನಮ್ಮ ಭಾವನಾವೀಥಿಯಲ್ಲಿ ಪ್ರತಿಬಿಂಬಿಸುವುದನು ಬಿಟ್ಟು ಅದರ ಅಂಗೋಪಾಂಗ ಜ್ಞಾನವನ್ನು ನಮ್ಮ ಮಿದುಳಿಗೆ ಹತ್ತಿಸುವುದಲ್ಲ. ಚಿತ್ರಿಸಿದ ಜಂತು ಕತ್ತೆಯಲ್ಲ ಕುದುರೆ ಎಂದು ತಿಳಿಸಬೇಕಾದಾಗ ತೋರಿಸಬೇಕಾದ ವಿಶೇಷಾಂಗಗಳಲ್ಲಿ ಉದ್ದವಾದ ಕುಚ್ಚಿನಂಥ ಬಾಲ ಒಂದು. ಆದರೆ ಆ ಬಾಲದ ಕೂದಲನ್ನೆಲ್ಲಾ ಲೆಕ್ಕಹಾಕಿ ತೋರಿಸಬೇಕಾಗಿಲ್ಲ. ಮಲ್ಲಿಗೆ ಬಿಳಿಯದು. ಅದನ್ನು ಕರಿಯ ಕಲ್ಲಿನಲ್ಲಿ ರೂಪಿಸಬೇಕಾದೀತು. ಹಿಮಾಲಯದಂಥ ಸರ್ವೋನ್ನತ ಪರ್ವತವನ್ನು ಅಂಗುಲದಷ್ಟು ಸ್ಥಳದಲ್ಲಿ ಸಂಗ್ರಹವಾಗಿ ಚಿತ್ರಿಸಬಹುದು. ಶ್ರವಣಬೆಳಗೊಳದ ಗೋಮಟೇಶ್ವರ ವಿಗ್ರಹ ಅರವತ್ತು ಅಡಿ ಎತ್ತರ ಇದ್ದರೂ ಮನುಷ್ಯವಿಗ್ರಹವೇ. ವಸ್ತುವಿನ ಅಂತರಂಗ ತತ್ವವನ್ನು ಚೆನ್ನಾಗಿ ಭಾವನೆ ಮಾಡಬಲ್ಲ ಶಿಲ್ಪಿ ಸಿಕ್ಕರೆ ನಾವು ಸಾಮಾನ್ಯವಾಗಿ ಅವಶ್ಯಕವೆಂದು ಮುಖ್ಯವೆಂದು ತಿಳಿಯುವ ಹೊರಗಿನ ಅಂಗಗಳು ಕೂಡ ನಿರರ್ಥಕ ಅನಿಸುತ್ತವೆ.

ನಾಕೋಪನ್ಯಾಸಗಳು: **ರಾ.ಅ.ಕೃ.**

ಪ್ರತೀಕಗಳೆದುರು ಇವು ಎಷ್ಟು ನಿಸ್ಸಾರವೆಂಬುದನ್ನು ತೋರಿಸಿದೆ; ಅಷ್ಟೆ. ಮಾನವನ ಕಲಾಕೃತಿಗೆ ಬೆಲೆ ಸಿಕ್ಕಬೇಕಾದರೆ ಇವು ಆತ್ಮವಿಕಾಸಕ್ಕೆ ಸಹಾಯವಾಗಬೇಕು.'

ಕಲೆ ಇಂದ್ರಿಯಾನುಭೂತಿಯಲ್ಲ, ಭಾವಾನುಭೂತಿ. ರೂಪವಲ್ಲ ಕಲೆಯ ರಾಜ್ಯ; ಗುಣ. ಸ್ಥೂಲಶರೀರವಲ್ಲ ಅದರ ಲಕ್ಷ್ಯ, ಸೂಕ್ಷ್ಮಶರೀರ. ಅದರಲ್ಲಿ ವ್ಯಕ್ತಿವಿಕಾಸಕ್ಕೆ ಎಡೆಯಿರಬಾರದು. ಸಮಷ್ಟಿ ವಿಕಾಸಕ್ಕೆ ಹಾದಿ ಇರಬೇಕು. 'ಸರ್ವೋತ್ಕೃಷ್ಟ ಕಲೆ ಸರ್ವಭೋಗ್ಯವಾದೀತು; ವ್ಯಕ್ತಿ ಭೋಗ್ಯವಾಗದು.' ಬೇರೆಬೇರೆ ರುಚಿಗಳಿರುವಾಗ ಇದು ಸಾಧ್ಯವೆ? 'ಬಾಹ್ಯಾವಲಂಬನೆ ಕಡಮೆಯಾದರೆ ಕಲೆ ಸರ್ವಭೋಗ್ಯವಾಗುತ್ತದೆ. ಎಂತಲೇ ನಾನು ಪದೇ ಪದೇ ಅನ್ನುತ್ತೇನೆ. ಲೆಕ್ಕವಿಲ್ಲದ ಚಿಕ್ಕೆಗಳೂ ಚಂದ್ರನೂ ಬೆಳಗುವ ಮುಗಿಲನ್ನು ನೋಡಿ ಯಾರು ಜಗತ್ಕರ್ತನ ಲೀಲೆಯಲ್ಲಿ ತಲ್ಲೀನರಾಗಬಲ್ಲರೋ ಅವರಿಗೆ ಚಿತ್ರಕಾರನು ಬರೆದ ಮುಗಿಲು ನಸುಕು-ಸಂಜೆಗಳನ್ನು ನೋಡುವ ಅಗತ್ಯವೇನು? ಗಳಿಗೆಗಳಿಗೆಗೂ ಹೊಚ್ಚ ಹೊಸ ಬಣ್ಣ ತೋರುತ್ತ ಹೊಸ ಹೊಸ ಸೊಬಗನ್ನು ಬೀರುವ ಆಕಾಶದಿಂದಲೇ ಅವರು ತಮಗೆ ಬೇಕಾದುದನ್ನು ಹೀರಿಕೊಳ್ಳಬಲ್ಲರು.

'ವಿಚಾರಮಾಡಿ ನೋಡಿ. ಎಲ್ಲಿ ಸೃಷ್ಟಿದೇವಿ ನಮ್ಮ ಕಣ್ಣಿಗೆ ಹಬ್ಬವಾಗಿ ರಮಣೀಯವಾಗಿ ಸೂರ್ಯೋದಯವನ್ನು ರಚಿಸಿಲ್ಲವೋ ಅಲ್ಲಿ ಮನುಷ್ಯ ಬರೆದ ಚಿತ್ರ ಕೊಂಚ ತೃಪ್ತಿಕೊಟ್ಟೀತು. ವರುಷದಲ್ಲಿ ಹನ್ನೆರಡೂ ತಿಂಗಳು ನಿಸರ್ಗದ ಸೂರ್ಯೋದಯ ಸೂರ್ಯಾಸ್ತಗಳ ಲೀಲೆ ನೋಡಲು ಸಿಕ್ಕುವಲ್ಲಿ, ಚಿತ್ರದ ಸೂರ್ಯೋದಯ ಸೂರ್ಯಾಸ್ತಗಳನ್ನು ನೋಡಲು ಮನುಷ್ಯನು ಕಾತರನಾದಾನೆ? ವರುಷದಲ್ಲಿ ಆಗೊಮ್ಮೆ ಈಗೊಮ್ಮೆ ಅದರ ನೋಟ ಲಭಿಸುವ ಸ್ಥಳದಲ್ಲಿ ತನಗಾಗಿ, ತನ್ನಂಥವರಿಗಾಗಿ ಚಿತ್ರಕಾರ ಚಿತ್ರಬರೆಯುತ್ತಾನೆ; ಮೂರ್ತಿಯೊಂದನ್ನು ನಿರ್ಮಿಸುತ್ತಾನೆ. ಮೂರ್ತಿಯ ಮಾತೇ ಬೇಡ. ತನ್ನ ಹೃದಯದಲ್ಲೇ ಸದಾ ಭವ್ಯಾಕಾಶದ ಲೀಲೆಯನ್ನು ನೋಡಬಲ್ಲವನಿಗೆ ಹೊರಗಣ ಮುಗಿಲಿನ ಚಂದ್ರ–ನಕ್ಷತ್ರಗಣವನ್ನು ನೋಡುತ್ತಿರಬೇಕಾದ ಅಗತ್ಯವೂ ಕೂಡ ಕಡಮೆಯಾಗುತ್ತದೆ.'

ನಿಜವಾಗಿ ನೋಡಿದರೆ ಒಳಗೆ ಇಲ್ಲದುದು ಹೊರಗೆ ಉಂಟೆ? ದೃಷ್ಟಿ

ಯಲ್ಲಿಲ್ಲದುದು ಸೃಷ್ಟಿಯಲ್ಲಿದೆಯೆ? ಕಬೀರದಾಸ ಹಾಡಿದಾನೆ ಅನುಭವಾಮೃತ :

ಯಾ ಘಟ ಭೀತರ್ ಸಾತ್ ಸಮುಂದರ್ ಯಾಹೀಮೇ ನದ್ದೀ ನಾರಾ
ಯಾ ಘಟ ಭೀತರ್ ಕಾಶೀ ದ್ವಾರಕಾ ಯಾಹೀಮೇ ಠಾಕೂರ ದ್ವಾರಾ
ಯಾ ಘಟ ಭೀತರ್ ಚಂದ್ರಸೂರ್ ಹೈ ಯಾಹೀಮೇ ನವಲಖ್ ತಾರಾ
ಕಹೇ ಕಬೀರ್ ಸುನೋ ಭಾಯಿ ಸಾಧೋ ಯಾಹೀಮೇ ಸತ್ ಕಿರತಾರಾ

'ಈ ಮೈಯೊಳಗೇ ಸಪ್ತಸಮುದ್ರಗಳಿವೆ. ಹೊಳೆ ಕಾಲುವೆ ಇವೆ. ಕಾಶಿ-ದ್ವಾರಕೆ-ಠಾಕುರದ್ವಾರ ಎಲ್ಲ ತೀರ್ಥಗಳೂ ಇವೆ. ಇದರಲ್ಲೇ ಚಂದ್ರ ಸೂರ್ಯರೂ ನವಲಕ್ಷ ನಕ್ಷತ್ರಗಳೂ ಎಲ್ಲ ಸೃಷ್ಟಿಯೂ ಇವೆ.' ಇದನ್ನು ಹಾಡಿದಾಗ ಕಬೀರನ ಹೃದಯದಲ್ಲಿ ಶಬ್ದ–ಸ್ಪರ್ಶ–ರೂಪ–ಗಂಧಗಳ ಸರ್ವ ಸೃಷ್ಟಿಯೂ ಮೂಡಿತ್ತು. ಅವನಿಗೆ ಬಾಹ್ಯಾಕಾಶದ ಅಗತ್ಯವೇ ಇರಲಿಲ್ಲ–ಇಂಥ ಅವಸ್ಥೆಯಲ್ಲೇ ಆತ ಹೀಗೆ ಹಾಡಿದ್ದು.

ಇದೆಲ್ಲ ಯೋಗಾನಂದದ ಕಲೆ. ವಿಷಯಾನಂದದಲ್ಲಿ ಮುಳುಗಿ ಬಾಳನ್ನು ಹೋಳಿಯ ಹಬ್ಬದ ಭೀಭತ್ಸದಲ್ಲಿ ಹರಿಯಿಸುವ ಕಲೆ ಕಲೆಯಲ್ಲ, ಅದು ಸಂಕೋಲೆ. ಕಲೆ ನಮ್ಮನ್ನು ಮೇಲ್ಮಟ್ಟಕ್ಕೆಳೆಯಬೇಕು, ಕೆಳಗೆ ಸೆಳೆಯಬಾರದು. ನರ್ತಕಿಯ ರೂಪಲಾವಣ್ಯದಲ್ಲಿ ಹುಡುಕಬೇಕಾದುದಿಲ್ಲ ಕಲೆಯನ್ನು, ಅವಳ ಕಾಲಿನ ಲಯದಲ್ಲಿ, ಆ ಗತಿಯಲ್ಲಿ ಕಾಣಬೇಕು. ನೈಜವನ್ನು ಬಿಟ್ಟು ಬಾಹ್ಯದ ಸೆಳೆತಕ್ಕೆ ಸಿಕ್ಕರೆ ಕಲೆ ರಾಗದ್ವೇಷ ಮಯವಾಗುತ್ತದೆ. ಕೃತ್ರಿಮವಾಗಿ ಕಂಟಕವಾಗುತ್ತದೆ. ವಿನೋದ-ವಿಲಾಸಗಳ ಸಾಮುಗ್ರಿಯಾಗಿದ್ದ ಕಲೆಯನ್ನು ಗಾಂಧೀಜೀ ವಿಕಾಸದ ಉಪಾಯವನ್ನಾಗಿ ಮಾಡಿದಾರೆ. ಸಿಂಗಾರ ಒಯ್ಯಾರಗಳ ಕಸದ ಗುಂಡಿಯಲ್ಲಿ ಬಿದ್ದಿದ್ದ ಕಲೆಯನ್ನು ಗಾಂಧೀಜೀ ಜೀವನಸಿಂಹಾಸನದ ಮೇಲೆ ಕೂಡಿಸಿದಾರೆ. 'ಕಲೆ ಮಾಯಾಭ್ರಾಂತಿಯ ಜಾಲವಾಗದಿರಲಿ. ಸತ್ಯ ಸಾಕ್ಷಾತ್ಕಾರದ ಸೋಪಾನವಾಗಲಿ' ಎಂಬುದೇ ಅವರ ಕಲಾಭಿಮಾನದ ಗುಟ್ಟು. 'ಮೊದಲು ಸತ್ಯ, ಆಮೇಲೆ ಸೌಂದರ್ಯ' ಎಂಬುದು ಅವರ ಹಾದಿ.

ಅಂದ-ಚೆಂದಗಳು ಸತ್ಯವಲ್ಲವೆ? ಅದೂ ದೈವಸೃಷ್ಟಿಯೇ ತಾನೆ?

ಸವಿಯಾದ ಸಂಗೀತ ಕೇಳಿದಾಗ ನಮ್ಮ ಮನಸ್ಸು ಹೂವಾಗಿ ಅರಳಿಕೊಳ್ಳುತ್ತದೆ; ಆ ಚೆಲುವಿನಲ್ಲಿ ಸತ್ಯವಿಲ್ಲವೆ? ಇರದಿದ್ದರೆ ತಾನೆ ಏನು ನಷ್ಟ. ಕಲಾವಿದರೆಲ್ಲ 'ರಸಾನಂದವೇ ಕಲೆಯ ಗುರಿ' ಯೆಂದಿದಾರೆ. ರಮಣೀಯಾರ್ಥ ಪ್ರತಿಪಾದನೆಯೇ ಕಲೆಯೆಂದಿದಾರೆ. ಚೆಲುವಿನಲ್ಲಿ ಸತ್ಯಕಾಣದೆ? ಚೆಲುವೇ ಸತ್ಯವಲ್ಲವೆ?

'ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ' ಎಂದು ಇಂಗ್ಲೀಷು ಕವಿಯೊಬ್ಬ ಹಾಡಿದ. ಹಾಗೆ ಹಾಡಿದಾಗ ಕವಿಯ ಮನಸ್ಸಿನಲ್ಲಿ ಕಣ್ಣಿಗೆ ಕಂಡ ಸೊಗಸಾದ ವಸ್ತುವೆಲ್ಲ ಸತ್ಯವೆಂದಿರಲಾರದು. ಬೆಳ್ಳಗಿರುವುದೆಲ್ಲ ಹಾಲಲ್ಲ. ಕವಿಯ ಕಣ್ಣು ನಾಮರೂಪದ ಬಲೆಯಲ್ಲಿ ಸೆರೆ ಸಿಕ್ಕುವುದಿಲ್ಲ. ಕಣ್ಣಿಗೆ ಕಾಣುವ ಸೊಗಸು ಚೆಲುವು ಎಲ್ಲಾ ಸತ್ಯದಮೇಲೆ ಮುಚ್ಚಿದ ಬಂಗಾರದ ಮುಚ್ಚಳ. ಆ ಮಿರುಗುವ ಮುಚ್ಚಳ ತೆಗೆದು ಪಾತ್ರೆಯೊಳಗಿನ ನಿತ್ಯ ಸತ್ಯದಲ್ಲಿ ಕೈಯಿಡುತ್ತಾನೆ ಕವಿ. ವಿಕಲಾಂಗನಾಗಿ ಕುರೂಪಿಯಾದ ಭಿಕಾರಿಯನ್ನು ಬೀದಿಯಲ್ಲಿ ಕಂಡಾಗ ದೂರ ಸರಿಯುತ್ತೇವೆ. ಮನಸ್ಸು ಆ ರೂಪಿಗೆ ಹೇಸಿಕೊಳ್ಳುತ್ತದೆ. ಅದೇ ಚಿತ್ರದಲ್ಲಿ ಬಂದಾಗ ಅದನ್ನು ತೂಗುಹಾಕುತ್ತೇವೆ. ರಂಭೆ ಊರ್ವಶಿಯರಿಗಿಂತ ಚೆಲುವೆಯರುಂಟೆ? ಅವರ ಚೆಲುವಿಗೆ ನಮ್ಮ ಜನ ಮರುಳಾಗಲಿಲ್ಲ. ಇವರು ಗದ್ದುಗೆಗೇರಿಸಿದ ಹೆಣ್ಣು ಕರಾಳ ಸ್ವರೂಪಿಣಿಯಾದ ಕಾಳಿ. ರವಿ ಕಾಣದುದ ಕವಿ ಕಾಣುವನಂತೆ. ರವಿಗೆ ಕಾಣುವುದೆಲ್ಲ ಹೊರಗಿನ ರೂಪ. ಅವನು ಕಾಣಲಾರದುದು ಆ ವಸ್ತುವಿನ ಭಾವ, ಅದರೊಳಗಿನ ಮಿಡಿತ. ಅದನ್ನು ಕಾಣುವವ ಕವಿ. ಆ ನೈಜದ ಆನಂದವನ್ನು ಬೀರುವುದು ಕಲೆಯ ಕೆಲಸ.

ಯಾರಿಗೆ ಏನಾದರೂ ಆಗಲಿ, ಗಾಂಧೀಜಿಗೆ ಮಾತ್ರ ಸತ್ಯವೇ ಸೌಂದರ್ಯ. 'ಸತ್ಯದ ಬೆಳಕನ್ನು ಕನ್ನಡಿಸುವ ಎಲ್ಲ ವಸ್ತುವೂ ಚೆಲುವೇ. ನಿಜವಾದ ಚಿತ್ರ, ನಿಜವಾದ ರೂಪ, ನಿಜವಾದ ಗೀತ ಎಲ್ಲವೂ ತುಂಬ ಚೆನ್ನು. ಸಾಧಾರಣ ಮನುಷ್ಯನಿಗೆ ಸತ್ಯದಲ್ಲಿ ಚೆಲುವು ಕಾಣಿಸದು. ಅವನಿಗೆ ಸತ್ಯ ಭೀಕರವಾಗಿ ಕಾಣುತ್ತಿದೆ. ಅದರ ಚೆಲುವನ್ನು ಅರಿಯಲಾರದೆ ಬರಿಯ ಭೀಷಣತೆಯನ್ನು ಕಂಡು ಓಡಿಹೋಗುತ್ತಾನೆ. ಅವನ ಪಾಲಿಗೆ ಆ ಸೌಂದರ್ಯ ಇಲ್ಲದೆ ಹೋಗುತ್ತದೆ. ಸತ್ಯದಲ್ಲಿ ಸೌಂದರ್ಯವನ್ನು ಕಾಣಲು ಎಂದು ಮನುಷ್ಯ

ಸಮರ್ಥನಾಗುತ್ತಾನೆಯೋ ಅಂದು ಅವನು ಕಲೆಯನ್ನು ಕಾಣಲರಿತ, ಕಲಾ ದರ್ಶನ ಮಾಡಲರಿತ ರಸಿಕನಾದ.'

ಈ ಪ್ರಪಂಚವೊಂದು ದೊಡ್ಡ ಅರಮನೆ. ಅದರ ರಾಣಿಯನ್ನು ಎಲ್ಲರೂ ಅರಸುತ್ತಿದಾರೆ. ಅರಮನೆಗೆ ಲೆಕ್ಕವಿಲ್ಲದಷ್ಟು ಬಾಗಿಲಿವೆ. ಆ ಬಾಗಿಲೆಲ್ಲ ರಾಣಿಯ ಬಳಿಗೆ ಒಯ್ಯುವುದಿಲ್ಲ. ರಾಣಿ ಸತ್ಯದ ಬಾಗಿಲಲ್ಲಿ ಕೂತಿದಾಳೆ. ಅಲ್ಲೇ ಆಕೆಯ ದರ್ಶನ. ಬದುಕು ಇಷ್ಟು ನಿಕರವಾಗಿಲ್ಲ. ಬೇರೆ ಬೇರೆ ಬಾಗಿಲಲ್ಲಿ ನುಗ್ಗಿದ ಜನರೂ ರಾಣಿಯನ್ನು ಕಂಡಂತೆ ಹೇಳುತ್ತಾರೆ. ಹೊಲಸು ಬಾಳು ಬದುಕಿದವರೂ ಕೆಲವರು ಉತ್ತಮೋತ್ತಮ ಕಲಾಕೃತಿಗಳನ್ನು ಜಗತ್ತಿಗೆ ನೀಡಿದಾರೆ. ಹಿಂದಿನ ಮಹಾ ಕವಿಗಳು ಎಲ್ಲರೂ ಪವಿತ್ರರಾಗಿರಲಿಲ್ಲ. ಸತ್ಯವನ್ನು ಬಿಟ್ಟು ರೂಪಕ್ಕೇ ಮರುಳಾಗಿದ್ದವರೂ ಇದ್ದರು. ಹಾಗೆ ನೋಡಿದರೆ ಕಲೆಗೆ ಮುಖ್ಯವಾದ ಭಾವಾನುಭೂತಿಗೆ ಸತ್ಯ ಸೌಂದರ್ಯ ಎರಡೂ ಎರಡು ದಾರಿಗಳೆನ್ನಬಾರದೆ?

ಗಾಂಧೀಜೀ ಎರಡನೆಯ ಬಾಗಿಲಲ್ಲಿ ಕಾಣುವುದು ಬರೀ ಭ್ರಾಂತಿಯೆಂದಾರು. 'ಬಾಳಿನಲ್ಲಿ ಸತ್ಯ ಅಸತ್ಯಗಳು ಕಲಬೆರಕೆಯಾಗಿವೆ. ಎರಡೂ ಒಟ್ಟಿಗೆ ಇರುತ್ತವೆ. ಕವಿ ಕಲಾಕಾರರಲ್ಲೂ ಈ ಎರಡು ಬುದ್ಧಿಗಳಿವೆ. ಅವನ ನೋಟ ಸತ್ಯದಲ್ಲಿ ಸುಳಿದರೆ ಅದು ರಸವಾಗಿ ರಮಣೀಯವಾಗಿ ಕಾವ್ಯ ಕಲೆ ಆಗುತ್ತದೆ. ಅಂಥ ರಸನಿಮಿಷಗಳು ಬಾಳಿನಲ್ಲಿ ಅಪರೂಪವಾದರೆ ಕಲೆಯಲ್ಲೂ ಅಷ್ಟೆ.' ಚೆಲುವು ಬರೀ ನೆಳಲು, ಸತ್ಯವೇ ನಿಜವಾದ ವಸ್ತು. ಪದಾರ್ಥವಿಲ್ಲದೆ ನೆರಳುಂಟೆ? 'ಸತ್ಯವಿಲ್ಲದೆ ಸೌಂದರ್ಯಕ್ಕೆ ಇರವೆಲ್ಲಿಯದು?'

ಇವೆರಡಕ್ಕೂ ಇರುವ ಈ ಗಂಟು ಸುಲಭವಾಗಿ ತಿಳಿಯುವುದಿಲ್ಲ. ದೊಡ್ಡ ದೊಡ್ಡ ವಿದ್ವಾಂಸರಿಗೆ ಇದು ಬಿಡಿಸಲು ಬಾರದ ಒಗಟಾಗಿದೆ. ತಂಪಾದ ಶರತ್ಕಾಲದ ಬೆಳದಿಂಗಳು ಸೊಬಗಿನ ಮಳೆಯಲ್ಲವೆ? ಹೊತ್ತು ಮುಳುಗುವಾಗ ಅನುಭವವಾಗುವ ಸಂಧ್ಯಾರಾಗದ ಚೆಲುವು ಸತ್ಯವಲ್ಲವೆ? ಕಾಮನ ಬಿಲ್ಲು ಎಷ್ಟು ಚೆನ್ನಾಗಿರುತ್ತದೆ? ಫಲ-ಪುಷ್ಪಗಳಿಂದ ತುಂಬಿದ ಮರ ಮನಸ್ಸು ಸೆಳೆಯುವುದಿಲ್ಲವೆ? ಇವುಗಳಲ್ಲಿ ಪವಿತ್ರ ಅಪವಿತ್ರ ಭಾವನೆಗಳಿಗೆ ಎಡೆಯೇ ಇಲ್ಲ. ಇವುಗಳ ಮಾತು ಹೇಗೆ?

'ಈ ನೋಟಗಳೆಲ್ಲ ಸೃಷ್ಟಿಕರ್ತನ ಅಗಾಧ ಲೀಲೆಯ ಗುರುತು. ಆ ಲೀಲೆಯ ನೆನಪಾದರೆ ಇವು ಚೆಲುವು. ಸೃಷ್ಟಿಯ ಮಹಾ ಸತ್ಯದ ಹಣತೆಗಳಂತಲೇ ಇವು ಚೆಲುವಾಗಿವೆ. ಇಲ್ಲದಿದ್ದರೆ ಆ ಚೆಲುವೆಲ್ಲಿಂದ ಬರಬೇಕು? ಬೆಳುದಿಂಗಳ ಸೊಬಗನ್ನಾಗಲಿ ಮುಳುಗುವ ಸೂರ್ಯನ ಅಂದವನ್ನಾಗಲಿ ಆನಂದಿಸುವಾಗ, ಸೃಷ್ಟಿಕರ್ತನ ಧ್ಯಾನದಲ್ಲಿ ಮುಳುಗಿ ನನ್ನ ಮನಸ್ಸು ತುಂಬಿ ಹೋಗುತ್ತದೆ. ಸರ್ವಸೃಷ್ಟಿಯಲ್ಲೂ ಆತನ ಕೈವಾಡವನ್ನೂ ಆತನನ್ನೂ ಗುರುತಿಸಿಕೊಳ್ಳುತ್ತೇನೆ. ಅವನ ನೆನಪೇ ಕೊಡದೆ ಹೋದರೆ ಸೂರ್ಯೋದಯ ಸೂರ್ಯಾಸ್ತಗಳಿಂದ ಆಗಬೇಕಾದುದೇನು? ಅವೂ ಒಂದು ಆತಂಕವೇ. ಆತ್ಮೋನ್ನತಿಗೆ ಅಡ್ಡವಾದುದೆಲ್ಲ ಬರೀ ಬಯಲು, ಭ್ರಾಂತಿ; ಒಂದು ಜಾಲ. ನಮ್ಮ ಮೈಯಿದ್ದಹಾಗೆ. ಅನೇಕ ಸಲ ನಮ್ಮ ಮೈಯೇ ನಮ್ಮ ಮುಕ್ತಿಗೆ ಅಡ್ಡಿ.'

ಕಲೆಯ ದೇವಿ ಮೂರು ಮೊಗದಾಕೆ. ಸತ್ಯ, ಶಿವ, ಸುಂದರ–ಮೂರು ಮುಖಗಳು. ನಡುವಿನ ಮುಖ ಸತ್ಯ.

ಕಲಾಸರಸ್ವತಿ ವೆಂಕಟಪ್ಪನವರನ್ನು ಕರ್ನಾಟಕದಲ್ಲಿ ಅರಿಯದವರು ಯಾರು? ಅವರ ಅರ್ಧನಾರೀಶ್ವರ, ಸಿದ್ಧಾರ್ಥನ ತ್ಯಾಗ ಚಿತ್ರಗಳು ಪ್ರಬುದ್ಧ ಕರ್ಣಾಟಕದ ಪ್ರಯತ್ನದಿಂದ ಕನ್ನಡ ಜನರಿಗೆ ಪರಿಚಯವಾಗಿವೆ. ಕನಸಿನಲ್ಲಿ ಎಚ್ಚೆತ್ತಂತೆ ಅವರ ಬಗ್ಗೆ ಎಲ್ಲಿಯಾದರೂ ಮಾತು ಬರುವುದುಂಟು. ಅಷ್ಟು ಹುದುಗಿಕೊಂಡಿರುವ ಜೀವ ಅವರದು. ಅವರ ರೇಖಾವರ್ಣವಿನ್ಯಾಸ ಅದ್ಭುತವಾದುದು. ನಸುಕು, ಬೆಳಗು, ಮೂರು ಸಂಜೆ, ಕೊಳ ಮುಂತಾದ ಅವರ ಚಿತ್ರಗಳನ್ನು ನೋಡಿದವರು ತುಂಬಾ ಹೊಗಳಿದಾರೆ.

ವೆಂಕಟಪ್ಪನವರ ಕಲೆಯ ಬಗ್ಗೆ ಇಲ್ಲಿ ಬರೆಯುತ್ತಿಲ್ಲ. ಅದಕ್ಕೆ ಇದು ಠಾವೂ ಅಲ್ಲ. ಗಾಂಧೀಜೀ ಮೈಸೂರಿಗೆ ಹೋದಾಗ ವೆಂಕಟಪ್ಪನವರೂ ಬಂದು ಮಹಾತ್ಮರನ್ನು ನೋಡಿದರು. ತಮ್ಮ ಕಲಾಕೃತಿಗಳನ್ನೆಲ್ಲಾ ತೋರಿಸಿದರು. ತಮ್ಮ ಶಿಲ್ಪಕೃತಿಗಳನ್ನೂ ತೋರಿಸಿದರು. ಆ ಕಲೆಯಲ್ಲಿ ಅವತರಿಸಿದ್ದ ಶಾಂತಿರಸವನ್ನು ಗಾಂಧೀಜೀ ತುಂಬಾ ಮೆಚ್ಚಿಕೊಂಡರು. 'ತುಂಬಾ ಸಂತೋಷವಾಯಿತು. ಇದೇ ರೀತಿ ಬೆಳೆದುಬರಲಿ ನಿಮ್ಮ ಕಲೆ. ಆದರೆ ಒಂದು ಮಾತು; ರಾಟೆ ನಿಮಗೆ ಹಿಡಿಸಿದರೆ ಅವಕ್ಕೆ ಜನಜೀವನದಲ್ಲಿ ಎಂಥ

ಸ್ಥಾನವಿದೆಯೆಂಬುದನ್ನು ಚಿತ್ರಿಸಿದರೆ ತುಂಬಾ ಸಂತೋಷ. ನಿಮಗೆ ರಾಟೆ ಹಿಡಿಸಿದರೆ ಆ ಮಾತು.' ಎಲ್ಲಿ ಹೋದರೂ ತನ್ನ ಶಂಖವನ್ನೇ ಊದುವ ದಾಸಯ್ಯನಂತೆ.

ಮನುಷ್ಯನ ಮುಖ್ಯವಾದ ಗುಣ, ರಚನೆ–ಕಲೆ. ನಿಸರ್ಗದಲ್ಲಿ ಸಿಗುವ ಒರಟು ಗಡುಸು ಪದಾರ್ಥಗಳಿಂದ ಅವನಿಗೆ ತೃಪ್ತಿಯಿಲ್ಲ. ಅದಕ್ಕೆ ಅಂದ ಚೆಂದ ಬೆಡಗು ಸೇರಿಸಬೇಕು. ಕೈಯಲ್ಲಿ ಒಂದೇ ದುಡ್ಡು ಇದ್ದರೆ ರೊಟ್ಟಿ ತೆಗೆದುಕೊ; ಎರಡು ದುಡ್ಡಿದ್ದರೆ, ಒಂದಕ್ಕೆ ರೊಟ್ಟಿ ಇನ್ನೊಂದಕ್ಕೆ ಹೂವು ತೆಗೆದುಕೊ ಎಂದು ಹೇಳಿದಾರೆ ಪೈಗಂಬರರು. ಅದರ ಅರ್ಥ ಇಷ್ಟೆ– ಸ್ವಭಾವದಿಂದ ಮನುಷ್ಯ ಕಲಾವಂತ; ಎಂತಲೇ ಉಡುವ ಬಟ್ಟೆ ಹೇಗೋ ಅಂತೂ ಮೈಮುಚ್ಚಿದರೆ ಸಾಲದು, ಅದು ಅಂದವಾಗಬೇಕು ಎಂದು ಕಷ್ಟ ಪಡುತ್ತಾನೆ. ತನಗೆ ಸಾಮಾನ್ಯವಾಗಿ ಬೇಕಾಗುವ ಎಲ್ಲ ಪದಾರ್ಥಗಳಿಗೂ ಅಂದವನ್ನು ಕೊಡಲು ತನ್ನ ರಕ್ತವನ್ನು ಹಳ್ಳಹರಿಯಿಸಿದಾನೆ. ಹೀಗಿರುವಾಗ ನೈಸರ್ಗಿಕ ಜೀವನವೇ ನಿಜವಾದ ಕಲೆಯಾದೀತೆ?– ಹೀಗೆ ಒಬ್ಬರು ಗಾಂಧೀಜಿಯನ್ನು ಕೇಳಿದರು.

ಗಾಂಧೀಜೀ ಅಂದ ಬೇಡ ಎನ್ನುತ್ತಾರೆಯೇ. 'ಮನುಷ್ಯ ಕಲಾವಂತ, ರಚನಾ ಸಮರ್ಥ ಎಂಬುದರಲ್ಲಿ ಸಂದೇಹವೇನು! ನಿಸ್ಸಂದೇಹವಾಗಿಯೂ ಅವನಿಗೆ ಚೆಲುವು ಬೇಕು. ಆದ್ದರಿಂದಲೇ ಬಣ್ಣವೂ ಬೇಕು. ಅವನ ರಚನಾಶಕ್ತಿ ಕಲಾವಂತಿಕೆಗಳ ಔನ್ನತ್ಯವೇ ನಿಗ್ರಹವು ನಿಜವಾದ ಕಲೆ ಎಂಬುದನ್ನು ಅವನಿಗೆ ಕಲಿಸಿತು ಬರಿಯ ಬಣ್ಣದ ಸಂತೆಯಲ್ಲಿ ಅಂದವಿಲ್ಲ. ಬರಿಯ ಇಂದ್ರಿಯಭೋಗದಲ್ಲಿ ತಿರುಳಿಲ್ಲ ಎಂಬ ಅರಿವನ್ನು ಆ ರಸಿಕತೆಯೇ ಕಲಿಸುತ್ತಿದೆ. ಅದರಲ್ಲಿ ಆ ವಿವೇಕವಿದೆ. ಆ ಕಲಾದೃಷ್ಟಿ ಉಪಯುಕ್ತತೆಯಲ್ಲಿ ಸುಖವನ್ನು ಅರಸುವ ಹಾಗೆ ಮಾಡುತ್ತದೆ. ಇದರ ಪರಿಣಾಮವಾಗಿ ಬಹಳ ದಿನದ ಕೆಳಗೆಯೆ– ಮಾನವ ವಿಕಾಸದ ಮೊದಲ ಹೆಜ್ಜೆಯಲ್ಲಿಯೆ–ನಾಲಿಗೆಯ ರುಚಿಗಾಗಿ ಅಲ್ಲ–ತಿನ್ನ ಬೇಕಾದುದು, ಹೊಟ್ಟೆ ತುಂಬಿಸಲಿಕ್ಕೆ ಜೀವ ಹಿಡಿಯಲಿಕ್ಕೆ ಎಂದು ಮನುಷ್ಯ ತಿಳಿದುಕೊಂಡ. ಬರಬರುತ್ತ ಅವನಿಗೆ ಅದಕ್ಕಿಂತ ಮೇಲಾದ ಅರಿವು ಒಂದು ಉಂಟಾಯಿತು. ಸುಮ್ಮನೆ ಬದುಕಿಕೊಂಡು ಹೋಗುವುದರಲ್ಲಿ ಸೊಗಸೂ ಇಲ್ಲ ಸುಖವೂ ಇಲ್ಲ. ತನ್ನ

ಜೊತೆಯ ಜೀವ ಸಮುದಾಯಕ್ಕೆ ನೆರವಾಗಿ, ಅದರ ಮೂಲಕ ತನ್ನನ್ನು ಸೃಷ್ಟಿಸಿದ ದೇವರ ಸೇವೆ ಮಾಡುವುದೇ ಸರಿ.'

ತನಗೆ ಅಗತ್ಯವಾದ ಪದಾರ್ಥಗಳಲ್ಲಿ ಅಂದವನ್ನು ತುಂಬುತ್ತಾನೆ ಮನುಷ್ಯ ಎಂಬುದು ನಿಜ. ಆದರೆ ಅಗತ್ಯವಲ್ಲದ ಪದಾರ್ಥದಲ್ಲಿನ ಅಂದ ತುಂಬುವುದು ಕಲೆಯೋ? 'ಕಲೆಯ ತಳಹದಿ ಉಪಯುಕ್ತತೆ ಅಗತ್ಯಗಳಾಗಿರದಿದ್ದರೆ ಅಂಥ ಕಲೆಯ ವಿಷಯದಲ್ಲಿ ಜಾಗರೂಕರಾಗಿರಬೇಕು.'

'ನಿಸರ್ಗ ಎಂದಕೂಡಲೇ ಹಾವು ಚೇಳು ಅಥವಾ ಹುಲಿ ಸಿಂಹಗಳಂತೆ ನಾವು ಬದುಕಬೇಕು ಎಂದು ಅರ್ಥಮಾಡಬಾರದು. ಮಾನವನ ಉತ್ತಮ ಸ್ವಾಭಾವವನ್ನು ಆಧ್ಯಾತ್ಮಜೀವನವನ್ನು ಗಮನಿಸಬೇಕು. ಅದಕ್ಕೆ ಸತತ ಪ್ರಯತ್ನ ಬೇಕು. ಆಗಲೇ ಅದು ತಿಳಿದೀತು' ಎಂದು ತಿಳಿಸಿ ಹೇಳಿದರು ಗಾಂಧೀಜೀ.

ಗಾಂಧೀಜಿಗೆ ಬಾಳಿನಲ್ಲಿ ತಪಸ್ಸೇ ಪ್ರಧಾನ. ತಪೋಜೀವನವೇ ನಿಜವಾದ ಕಲೆ. ಹೆಸರಾದ ಕಲಾಕೋವಿದರೆನಿಸಿದ ದಿಲೀಪಕುಮಾರರಾಯರೊಡನೆ ಮಾತಾಡುತ್ತ ಒಮ್ಮೆ ಗಾಂಧೀಜೀ ಇದನ್ನೇ ಹೇಳಿದರು. 'ಬಾಳಿನಲ್ಲಿ ತಪಸ್ಸು ಎಲ್ಲಕ್ಕಿಂತ ಹೆಚ್ಚಿನ ಕಲೆಯೆಂದು ನನ್ನ ಅಭಿಪ್ರಾಯ.' ಈ ತಪಸ್ಸಿನ ಗೊಂದಲದಲ್ಲಿ ಸಂಗೀತಕ್ಕೆ ಗಾಂಧೀಜೀ ಬಹಿಷ್ಕಾರ ಹಾಕಿದಾರೆಯೋ ಏನೋ ಎಂದು ದಿಲೀಪಕುಮಾರನಿಗೆ ಗಾಬರಿ. ಆತನಿಗೆ ಸಂಗೀತವೇ ಪ್ರಾಣ. ಆತನ ಅಳುಕನ್ನು ತೀರಿಸಿ ಹೇಳಿದರು ಗಾಂಧೀಜೀ: 'ಅಲ್ಲ, ಸಂಗೀತಕ್ಕೆ ನಾನು ವಿರೋಧಿಯಾಗಬಲ್ಲೆನೇ? ಸಂಗೀತವಿಲ್ಲದೆ ಭಾರತದ ಧಾರ್ಮಿಕ ಜೀವನ ವಿಕಾಸಗೊಂಡೀತೆಂಬ ಕಲ್ಪನೆ ಕೂಡ ಮಾಡಲಾರೆನಲ್ಲ ನಾನು! ಸಂಗೀತ ಇದ್ದಂತೆ ಎಲ್ಲ ಕಲೆಗಳೂ ನನಗೆ ಇಷ್ಟವೇ. ಆದರೆ ಕಲೆಯ ಹೆಸರಿನಲ್ಲಿ ಈಗ ಪ್ರಪಂಚದ ಮುಂದೆ ಬರುವ ಅನೇಕ ಪದಾರ್ಥ ನನಗೆ ಸರಿಬರುವುದಿಲ್ಲ. ಅವನ್ನು ನಾನು ಅಗತ್ಯವಾಗಿ ವಿರೋಧಿಸುತ್ತೇವೆ. ಕಲೆಗೆ ಹೃದಯುವಿರಬೇಕು. ದಿಲೀಪ್! ಪ್ರಕೃತಿಯೇ ನನಗೆ ಸ್ಫೂರ್ತಿದಾಯಿ. ಬೇರಾವ ಸ್ಫೂರ್ತಿಯೂ ನನಗೆ ಬೇಡ. ಪ್ರಕೃತಿ ನನ್ನನ್ನು ಮುಗ್ಧನಾಗಿಸಿದಾಳೆ, ಬೆರಗಾಗಿಸಿದಾಳೆ, ನಿಮಿರಿಸಿದಾಳೆ. ಪ್ರಕೃತಿ ಎಂದೂ ನನ್ನನ್ನು ಕೈಬಿಟ್ಟಿಲ್ಲ. ಚಿಕ್ಕೆ ಚೆಲ್ಲಿದ ಈ ಬಾಂದಳದ ಆಶ್ಚರ್ಯಕರ ರಹಸ್ಯವನ್ನು ನೋಡು

ನೋಡುತ್ತ ನಾನು ಕಾಲಕಳೆದಿಲ್ಲವೆ? ಈ ಕಾಡು-ಕಡಲು, ಹೊಳೆ-ಮಲೆ, ಬಯಲು-ಕಣಿವೆ, ಹೊಲ-ನೆಲ ಇಲ್ಲವೆ ನನ್ನ ಚೆಲುವಿನ ಹಸಿವನ್ನು ಇಂಗಿಸಲು! ದೇವರ ಈ ಸೃಷ್ಟಿಯ ಮುಂದೆ ಮಾನವ ಶಿಲ್ಪ ಕಸ. ದಿಲೀಪ್! ನೀನೇ ಹೇಳು. ಪ್ರಕೃತಿ ಇಷ್ಟು ಸೊಬಗು ಸೊಗಸು ಚೆಲ್ಲುತ್ತಿರುವಾಗ ಕಲೆ ಆ ರೋಮಾಂಚವನ್ನು ಕೊಟ್ಟೀತೆ? ಸಾಧ್ಯವೆ?

ದಿಲೀಪಕುಮಾರನೆಂದ:—'ಕಲೆ ಜೀವನಕ್ಕಿಂತ ಹೆಚ್ಚಾದುದೆಂದು ನಾನೂ ಒಪ್ಪುವುದಿಲ್ಲ.'

ಗಾಂಧೀಜೀ ಮುಂದುವರಿಸಿದರು—'ಜೀವನವು ಸಮಸ್ತ ಕಲೆಗಳಿಗಿಂತ ಶ್ರೇಷ್ಠವಾದುದು. ಯಾರು ಉತ್ತಮ ರೀತಿಯಲ್ಲಿ ಬಾಳಬಲ್ಲನೋ ಅವನೇ ಉತ್ತಮ ಕಲೆಗಾರ. ಉತ್ತಮ ಜೀವನದ ತಳಹದಿಯಲ್ಲದೆ ಕಲಾಕೃತಿ ಆದೀತು ಹೇಗೆ? ಬಾಳನ್ನು ಹಸನು ಮಾಡುವುದು, ಮೇಲು ಮಟ್ಟಕ್ಕೆ ಏರಿಸುವುದೇ ಕಲೆಯ ಬೆಲೆ. ಜೀವನವೇ ಶ್ರೇಷ್ಠ ಕಲೆ. ಕಲೆ ವಿಶ್ವವನ್ನು ಜೀವನವನ್ನು ಅರಿತುಕೊಳ್ಳಬೇಕು. ನಾನು ನಿಷೇಧಿಸುವುದು ಕಲೆಯನ್ನಲ್ಲ; ಅದರ ಒಡಿವಾರವನ್ನು. ನನ್ನ ತಕ್ಕಡಿಯೇ ಬೇರೆ.

'ಬಾಳು ಮಹಾ ನಿಗೂಢ ರಹಸ್ಯ, ದೇವರು ಕೊಟ್ಟ ದಿವ್ಯದಾನ. ಅದನ್ನು ಒಂದು ಮೂಲೆಯಿಂದ ನೋಡಿ ಅದೇ ಸತ್ಯ ಎನ್ನಲಾರೆ.'

'ಋಷಿಯಾಗದವ ಕವಿಯಾಗಲಾರ' ಎಂದು ಹಿರಿಯರು ಹೇಳಿದಾರೆ. ಇಂದು ಗಾಂಧೀಜೀ ಅದನ್ನೇ ಮತ್ತೆ ಹೇಳುತ್ತಿದಾರೆ. ಕವಿಯಾಗುವವನು ಮೊದಲು ಋಷಿಯಾಗಬೇಕು. ಆಗ ನುಡಿಯಲ್ಲಿ ನುಡಿದೇವಿ ಮೂಡಿ ಬಂದಾಳು, ಆಡಿದುದೇ ಕಲೆ ಕಾವ್ಯವಾದೀತು. ಜೀವನವೇ ಒಂದು ರಸಕಾವ್ಯವಾದೀತು.

ಗಾಂಧೀಜೀ ಸ್ವತಃ ಅದಕ್ಕೊಂದು ಉದಾಹರಣೆ.

ಸಾಹಿತಿ ಗಾಂಧೀ

ಸೌಂದರ್ಯೋಪಾಸನೆಗೆ ಅನೇಕ ದಾರಿಗಳಿವೆ. ರಸಿಕಜೀವ ತನ್ನ ಒಳಗಿನ ಅನುಭವವನ್ನು ತುಳುಕಿಸುವ ಸಾಧನೆಗಳು ಅನಂತವಾಗಿವೆ. ತಾಳ ಕುಟ್ಟಿ ಗಂಟಲು ಹರಿದುಹೋಗುವ ಹಾಗೆ ಚೀರಿಕೊಳ್ಳುತ್ತ ಭಜನೆಮಾಡುವವರು ಒಂದು ಗುಂಪು. ಮಾತೇ ಬರದ ಮೂಕರ ಹಾಗೆ ಸದ್ದು ಆದರೆ ಸಿಡಿಲೇ ಬಂತೆಂದು ಹೆದರಿ ತಮ್ಮ ಉಸಿರೇ ತಮಗೆ ಕೇಳಿಸದ ಹಾಗೆ ನಿಶ್ಶಬ್ದವಾಗಿ ನಮಾಜು ಮಾಡುವವರು ಮತ್ತೊಂದು ಗುಂಪು. ಎರಡರಲ್ಲೂ ಒಂದೇ ಬಗೆಯ ತಲ್ಲೀನತೆಯ ಸಾಧನೆ. ಅದೇ ಸರಿ ಇದೇ ಸರಿ ಎಂದು ಹಟ ಹಿಡಿದರೆ ಆ ಸಾಧನೆಯ ನೋಟ ಮಸಕಾಗುತ್ತದೆ. ಆ ಹಟ ಸೌಂದರ್ಯೋಪಾಸನೆಯೆಂದರೆ ಸತ್ಯಾನ್ವೇಷಣೆ ಎಂಬ ಮಾತನ್ನು ಮರೆಯಿಸುತ್ತದೆ. ಅದರ ಮೇಲೆ ಒಂದು ತೆರೆಯನ್ನು ಹಾಕುತ್ತದೆ.

ಸತ್ಯಾನ್ವೇಷಣದ ದಾರಿಯಲ್ಲಿ ಹತ್ತಾರು ಕವಲು ಒಡೆದು ಬೇರೆ ಬೇರೆ ಪಂಥಗಳಾಗಿವೆ. ಸೌಂದರ್ಯೋಪಾಸನೆಯ ರೀತಿ ಬೇರೆ ಬೇರೆಯಾಗಿ ಹತ್ತೆಂಟು ಕಲೆಗಳಾಗಿವೆ. ಜಕಣಾಚಾರಿ ಡಂಕಣಾಚಾರಿಯರು ಕಲ್ಲಿನಲ್ಲಿ ಆ ಅನಂತ ಸೌಂದರ್ಯವನ್ನು ಹರಿಸಿದರು. ತ್ಯಾಗರಾಜ ತಾನಸೇನರಿಗೆ ನಾದದಲ್ಲಿ ಆ ದಾರಿ ಸಿಕ್ಕಿತು. ಕಾಲಿದಾಸ ಭವಭೂತಿಗಳು ಶಬ್ದಾರ್ಥದ ಕೃತಿಯಾದ ಸಾಹಿತ್ಯದಲ್ಲಿ ಆ ಚೆಲುವನ್ನು ಅರಸಿದರು. ಶರಣರ ಸತ್ಯಾನ್ವೇಷಣೆ ವಚನಗಳ ಸೊಬಗಿನ ರೂಪದಲ್ಲಿ ಮೂಡಿತು. ರಾಣಿ ಮೀರಾಬಾಯಿಯ ಸೌಂದರ್ಯೋಪಾಸನೆ ಭಕ್ತಿಯ ಸಾಕ್ಷಾತ್ಕಾರದ ಅನುಭವವನ್ನು ಕೊಟ್ಟಿತು. ಉದಯಶಂಕರನ ನಾಟ್ಯ, ರವೀಂದ್ರನ ಕಾವ್ಯ, ವೆಂಕಟಪ್ಪನ ಚಿತ್ರ, ವೀಣೆ ಶೇಷಣ್ಣನವರ ವೀಣಾವಾದನ ಎಲ್ಲಾ ಆ ರಸ ಸಮುದ್ರದ ಅಲೆಗಳು. ಎಲ್ಲವೂ ಕಲೆಯೇ, ಎಲ್ಲವೂ ಆ ನಿತ್ಯ ರಾಮಣೀಯಕತೆಯನ್ನು ಅನುಭವಿಸುವ ಯೋಗವೇ. ಆದುದರಿಂದಲೇ ಗಾಂಧೀಜೀ ಹೇಳಿದುದು: 'ಉತ್ತಮ ಜೀವನವೇ ಶ್ರೇಷ್ಠವಾದ ಕಲೆ.'

ರವೀಂದ್ರನಾಥ ಠಾಕೂರರು ಕೆಲವು ವರ್ಷಗಳ ಕೆಳಗೆ ಕವಿತೆಯ ಕೊಳಲನ್ನು ಬದಿಗಿಟ್ಟು ಕುಂಚ ಹಿಡಿದು ಜಗತ್ತನ್ನು ನಡುಗಿಸಿಬಿಟ್ಟರು. ಚಿತ್ತರಂಜನದಾಸರು 'ಆತ್ಮಗೀತೆ'ಯನ್ನು ಹಾಡಿ ಕಾವ್ಯಲೋಕದಲ್ಲಿ ವಿಹರಿಸಿದರು. ಆದರೆ ಜಗತ್ತು ಅವರನ್ನು ಚಿತ್ರಕಾರರೆಂದಾಗಲಿ ಇವರನ್ನು ಕವಿಯೆಂದಾಗಲಿ ತಿಳಿಯುವುದಿಲ್ಲ. ಯಾರಾದರೊಬ್ಬರು ರೈಲಿನ ಕೆಲಸದಲ್ಲಿದ್ದವರು ವಿಶ್ರಾಂತಿ ಪಡೆದು ಸುಖವಸತಿ ಮಾಡಿಕೊಂಡಿದ್ದಾಗಲೂ ಅವರು ಮಾಸ್ತರರೇ. ಊರ ಮುಂದಿನ ತೋಟ ದೇಸಾಯರ ಕೈಬಿಟ್ಟು ಮೂರು ತಲೆಮಾರು ಆಗಿದ್ದರೂ ಅದು ದೇಸಾಯರ ತೋಟವೇ. ಹೆಚ್ಚು ಚಿಕಿತ್ಸೆಗೆ ಹೋಗುವುದಿಲ್ಲ ಜನ. ಒಂದು ಹೆದ್ದಾರಿ ಹಿಡಿದು ಸಾಗತ್ತಾರೆ.

ಗಾಂಧೀಜೀ ಉತ್ತಮ ಸಾಹಿತಿ ಎಂದರೆ ಜನರಿಗೆ ರವೀಂದ್ರರು ಚಿತ್ರಕಾರರು, ದಾಸರು ಕವಿ ಎಂದಷ್ಟೇ ಬೆರಗು ಆಗುತ್ತದೆ. ಅವರ ರಾಜಕಾರಣ ತ್ರಿವಿಕ್ರಮನ ಪಾದದಂತೆ ಬೆಳೆದು ಇಡೀ ಜೀವನವನ್ನೇ ಕವಿದಿದೆ. ಆ ಬಣ್ಣದ ತೆರೆಯ ಹಿಂದೆ ಗಾಂಧೀಜಿಯ ವ್ಯಕ್ತಿತ್ವದ ಉಳಿದ ಗೆರೆಗಳು ಮುಚ್ಚಿಹೋಗಿವೆ. ಜನರ ಕಣ್ಣಿಗೆ ಸಾಧಾರಣವಾಗಿ ಅವರ ರಾಜಕೀಯ ವಿನಾ ಉಳಿದುದು ಏನೂ ಕಾಣದು. ದೇಸಾಯರ ತೋಟದ ಕತೆಯಿದ್ದಂತೆಯೆ ಇದು.

ಗಾಂಧೀಜೀ ಸತ್ಯಾನ್ವೇಷಿಗಳು. ಸತ್ಯಶಕ್ತಿಯನ್ನು ಬೆಳೆಸಿ ತಮ್ಮ ಬಾಳಿನ ಎಲ್ಲ ಕ್ಷೇತ್ರಗಳಲ್ಲೂ ಅದನ್ನು ಹರಿಯಿಸುತ್ತಾರೆ. ಆ ಶಕ್ತಿಗೆ, ಆ ಸತ್ಯಕ್ಕೆ ಒಂದು ಬಗೆಯ ಚೆಲುವು ಇದೆ. ಆ ಚೆಲುವು ಗಾಂಧೀಜಿಯ ಕರ್ಮಮಾರ್ಗದಲ್ಲಿ ಸಾಹಿತ್ಯವಾಗಿ ರೂಪುಗೊಂಡಿದೆ. ಆದರೆ ಆ ಸಾಹಿತ್ಯ ಮನೋರಂಜನೆಗಾಗಿ ಗೀಚಿಹಾಕಿದ ಕಲಾಕೃತಿಯಲ್ಲ. ಕಲ್ಪನೆಯ ರೆಕ್ಕೆಗುದುರೆಯನ್ನೇರಿ ಹೋಗಿ ನವರತ್ನಗಳಿಂದ ಕೆತ್ತಿದ ಅರಮನೆಯಲ್ಲಿ ದೇವಲೋಕದ ಅಪ್ಸರೆಯರನ್ನು ಕಾಣುವ ಕವಿಕರ್ಮವೂ ಅವರಲ್ಲಿಲ್ಲ. 'ಅಯ್ಯಾ ಎಂದೊಡೆ ಸ್ವರ್ಗ; ಎಲವೋ ಎಂದೊಡೆ ನರಕ' ಎಂದು ಬಸವೇಶ್ವರ ಅಂದಾಗ ಸೊಗಸಾದ ನುಡಿಯನ್ನು ಆಡಬೇಕೆಂಬ ಪ್ರಯತ್ನವಿಲ್ಲ. ಆ ಭಾವ ಸತ್ಯವಾದುದು. ಅದನ್ನು ಆಡಿದಾಗ ಅದು ಅಂದವಾಗಿಯೆ ಹೊರಗೆ ಹರಿಯಿತು.

My wife moves me as no other woman in the world can.

Not that she has no faults. Even so I feel for and about Hinduism with all its faults and limitations. (ನನ್ನ ಹೆಂಡತಿಯ ಹಾಗೆ ನನ್ನನ್ನು ಮಿಡಿಯಬಲ್ಲ ಹೆಣ್ಣು ಈ ಜಗತ್ತಿನಲ್ಲಿ ಯಾರೂ ಇಲ್ಲ. ಆಕೆಯಲ್ಲಿ ದೋಷಗಳಿಲ್ಲವೆಂದಲ್ಲ. ಹಿಂದೂಧರ್ಮದ ಬಗ್ಗೆ ನನಗೆ ಅದೇ ತರದ ಭಾವನೆ ಇದೆ; ಅದರಲ್ಲಿ ತಪ್ಪಿರಲಿ ಕುಂದಿರಲಿ.) ಎಂದಾಗ ಗಾಂಧೀಜಿಯ ಮನಸ್ಸಿನಲ್ಲಿ ಸೊಗಸಾದ ಹೋಲಿಕೆಯೊಂದನ್ನು ಕೊಟ್ಟು ಹಿಂದೂಧರ್ಮದಲ್ಲಿ ತಮಗೆ ಇರುವ ಶ್ರದ್ಧೆಯನ್ನು ತೋರಿಸಬೇಕೆಂದಿರಲಿಲ್ಲ. ಅನುಭವದಲ್ಲಿ ಒಂದು ಭಾವ ಸಹಜವಾಗಿ ಮೂಡಿತ್ತು. ಅದೇ ಹೀಗೆ ಪ್ರಕಟವಾಯಿತು. The Cow is a poem of pity (ಗೋಮಾತೆ ಕರುಣೆಯ ಗೀತೆ) ಎಂದು ಒಮ್ಮೆ ಗಾಂಧೀಜೀ ಹೇಳಿದರು. ಆಗಲೂ ಅಷ್ಟೆ; ಮೂಕಜಂತುಗಳೂ ತಾನೂ ಒಂದೇ ನಾಟಕದ ಎರಡು ವೇಷ ಎಂಬ ಅನುಭವದ ವಚನ.

ಸಾಹಿತ್ಯಕ್ಕಾಗಲಿ, ಚಿತ್ರಕ್ಕಾಗಲಿ, ನಾಟ್ಯಕ್ಕಾಗಲಿ, ಗಾನಕ್ಕಾಗಲಿ ಎಲ್ಲಕ್ಕೂ ಆಧಾರ, ಸಹಜವಾದ ಭಾವ. ಅದು ಅನುಭವದಿಂದ ಬರತಕ್ಕದ್ದು. ಆ ಭಾವ ಎಷ್ಟೆಷ್ಟರಮಟ್ಟಿಗೆ ಸ್ವಾನುಭವದಿಂದ ಬಂದುದೋ ಅಷ್ಟಷ್ಟು ಮಟ್ಟಿಗೆ ಅದರ ಹರಿತ ಹೆಚ್ಚಾಗುತ್ತದೆ. ಸಾಧಾರಣವಾಗಿ ನಾವು ಇತರರ ಅಭಿಪ್ರಾಯಗಳನ್ನೇ ಅನುಸರಿಸುತ್ತೇವೆ. ನಾವೇ ಪರಿಶೋಧಿಸಿ ತಿಳಿದುಕೊಂಡವು ಕಡಮೆ. ಆದರೆ ಭಾವ ಸಹಜವಾದಂತೆ ಅದರಲ್ಲಿ ಸತ್ಯ ಮೂಡಿದಂತೆ ಭಾಷೆಗೊಂದು ಬಿಗಿ, ಬಲ ಬರುತ್ತದೆ. ಅಂದ ಕವಿತೆಗೂ ಬಂದ ಕವಿತೆಗೂ ಇರುವ ಭೇದ ಇದೇ. ಒಂದು ಬಣ್ಣ ತೊಡೆದು ತುಟಿಗೆಂಪು ಸವರಿಕೊಂಡ ಕೃತ್ರಿಮ ಲಾವಣ್ಯದ ಸಿನಿಮಾ ನಟಿಯಂತೆ. ಇನ್ನೊಂದು ಸಹಜ ಸೌಂದರ್ಯದ ಮುಗ್ಧ ಬಾಲೆಯಂತೆ. ಗಾಂಧೀಜಿಯ ಸಾಹಿತ್ಯ ಅಕೃತ್ರಿಮವಾದುದು. ಎಂತಲೇ ಅದರಲ್ಲಿ ಒಂದು ಬಿಗಿಯಿದೆ. ಒಂದು ಶಕ್ತಿಯಿದೆ.

ಗಾಂಧೀಜೀ ಗುಜರಾತಿ ಹಿಂದೀ ಇಂಗ್ಲೀಷು ಭಾಷೆಗಳಲ್ಲಿ ಬರೆದಿದಾರೆ. ಈ ಮೂರು ಭಾಷೆಗಳಲ್ಲಿ ಮಾತು ಆಡಿದಾರೆ. ಈ ಎರಡೂ ರೀತಿಯಲ್ಲಿ ಈ ಮೂರೂ ಭಾಷೆಯ ಸಾಹಿತ್ಯವನ್ನು ಬೆಳೆಸಿದಾರೆ. ಇಂಗ್ಲೀಷು ನಮ್ಮ ನುಡಿಯಲ್ಲ. ನಾವು ಆವರ ಭಾಷೆಗೆ ಕೊಡಬಹುದಾದ ಮುಡಿಪು, ಸಲ್ಲಿಸಬಹುದಾದ ಸೇವೆ ಬಹಳ ಕಡಮೆ. ಆದರೆ ಗಾಂಧೀಜೀ ಇಂಗ್ಲೀಷಿಗೆ

ತೊಡಿಸಿದ ಒಡವೆ ಸಾಧಾರಣವಾದುದಲ್ಲ. ಮೊದಲು ' ಯಂಗ್ ಇಂಡಿಯ ' ಈಗ 'ಹರಿಜನ'—ಇವೆರಡು ಪತ್ರಿಕೆಗಳ ಮೂಲಕ ವಾರವಾರವೂ ತಮ್ಮ ಅಭಿಪ್ರಾಯಗಳನ್ನು ಗಾಂಧೀಜೀ ಇಂಗ್ಲೀಷಿನಲ್ಲಿ ಪ್ರಕಟಿಸಿದಾರೆ. ಇಪ್ಪತ್ತು ವರುಷಗಳಿಂದ ಅಖಂಡವಾಗಿ ಈ ಕೆಲಸ ನಡೆದಿದೆ. ಅದರಿಂದ ವಿಪುಲ ವಾದ ಸಾಹಿತ್ಯ ಬೆಳೆದುಹೋಗಿದೆ. ಆ ಸಾಹಿತ್ಯಕ್ಕೆ ಇಂಗ್ಲೀಷು ನುಡಿಯಲ್ಲಿ ಕೊನೆತನಕ ಬಾಳುವ ಸ್ಥಾನವಿದೆ.

ಇಂಗ್ಲೀಷು ಬಲ್ಲ ನಮ್ಮ ನಾಡಿನ ಜನ ಗಾಂಧೀಜಿಯ ಈ ಸಾಪ್ತಾಹಿಕ ಸಾಹಿತ್ಯವನ್ನು ಶ್ರದ್ಧೆಯಿಂದ ಓದುವುದು ಸಹಜ. ಇವರಿಗೆ ಆ ಬರೆಹದಲ್ಲಿ ಒಂದು ಬೆಳಕಿದೆ, ಒಂದು ದಾರಿ ತೆರೆಯುತ್ತದೆ. ಅನೇಕ ಜನ ಇಂಗ್ಲೀಷರು ಅಷ್ಟೇ ಶ್ರದ್ಧೆಯಿಂದ–ಇನ್ನೂ ಹೆಚ್ಚು ಶ್ರದ್ಧೆಯಿಂದ ಓದುತ್ತಾರೆ. ಅವರಲ್ಲೂ ಇತರ ಪಡುವಲ ಜನರಲ್ಲೂ ಗಾಂಧೀಜಿಯ ಬರವಣಿಗೆಗೆ ಒಳ್ಳೆಯ ಗೌರವವಿದೆ. ಆ ಭಾಷೆಯ ಮೇಲೆ ಗಾಂಧೀಜಿಗೆ ಇರುವ ಹಿಡಿತ ಬಲವಾದುದು. ಇಂಗ್ಲೀಷು ಭಾಷೆಯ ನುಡಿಗಟ್ಟು ಸುಲಭವಾಗಿ ಅರಗಿಸಿಕೊಳ್ಳಬಹುದಾದುದಲ್ಲ. ಅದರ ನುಡಿಕಾರ ವಿಲಕ್ಷಣವಾದುದು. ಗಾಂಧೀಜಿಗೆ ಅದರ ಸೂಕ್ಷ್ಮಗಳೆಲ್ಲ ಕೈವಶವಾಗಿವೆ ಎಂದು ಇಂಗ್ಲೀಷು ಸಾಹಿತಿಗಳು ಒಪ್ಪಿಕೊಂಡಿದಾರೆ. ಎಷ್ಟೋ ಜನ ಇಂಗ್ಲೀಷು ಓದುಗರು ಹರಿಜನ ಪತ್ರಿಕೆಗಾಗಿ ಕಾದಿರುತ್ತಾರೆ. ಅವರಿಗೆ ಆ ದೇಶದ ಸಂಸ್ಕೃತಿಯಲ್ಲಿ ಸಾಕಷ್ಟು ಶಾಂತಿ ಸಿಗುವುದಿಲ್ಲ. ' ಹರಿಜನ ಪತ್ರಿಕೆ ಬಂದರೆ ನೀರಿಲ್ಲದೆ ಸೆಕೆಯಿಂದ ಬಾಯಾರುವ ಸೀಮೆಯಲ್ಲಿ ತಿಳಿಯಾದ ನೀರು ಕುಡಿಯಲು ಸಿಕ್ಕಂತೆ ಅನಿಸುತ್ತದೆ ' ಎಂದು ಒಬ್ಬ ಇಂಗ್ಲೀಷು ಹೆಂಗಸು ಬರೆದಿದಾಳೆ. ಸತ್ಯಾನ್ವೇಷಿಗಳಿಗೆ ಪಡುವಲ ನಾಡು ಬರಬರುತ್ತ ಮರಳುಗಾಡಾಗುತ್ತಿದೆ. ಹಿಂಸೆ, ದ್ವೇಷ, ಲೂಟಿ, ಸುಲಿಗೆಗಳು ತತ್ವಗಳ ವೇಷ ಹಾಕಿಕೊಂಡು ಜನರನ್ನು ಮೋಸದಿಂದ ಅಡ್ಡದಾರಿಗೆ ಎಳೆಯುತ್ತಿವೆ. ಒಂದು ಕಡೆ ಕತ್ತಿಯ ಝಳಪು. ಇನ್ನೊಂದು ಕಡೆ ಯಂತ್ರದ ಗಾಲಿಯ ಕುಯಿಲು, ಎರಡರ ನಡುವೆ ಜನ ದಿಕ್ಕುಗಾಣದೆ ಹೋಗಿದಾರೆ. ಈ ಮರಳುಗಾಡಿನಲ್ಲಿ ಅಲೆಯುವ ಅನೇಕ ಜೀವಿಗಳಿಗೆ ಗಾಂಧೀ ಸಾಹಿತ್ಯ ಒಂದು ತಿಳಿನೀರಿನ ಚಿಲುಮೆ. ' ಹರಿಜನ ಪತ್ರಿಕೆಯಲ್ಲಿ ಗಾಂಧೀಜಿಯ ಬರೆಹವನ್ನು ಓದಿದರೆ

ಈ ಜಗತ್ತಿನ ಅರ್ಥವಿಲ್ಲದ ಗಲಭೆ ಗೊಂದಲಗಳ ಸದ್ದಿನಿಂದ ಮುಕ್ತರಾಗಿ ನಿರ್ಮಲವಾದ ಶುದ್ಧವಾದ ಗಾಳಿಯಲ್ಲಿ ಮೇಲೇರಿದಂತೆ ಆಗುತ್ತದೆ. ಏಕೆ ಗೊತ್ತೆ? ವಾದವಿವಾದದ ಜಗಳದ ಕೆಸರು, ಹೊಡೆದಾಟದ ಧೂಳು ಅಲ್ಲಿ ನಮ್ಮ ದೃಷ್ಟಿಗೆ ಅಡ್ಡಬಾರವು. ಎಲ್ಲವೂ ತಿಳಿಯಾಗಿ ಕಾಣುತ್ತದೆ. ಅಲ್ಲಿ ಶುದ್ಧವಾದ ಗಾಳಿ ಸಿಗುವುದು ಏಕೆ ಗೊತ್ತೆ? ಪೂರ್ಣವಾದ ಸತ್ಯಸಂಧತೆ ಯಿಂದ ಪ್ರೇರಿಸಲ್ಪಟ್ಟ ಮಾತು ಅವು.' ಆ ಸತ್ಯಪ್ರಿಯತೆ ಆ ಪ್ರಾಮಾಣಿಕ ತನದಲ್ಲಿ ಸ್ವರ್ಗದ ಸೌರಭವಿದೆ. 'ಅದು ದೇವಲೋಕದ ಸವಿಯುಸಿರು.'

ಹೀಗೆ ಹೇಳಿದಾಗ ಡಾಕ್ಟರ್ ಮಾಡ್ ರಾಯ್‌ಡನ್ ಗಾಂಧೀಜಿಯ ಸಾಹಿತ್ಯದ ಬಗ್ಗೆ ಹೇಳಬಹುದಾದುದು ಎಲ್ಲವನ್ನೂ ಸಂಗ್ರಹವಾಗಿ ನಾಲ್ಕೇ ವಾಕ್ಯಗಳಲ್ಲಿ ಹೇಳಿದಳು. ಭೋಗದ ಬಯಕೆಯಲ್ಲಿ, ವಿಷಯದ ಸೆಳೆತದಲ್ಲಿ ಮುಳುಗಿ ಮಾನವಜಾತಿಯ ಸಾಹಿತ್ಯ ಕೆಲವು ಕಾಲದಿಂದ ಹೊಲಸಾಗಿದೆ. ಸತ್ಯವನ್ನು ತಿಳಿಯಲೂ ಜನರಿಗೆ ತಿಳಿಸಲೂ ಸಾಹಿತ್ಯದ ಹಾಗೆ ಬಲವಾದ ಸಾಧನೆ ಮತ್ತೊಂದಿಲ್ಲ. ಸತ್ಯಕರ್ಮದಿಂದ ಆ ಪ್ರಚಾರ ನಡೆಯುತ್ತದೆ. ನಿಜ. ಆದರೆ ಅಂಥ ಕೃತ್ಯ ಪದೇಪದೇ ನಡೆಯುವುದು ಸಾಧ್ಯವಲ್ಲವೆಂದೋ ಏನೋ ಜನ ಅದನ್ನು ಸಾಹಿತ್ಯದಲ್ಲಿ ಹೆಣೆದುಕೊಂಡು ಶಾಶ್ವತವಾಗಿ ತಮ್ಮ ಕಣ್ಣೆದುರಿಗೆ ಇರುವಂತೆ ಮಾಡಿಕೊಳ್ಳುತ್ತಾರೆ. ಇಂದ್ರಿಯಗಳ ಇಂದ್ರ ಜಾಲದಲ್ಲಿ ಸಿಕ್ಕಿಕೊಂಡು ಸಾಹಿತ್ಯ ಭ್ರಾಂತಿಯನ್ನೇ ನಿಜವೆಂದು ನಂಬಿ ಕೊಂಡಿದೆ. ಎತ್ತ ತಿರುಗಿದರೂ ಆ ನಾತವೇ ಮೂಗಿಗೆ ಬಡಿಯುತ್ತಿರು ವಾಗ ಗಾಂಧೀಜೀ ಸಾಹಿತ್ಯದಲ್ಲಿ ಸತ್ಯವನ್ನು ನುಸುಳಿಸಿದರು. ಆ ಮಾಯಾ ಸಂಸ್ಕೃತಿಯನ್ನು ಕತ್ತರಿಸಿ ಸಾಹಿತ್ಯದಲ್ಲಿ ಸತ್ಯಸಂಸ್ಥಾಪನೆ ಮಾಡಿದಾರೆ ಗಾಂಧೀಜೀ.

ಸತ್ಯಕ್ಕಿಂತ ಮೇಲಾದ ಧರ್ಮವಿಲ್ಲ, ಧರ್ಮಕ್ಕಿಂತ ಮೇಲಾದ ಬಾಳು ಇಲ್ಲ ಎನ್ನುವ ಕಾಲಕಳೆದು ದುಡ್ಡಿದ್ದವನೇ ದೊಡ್ಡಪ್ಪ, ದೊಣ್ಣೆಯೇ ದೊರೆ ಎಂಬ ಕಾಲ ಬಂದಿದೆ. ದುಡ್ಡು ಗಳಿಸುವುದೇ ಧರ್ಮವೆಂದು ಉಪದೇಶ ಮಾಡಿ ಅರ್ಥಶಾಸ್ತ್ರ ಪಂಡಿತರು ಮನುಷ್ಯನ ದುರಾಶೆಯ ಹೊಳೆಗೆ ಕಟ್ಟಿದ್ದ ನಿಗ್ರಹದ ಅಣೆಕಟ್ಟನ್ನು ಒಡೆದುಬಿಟ್ಟರು. ಹಿಂದಿನ ಕವಿಗಳು ಕನಸಿನಲ್ಲಿ ಕಂಡಿದ್ದ ಗಂಧರ್ವಲೋಕವನ್ನು ಮನುಷ್ಯ ಭೂಮಿಯ ಮೇಲೆ

ಕಟ್ಟತೊಡಗಿದ. ಅಲ್ಲಲ್ಲಿ ಬಂಗಾರದ ಬೆಟ್ಟ ಬೆಳೆದವು; ಕೈಗೆ ಸಿಕ್ಕಷ್ಟು ಬಾಚಿಕೊಳ್ಳೋಣವೆಂಬ ತತ್ವ ಹುಟ್ಟಿ ಬಲಿಷ್ಠರಾದವರು ಅವಕ್ಕೆ ತಕ್ಕ ನಿಯಮಗಳನ್ನು ರಚಿಸಿಕೊಂಡರು. ಈ ವಸ್ತುಸಂಗ್ರಹ ಬುದ್ಧಿಯನ್ನು ಅಲ್ಲಲ್ಲಿ ಕೆಲವರು ತಪ್ಪು ಎಂದರು. ಪ್ರಪಂಚದಲ್ಲಿ ಅನ್ಯಾಯ ತುಂಬಿ ದ್ವೇಷದ ಗಾಳಿ ಹರಡಿತು.

ಭೂಮಿಯು ಉಸಿರಿದ್ದ ಒಡಲು. ಆ ಜೀವ ಮಿದುವಾದ ಹೆಣ್ಣು ಜೀವ ಎಂಬ ಸವಿಯಾದ ತಿಳಿವು ಜನರಲ್ಲಿ ಹರಡಿ ಹಿಂದಿನ ಕಾಲದಲ್ಲಿ ಜೀವಾದ್ವೈತಕ್ಕೆ ಅವಕಾಶ ಕೊಟ್ಟಿತ್ತು. ನಾವೆಲ್ಲ ಭೂಮಿತಾಯಿಯ ಸಂತಾನ; ಬದುಕಿದ್ದಷ್ಟು ದಿನ ಒಬ್ಬರಿಗೊಬ್ಬರು ಹಿತವಾಗಿ ಬಾಳೋಣ ಎಂಬ ಬುದ್ಧಿ ಇತ್ತು. ಸ್ವರ್ಗವನ್ನೇ ಇಲ್ಲಿ ಕಟ್ಟಬಯಸಿ, ಕೊಂಚ ಮಟ್ಟಿಗೆ ಕಟ್ಟಿಯೂ ಕಟ್ಟಿದ ಈಗಿನ ಜನ ಭೂಲೋಕದ ಸಮರಸದ ಆನಂದ ವನ್ನು ಮಾತ್ರ ಪಾತಾಳಕ್ಕೆ ಒಗೆದರು. ಇಲ್ಲಿಗೆ ಇಳಿದ ಸ್ವರ್ಗದ ಭಾರಕ್ಕೇ ಅದು ಕುಸಿದುಹೋಯಿತೋ ಏನೋ. ಯಾವುದೋ ಒಂದು ದೇಶದಲ್ಲಿ ಆಶೆಬುರುಕನಾದ ದೊರೆ ಒಬ್ಬನಿದ್ದನಂತೆ. ಅವನಿಗೆ ಐಶ್ವರ್ಯದ ಮೇಲೆ ಬಹಳ ಆಸೆ. ಮುಟ್ಟಿದ್ದೆಲ್ಲ ಬಂಗಾರವಾಗಿ ಬಿಟ್ಟರೆ ತನಗೆ ಬೇಕಾದಷ್ಟು ಸಂಪತ್ತು ಆದೀತು ಎಂದು ಅವನ ಯೋಚನೆ ಹೇಗೋ ಹಾಗೆ ತಪಸ್ಸು ಮಾಡಿ ಅಂಥ ವರವನ್ನೂ ಪಡೆದ. ಮುಟ್ಟಿದ್ದೆಲ್ಲ ಬೂದಿಯಾಗಲಿ ಎಂದು ವರ ಕೇಳಿ ಇವನ ಗುರು ಒಬ್ಬ ಭಸ್ಮಾಸುರನಾಗಿದ್ದ. ಇವನು ಸ್ವರ್ಣಾಸುರನಾದ. ಮುಟ್ಟಿದ್ದೆಲ್ಲ ಬಂಗಾರವಾಗುತ್ತಿದ್ದುದನ್ನು ನೋಡಿ ಆಸೆ ತಗ್ಗಲಿಲ್ಲ; ಬೆಳೆ ಯಿತು. ತನ್ನ ಮಗಳನ್ನೇ ಮುಟ್ಟಿದ. ಆ ಮಗು ಕೂಡಲೆ ಅಪರಂಜಿ ಚಿನ್ನದ ಗೊಂಬೆಯಾಯಿತು. ಆ ಹಿಗ್ಗಿನಲ್ಲಿ ಮಗುವಿನ ಹೊಳ್ಳೆ ಉಸಿರಾಡ ಲಾರದಷ್ಟು ಗಟ್ಟಿಯಾಗಿ ಹೋದವೆಂಬುದು ಒಡನೆಯೇ ತಿಳಿಯಲಿಲ್ಲ. ತಬ್ಬಿಕೊಂಡು ನೋಡಿದ. ಮಗು ಬಂಗಾರವಾಯಿತಾಗಲಿ ಅದರ ಜೀವ ಇಂಗಿಹೋಗಿತ್ತು. ತನ್ನ ಆಸೆಯ ಕನಸನ್ನು ಸಾಧಿಸಲು ಹೋಗಿ ಅನು ಭವದ ಸತ್ಯವನ್ನೇ ಕಳೆದುಕೊಂಡ. ಮಾನವಜಾತಿಯ ಪಾಡು ಈಗ ಹಾಗೇ ಆಗಿದೆ.

ಈ ಬೆಳಕು ಕತ್ತಲೆಗಳ ಕದನದಲ್ಲಿ—ದೇವಾಸುರ ಮಥನದಲ್ಲಿ—

ಮೊದಲು ಹುಟ್ಟಿದುದು ಅರ್ಥವಾದದ ವಿಷ. ಈ ವಿಷದ ಬಟ್ಟಲು ಬಂಗಾರದ್ದು. ಅದರ ಹೊಳಪಿನಲ್ಲಿ ಕಂಡುಬಂದದ್ದು ನಾಗರಿಕತೆ. ಬಟ್ಟಲು ತಂದ ಕೈಯುಗುರಿಗೆ ಸೆಳೆ ಸಳೆಯುವ ಕೆಂಪು ತೊಡೆದಿದೆ. ಕೊನೆಗೆ ಹುಟ್ಟಿದುದು ಅಮೃತಹಸ್ತನಾದ ಧನ್ವಂತರಿ ಗಾಂಧೀಜೀ. ಅರ್ಥವೂ ಕಾಮವೂ ಕನಸಿಗೆ ಕೈಯೊಡ್ಡಿ ಇದ್ದುದನ್ನು ಕಳೆದುಕೊಳ್ಳುವ ಹುಚ್ಚುತನದ ಜೂಜು. ಧರ್ಮದ ಕಲ್ಲಿನಮೇಲೆ ಮಾನವ ಜೀವನದ ಮನೆ ಕಟ್ಟಬೇಕು. ಅರ್ಥ ಕಾಮದ ಮಳಲಿನಲ್ಲಿ ಕಟ್ಟಬಾರದು. ಆ ಧರ್ಮ ಬೇರೆ ಯಾವುದೂ ಅಲ್ಲ, ಸತ್ಯ ಎಂದು ಗಾಂಧೀಜೀ ಕೈಯೆತ್ತಿ ಕೂಗಿ ಹೇಳುತ್ತಿದಾರೆ.

ಸತ್ಯ–ಧರ್ಮ ಮಳೆನೀರು ಇದ್ದಂತೆ. ಕಲ್ಲಿನ ಮೇಲೆ ಸುರಿದರೂ ಕೆಳಗಿಳಿದು ಹೊಲದಲ್ಲಿ ಹರಿದು ಬೀಜಕ್ಕೆ ಪ್ರಾಣಕೊಟ್ಟೀತು. ಸತ್ಯಸಂಧ ನಾದ ಜೀವಿ ಒಬ್ಬನೇ ಆದರೂ ಸಾಕು; ಚತುರಂಗ ಬಲವೂ ಅವನೇ ಎನ್ನುತ್ತಾರೆ ಗಾಂಧೀಜೀ. ನಿಗ್ರಹ ನಿಯಮಜ್ಞಾನದಿಂದ ಕೂಡಿ ಲೋಕ ಸಂಗ್ರಹ ನಿರತರಾದ ಸಾಧಕರ ಗುಂಪು ಒಂದು ಬೆಳೆಯಬೇಕಾಗಿದೆ. ಅಂಥ ತಪಸ್ವಿಗಳು ಹತ್ತೇ ಜನರಾದರೂ ಮಾನವ ಕುಲವನ್ನೇ ಉದ್ಧಾರ ಮಾಡಿಯಾರು. ಆಗ ಸತ್ಯಕ್ಕೆ ಜಯವಾದೀತು; ಧರ್ಮಕ್ಕೆ ನೆಲೆ ಯಾದೀತು.

ಗಾಂಧೀಜೀ ಹೀಗೆಂದು ಧರ್ಮಯುದ್ಧವನ್ನು ಹೂಡಿದಾರೆ. ಅವರು ಈ ಕಾಳಗದಲ್ಲಿ ಗೆಲ್ಲಲಿ ಸೋಲಲಿ; ಹೊಸದೊಂದು ಯುದ್ಧನೀತಿ ಜಗತ್ತಿಗೆ ದಾನ ಬಂತು. ಸತ್ಯಾಗ್ರಹವು ಆ ನೀತಿ; ಅಹಿಂಸೆ ಸತ್ಯಗಳು ಅದರ ಅಸ್ತ್ರ ಶಸ್ತ್ರ; ಅಸಹಕಾರ ಅದರ ವ್ಯೂಹ; ಪರಾಜಯವಲ್ಲ ಅದರ ಫಲ, ಪರಿ ವರ್ತನೆ. ಜೀವಾದ್ವೈತವನ್ನು ನಂಬಿ ಮಾನವ ಜೀವನದ ಪವಿತ್ರ ಧ್ಯೇಯ ಗಳಲ್ಲೆಲ್ಲ ಶ್ರದ್ಧೆಯುಳ್ಳ ಜನರಿಗೆ ಅದೊಂದು ಸತ್ಯಪಥ–ನಿತ್ಯಪಥ. ಹಿಂಸೆ ಯಿಂದ ಹುಲಿಯನ್ನೂ ಹಿಡಿಯಬಹುದು. ಅದನ್ನು ಬೋನಿನೊಳಗ ಹಾಕಬಹುದು. ಅದರ ಗುಣ ಬದಲಾಯಿಸಲಾದೀತೆ? ಹಿಂಸೆಗೆ ಎದೆ ಬಿರಿದೀತು, ಕರಗದು. ಪ್ರೇಮಕ್ಕೇ ಅದು ಸಾಧ್ಯ. ನಿಶ್ಚಲ ಪ್ರೇಮಕ್ಕೆ ಕರಗದುದು ಯಾವುದೂ ಇಲ್ಲ.

ಈ ಹಿನ್ನೆಲೆಯನ್ನು ನೆನಪು ಮಾಡಿಕೊಳ್ಳದಿದ್ದರೆ ಗಾಂಧೀ ಸಾಹಿತ್ಯ

ಒಂದು ಸ್ವತಂತ್ರತೆ ತೋರಿಸಿದಾರೆ ಗಾಂಧೀಜೀ. ಸಾಹಿತ್ಯದಲ್ಲೂ ಅಷ್ಟೆ. ಕೀರ್ತಿಗಾಗಿ ಕಾವ್ಯ ಬರೆದವರು ಕೆಲವರಾದರೆ, ಹಣ ಗಳಿಸುವದಕ್ಕಾಗಿ ಕೆಲವರು. ಹೀಗೆ ಕೀರ್ತಿ–ಲಾಭಗಳಿಗಾಗಿ ಸಾಹಿತ್ಯಕ್ಕೆ ಕೈಹಾಕುವದು ಸರಿಯೆಂದು ನಮ್ಮವರು ಸಿದ್ಧಾಂತವನ್ನೇ ಮಾಡಿಬಿಟ್ಟರು. 'ಕಾವ್ಯಂ ಯಶಸೇ ಅರ್ಥಕೃತೇ' ಎಂದರು. ಕೀರ್ತಿ ಕೊಡುವವರು ಪಂಡಿತರು, ಹಣ ಕೊಡುವವರು ರಾಜರು. ಇವರಿಬ್ಬರು ಮೆಚ್ಚಿದುದೇ ಕಾವ್ಯ. ಇಂಥ ಕಾವ್ಯ 'ರಮಣೀಯಾರ್ಥ'ವನ್ನು ಪ್ರತಿಪಾದಿಸಲೇಬೇಕು ತಾನೆ. ಆ ರಮಣೀಯಾರ್ಥ ದೊರೆ ಪಂಡಿತರ ಅಭಿರುಚಿಗೆ ಅನುಕೂಲವಾಗಿರದಿದ್ದರೆ ಕಾವ್ಯಕ್ಕೆ ಮೆಚ್ಚುಗೆ ಸಿಗಬೇಕು ಹೇಗೆ? ಅದರಲ್ಲೂ ಪಂಡಿತರು ಮೆಚ್ಚಿದರೆ ಗಾಳಿಗೆ ಹಾರಿಹೋಗುವ ಒಣ ಕೀರ್ತಿ. ಮುಖ್ಯವಾಗಿ ದೊರೆ ಮೆಚ್ಚಬೇಕು. ಆತನ ಅಭಿರುಚಿಗೆ ತೃಪ್ತಿಯೊದಗಿಸಬೇಕು. ಸಾಹಿತ್ಯ ಈ ಹಾದಿಯಲ್ಲಿ ನಡೆದು ಎಲ್ಲಿಗೆ ಮುಟ್ಟಿದೆಯೆಂದರೆ ನಮ್ಮ ನಾಟಕದಲ್ಲಿ ಧರ್ಮವಾಗಿ ಮಾಡಿಕೊಂಡ ಹೆಂಡತಿಯ ಹಾಗೆ, ಅಷ್ಟೇ ಗೌರವದಿಂದ ಪಕ್ಕದ ಮನೆಯಾತನ ಹೆಂಡತಿಯೂ ಸೂಳೆಯೂ ನಾಯಿಕೆಯಾಗಬಹುದಾಯಿತು. ಸ್ವೀಯೆ, ಪರಕೀಯೆ, ವೇಶ್ಯೆ – ಈ ಮೂವರಿಗೆ ನಾಟಕ ಸಮಾನ ಸ್ಥಾನವನ್ನು ಕೊಟ್ಟಿತು. ಇದಿರಲಿ.

ಇನ್ನೂ ಒಂದು ಬಗೆಯ ಕಾವ್ಯಸೃಷ್ಟಿ ಪ್ರಪಂಚದಲ್ಲಿ ಆಗಿದೆ. ಬಾಳಿನಲ್ಲಿ ನಮಗೆ ಅನುಭವವಾದ ಆನಂದ ದುಃಖಗಳನ್ನು ಹಾಗೇ ಅರಗಿಸಿಕೊಳ್ಳದೆ ನಾವು ನೆರೆಹೊರೆಯವರೊಡನೆ ಹೇಳಿಕೊಳ್ಳುವ ರೀತಿಯಲ್ಲಿ ಕೆಲವರು ಕಾವ್ಯ ಹೇಳಿದಾರೆ. ಅವರಿಗೆ ತಮ್ಮ ಅನುಭವ ಒಂದು ಭಾರ. ಅದನ್ನು ಹೇಳಿದರೆ ಆ ಭಾರ ತಗ್ಗುತ್ತದೆ; ಒಂದು ಹೊಸ ಸಂತೋಷ ಬರುತ್ತದೆ. ಇಲ್ಲಿ ಯಾವುದನ್ನೂ ಗಳಿಸುವ ಬುದ್ಧಿಯಿಲ್ಲ. ಸಾಧಾರಣವಾಗಿ ದೇಸಿಮಾರ್ಗದ ಕಾವ್ಯವೆಲ್ಲ ಇಂಥದೇ. ಜನಪದಸಾಹಿತ್ಯವನ್ನು ಈಗೀಗ ನಾವು ಆದರಿಸುತ್ತಿದೇವೆ. ವಚನಸಾಹಿತ್ಯಕ್ಕಾಗಲಿ ದಾಸರ ಪದಗಳಿಗಾಗಲಿ ಇನ್ನೂ ಸರಿಯಾದ ಸ್ಥಾನ ದೊರೆತಿಲ್ಲ. ಕನ್ನಡ ಕವಿಚರಿತೆಕಾರರು ಇವರನ್ನು ತಮ್ಮ ಪಟ್ಟಿಯಲ್ಲಿ ಸೇರಿಸಿದರಾಗಲಿ, ತೆಲುಗಿನ ಕವಿಚರಿತೆಯ ಕರ್ತರು ಅವರ

ವೇಮನ, ಅವರ ಗೇಯ ಕಾವ್ಯ, ಅವರ ಶತಕ ಕವಿಗಳು–ವೈಲಿಗೆ ಎಂದು ಬಿಟ್ಟುಬಿಟ್ಟರು. ಎಲ್ಲ ಕಡೆಯಲ್ಲೂ ಹೀಗೇ ನಡೆದಿದೆ.

ಗಾಂಧೀಜಿಯ ಸಾಹಿತ್ಯ ಈ ಮೂರನ್ನು ಬಿಟ್ಟು ನಾಲ್ಕನೆಯ ಜಾತಿಗೆ ಸೇರಿದುದು. ಅವರಿಗೆ ಕೀರ್ತಿಯೂ ಬೇಕಾಗಿಲ್ಲ, ಹಣವೂ ಬೇಕಾದುದಿಲ್ಲ. ಅವರ ಸ್ಫೂರ್ತಿ ಜನಪದಸಾಹಿತ್ಯದಿಂದ, ದಾಸರು ಶರಣರು ನಮ್ಮ ನಾಡಿಗೆ ದಾನಮಾಡಿದ ಸಂಸ್ಕೃತಿಯಿಂದ ಹುಟ್ಟಬಂದುದು. ಗುಜರಾತಿ ಹಿಂದೀ ಇಂಗ್ಲೀಷು ಭಾಷೆಗಳ ಶರಣಸಾಹಿತ್ಯಕ್ಕೆ ಅವರು ಶರಣುಹೋಗಿದಾರೆ. ತುಲಸೀದಾಸನ ರಾಮಾಯಣವೇ ಅವರಿಗೆ ವೇದ. ಅನೇಕ ವೇಳೆ ಅವರಾಡುವ ಮಾತಿನಲ್ಲಿ ಆ ಸಂಸ್ಕೃತಿಯ ನೆರಳು ಬಿದ್ದಿರುವುದು ಕಾಣುತ್ತದೆ. ಅವರು ಮಾಡುವ ಕೆಲಸದಲ್ಲೂ ಆ ವಿನಯ, ಅಲ್ಲಿ ಕಾಣುವ ವೈರಾಗ್ಯ ಮೂಡಿ ಬಂದಿದೆ. ಭಗವದ್ಭಕ್ತರ ಕೀರ್ತನೆಗಳು ಅವರ ಮನಸ್ಸಿಗೆ ಸಂಕಟ ಸಮಯದಲ್ಲಿ ಶಾಂತಿಕೊಟ್ಟ ಹಾಗೆ ಗೀತೆಯ ವಿನಾ–ಉಳಿದವುಕೊಟ್ಟಂತೆ ತೋರುವುದಿಲ್ಲ.

ಆದರೂ ಈ ಹಾದಿಯನ್ನು ಗಾಂಧೀಜೀ ತುಳಿಯಲಿಲ್ಲ. ಅವರು ಕರ್ಮ ಯೋಗಿ; ಅನಾಸಕ್ತರಾಗಿ ಜಗದ್ಧಿತವನ್ನು ಮಾಡುವುದು ಅವರ ಗುರಿ. ಅವರ ಸತ್ಯೋಪಾಸನೆಯಲ್ಲಿ ಕಾವ್ಯಯೋಗಕ್ಕೆ ಸ್ಥಾನವಿಲ್ಲ. ಅವರಿಗೆ ಸಾಹಿತಿಯಾಗುವ ಹಂಬಲವಿಲ್ಲ. ಈಗಲೂ ಯಾರಾದರೂ ಅವರನ್ನು ನೀವು ಸಾಹಿತಿ ಎಂದರೆ ನಕ್ಕಾರು. 'ನಿಮ್ಮ ಕಾವ್ಯವನ್ನು ನನಗೆ ಓದಿಹೇಳಲು ಇದೊಂದು ಉಪಾಯವಲ್ಲ ತಾನೆ' ಎಂದು ಹಾಸ್ಯವನ್ನೂ ಮಾಡಬಹುದು. ಅವರಿಗೆ ಸಾಹಿತ್ಯ ಬರೆಯುವ ಚಟವೂ ಇಲ್ಲ, ಚಪಲವೂ ಇಲ್ಲ. ಯಾವಾಗಲೂ ಆ ಪ್ರಯತ್ನಮಾಡಿಲ್ಲ. ತಾವು ಏನಾದರೂ ಬರೆಯುವಾಗ ಅದು ಅಂದವಾಗಿರಲಿ ಎಂಬ ಕೃಷಿಯಿಲ್ಲ; ಸತ್ಯವಾಗಿರಲಿ ಎಂಬ ನೋಟವಿದೆ. ಅಸತ್ಯ ಉತ್ಪ್ರೇಕ್ಷೆ, ಅತಿಶಯೋಕ್ತಿ ಅದರಲ್ಲಿ ನುಸುಳದಿರಲಿ ಎಂಬ ಎಚ್ಚರವಿದೆ. ಕವಿಕರ್ಮದಲ್ಲಿ ಗಾಂಧೀಜಿಗೆ ಅಷ್ಟಾಗಿ ನಂಬಿಗೆಯೂ ಇದ್ದಂತಿಲ್ಲ. ಯಾರಾದರೂ ಆಗದ ಹೋಗದ ಗಾಳಿಯ ಮಾತನ್ನು ಆಡಿದರೆ 'ನೀವು ಬಿಡಿ, ಕವಿಗಳು!' ಎಂದು ಅವರನ್ನು ಎಚ್ಚರಿಸುತ್ತಾರೆ. ಕವಿಗಳು ಎಂದರೆ ಸ್ವಲ್ಪ ಅವ್ಯವಹಾರದ ಜಾತಿಗೆ ಸೇರಿದವರು ಎಂಬ ಮೃದುಹಾಸ್ಯ ಅಲ್ಲಿದೆ.

ಆದರೆ ನಿಜವಾಗಿ ಗಾಂಧೀಜಿಗೆ ತಾವೇ ಒಬ್ಬ ಉತ್ತಮ ಕವಿಯೆಂಬುದು ತಿಳಿದಿಲ್ಲವೋ ಏನೋ.

ಕವಿಕರ್ಮದಲ್ಲಿ ಗಾಂಧೀಜಿಗೆ ನಂಬಿಗೆ ಕಡಮೆ ಎಂದು ಹೇಳಿತು. ಎಂದರೆ ತುಲಸೀದಾಸ ಕವಿಯಲ್ಲವೆಂದಾಗಲಿ, ಅವನ ಕಾವ್ಯಕ್ಕೆ ಬೆಲೆ ಕೊಡ ಬಾರದೆಂದಾಗಲಿ ಅವರ ಅಭಿಪ್ರಾಯವಲ್ಲ. ನಿಜವಾಗಿ ಅವರಿಗೆ ತಮ್ಮ ಬಾಳಿನಲ್ಲಿ ಅಮೂಲ್ಯವಾದುದು ಯಾವುದಾದರೂ ಇದ್ದರೆ ಅದರಲ್ಲಿ ಕಾವ್ಯಾನುಭವವೂ ಒಂದು. 'ಕರುಣಾಳು ಬಾ ಬೆಳಕೆ' ಎಂಬ ಇಂಗ್ಲೀಷು ಗೀತ ಅವರ ಮನಸಿಗೆ ಕೊಟ್ಟ ಹಾಯನ್ನು ಅವರೇ ವರ್ಣಿಸಿದಾರೆ. ಒಂದು ದಿನ ಸತ್ಯಾಗ್ರಹಾಶ್ರಮದಲ್ಲಿ ಸಂಜೆಯ ಪ್ರಾರ್ಥನೆ ನಡೆದಾಗ ರವೀಂದ್ರನಾಥರ ಹಾಡು ಒಂದನ್ನು ಇಂಪಾಗಿ ಹಾಡಲಾಯಿತು. ಆ ಭಾವ ಆ ಗಾನಗಳು ಅಲ್ಲಿದ್ದವರ ಮನಸ್ಸಿಗೆ ಒಂದು ಸಮಾಧಾನ, ಶಾಂತಿಯನ್ನು ಕೊಟ್ಟವು. ಗಾಂಧೀಜಿಗೆ ದಿನವೂ ಪ್ರಾರ್ಥನೆ ಮುಗಿದಮೇಲೆ ನಾಲ್ಕು ಮಾತು ಹೇಳುವುದು ರೂಢಿ. ಆದರೆ ಆ ದಿನ ಮಾತಾಡದೆ ಮೆಲ್ಲನೆ ಎದ್ದು ಹೋದರು. ಆ ರಸಾನುಭವದಿಂದ ಮನಸ್ಸಿನ ಕೊಳ ಶಾಂತವಾಗಿತ್ತು. ಮಾತು ಯಾರೇ ಆಡಿದರೂ ಆ ಕೊಳದಲ್ಲಿ ತೆರೆಯೆಬ್ಬಿಸಿದಂತೆ. 'ಇಂಗ್ಲೀಷು ಸಾಹಿತ್ಯದಲ್ಲಿ ಬೈಬಲಿಗಿಂತ ಉತ್ತಮವಾದ ಗ್ರಂಥವುಂಟೇ? ಬೈಬಲೇ ಇರದಿದ್ದರೆ ಇಂಗ್ಲೀಷು ಸಾಹಿತ್ಯ ಶೂನ್ಯವಾಗಿ ಹೋಗುತ್ತಿತ್ತು. ಆ ಸಾಹಿತ್ಯಕ್ಕೆ ಷೇಕ್ಸ್‌ಪಿಯರ್ ಒಂದು ಪಾಲಾದರೆ, ಬೈಬಲ್ ಮೂರು ಪಾಲು' ಎಂದು ಗಾಂಧೀಜೀ ಹೇಳಿದುದನ್ನು ಕೆಲವರು ತಪ್ಪು ತಿಳಿದುಕೊಂಡುದುಂಟು. ಷೇಕ್ಸ್‌ಪಿಯರ್ ತನ್ನ ನಾಟಕ ಒಂದರಲ್ಲಿ ಒಂದು ಪಾತ್ರದ ಬಾಯಿಂದ Not that I loved Ceaser less, but I loved Rome more— ನನಗೆ ಸೀಸರ್ ದೊರೆಯ ಮೇಲೆ ಪ್ರೀತಿ ಕಡಿಮೆ ಎನ್ನಬೇಡಿ; ಹಾಗಲ್ಲ, ನನಗೆ ರೋಮ್ ನಗರದ ಮೇಲೆ ಹೆಚ್ಚು ಪ್ರೀತಿ ಎನ್ನಿ—ಎಂದು ಆಡಿಸಿದಾನೆ. ಗಾಂಧೀಜಿಗೆ ಕವಿಕರ್ಮದಲ್ಲಿ ನಂಬಿಗೆ ಕಡಿಮೆ ಎಂದಾಗಲೂ ಷೇಕ್ಸ್‌ಪಿಯರ್ ಒಂದು ಪಾಲು ಬೈಬಲ್ ಮೂರು ಪಾಲು ಎಂದಾಗಲೂ ಕಲ್ಪನೆಗಿಂತ ಅನುಭವ ಲೇಸು, ಭಾಷೆಗಿಂತ ಭಾವ ಮುಖ್ಯ, ಎಲ್ಲಕ್ಕಿಂತ ಸತ್ಯವೇ ಹೆಚ್ಚಿನದು ಎಂಬ ಅಭಿಪ್ರಾಯ ಕಂಡುಬರುತ್ತದೆ. ಇಲ್ಲದಿದ್ದರೆ 'ಕೊರಾನಿಲ್ಲದಿದ್ದರೆ

ಅರಬ್ಬೀ ಭಾಷೆಯನ್ನು ಜಗತ್ತು ಮರೆತೇ ಹೋಗುತ್ತಿತ್ತು. ಹಾಗೆಯೇ ತುಲಸೀದಾಸನಿಲ್ಲದ ಹಿಂದೀ ಸಾಹಿತ್ಯವನ್ನು ಹೇಗೆ ಊಹಿಸಬೇಕು' ಎಂದು ಅವರು ಹೇಳಿದ ಮಾತಿಗೆ ಬೆಲೆ ತಿಳಿಯುವುದಿಲ್ಲ.

ಎಳೆತನದಲ್ಲಿ ಗಾಂಧೀಜೀ ಸಾಹಿತ್ಯದಲ್ಲಿ ಸತ್ಯದ ಸವಿಯನ್ನು ಕಂಡಿದಾರೆ. ಆ ಅನುಭವಗಳು ಅವರಿಗೆ ತಮ್ಮ ಬಾಳಿನಲ್ಲೇ ಸತ್ಯದ ಬಾಗಿಲನ್ನು ತೆರೆದವು. ಅವರು ನೋಡಿದ ಒಂದು ನಾಟಕವನ್ನು ನೂರು ಸಲ ನೋಡಿದ ಹಾಗೆ ತಮ್ಮ ಮನಸ್ಸಿನಲ್ಲಿ ಮೆಲಕು ಹಾಕಿಕೊಂಡರು. ನಾಟಕದಲ್ಲಿ ನೋಡಿದ ಹರಿಶ್ಚಂದ್ರನಂತೆ ತಾವೇಕೆ ಆಗಬಾರದು ಎನಿಸಿತು. ಈಗ ಆ ನಾಟಕ ಓದಿದರೆ ನನ್ನ ಕಣ್ಣು ಹನಿತುಂಬಿಯಾವು ಎನ್ನುತ್ತಾರೆ.

ಒಂದು ಪದ್ಯ ಅವರ ಮನಸ್ಸಿಗೆ ನಾಟಿ ಅವರ ಇಡೀ ಬಾಳಿಗೇ ಒಂದು ಬಣ್ಣಕೊಟ್ಟಿತು. ಅದು ಒಂದು ಸಾಮಾನ್ಯವಾದ ನೀತಿಪದ್ಯ. ನೀರು ಕೊಟ್ಟವರಿಗೆ ಅನ್ನ ನೀಡು; ಕೈಮುಗಿದರೆ ಅಡ್ಡಬೀಳು; ತಾಮ್ರದ ಕಾಸು ಕೊಟ್ಟವರಿಗೆ ಬಂಗಾರದ ನಾಣ್ಯಕೊಡು; ಕಷ್ಟಕ್ಕೆ ಆದವನಿಗಾಗಿ ಪ್ರೈಯಾದರೂ ಕೊಯ್ದುಕೊಡು; ಒಂದು ನೀಡಿದವಗೆ ಹತ್ತು ನೀಡು; ಕೇಡು ಬಗೆದವಗೆ ಲೇಸು ಬಗೆ; ಇದೇ ಸತ್ಯದ ಗುಟ್ಟು. ಇದು ಅದರ ಅರ್ಥ. *

ಅವರ ಬಾಯಿಂದ ಆಗಾಗ ಬರುವ ನುಡಿ ಇನ್ನೊಂದು ಇದೆ. 'ತ್ಯಾಗ ನ ಟಕೇ ರೇ ವೈರಾಗ್ಯ ವಿನಾ' – ವೈರಾಗ್ಯವಿರದ ಬರೀ ತ್ಯಾಗ ನಿಲ್ಲದು.

---

* ಬೊಗಸೆ ನೀರಿತ್ತವಗೆ ತೃಪ್ತಿಯುಪ್ಪಂತುಣಿಸು
ಒಳ್ಳಿತನು ಬಯಸಿದಗೆ ಭಕ್ತಿಯಿಂ ಬಾಗು
ಕಿರುಗಾಸನಿತ್ತವಗೆ ತಿರುಗಿ ಚಿನ್ನವ ನೀಡು
ಪ್ರಾಣವಂ ಕಾಯ್ದವಗೆ ಪ್ರಾಣದಾನವ ಮಾಡು
ಕಿರುನೆರವಿಗೂ ಹಿರಿಯ ಸೇವೆಯ ಸಲಿಸುವುದು
ಪ್ರಾಜ್ಞರಾದವರ ನಡೆಯುಂತೆಯೇ ಅವರ ನುಡಿ
ಜ್ಞಾನಿಗಳು ಮಾನವರ ಭೇದಗಳನೆಣಿಸದೆಯೆ
ಕೇಡಿಗುಂ ಸಂತಸದಿ ಶುಭವನೆಸಗುವರು.

ಕನ್ನಡದಲ್ಲಿ ಇದು ಹೀಗೆ ಭಾಷಾಂತರವಾಗಿದೆ.

ಗಾಂಧೀಜೀ ಸಾಹಿತ್ಯದ ಬಾಗಿಲಿಗೆ ಬಂದದ್ದು ಸತ್ಯದ ದಾರಿಯಿಂದ. ಅವರ ಸತ್ಯಾನ್ವೇಷಣೆಯಲ್ಲಿ ಅನಾಸಕ್ತ ಕರ್ಮದ ಹಾದಿಯನ್ನು ಅವರು ತುಳಿದರು. ಅವರಿಗೆ ಸತ್ಯವೇ ಬ್ರಹ್ಮ-ಅಹಿಂಸೆಯೇ ಉಪಾಯ ಎಂಬ ಆಂತರಿಕ ಶ್ರದ್ಧೆ ಉಂಟಾಯಿತು. ಆ ಅನುಭವದ ಬೆಳಕನ್ನು ಮರೆಮಾಡುವುದು ಅವರಿಗೆ ಸಾಧ್ಯವಾಗಲಿಲ್ಲ. ದೇವರು ಸತ್ಯ-ಅಹಿಂಸೆಗಳ ಪ್ರಸಾರಕ್ಕಾಗಿ ತಮ್ಮನ್ನು ಒಂದು ನಿಮಿತ್ತವಾಗಿ ಮಾಡಿದಾನೆ, ತಾವು ಆ ವಿಷಯದಲ್ಲಿ ಅವನ ಕೈಯ ಆಯುಧ ಎಂದು ಅವರಿಗೆ ನಂಬಿಗೆ ಆಯಿತು. I can no lorger hide the light under a bushel—ನಾನಿನ್ನು ಈ ಬೆಳಕನ್ನು ಬಚ್ಚಿಡಲಾರೆ ಎಂದು ಹೇಳಿದರು. ಮೊದಲೇ ಕರ್ಮಮಾರ್ಗಿ, ಮೇಲೆ ಈ ಶ್ರದ್ಧೆ-ತಮ್ಮ ಸಿದ್ಧಾಂತದ ಪ್ರಚಾರಕ್ಕಾಗಿ ಅವರು ಬರೆಯತೊಡಗಿದರು. ಸಾಲದುದಕ್ಕೆ ಅಗಾಧವಾದ ಚಳುವಳಿಯನ್ನು ನಡೆಯಿಸುವ ಹೊಣೆ ಜೇರೆ. ಹೀಗಾಗಿ ಗಾಂಧೀಜಿಯ ಸಾಹಿತ್ಯ ಒಂದು ಸಾಧನೆಯಾಯಿತು; ಅದೇ ಒಂದು ಗುರಿಯಾಗಲಿಲ್ಲ.

ಆದರೂ ಅವರ ಬರವಣಿಗೆಯಲ್ಲಿ ಕಂಡುಬರುವ ಹದ, ಹರಿತ ಉತ್ತಮ ಸಾಹಿತ್ಯದ ಗುರುತಾಗಿವೆ. ಶೈಲಿಯೇ ಕವಿಯ ಜೀವಾಳ ಎಂಬ ಮಾತು ಸಾಹಿತ್ಯವಿಮರ್ಶೆಯಲ್ಲಿ ರೂಢಿಯುಂದೆ. ಕವಿ ತಾನು ಹೇಳಬೇಕಾದ ಭಾವವನ್ನು ಹೇಳುವ ರೀತಿ, ಹೇಳುವ ಕೆಲಸಕ್ಕೆ ಬಳಸುವ ಮಾತು, ಅದರಲ್ಲಿ ಬರುವ ದೃಷ್ಟಾಂತ - ಎಲ್ಲವೂ ಶೈಲಿಯೆಂಬ ಆ ಮಾತಿನಲ್ಲಿ ಅಡಕವಾಗಿದೆ. ಗಾಂಧೀಜಿಯ ಸಾಹಿತ್ಯವನ್ನು ಓದಿದರೆ ಅವರಿಗೆ ತಮ್ಮದೇ ಆದ ಒಂದು ವಿಲಕ್ಷಣ ಶೈಲಿಯಿದೆ ಎಂದು ಹೊಳೆಯಲು ತಡವಾಗುವುದಿಲ್ಲ. ಅಷ್ಟು ಒಡೆದು ಕಾಣುತ್ತದೆ ಅದು. ಸಂಗ್ರಹ, ಸರಳ, ಸ್ಪಷ್ಟ-ಎಂದು ಅದನ್ನು ವರ್ಣಿಸಬಹುದು. ಸಂಗ್ರಹವಿದ್ದಷ್ಟೇ ಸರಳ, ಸರಳವಿದ್ದಷ್ಟೇ ಸ್ಪಷ್ಟ. ಈ ಮೂರೂ ಗುಣ ಒಂದೇ ಕಡೆ ಸಿಗುವುದು ಕಷ್ಟ. 'ಕಿರಿದರೊಳು ಪಿರಿದರ್ಥವಂ' ತಿಳಿಸುವ ಬರೆಹದಲ್ಲಿ ಸರಳತೆಗಿಂತ ವಕ್ರೋಕ್ತಿ ಕೊಂಕುನುಡಿ ಹೆಚ್ಚು. ಅನೇಕ ಸಲ ಕಿರಿಯ ಮಾತಿನಲ್ಲಿ ಅರ್ಥಕ್ಕಿಂತಲೂ ಕೊಂಕೇ ಹೆಚ್ಚಾಗಿರುತ್ತದೆ. ಅದು ಕೊಂಕು ನುಡಿಗೆ ಸಹಜ. ಸರಳವಾದ ಶೈಲಿ ಇದ್ದ ಕಡೆ ಸಂಗ್ರಹಗುಣ ಇರುವುದು ಅಪರೂಪ. ಸ್ಪಷ್ಟತೆಯೆಂತೂ ಹೆಚ್ಚು ಕಡಮೆ

ನಾವು ಕಾಣದ ಗುಣವೆಂದೇ ಹೇಳಬಹುದು. ಗಾಂಧೀಜಿಯು ಬರೆಹದಲ್ಲಿ ಇವು ಮೂರೂ ಹೆಣೆದುಕೊಂಡುಬಿಟ್ಟವೆ. ಅವರ ವಾಕ್ಯಗಳು 'ಚಿಟಕೆ ಹಾಕುವುದರೊಳಗಾಗಿ ಮುಗಿಸಬಹುದಾದ ಚಿಕ್ಕ ನುಡಿ. ಗುಂಡಿನೇಟಿನಂತೆ ಗುರಿತಪ್ಪದ ತಿಳಿಯಾದ ಮೊನೆಯಾದ ಮಾತು.' ಅದರ ವೇಗದಲ್ಲಿ ಒಂದು ಬೆಳಕು ಹುಟ್ಟುತ್ತದೆ. ಅದರ ಬಲದಲ್ಲಿ ಸೃಷ್ಟಿ-ಪ್ರಳಯಗಳೆರಡೂ ಹುದುಗಿವೆ. ಎಲ್ಲರೂ ಗಾಂಧೀ ಸೋತುಹೋದನೆಂದಾಗ ಒಂದೇ ಒಂದು ವಾಕ್ಯದಿಂದ ಇದು ಸೋಲಲ್ಲ ಗೆಲವು ಅನಿಸುವಹಾಗೆ ಮಾಡಿಬಿಡುತ್ತಾರೆ.

ಮಾತು ಬಳಸುವುದರಲ್ಲಿ ಗಾಂಧೀಜೀ ಶುದ್ಧ ಜಿಪುಣರು. ತಾವು ಹೇಳಬೇಕಾದುದು ಜನರ ಮನಸ್ಸಿಗೆ ಸ್ಪಷ್ಟವಾಗಿ ಸರಿಯಾಗಿ ತಿಳಿಯಲು ಎಷ್ಟುಬೇಕೋ ಅಷ್ಟೇ ಮಾತು. ಒಂದೇ ಒಂದು ಮಾತಾದರೂ ಹೆಚ್ಚಾಗಿ ಉಪಯೋಗಿಸುವದಿಲ್ಲ. ದೃಢವಾದ ಅಭಿಪ್ರಾಯವಿದ್ದವರಿಗೆ ತಮ್ಮ ಮನಸ್ಸಿನ ಭಾವವನ್ನು ಸ್ಪಷ್ಟವಾಗಿ ಸುಲಭವಾಗಿ ತಿಳಿಸಬೇಕೆಂದಾಗ ಉದ್ದುದ್ದ ವಾಕ್ಯ ಸರಿಹೋಗುವುದಿಲ್ಲ. 'ಉದ್ದವಾದ ವಾಕ್ಯ ದೊಡ್ಡ ಹೊಟ್ಟೆಯ ಆನೆಯಂತೆ. ಆನೆಯ ಹೊಟ್ಟೆಗೆ ತಿಂಡಿ ಒದಗಿಸುವದು ಬಹಳ ಕಷ್ಟ. ಸೊಪ್ಪೋಸದೆಯೋ ಸಿಕ್ಕಿದ್ದನ್ನೆಲ್ಲ ತಂದು ಅದಕ್ಕೆ ಕೊಡಬೇಕು. ಅರ್ಥಕ್ಕೆ ಭಾವಕ್ಕೆ ಒಂದು ಮಿತಿ ಇದೆ; ಮಾತಿಗೆ ಇಲ್ಲ. ಕೆಲಸಕ್ಕೆ ಬಾರದ ಮಾತಿನ ಕಸದ ತಿಪ್ಪೆಯನ್ನು ಕೂಡಿಹಾಕಿ ವಾಕ್ಯರಚನೆ ಬೆಳೆಸಬಹುದಾಗಲಿ ಅಸಲಿಗೇ ಮೋಸವಾಗುತ್ತದೆ.' ತಾವು ಬರೆದುದನ್ನು ಮತ್ತೆ ಮತ್ತೆ ಪರಿಶೀಲಿಸುವ ಅವಕಾಶ ಗಾಂಧೀಜಿಗೆ ಬಹಳ ದೊರೆತಿವೆ. ಅವರ ಬರೆಹ ಅನೇಕ ಸಲ ಮತ್ತೆ ಮತ್ತೆ ಅಚ್ಚಾಗಿವೆ. ಆದರೂ ಅವರು ಮೊದಲು ಬರೆದುದನ್ನು ತಿದ್ದುವುದು ಕಡಮೆ; ಕಡಮೆ ಎನ್ನುವುದಕ್ಕಿಂತ ತಿದ್ದುವಹಾಗೆ ಏನೂ ಇರುವದಿಲ್ಲ ಅದರಲ್ಲಿ ಎನ್ನುವುದು ಹೆಚ್ಚು ಸತ್ಯ. ಏನು ತಿದ್ದಬೇಕು? ತೂಕಮಾಡಿ ಅಗತ್ಯವಿದ್ದಷ್ಟೇ ಮಾತು ಬಳಸುವ ಶೈಲಿಯಲ್ಲಿ ಏನು ಹೆಚ್ಚು ಕಡಮೆ ಮಾಡಬೇಕು? ಹೇಳಿದ ಭಾವವನ್ನು ಮತ್ತೊಂದು ಸಲ ಹೇಳಬೇಕಾದಾಗ ಮೊದಲು ಆಡಿದ ವಾಕ್ಯವನ್ನೇ ಹೇಳಲು ಹಿಂಜರಿಯದ ನಿಸ್ಸಂಕೋಚ ಸ್ವಭಾವ. ಹೊಸ ರೀತಿಯಲ್ಲಿ ಹೊಸ ಅಲಂಕಾರ ಕಟ್ಟಿ ಹೇಳುವ ಪದ್ಧತಿಯಿದ್ದರೆ ತಾನೆ. 'ಹಿಂದ್ ಸ್ವರಾಜ್ಯ' ಎಂಬುದು ಅವರು ಮೊದಲು

ಬರೆದ ಗ್ರಂಥ ಹಿಂದುಸ್ಥಾನಕ್ಕೆ ಎಂಥ ಸ್ವರಾಜ್ಯ ಬೇಕು, ಅದು ಹೇಗೆ ಸಿಗಬೇಕು ಎಂಬ ಪ್ರಶ್ನೆಗೆ ಅವರು ಕೊಟ್ಟ ಉತ್ತರ ಅದು. ಅದರಲ್ಲೇ ಅವರು ತಮ್ಮ ಜೀವನದ ಸಂದೇಶವನ್ನು ಸಾರಿದರು. ಆ ಪುಸ್ತಕವನ್ನು ಅವರು ಬರೆದದ್ದು ೧೯೦೮ರಲ್ಲಿ. ಹದಿಮೂರು ವರುಷದ ತರುವಾಯ ಅದರ ಬಗ್ಗೆ ಬರೆದಾಗ ಹೀಗೆಂದರು: ‘ಒಂದೇ ಒಂದು ಪದದ ವಿನಾ ಅದರಲ್ಲಿ ಏನನ್ನೂ ಅಳಿಸುವದಿಲ್ಲ. ಆ ಪದವನ್ನೂ ಕೂಡ ಒಬ್ಬ ಗೆಳತಿಯ ಸಂತೋಷಕ್ಕಾಗಿ ತೆಗೆದುಹಾಕುತ್ತೇನೆ.’ ಕನ್ನಡದಲ್ಲಿ ಭಾರತ ಬರೆದ ಗದುಗಿನ ನಾರಣಪ್ಪನಿಗೂ ‘ಪದವಿಟ್ಟು ಅಳಿಪದೊಂದು ಅಗ್ಗಳಿಕೆ’ ಇದೆ. ಆದರೆ ಇಬ್ಬರ ನಡುವೆ ಎಷ್ಟು ಭೇದ!

ಮಾತು ಮಿತವಿದ್ದಂತೆ ಅರ್ಥವೂ ಅತಿ ಸುಲಭ. ‘ಈ ಪುಸ್ತಕ ಎಳೆಯ ಮಕ್ಕಳೂ ಕೂಡ ಓದಿ ತಿಳಿದುಕೊಳ್ಳಬಹುದಾಗಿದೆ’ ಎಂದು ಹಿಂದ್ ಸ್ವರಾಜ್ಯದ ಬಗ್ಗೆ ಅವರೇ ಬರೆದುಕೊಂಡಿದಾದೆ. ಇದು ನಿಜ. ಅವರಷ್ಟು ಸುಲಭ ಶೈಲಿಯಲ್ಲಿ ಬರೆಯುವುದು ಎಲ್ಲರಿಗೂ ಸಾಧ್ಯವಿಲ್ಲ. ಚಿಕ್ಕಪದವಿದ್ದರೆ ದೊಡ್ಡ ಪದ ಬೇಡ. ಸುಲಭವಾದ ಮಾತು ಸಿಗುವ ಹಾಗಿದ್ದರೆ ಅದೇ ಸರಿ. ಹಳ್ಳಿಯ ಜನರಿಗೆ ತಿಳಿಯಬೇಕು. ತಮ್ಮ ಭಾವ ಸಾಮಾನ್ಯ ಜನರಿಗೆ ತಿಳಿಯುವ ಮಟ್ಟಕ್ಕೆ ತಮ್ಮ ಭಾಷೆ ಇಳಿಯಬೇಕು. ಈ ಹಾದಿಯಲ್ಲಿ ಗಾಂಧೀಜೀ ಎಡೆಬಿಡದೆ ದುಡಿದಿದಾರೆ. ಗುಜರಾತಿಯಲ್ಲಿ ಮೊದಲು ‘ನವಜೀವನ’ ಹೊರಡಿಸುತ್ತಿದ್ದರು. ಅದು ವಾರಕ್ಕೊಮ್ಮೆ ಹೊರಬಿದ್ದರೆ ಗುಜರಾತಿನಲ್ಲಿ ಹಳ್ಳಿಹಳ್ಳಿಯಲ್ಲೂ ಅಂಚೆಯ ಮನೆಯ ಮುಂದೆ ಜನರ ನುಗ್ಗಾಟ. ಅದು ಸತ್ಯಾಗ್ರಹ ಚಳುವಳಿಯ ಕಾಲ. ನವಜೀವನಕ್ಕೆ ೨೫ ಸಾವಿರ ಜನ ಚಂದಾದಾರರಿದ್ದರಂತೆ. ಓದುಬರೆಹ ಚೆನ್ನಾಗಿ ಕಲಿತವರ ಮನೆಯಲ್ಲಿ ನವಜೀವನ ಇದೆಯೆ ಎಂದು ಕೇಳಬೇಕಾದುದೇ ಇಲ್ಲವಾಯಿತು. ನವಜೀವನ ಓದುವುದು ಎಂದರೆ ಖಾದೀ ಹಾಕುವ ಹಾಗೆ ದೇಶಭಕ್ತಿಯ ಗುರುತಾಗಿ ಹೋಯಿತು. ಗಾಂಧೀಜಿಗೆ ಈಗಿನ ಹಾಗೆ ಆಗ ಬಿಡುವಿರುತ್ತಿರಲಿಲ್ಲ. ಕೈತುಂಬ ಕೆಲಸವಿರುತ್ತಿತ್ತು. ಆದರೂ ನವಜೀವನಕ್ಕಾಗಿ ಬಿಡುವು ಮಾಡಿಕೊಳ್ಳುತ್ತಿದ್ದರು. ಹಳ್ಳಿಯಲ್ಲಿ ಯಾರಾದರೂ ಓದುವವರಿದ್ದರೆ ಅಲ್ಲಿ ಜನರು ಗುಂಪುಕಟ್ಟಿ ನೊಣ ಮುಕ್ಕರಿಸಿದಹಾಗೆ ಮುತ್ತಿಬಿಡು

ತ್ತಿದ್ದರು. ಗಾಂಧೀಜೀ ಬರೆಹದ ಮೂಲಕ ಜನರನ್ನು ಆಡಿಸಿದ ಹಾಗೆ ಹಿಂದುಸ್ಥಾನಗಲ್ಲಿ ಹಿಂದೆ ಯಾರೂ ಮಾಡಿಲ್ಲ. ಜನರ ಮನಸ್ಸಿಗೆ ನಾಟುವ ಹಾಗೆ ಬರೆಯುವುದು ಸಾಹಿತಿಯ ಜೀವಗುಣ. ಇದು ಗಾಂಧೀಜಿಗೆ ಪೂರಾ ವಶವಾಗಿದೆ.

ಈ ಗೆಲವಿನ ಗುಟ್ಟು ಅವರ ಭಾವಗಳ ತೀವ್ರತೆ. ಭಾವ ಸಹಜ ವಾದಾಗ ಹರಿತವಾಗುತ್ತದೆ. ಆಗ ಭಾಷೆಗೆ ಒಂದು ಬಗೆಯ ಬಿಗಿ, ಬಲ ಬರುತ್ತದೆ. ಭಾವ ಕೃತಿಮವಾದರೆ, ಎರವು ತಂದುದಾವರೆ, ಭಾಷೆ ಭಾರವಾಗಿ ಹಸಗೆಡುತ್ತದೆ. 'ಭಾವ ತುಂಬಿದ ಕೊಡದ ಹಾಗೆ. ಭಾಷೆ ಅದನ್ನು ಮೇಲೆ ಎಳೆಯುವ ಹಗ್ಗ.' ತುಂಬಿದ ಕೊಡವನ್ನು ಎಳೆವಾಗ ಹಗ್ಗ ನೇರವಾಗಿ ದೃಢವಾಗಿ ಅಂಬಿನಂತೆ ನಿಲ್ಲುತ್ತದೆ. ಸುಕ್ಕು ಇಲ್ಲ, ಸುಳಿ ಇಲ್ಲ, ಹುರಿ ತಿರುಗುವುದಿಲ್ಲ. ಹರಿತವಾದ ಭಾವವಿದ್ದಲ್ಲಿ ತೊಡಕಿಲ್ಲದ ಭಾಷೆ ಬರುತ್ತದೆ. ಅದನ್ನೇ ಧಾರೆ ಎನ್ನುತ್ತಾರೆ. ಭಾವದಾರ್ಢ್ಯವಿದ್ದವರಿಗೆಲ್ಲ ಈ ಧಾರೆ ಇರುವದಿಲ್ಲ. ಈ ಧಾರೆ ಇದ್ದಲ್ಲಿ ಅದು ಇರುತ್ತದೆ. ಗಾಂಧೀಜಿಯೇ ಹೇಳಿದಾರೆ: 'ಅನುಭವವಿಲ್ಲದ ಅಪ್ರಮಾಣವಾದ ಮಾತು ಎಷ್ಟು ಉದಾತ್ತ ವಾದರೂ ಅದರಲ್ಲಿ ಜೀವವಿಲ್ಲ. ಅದು ಜನರ ಮನಸ್ಸಿಗೆ ಹಿಡಿಸದು; ಅವರ ಎದೆಗೆ ತಟ್ಟದು. ಅದೇ, ಆನುಭವದಿಂದ ಬಂದ ಮಾತು ಪ್ರಮಾಣಕ್ಕೆ ತಿಳಿದ ಸತ್ಯ. ಅದು ಫಲಕಾರಿ.'

ಅಂತೇ ಗಾಂಧೀಜಿಯ ಶೈಲಿಯಲ್ಲಿ ಒಂದು ಸೆಳೆತವಿದೆ, ಒಂದು ಬಗೆಯ ಗಾಂಭೀರ್ಯವಿದೆ. ಬೈಬಲಿನ ಹಾಗಿದೆ ಇವರ ಶೈಲಿ ಎಂದು ಇಂಗ್ಲೀಷು ಜನ ಹೇಳುವುದುಂಟು. ಶೈಲಿ ಕವಿಯ ಅಂತರಂಗ, ಅವನ ಮುಖ. ಗಾಂಧೀಜಿಯ ಶೈಲಿಯಲ್ಲಿ ಬೈಬಲು ಕಂಡರೆ ಅವರ ಅಂತರಂಗ ಸತ್ಯಪೂರ್ಣ ವಾದುದು, ಕ್ರಿಸ್ತನ ಹಾಗೆ ಎಂದಂತೆ.

ಬೈಬಲಿನಲ್ಲಿ ಗಾಂಧೀ ಸಾಹಿತ್ಯದಲ್ಲಿದ್ದ ಹಾಗೆ ವಿಷಯಬಾಹುಳ್ಯವಿಲ್ಲ. ಅದರ ಸರಳತೆ, ಸಂಗ್ರಹಶಕ್ತಿ, ಅನುಭವದ ನೈಶಿತ್ಯ ಎಲ್ಲಾ ಇದರಲ್ಲಿವೆ. ಇದರ ತರ್ಕದ ರೀತಿ, ಶಾಸ್ತ್ರೀಯ ದೃಷ್ಟಿ ಅದರಲ್ಲಿಲ್ಲ. ಅದರ ಪವಾಡಗಳಲ್ಲಿ ಕಾಣದ ಒಂದು ತೂಕ ಇದರಲ್ಲಿದೆ. ಕೆಲವರು ಗಾಂಧೀಜಿಯ ಶೈಲಿಯನ್ನು ಗ್ರೀಸ್‌ದೇಶದ ಪ್ಲೇಟೋಗೆ ಹೋಲಿಸಿದಾರೆ. ಭಾವದ ಆಳವಲ್ಲಿ ಕ್ರಿಸ್ತನಿಗೆ

ಸರಿ ಎಂದಿದ್ದಾರೆ. ದಯಾರಸದಲ್ಲಿ ಸಾಧು ಫ್ರಾನ್ಸಿಸ್ಸಿಗೆ, ಕಿರಿವಾತಿನ ನಡಿಗೆಯಲ್ಲಿ ರಷ್ಯಾದೇಶದ ಚೆಕವ್‌ಗೆ ಹೋಲಿಸಿದಾರೆ. ಸಂವಾದದಲ್ಲಿ ಸಾಕ್ರೆಟೀಸನ ಹಾದಿ ಇವರದು ಎಂದಿದಾರೆ. ಗಾಂಧೀಜಿಯ ಧರ್ಮಸ್ಫೂರ್ತಿ ಇಂಥ ಇಂಥ ಮೂಲಗಳಿಂದ ದೊರಕಿತು ಎಂಬುದನ್ನು ಅವರೇ ಹೇಳಿದಾರೆ. ಸಾಹಿತ್ಯದಲ್ಲಿ ಹಾಗೆ ಅವರಿಗೆ ಯಾರೂ ಹಾದಿ ತೋರಿಸಿದಂತಿಲ್ಲ. ಅದು ಸಹಜವಾಗಿಯೇ ಬಂದ ಗುಣ. ಅದರಲ್ಲಿ ಬುದ್ಧನ ಉಪಮಾನ ಪದ್ಧತಿಯ ಗುರುತು ಇದೆ. ಭಾಗವತ ಸಂಪ್ರದಾಯದ ವಿನಯವಿದೆ. ಕಬೀರ ಅಕಬರರ ಧರ್ಮವೈಶಾಲ್ಯವಿದೆ. ಶಂಕರಾಚಾರ್ಯರ ತರ್ಕ, ರಾಮಾನುಜರ ಪ್ರಪತ್ತಿ, ತುಲಸೀದಾಸನ ಗಾಢಭಕ್ತಿ, ಇವೆಲ್ಲದರ ಜೊತೆಗೆ ಇದಿರು ಪಕ್ಷದವರು ಹೇಳಿದುದೂ ನಿಜವೇಕೆ ಆಗಬಾರದು ಎಂಬ ಅನಾಸಕ್ತಿ-ಎಲ್ಲವೂ ಅದರಲ್ಲಿ ಕಾಣುತ್ತವೆ. ಸಂಗ್ರಹಶಕ್ತಿ, ನಿರ್ಭಯಗಳಲ್ಲಿ ಸರ್ವಜ್ಞನ ಹಾಗೆ. ಮಾತು ಬಳಸುವ ತೂಕದಲ್ಲಿ ಫ್ರೆಂಚ್ ಸಾಹಿತಿ ಮೇಟರ್‌ಲಿಂಕನ ಹಾಗೆ. ಒಟ್ಟನಲ್ಲಿ ಗಾಂಧೀಜೀ ಗಾಂಧೀಜಿಯ ಹಾಗೆ. ಅವರ ಹಾಗೆ ಮತ್ತೊಬ್ಬರಿಲ್ಲ.

ಮಾತು ಗುಂಡಿನಂತೆ ಎಂದು ಮೊದಲೇ ಹೇಳಿತು. ಮೇಯೋ ಎಂಬಾಕೆ ಹಿಂದುಸ್ತಾನವನ್ನು ಅಸಹ್ಯವಾಗಿ ವರ್ಣಿಸಿ ಒಂದು ಪುಸ್ತಕ ಬರೆದಾಗ ಅವರು ಮಾಡಿದ ವಿಮರ್ಶೆ ಓದಿದರೆ ಆ ಗುಂಡಿನೇಟು ಗೊತ್ತಾಗುತ್ತದೆ. ಅದನ್ನು Drain Inspector's Report—ಚರಂಡಿ ಕೊಚ್ಚೆ ಪರೀಕ್ಷೆಯ ವರದಿ — ಎಂದರು. It is a book which no European and every Indian should read. ಈ ಪುಸ್ತಕ ಯಾವ ಐರೋಪ್ಯನೂ ಓದಬಾರದುದು, ಎಲ್ಲ ಭಾರತೀಯರೂ ಓದಲೇಬೇಕಾದುದು- ಎಂದು ಒಂದೇ ವಾಕ್ಯದಲ್ಲಿ ಅದರ ಅವತಾರ ಮುಗಿಸಿಬಿಟ್ಟರು. ಆ ವಾಕ್ಯದಲ್ಲಿ ಅವರ ಪ್ರಾಮಾಣಿಕತೆ ದೇಶಪ್ರೇಮ ಎರಡೂ ಕಾಣುತ್ತವೆ. ಯಾರೋ ಕುತರ್ಕ ಮಾಡಿ ಪತ್ರ ಬರೆದರೆ ಅದನ್ನು Snares of Satan —ಕಲಿಯ ಜಾಲ—ಎಂದರು. ಇಂಥ ಪ್ರಯೋಗ ಮನಸ್ಸಿನಲ್ಲಿ ನೆಟ್ಟು ನೆನಪಿನಲ್ಲಿ ನಿಲ್ಲುತ್ತವೆ. ರವೀಂದ್ರರು ಖಾದೀ ಚಳುವಳಿಯ ಬಗ್ಗೆ, ಪರದೇಶೀ ಬಟ್ಟೆಯ ಬಹಿಷ್ಕಾರದ ಬಗ್ಗೆ ಗಾಂಧೀಜಿಗೆ ಎಚ್ಚರಿಕೆ ಕೊಟ್ಟಾಗ

ಅವರನ್ನು Great Sentinel – ಎಂದು ಕರೆದು ತಮ್ಮ ವಿನಯ ತೋರಿಸಿದರು. Himalayan Blunder—ಹಿಮಾಚಲದಂಥ ಅಪರಾಧ, Fallen Sisesrs – ಪತಿತ ಸಹೋದರಿಯರು, ಸತ್ಯಶೋಧನೆ ಮುಂತಾದ ಅವರ ಪ್ರಯೋಗ ನಮ್ಮ ಬಳಕೆಯಲ್ಲಿ ನುಸುಳಿಕೊಂಡಿವೆ.

ಎರಡೇ ಮಾತಿನಲ್ಲಿ ಬ್ರಹ್ಮಾಂಡದಷ್ಟು ಅರ್ಥವನ್ನು ತುಂಬಿಹೇಳುವ ಸಂಗ್ರಹ ಪದ್ಧತಿ ನಮಗೆ ಹೊಸದಲ್ಲ. ಈ ಕಲೆಯಲ್ಲಿ ಸರ್ವಜ್ಞ ನಮಗೆ ಗುರು. ಎಲ್ಲರೂ ಅನುಭವಿಸಿ ತಿಳಿದ ಉಪಮಾನಗಳು ಅವನ ಇನ್ನೊಂದು ಗುಣ. ಇವೆರಡೂ ಗುಣ ಗಾಂಧೀಜಿಯಲ್ಲಿ ಕಾಣುತ್ತವೆ. ಅನುಭವಕ್ಕೆ ನಿಲುಕುವ ದೃಷ್ಟಾಂತ ಕೊಡುವುದು ಜನಪದ ಸಾಹಿತ್ಯದ ಲಕ್ಷಣ. ಸಂಗ್ರಹ ಶಕ್ತಿ ಮಾತ್ರ ಸರ್ವಜ್ಞನ ಜಾತಿಯ ಸೊತ್ತು. Free love is Dog's love – ನಿರ್ಬಂಧವಿಲ್ಲದ ಸ್ತ್ರೀಪ್ರೇಮ ನಾಯಿಕಾಮ ಎಂದಾಗ ಸ್ವೈರವೃತ್ತಿಯ ಬಗ್ಗೆ ಹೇಳಬೇಕಾದುದು ಏನೂ ಉಳಿಯಲಿಲ್ಲ. ನವನಾಗರಿಕ ತರುಣಿಯನ್ನು Juliet to half a dozen Romeos – ಎಂದಾಗ ಹೊಸಕಾಲದ ಬೆಡಗುಗಾತಿಯ ಮಾಯಕಾರಿತನಕ್ಕೆ ಅಳಿಸಲಾರದ ಮಸಿ ಬಳಿದರು. Hindu is a coward, Musalman is a bully – ಹಿಂದು ಹೇಡಿ, ತುರುಕ ಜಗಳಗಂಟ – ಎಂದು ಹಿಂದುಸ್ತಾನದ ಸ್ಥಿತಿಯನ್ನು ವರ್ಣಿಸಿದರು. ನಮ್ಮ ನಾಡಿನ ಕುಂದುಕೊರತೆಗಳಿಗೆ, ದೌರ್ಭಾಗ್ಯಕ್ಕೆ ಇದಲ್ಲದೆ ಬೇರೆ ಸೂತ್ರ ಏನಿದೆ? Man is a fallen angel – ಮಾನವನು ಭ್ರಷ್ಟನಾದ ದೇವತೆ ಎಂದು ಐರ್ಲೆಂಡಿನ ಎ. ಇ. ಕವಿ ಹೇಳಿದಾನೆ. ಹಾಗೆಯೇ ಗಾಂಧೀಜೀ Birth is a fall ಜನ್ಮವೆಂದರೆ ಪತನ – ಎಂದು ಹೇಳಿ ಅದೇ ಮಾತನ್ನೇ ಇನ್ನೊಂದು ರೀತಿಯಲ್ಲಿ ಆಡಿದಾರೆ. Good is a snail, Evil has wings – ಪುಣ್ಯವು ಮಣ್ಣಿನ ಹುಳ; ಪಾಪವು ಹಾರುವ ಹಕ್ಕಿ ಎಂದು ಇನ್ನೊಂದು ಕಡೆ ಪುಣ್ಯ ಪಾಪ ಕರ್ಮಗಳ ಫಲ ಸಿಗುವ ಕಾಲಪ್ರಮಾಣವನ್ನು ತೋರಿಸಿದರು. ಗಾಂಧೀಜೀ ಬರೆವುದು ಪದ್ಯವಲ್ಲ, ಗದ್ಯ. ಗದ್ಯದಲ್ಲಿ ಸಂಗ್ರಹಣಗುಣ ಬರುವುದು ಎಷ್ಟು ಕಷ್ಟವೆಂಬುದು ಗದ್ಯ ಬರೆಯುವವರಿಗೇ ಗೊತ್ತು. ಗದ್ಯದಲ್ಲಿ ಆ ಗುಣ ಇದ್ದರೂ ಛಂದಸ್ಸಿನ ನೆರವಿಲ್ಲದೆ ಅದು ನೆನಪಿನಲ್ಲಿ ನಿಲ್ಲುವುದು ಸಾಧ್ಯವಿಲ್ಲ.

ಗಾಂಧೀಜೀ ಎಂಥ ಗದ್ದಲದ ನಡುವೆಯೂ ತಾವು ಬರೆಯಬೇಕಾದುದನ್ನು ಬರೆಯುತ್ತಾರೆ. ರೈಲಿನಲ್ಲಿ ಪ್ರವಾಸ ಮಾಡುತ್ತಿರುವಾಗಲೂ ಬರೆಯುತ್ತಾರೆ. ಕವಿಗಳಿಗೆ ಬೇಕಾಗುವ ಯಾವ ಸಲಕರಣೆಯೂ ಬೇಡ. ಕಾಗದ ಲೇಖನಿ ಎರಡು ಇದ್ದರೆ ಸಾಕು. ಅವರ ವೇಗವೂ ಹಾಗೆಯೇ. ಅವರು ನಡೆದರೆ ಹೇಗೆ ತೇಲಿಕೊಂಡು ಹೋಗುತ್ತಾರೆಯೋ ಬರೆಯುವಾಗಲೂ ಹಾಗೆಯೇ.

ಗಾಂಧೀಜಿಯ 'ಸತ್ಯಶೋಧನೆ' ಅವರ ಶೈಲಿಗೆ ಮಾದರಿ. ಆದರೆ ನಮಗೆ ಆ ಗ್ರಂಥವನ್ನು ಮೂಲರೂಪದಲ್ಲಿ ಓದುವ ಭಾಗ್ಯವಿಲ್ಲ. ಗಾಂಧೀಜೀ ಬರೆದ ಮೂಲಗ್ರಂಥ ಗುಜರಾತಿಯಲ್ಲಿದೆ. ಇಂಗ್ಲೀಷಿನಲ್ಲಿ ಓದಿದರೂ ಮಹಾದೇವ ದೇಸಾಯಿಯ ಭಾಷಾಂತರವನ್ನೆ. ಕನ್ನಡದ ಭಾಷಾಂತರ ಹಿಂದಿಯಿಂದ ಮಾಡಿದ್ದು. ಗುಜರಾತಿ ಗ್ರಂಥ ಅಚ್ಚಾದ ೧೫ ದಿನದಲ್ಲೇ ೧೦ ಸಾವಿರ ಪ್ರತಿ ಮಾರಿಹೋದವು. ಹಿಂದುಸ್ಥಾನದಲ್ಲಿ ಇಷ್ಟು ಬೇಗ ಇಷ್ಟು ಪ್ರತಿ ಮಾರಿದ ಪುಸ್ತಕ ಇದೊಂದೇ! ಅದರಲ್ಲಿ ಗಾಂಧೀಜೀ ತಮ್ಮ ಇಡೀ ಬಾಳನ್ನು ಹೊರಗೆ ನಿಂತು ನೋಡಿ ಅದರ ದಿಣ್ಣೆತಗ್ಗುಗಳನ್ನು ತೋರಿಸಿದಾರೆ. ಸತ್ಯ ಅಹಿಂಸೆಗಳು ತಮ್ಮ ಗಜಕಡ್ಡಿ. ತಮ್ಮ ಬಾಳಿನಲ್ಲಿ ಈ ತತ್ವ ಎಲ್ಲಿ ಮೂಡಿಬಂದವು, ಎಲ್ಲಿ ತಮ್ಮ ದುರ್ಬಲತೆ ಅದನ್ನು ಮೂಡಗೊಡಲಿಲ್ಲ ಎಂಬುದನ್ನು ಪ್ರಾಮಾಣಿಕತನದಿಂದ ತಿಳಿಸಿದಾರೆ. ನಿಜವಾದ ಆತ್ಮಕಥೆಗೆ ಇರಬೇಕಾದ ನಿಸ್ಸಂಕೋಚ ಅದರಲ್ಲಿ ಪುಟಪುಟಕ್ಕೂ ಕಾಣುತ್ತದೆ. ಗಾಂಧೀಜಿಯ ಬಾಳಿನಲ್ಲಿ ಮುಚ್ಚುಮರೆಗೆ ಎಡೆಯೇ ಇಲ್ಲ. ಈ ಸ್ವಭಾವ ಅವರ ಸಾಹಿತ್ಯದಲ್ಲೂ ಒಡೆದುಕಾಣುತ್ತದೆ. ಆತ್ಮಕಥೆಯಲ್ಲಾಗಲಿ ಬೇರೆ ಬರಹದಲ್ಲಾಗಲೀ ಸಂಕೋಚವಿಲ್ಲ, ಅಂಜಿಕೆಯಿಲ್ಲ. ನಮ್ಮ ಸಾಹಿತ್ಯದ ಹೊಳೆ ಈಗ ಬೇರೆ ದಾರಿಯಲ್ಲಿ ಹರಿಯತೊಡಗಿದೆ. ಗಾಂಧೀಜಿಯ ಸಾಹಿತ್ಯದ ನಿರ್ಭೀತಿ, ಸತ್ಯ ಅದರ ಒಲವನ್ನು ಬದಲುಮಾಡಿದೆ.

ಗುಜರಾತಿ ಸಾಹಿತ್ಯಕ್ಕಂತೂ ಅವರ ಬರೆಹ ಹೊಸದೊಂದು ಯುಗವನ್ನೇ ದಾನಮಾಡಿದೆ. ಗಾಂಧೀಜೀ ಗುಜರಾತಿಯ ಗದ್ಯಕ್ಕೆ ತಂದೆಯಿದ್ದ ಹಾಗೆ. ಗದ್ಯದಲ್ಲಿ ಅವರ ಹಾಗೆ ಗಾಂಭೀರ್ಯ ತುಂಬಿದವರು ಯಾರೂ ಇಲ್ಲದ. ಗುಜರಾತೀ ನುಡಿಯಲ್ಲಿ ಮೊದಲು, ಒಂದು ದಾರಿ ಒಂದು ಕಟ್ಟು ಇರಲಿಲ್ಲ.

ಮನಸ್ಸಿಗೆ ಬಂದಹಾಗೆ ಬರೆಯುತ್ತಿದ್ದರು. ಪದಗಳ ಉಚ್ಚಾರದಲ್ಲೂ ಒಂದು ಕ್ರಮವಿರಲಿಲ್ಲ. ಶಕಾರ ಸಕಾರಗಳ ಭೇದವೇ ಕಂಡುಬರುತ್ತಿರಲಿಲ್ಲ. ಹ್ರಸ್ವ ದೀರ್ಘಗಳ ಮಾತು ಹಾಗಿರಲಿ– ಪದ್ಯದಲ್ಲಿ ಗಣಕ್ಕೂ ಕಟ್ಟು ಇರಲಿಲ್ಲ. ಗಣಕ್ಕೆ ನಾಲ್ಕೇನು ಐದೇನು ಮನಸ್ಸಿಗೆ ಬಂದಷ್ಟು ಮಾತ್ರೆ. ಒಣ ಪಾಂಡಿತ್ಯ ಬೆಳೆದು ಶಬ್ದಾಡಂಬರವೇ ಶೈಲಿ ಆಗಿತ್ತು. ಗುಜರಾತಿ ನುಡಿಗೆ ಏಕರೂಪ ಇರಲಿಲ್ಲ. ಅಹಮುದಾಬಾದಿನವರ ಗುಜರಾತಿ ಸೂರತ್ತಿನವರಿಗೆ ತಿಳಿಯು ತ್ತಿರಲಿಲ್ಲ. ಕಾಠೆವಾಡದ ಜನರಿಗೆ ಇವೆರಡೂ ತಿಳಿಯುವ ಹಾಗೆ ಇರಲಿಲ್ಲ. ಸಾಲದ್ದಕ್ಕೆ ಪಾರ್ಸೀ ಜನರ ಕೈಗೆ ಸಿಕ್ಕಿ ಗುಜರಾತಿ– ಅವರೂ ಮಾತಾಡು ವುದು ಗುಜರಾತಿ, ಅವರ ಓದುಬರೆಹವೂ ಅದೇ–ಹೈದರಾಬಾದಿನ ತೆಲಗು-ಕನ್ನಡಗಳಂತೆ ಅಡಿಬಿಡಂಗಿಯಾಗಿತ್ತು. ಶಬ್ದಗಳ ಸರಿಯಾದ ರೂಪ ಮರೆತುಹೋಗಿ ಶಬ್ದಸಾಂಕರ್ಯ ಬೆಳೆದಿತ್ತು. ಇದನ್ನೇ ಶೋಧಿಸಿ ಪರಿಷ್ಕರಿಸಿ ಗುಜರಾತೀ ನಿಘಂಟು ಒಂದನ್ನು ಸಿದ್ಧಮಾಡಿಸಿದರು. ಶಬ್ದರೂಪಗಳನ್ನೂ ಅವುಗಳ ಸರಿಯಾಡ ಅಕ್ಷರಕ್ರಮವನ್ನೂ ನಿರ್ಣಯಿಸಿದರು. ಅವರ ಗುಜ ರಾತಿ ವಿದ್ಯಾಪೀಠ ಈ ಕೆಲಸವನ್ನು ನಿರ್ವಹಿಸಿತು. ಆ ನಿಘಂಟು ಅಚ್ಚಾ ಗಿದೆಯೋ ಇಲ್ಲವೋ– ಅಂತು ೬೦ ಸಾವಿರ ಪದಗಳು ಅದರಲ್ಲಿ ಬಂದಿವೆ ಎಂದು ಅದನ್ನು ನೋಡಿದವರು ಬರೆದಿದಾರೆ.

ಸಾಹಿತ್ಯವೆಂದರೆ ಏನೆಂಬುದನ್ನೇ ಜನರು ಮರೆತಿದ್ದರು. ರಸದಿಂದ ಕೂಡಿದ್ದೇ ಸಾಹಿತ್ಯ. ಗಂಭೀರವಲ್ಲದುದೇ ರಸ. ಹೀಗೊಂದು ಸಂಪ್ರದಾ ಯವೇ ಇತ್ತು. ಇಂಥ ಸೂತ್ರವನ್ನು ನಂಬಿದ ಸಾಹಿತ್ಯದಲ್ಲಿ ಸಂಯಮಕ್ಕೆ ನಿಗ್ರಹಕ್ಕೆ ತಾವು ಎಲ್ಲಿಯದು? ಈ ಗದ್ದಲದಲ್ಲಿ ವಾಙ್ಮಯದಿಂದ ಶಾಸ್ತ್ರ ದೂರ ಹಾರಿಹೋಯಿತು. ಕಾವ್ಯ– ಸಾಹಿತ್ಯ ಬರೀ ವಿನೋದವಾಯಿತು. ಗಂಭೀರವಿಷಯಗಳ ಬಗ್ಗೆ ಬರೆವವರೇ ಇರಲಿಲ್ಲ. ಇದರಿಂದ ಪದಸಂಪತ್ತಿ ಬೆಳೆಯಲಿಲ್ಲ. ಸೂಕ್ಷ್ಮವಾದ ಅರ್ಥಭೇದಗಳನ್ನು ತಿಳಿಸುವ ಶಬ್ದ ಹುಟ್ಟಿ ಬರಲಿಲ್ಲ. ಗಾಂಧೀಜೀ ಲೇಖನಕಾರ್ಯಕ್ಕೆ ಕೈಹಾಕಿದಮೇಲೆ ಗುಜರಾತಿ ಸಾಹಿತ್ಯದಲ್ಲಿ ದೊಡ್ಡ ಸುಂಟರಗಾಳಿ ಎದ್ದಿತು. ಶಬ್ದಾಡಂಬರದ ಪಾಂಡಿತ್ಯ ಅಲಂಕಾರದ ಕಾವ್ಯ ಮಾಯವಾದವು. ಭಾಷೆಗೆ ಸರಳತೆಯ ಉಡಿಗೆ ತೊಡಿಸಿದರು; ಅದರ ಜೊತೆಯಲ್ಲೇ ಗಾಂಭೀರ್ಯದ ರುಮಾಲನ್ನೂ ಇಟ್ಟರು.

ಎಲ್ಲರಿಗೂ ತಿಳಿಯುವ ಹಾಗೆ ಬರೆಯುವ ಹಂಬಲದಲ್ಲಿ ಭಾಷೆಯನ್ನು ಗ್ರಾಮ್ಯದ ಹೊಲಸಿಗೆ ಎಳೆಯಲಿಲ್ಲ. ರೂಢಿಯ ನುಡಿಗೆ ಒಂದು ಸಂಸ್ಕಾರ ಕೊಟ್ಟು ಅದಕ್ಕೆ ಒಂದು ಮಟ್ಟವನ್ನು ಕಟ್ಟಿದರು. ಅವರು ಬರೆದ ವಿಷಯ ಗಳಾದರೂ ನಾನಾ ಬಗೆಯವು. ಧರ್ಮ, ರಾಜಕಾರಣ, ಅರ್ಥಶಾಸ್ತ್ರ, ವಿಮರ್ಶೆ, ಅಹಿಂಸೆ, ಸತ್ಯ, ಬ್ರಹ್ಮಚರ್ಯ, ದೇವರು, ವರ್ಣಾಶ್ರಮ – ಲೆಕ್ಕ ವಿಲ್ಲದಷ್ಟು ವಿಷಯ. ಗುಜರಾತಿ ವೀರರಸಕ್ಕೆ ಯೋಗ್ಯವಲ್ಲ ಎಂದು ಯಾರೋ ಪಂಡಿತರು ಹೇಳಿದ್ದಿರಬೇಕು. ಆ ನಂಬಿಕೆ ಗುಜರಾತಿ ಜನ ರಲ್ಲಿ ಬೇರೂರಿತ್ತು. ಅದು ಗಾಂಧೀಜೀ ಬಂದ ಮೇಲೆ ಎಲ್ಲಿ ಮುಳುಗಿ ಹೋಯಿತೋ! ಅವರ ಬರೆಹದಲ್ಲಿ ಕಾಣುವ ವೀರರಸ ನಿಗ್ರಹದಿಂದ ಕೂಡಿದ್ದು. ಅದರಲ್ಲಿ ರಣಭೇರಿಗಳ ಭೋಂಕಾರವಿಲ್ಲ. ಉಚ್ಚ ಸಂಸ್ಕೃತಿಯ ಸಂಕಲ್ಪ ಕಾಣಬರುತ್ತದೆ. ೧೯೨೨ರಲ್ಲಿ ಗಾಂಧೀಜಿಗೆ ಶಿಕ್ಷೆಯಾದಾಗ ನ್ಯಾಯಾಲಯದಲ್ಲಿ ಅವರು ನಡೆದುಕೊಂಡ ರೀತಿ, ಅವರು ಆಡಿದ ಮಾತು ವೀರರಸದ ಉದಾತ್ತ ದೃಶ್ಯದಂತಿದೆ. ಯಾವ ಧೀರೋದಾತ್ತ ನಾಯಕ ಅಂಥ ಸಂದರ್ಭದಲ್ಲಿ ಅದಕ್ಕಿಂತ ಚೆನ್ನಾಗಿ ನಡೆದುಕೊಂಡಾನು? ಇಂಥ ಸಂದರ್ಭ ನಮ್ಮ ಇತಿಹಾಸದಲ್ಲಿ ಒಂದೇ ಒಂದು ಕಡೆ ಬರುತ್ತದೆ. ವೀರ ಸಿಕಂದರ್ ಪಂಜಾಬಿನ ದೊರೆ ಪೌರವ (Porus) ನನ್ನು ಗೆದ್ದಾಗ ಸೋತ ದೊರೆ ಸೆರೆಸಿಗುತ್ತಾನೆ. ಅವನನ್ನು ಸಿಕಂದರನ ಬಳಿಗೆ ಕರೆತರುತ್ತಾರೆ. ಆಗ ಗೆದ್ದ ದೊರೆ ಕೇಳಿದನಂತೆ: ಅಯ್ಯಾ, ನಿನ್ನೊಡನೆ ಹೇಗೆ ಮಾತಾಡಲಿ ಎಂದು. ಸೋತು ಸಾವಿಗೆ ಸಿದ್ಧನಾಗಿದ್ದ ಪೌರವ ಹೇಳಿದನಂತೆ – 'ದೊರೆ ಯೊಡನೆ ಮಾತಾಡುವ ಹಾಗೆ.' ಆ ಧೈರ್ಯಕ್ಕೆ, ಆ ಶಾಂತಿಗೆ ಮೆಚ್ಚಿ ಸಿಕಂದರ್ ಅವನ ರಾಜ್ಯವನ್ನು ಅವನಿಗೆ ಕೊಟ್ಟು ಬಹಳ ಮರ್ಯಾದೆಮಾಡಿದನಂತೆ. ಸಿಕಂದರ್ ವೀರಗುಣ ಪಕ್ಷಪಾತಿ. ಆ ಸಂದರ್ಭದ ಎಲ್ಲ ವಿವರಗಳೂ ಇಲ್ಲಿ ಹೊಂದವು. ಆದರೆ ಅದೇ ಜೀವ ಇಲ್ಲಿ ಮತ್ತೆ ಅಂಥವೇ ಮಾತು ಆಡುತ್ತಿದೆ. ಗಾಂಧೀಜೀ ಇನ್ನೂ ಒಂದು ಹೆಜ್ಜೆ ಮುಂದೆ. 'ಹರಿಯ ಧ್ಯಾನ ಬಿಡು, ಇಲ್ಲದಿರಲು ಕೊಂದುಹಾಕುತ್ತೇನೆ' ಎಂದು ತಂದೆಯೇ ಗರ್ಜಿಸಿದಾಗ 'ಬಿಡಲಾರೆ, ಪ್ರಾಣಹೋದರೂ ಸರಿ' ಎಂದು ಹೇಳಿದ ಪ್ರಹ್ಲಾದನಂತೆ

'ರಾಜದ್ರೋಹ ನನ್ನ ಧರ್ಮ. ಈಗ ನನ್ನನ್ನು ಕೈಬಿಟ್ಟರೆ ಮತ್ತೆ ರಾಜದ್ರೋಹ ಹರಡುತ್ತೇನೆ' ಎಂದು ಗಾಂಧೀಜೀ ಹೇಳಿದರು.

ಗುಜರಾತಿ ಸಾಹಿತ್ಯದಲ್ಲಿ ಈ ವೀರರಸ ತುಂಬಿ ಬರದಿದ್ದರೆ ಬರ್ದೋಲಿಯ ಸತ್ಯಾಗ್ರಹದಂಥ ಮಹಾಸಾಹಸ ನಡೆಯುತ್ತಿರಲಿಲ್ಲ. 'ನವಜೀವನ' ಜನರಲ್ಲಿ ನವಜೀವನವನ್ನೆ ಹರಿಯಿಸಿತು. ಹೇಡಿಗಳೂ ದುರ್ಬಲರೂ ಆದ ಪಾಮರ ಜನ ಕಡುಗಲಿಗಳಂತೆ ಆ ಚಳುವಳಿ ನಡೆಸಿದರು. ಹಿಂದುಸ್ಥಾನದ ಇತಿಹಾಸದಲ್ಲಿ ಅದೊಂದು ಚಿರಸ್ಮರಣೀಯ ಪ್ರಸಂಗವಾಯಿತು.

ವೀರರಸಕ್ಕೆ ಹೊಸದೊಂದು ಬಣ್ಣ ಕೊಟ್ಟಂತೆ ಭಕ್ತಿರಸಕ್ಕೂ ಒಂದು ಪುಟ ಕೊಟ್ಟಿದಾರೆ. ಅವರ ಬರೆಹದಲ್ಲಿ ಆ ಭಕ್ತಿಯ ವಿನಯ ಎಲ್ಲೆಲ್ಲೂ ಒಡೆದು ಕಾಣುತ್ತದೆ. ನಮಗೆ ಬರುವ ದುಃಖ ಸುಖ ಎಲ್ಲವೂ ದೇವರ ಚಿತ್ತ. ಇದು ದುಃಖ ಇದು ಸುಖ ಎಂದು ತಿಳಿದರೆ ನಮ್ಮ ಭಕ್ತಿ ಕುಂಟುತ್ತದೆ. ನಮಗೆ ಮೋಕ್ಷ ಬೇಕು ಎಂದು ಬಯಸುವುದು ಕೂಡ ಒಂದು ರಾಗ. ಅದು ಹರಿಯ ಚಿತ್ತ. ನಮ್ಮ ಕೆಲಸ ಅನಾಸಕ್ತರಾಗಿ ಬಾಳು ನಡೆಸುವುದು ಎಂಬ ಪ್ರಪತ್ತಿಯ ಭಾವ ಇರುವ ಹಾಗೆ ಇದೆ ಗಾಂಧೀಜಿಗೆ. ದೇವರನ್ನು ಕಾಡಿಬೇಡುವ ಭಕ್ತಿ ಅವರ ಪಾಲಿಗೆ ಒರಟುತನ. ನಡುನೀರೊಳಗೆ ಕೈಯ ಬಿಡುವರೇ ಎಂಬ ಮೊರೆ ಇಷ್ಟು ಹೊತ್ತಿನವರೆಗೂ ಹಿಡಿದು ನಡೆಸಿದ ಕೈಯಲ್ಲಿಲ್ಲದ ಆನಂದ ಆಚೆಯ ದಡದಲ್ಲಿ ಏನೋ ಇದೆ ಎಂಬ ಭಾವನೆಯಿಂದ ಬಂದದ್ದು. ಆ ಕೈಗೆ ನಡುನೀರೊಳಗೆ ಮುಳುಗಿಸುವುದೇ ಚೆಂದ ಕಂಡರೆ ನಮಗೂ ಅದೇ ಚೆಂದ. 'ನಿಮ್ಮ ಆರೋಗ್ಯ ಕೆಡುತ್ತಿದೆ. ನೀವು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕು. ದೇಶಕ್ಕೆ ನಿಮ್ಮಿಂದ ಆಗಬೇಕಾದ ಉಪಕಾರ ಬಹಳ ಇದೆ' ಎಂದು ಯಾರಾದರೂ ಹೇಳಿದರೆ 'ಈ ದೇಹವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೋ, ಯಾವಾಗ ಅದರ ಕೆಲಸ ಮುಗಿಸಬೇಕೋ ದೇವರಿಗೆ ಗೊತ್ತಿದೆ' ಎನ್ನುತ್ತಾರೆ ಗಾಂಧೀಜೀ.

ಗಂಡು ಹೆಣ್ಣಿನ ಸಂಬಂಧದ ಬಗ್ಗೆ ಬರೆವಾಗ ಗಾಂಧೀಜಿಯ ನಿಗ್ರಹ ಕಂಡಹಾಗೆ ಉಳಿದ ಕಡೆ ಗೊತ್ತಾಗುವುದಿಲ್ಲ. ಗಾಂಧೀಜೀ ಮೂವತ್ತು ವರುಷಕ್ಕೆ ಮೀರಿ ಅಖಂಡವಾಗಿ ಬ್ರಹ್ಮಚರ್ಯ ಪಾಲಿಸಿದಾರೆ. ಅವರಿಗೆ 'ಮದುವೆ ಒಂದು ಪಾತಿತ್ಯ.' ಹೀಗಿದ್ದರೂ – ಅಥವಾ ಹೀಗಿದೆ ಎಂತಲೇ –

ಅವರು ದಾಂಪತ್ಯ, ಗಂಡು ಹೆಣ್ಣಿನ ಕಾಮವಾಸನೆ ಮೊದಲಾದುದರ ಬಗ್ಗೆ ಬೇಕಾದಷ್ಟು ಬರೆದಿದಾರೆ. ಆದರೆ ಅವರು ಬರೆದುದು ಕಾಮಶಾಸ್ತ್ರವಲ್ಲ, ಸಂಯಮಶಾಸ್ತ್ರ. ಕಾಮರಾಜ್ಯ 'ಬಣ್ಣದ ಮಾವಿನಕಾಯಿ, ತೋಟ ಶೃಂಗಾರ' ಎಂಬುದು ಅವರ ನಂಬಿಗೆ. ಮನುಷ್ಯನ ಗುರಿ ಕಾಮಸಾಧನೆ ಯಲ್ಲ, ಇಂದ್ರಿಯನಿಗ್ರಹ. ಈ ದೃಷ್ಟಿಯಿಂದ ಅವರು ಬರೆದ ಲೇಖನಗಳು ಎರಡು ಪುಸ್ತಕಗಳಷ್ಟು ಆಗಿವೆ. ಅದರಲ್ಲಿ ಒಂದೇ ಒಂದಾದರೂ ಹೊಲಸು ಪದವಿಲ್ಲ; ಓದುವಾಗ ಮನಸ್ಸಿಗೆ ಎಲ್ಲೂ ಮೈಲಿಗೆ ಹತ್ತುವುದಿಲ್ಲ. ಈ ವಿಷಯದ ಬಗ್ಗೆ ಇಷ್ಟು ಧಾರಾಳವಾಗಿ, ಭಿಡೆಯಿಲ್ಲದೆ ಬರೆದವರು ಕಡಮೆ. ಒಬ್ಬರಿಬ್ಬರು ಬರೆದಿದ್ದರೂ ಆ ಬರೆಹದಲ್ಲಿ ಕಾಮದ ನಾತ ಬಹಳವಾಗಿ ಓದುವುದೇ ಕಷ್ಟವಾಗುತ್ತದೆ.

ಭಾಷೆಯಲ್ಲಿ ಈ ನಿಗ್ರಹ, ಈ ತೂಕ ಬರಲು ಭಾವದ ನೈರ್ಮಲ್ಯವೇ ಮುಖ್ಯಕಾರಣ. ಅಂತರಂಗ ಚೆನ್ನಾಗಿದ್ದಾಗ ನಡೆವಳಿ ಚೆನ್ನಾಗಿಲ್ಲದೆ ಏನು? ಆದರೂ ಗಾಂಧೀಜೀ ಇದಕ್ಕಾಗಿ ತುಂಬಾ ಪ್ರಯತ್ನಪಟ್ಟದಾರೆ. ತಾವು ಸತ್ಯೋಪಾಸಕರು, ತಮ್ಮ ನುಡಿಯಲ್ಲಿ ಎಲ್ಲಿ ಅಸತ್ಯ ಹೊಕ್ಕೀತೋ, ತಮ್ಮ ಭಾವದಲ್ಲಿ ಎಲ್ಲಿ ಹಿಂಸೆ ನುಣುಚಿಕೊಂಡೀತೋ ಎಂಬ ಎಚ್ಚರ ಅವ ರಿಗೆ ಸದಾ ಇದೆ. ಅವರಿಗೆ ಸಾಹಿತ್ಯವೂ ಒಂದು ಸಾಧನೆ. ತಮ್ಮ ಅನುಭವವನ್ನು ಸಾಣೆ ಹಿಡಿದುಕೊಂಡಿದಾರೆ. ಅಂತಲೇ ಆ ಭಾಷೆಯಲ್ಲಿ ಕುದಿಸುವ, ಕಾವೇರಿಸುವ ಗುಣವಿಲ್ಲ. ಮನಸ್ಸನ್ನು ಕರಗಿಸಿ ಕಡೆದು ಮೇಲ್ಮಟ್ಟಕ್ಕೆ ಒಯ್ಯುವ ಗುಣ ಇದೆ. ಅದರಲ್ಲಿ ಬೆಂಕಿಯಿಲ್ಲ, ಬೆಳಕಿದೆ.

ಅವರೇ ಹೀಗೆ ಬರೆದಿದಾರೆ ಆ ಎಚ್ಚರದ ಬಗ್ಗೆ. 'ನಾನು ಪತ್ರಿಕಾ ವ್ಯವಸಾಯವನ್ನು ವಿಲಾಸಕ್ಕಾಗಿ ಮೊದಲುಮಾಡಲಿಲ್ಲ. ನನ್ನ ಜೀವನ ಸಂದೇಶವನ್ನು ತಿಳಿಸಲು ಅದು ಒಂದು ಸಾಧನೆ. ಅಹಿಂಸೆ–ಸತ್ಯಗಳ ಹೂವಾದ ಸತ್ಯಾಗ್ರಹದ ಧರ್ಮವನ್ನು ಸಂಪೂರ್ಣ ನಿಗ್ರಹದಿಂದ ಮಾಡಿಯೂ ಆಡಿಯೂ ಕಲಿಸುವುದೇ ನನ್ನ ಉದ್ದೇಶ. ಅಹಿಂಸೆಗಿಂತ ಮಿಗಿಲಾದ ಸರ್ವ ದುಃಖ ನಿವಾರಿಣಿ ಮತ್ತೊಂದಿಲ್ಲ ಎಂದು ತೋರಿಸಲು ನಾನು ಆತುರನಾಗಿ ದೇನೆ. ನನ್ನ ಧರ್ಮ ಅದು. ಅಂತೆಯೇ ನಾನು ಬರೆಯುವಾಗ ಕ್ರೋಧ ಮತ್ಸರಗಳಿಗೆ ಎಡೆಕೊಡಲಾಗದು. ವ್ಯರ್ಥವಾಗಿಯೂ ಬರೆಯಲಾಗದು.

ಕೇವಲ ಉದ್ರೇಕ ಹುಟ್ಟಿಸಲೆಂದು ಬರೆಯಲು ಸಲ್ಲದು. ವಾರವಾರವೂ ವಿಷಯಗಳನ್ನಾರಿಸುವಾಗ, ಶಬ್ದಗಳನ್ನು ಉಪಯೋಗಮಾಡುವಾಗ, ಎಷ್ಟು ತೂಕ ಮಾಡಬೇಕಾಗುತ್ತದೆಯೋ ಓದುಗರಿಗೆ ಹೇಗೆ ತಿಳಿಯಬೇಕು. ನನಗೆ ಅದೊಂದು ಸಾಧನೆ. ನನ್ನ ದೌರ್ಬಲ್ಯ ಅದರಲ್ಲಿ ತಿಳಿಯುತ್ತದೆ. ನನ್ನ ಮನಸ್ಸನ್ನು ನಾನೇ ನೋಡಿಕೊಳ್ಳಲು ಅದು ನೆರವಾಗುತ್ತದೆ. ಜಂಬದಿಂದ ಒಂದು ಮಾತು ವ್ಯಂಗ್ಯವಾಗಿ ಬರುತ್ತದೆ: ಸಿಟ್ಟಿನಿಂದ ಒಂದು ಪದ ಒರಟಾಗಿ ಬರುತ್ತದೆ. ಅನೇಕ ಸಲ ಹೀಗೆ ಆಗುತ್ತದೆ. ಇಂಥ ಕಳೆಯನ್ನೆಲ್ಲ ಪೈರಿನಿಂದ ತೆಗೆಯುವುದು ನನಗೆ ದೊಡ್ಡ ವಿಷಪರೀಕ್ಷೆಯೆ ಆಗುತ್ತದೆ. 'ಯಂಗ್ ಇಂಡಿಯಾ'ದ ಬರಹ ತಕ್ಕಮಟ್ಟಿಗೆ ಗಂಭೀರವಾದ ವೇಷ ತೊಟ್ಟಿರುವುದನ್ನು ನೋಡಿ, ಫ್ರಾನ್ಸ್‌ದೇಶದ ರೊಮೆರೋಲಾ ಎಂದಂತೆ ಓದುಗರೂ 'ಪರವಾ ಇಲ್ಲ ಈ ಮುದುಕ' ಎಂದಾರು. ಆದರೆ ಆ ಗಾಂಭೀರ್ಯ–ಆ ಸೌಜನ್ಯ ಕಷ್ಟಪಡದೆ ಬಂದಿಲ್ಲ. ಎಚ್ಚರದಿಂದಲೂ ಪ್ರಾರ್ಥನಾಬಲದಿಂದಲೂ ಬೆಳೆಸಿಕೊಂಡ ಗುಣ ಅದು.'

ಆದುದರಿಂದ ಅಲಂಕಾರವಿಲ್ಲದಿದ್ದರೂ ಆ ಸಾಹಿತ್ಯ ಅಂದವಾಗಿದೆ. ವ್ಯಕ್ತಿಪರಿಚಯದಲ್ಲಿ ಅವರದು ಎತ್ತಿದ ಕೈ. ಅವರ ಸೂಕ್ಷ್ಮ ನಿರೀಕ್ಷಣೆ ಅಲ್ಲಿ ಚೆನ್ನಾಗಿ ಕಂಡುಬರುತ್ತದೆ. ಸ್ವಾಮಿ ಶ್ರದ್ಧಾನಂದ, ಕವಿ ರಾಯಚಂದ್, ಮೋತಿಲಾಲ್ ನೆಹರು, ಮಗನಲಾಲ್ ಗಾಂಧೀ, ಛೋಟೇಲಾಲ್ ಜೈನ, ಚಿತ್ತರಂಜನದಾಸರ ಬಗ್ಗೆ ಅವರು ಬರೆದ ವ್ಯಕ್ತಿಚಿತ್ರಗಳಲ್ಲಿ ಆ ಕೌಶಲ ಕಂಡು ಬರುತ್ತದೆ. ಪ್ರಕೃತಿ ವರ್ಣನೆಯಲ್ಲೂ ಗಾಂಧೀಜೀ ಏನು ಕಡಮೆ ಇಲ್ಲ. ಸಿಂಧೂ ನದಿಯ ವರ್ಣನೆ, ಪದ್ಮಾನದಿಯಲ್ಲಿ ದೋಣಿಯ ವರ್ಣನೆ ಮುಂತಾದುವು ಬಹಳ ಸೊಗಸಾಗಿದೆ. ತಿರುವಾಂಕೂರು ಸಂಸ್ಥಾನದ ಪ್ರವಾಸವನ್ನು ಅವರು ವರ್ಣಿಸಿದ ಹಾಗೆ ವರ್ಣಿಸಬಲ್ಲವರು ವಿರಳ.

ಗಾಂಧೀಜೀ ಲೇಖನ ವ್ಯವಸಾಯಕ್ಕೆ ಮೊದಲಿಟ್ಟು ಬಹಳ ದಿನವಾಯಿತು. ದಕ್ಷಿಣ ಆಫ್ರಿಕಾದಲ್ಲೇ ಬರೆಯಲು ಮೊದಲುಮಾಡಿದರು. ತಮ್ಮ ಸತ್ಯಾಗ್ರಹದ ರೀತಿ ನೀತಿಗಳನ್ನು ಜನರಿಗೆ ತಿಳಿಸಲು Indian Opinion—ಇಂಡಿಯನ್ ಒಪಿನಿಯನ್ ಎಂಬ ಪತ್ರಿಕೆ ಪ್ರಾರಂಭಿಸಿದರು. ಅದು ಮೂರು ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು; ಇಂಗ್ಲೀಷು, ಗುಜರಾತಿ, ತಮಿಳು.

ಮೊದಲಿನ ಎರಡೂ ನುಡಿಗಳಲ್ಲಿ ಅವರೇ ಬರೆಯುತ್ತಿದ್ದರು. ಗುಜರಾತಿ ಯಲ್ಲೇ ಹೆಚ್ಚು. ಸಾಹಿತ್ಯ ಸರ್ವಭೋಗ್ಯವಾಗಬೇಕು, ಬರೀ ಪಂಡಿತರ ಸೊತ್ತಾಗಬಾರದೆಂಬ ಅವರ ಉದ್ದೇಶವೂ ಅದಕ್ಕೆ ಒಂದು ಕಾರಣ. ಈ ಅಭಿಪ್ರಾಯವನ್ನು ಅವರು ಆಡಿಯೂ ತೋರಿಸಿದಾರೆ. ರವೀಂದ್ರನಾಥ ರೊಮ್ಮೆ ಗುಜರಾತೀ ಸಾಹಿತ್ಯ ಪರಿಷತ್ತಿಗೆ ಅತಿಥಿಗಳಾಗಿ ದಯಮಾಡಿದ್ದರು. ಆ ಸಮಾರಂಭದಲ್ಲಿ ಕವೀಂದ್ರನನ್ನು ಸ್ವಾಗತಿಸುವುದು ಗಾಂಧೀಜಿಯ ಪಾಲಿಗೆ ಬಂದಿತ್ತು. ಸಂದರ್ಭದಲ್ಲಿ ಗಾಂಧೀಜೀ ತಮ್ಮ ಮನಸ್ಸನ್ನು ಬಿಚ್ಚಿ ಹೇಳಿ ದರು. ಸುಮ್ಮನೆ ಪಾಂಡಿತ್ಯ ಪ್ರದರ್ಶನಕ್ಕಾಗಿ ಬರೆದುದು ಸಾಹಿತ್ಯವಲ್ಲ. 'ಬಾವಿಯಿಂದ ಕಪಿಲೆ ಹೊಡೆದು ನೀರೆಳೆವವನು ಆ ಕೆಲಸಮಾಡುವಾಗ, ಗಾಡಿ ಹೊಡೆಯುವವನು ಎತ್ತು ನಡೆಸುವಾಗ, ಹಾಡಿಕೊಳ್ಳಲು ಅವರಿಗೆ ಒಂದು ಹಾಡನ್ನು ಕಟ್ಟಿಕೊಟ್ಟವನೇ ನಿಜವಾದ ಕವಿ. ಹೊಲದಲ್ಲಿ ಉಳು ವಾಗ, ಕಳೆ ಕೀಳುವಾಗ ಹಾಡಿಕೊಳ್ಳಲು ರೈತನಿಗೆ ಒಂದು ಹಾಡು ದಾನ ಮಾಡಿದರೆ ಅದು ಸಾಹಿತ್ಯದಾನ.'

ಸಾಹಿತ್ಯ ಒಂದು ಆಟವಾಗಬಾರದು, ಅದು ಜೀವನದ ಚೆಲುವೆ ಗಳನ್ನು ಬತ್ತಿಸಬಾರದು. ಅರಮನೆಗಳಲ್ಲಿ ಕೂತು ಕಾಮವಿಕಾರದ ಕನಸಿನಲ್ಲಿ ಮುಳುಗಿ ತೇಲುವ ರಸಿಕರ ಕೈಯ ಬಟ್ಟಲು, ಪಕ್ಕದ ಹೆಣ್ಣು ಆಗಬಾರದು, ಪಂಡಿತರ ಬಿರುದು ಬಾವಲಿಗಳಾಗಬಾರದು. ಸಾಹಿತ್ಯ ಸರ್ವಭೋಗ್ಯವಾಗ ಬೇಕು. ಸಾಹಿತ್ಯ ಹಣವಂತರಿಗೆ ಮಾತ್ರ ಸಿಗುವ ಕೇಸರಿ ಕರ್ಪೂರ ಬೆರೆಸಿದ ದೇವರ ತೀರ್ಥವಾಗಬಾರದು. ಜಗತ್ತಿನ 'ಇಡೀ ಚರಾಚರ ಜೀವಕೋಟಿಗೆ ತಂಪುಕೊಡುವ ಮಳೆನೀರಿನಂತೆ ಆಗಬೇಕು. ಅದೇ ಸಾಹಿತ್ಯದ ಪರಮ ಸತ್ಯ; ಆಗಲೇ ಅದರ ಸಾರ್ಥಕತೆ. ಅದು ಗಾಂಧೀಜಿಯ ಗುರಿ.

ನಗೆಗಾರ ಗಾಂಧಿ

ಗಾಂಧೀಜಿಯ ಸಾಹಿತ್ಯಕ್ಕೆ ಆ ಭಾವ, ಆ ಶೈಲಿ ಪ್ರಾಣದ ಹಾಗೆ. ಆದರೆ ಆ ಬರಹಕ್ಕೆ ಮಿಂಚಿನಂಥ ದುರ್ವಾರ ಶಕ್ತಿ ಬರಲು ಅವರ ಹಾಸ್ಯವೇ ಕಾರಣ. ಹೂವಿಗೆ ಕಂಪು ಇದ್ದಹಾಗೆ ಅವರಿಗೆ ನಗೆ. ನಗೆ ಇಲ್ಲದ ಗಾಂಧೀ ಕಂಪಿಲ್ಲದ ಹೂವಿನಂತೆ. ಅವರೇ ಆ ಮಾತು ಒಪ್ಪಿಕೊಂಡಿದಾರೆ. ಯಾರೋ ರಸಿಕಶಿಖಾಮಣಿ ಕೇಳಿದನಂತೆ ಅವರನ್ನು 'ನಿಮಗೆ ನಗು ಸೇರುತ್ತದೆಯೆ?' ಎಂತ. ನಗುನಗುತ್ತಲೇ ಅವರು ಉತ್ತರ ಹೇಳಿದರು 'ನನಗೆ ನಕ್ಕು ನಗಿಸುವುದು ಸೇರದಿದ್ದರೆ ಬಹಳ ದಿನದ ಕೆಳಗೆಯೆ ನಾನು ಊರ ಮುಂದಿನ ಹೊಳೆಯೊಳಗೆ ಹಾರಿಕೊಳ್ಳುತ್ತಿದ್ದೆ.' ಹಾಸ್ಯಕ್ಕೆ ಗಾಂಧೀಜೀ ತಮ್ಮ ಬಾಳಿನಲ್ಲಿ ಅಷ್ಟು ಸ್ಥಾನಕೊಟ್ಟದಾರೆ. ನಗೆಯಿಲ್ಲದ ಬಾಳು ಅವರಿಗೆ ಉಪ್ಪಿನಕಾಯಿ ಇಲ್ಲದ ಊಟ. ಅದರ ಹಾಗೆ ಇದು ಬಾಳಿಗೆ ಒಂದು ಅಗತ್ಯರುಚಿ.

ಏನು ಕಾರಣವೋ ನಮ್ಮಲ್ಲಿ ನಿರ್ಮಲ ಹಾಸ್ಯ ಬೆಳೆದುಬಂದಿಲ್ಲ. ನಮ್ಮ ನುಡಿಯಲ್ಲಿ—ಏಕೆ? ನಮಗಿಂತ ನೂರುಪಾಲು ಮೇಲೆ ಏರಿಹೋದ ಸಂಸ್ಕೃತ ಸಾಹಿತ್ಯದಲ್ಲೇ—ನಯವಾದ ನಗೆಗೆ ಸರಿಯಾದ ಬೆಲೆ ಸಿಗಲಿಲ್ಲ. ನವರಸಗಳಲ್ಲಿ ಹಾಸ್ಯಕ್ಕೂ ಒಂದು ಮೂಲೆ ಕೊಟ್ಟದ್ದರೂ ಅದರ ಸ್ವರೂಪವನ್ನು ಅವರು ಚೆನ್ನಾಗಿ ಗುರುತಿಸಿದಂತೆ ಇಲ್ಲ. ಶೃಂಗಾರವೇ ರಸ ಎಂದು ತಿಳಿದವರ ಕೈಯಲ್ಲಿ ಹಾಸ್ಯ ಆ ಪ್ರಧಾನರಸಕ್ಕೆ ತೊತ್ತಾಗಿ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡಿತು. ವಿನೋದವು ಬರೀ ನಕಲಿಯಾಯಿತು. ಸಂಸ್ಕೃತ ಸಾಹಿತ್ಯದಲ್ಲೇ ವಿನೋದ ಗ್ರಂಥಗಳಿಲ್ಲದಿದ್ದರೆ ಕನ್ನಡದಲ್ಲಿ ಎಲ್ಲಿಂದ ಬರಬೇಕು? ಸಾಹಿತಿಗಳು ಬಹಳ ಔದಾರ್ಯದಿಂದ ನಾಟಕದಲ್ಲಿ ವಿನೋದಕ್ಕೆ ಕೊಂಚ ಅವಕಾಶ ಕೊಟ್ಟದಾರೆ. ನಾಟಕದ ನಾಯಕನ ವಿಪ್ರಲಂಬ ಶೃಂಗಾರಕ್ಕೆ ಸಹಾಯವಾಗಿ, ಬೆಂಕಿಗೆ ಗಾಳಿಯಂತೆ – ವಿದೂಷಕನ ಪಾತ್ರವೊಂದು ಬರುತ್ತದೆ. ಡೊಳ್ಳುಹೊಟ್ಟೆ, ಅಜಗರದ ನಿದ್ದೆ, ಜೊತೆಗೆ ಸದಾ ಕಡುಬಿನ

ಚಿಂತೆ– ಇಷ್ಟಾದರೆ ಸಾಕು, ವಿದೂಷಕ ಮಹಾಶಯನ ಸೃಷ್ಟಿಯಾಗಿ ಹೋಯಿತು. ಕೃಷ್ಣಲೀಲೆಯ ನಾಟಕದಲ್ಲಿ ಬರುವ ಕುಂಭದ ಕುಚೋದ್ಯ ಇವನ ಪಾಂಡಿತ್ಯದ ಪರಮಾವಧಿ. ಇನ್ನೂ ಮುಂದೆ ಸರಿದರೆ ವಿಕಟಕವಿ ತೆನ್ನಾಲಿ ರಾಮಕೃಷ್ಣನ – ಹಿಂದೆ ಕಾಣದ, ಮುಂದೆ ಕಾಣಬಾರದ–ರಸಿಕತೆ. ಇವನು ಮಾಡಿದ ಯಾವುದೋ ತಪ್ಪಿಗೆ ದೊರೆ ತನಗೆ ಮೋರೆ ತೋರಿಸಬೇಡ ಎಂದನಂತೆ. ಮಾರನೆದಿನ ಬೆಳಿಗ್ಗೆ ವಿಕಟಕವಿ ದೊರೆಯು ಮಲಗುವ ಮನೆಯ ಕಿಟಕಿಗೆ ಎದುರಾಗಿ ನಗ್ನ ಪೃಷ್ಠ ತೋರಿಸುತ್ತ ನಿಂತಿದ್ದನಂತೆ. ಆ ದಿನ ನಮ್ಮ ವಿನೋದಕಲೆ ಶಿಖರಕ್ಕೇ ಏರಿತು.

ಪ್ರಹಸನವೆಂಬ ಒಂದು ಬಗೆಯ ನಾಟಕವನ್ನು ಹಾಸ್ಯಕ್ಕಾಗಿಯೇ ಪ್ರಾಚೀನರು 'ದತ್ತಿ' ಬಿಟ್ಟಿದಾರೆ. ಅದನ್ನು ಓದಿ ಆನಂದಿಸಬೇಕಾದರೆ ನಾವು ಮತ್ತೆ ಪ್ರಾಚೀನರಾಗಿಯೇ ಹುಟ್ಟಬೇಕು. ಅವು 'ರಹಸ್ಯವಾಗಿ ಕೊಟಡಿ ಯೊಳಗೆ ಮಾತ್ರ ಓದಿಕೊಳ್ಳಬಹುದಾದವು' ಎಂದು ಕೆಲವರು ಹೇಳುತ್ತಾರೆ. ಆ ಅಸಹ್ಯವಾದ ನಗೆ ಅದಕ್ಕೂ ಯೋಗ್ಯವಲ್ಲ ಎನಿಸುತ್ತದೆ. ಅದರಲ್ಲಿ ಮರ್ಯಾದೆಯೂ ಇಲ್ಲ, ಮಾಧುರ್ಯವೂ ಇಲ್ಲ. ಕಾಳಿದಾಸನಂಥ ಒಬ್ಬ ರಿಬ್ಬರು ಕವಿಗಳು ಹಾಸ್ಯದ ಮಟ್ಟವನ್ನು ಮೇಲೆತ್ತಲು ಪ್ರಯತ್ನಮಾಡಿದಾ ರಾಗಲಿ, ಸಮಾಜವು ಅದಕ್ಕೆ ಮನ್ನಣೆ ಕೊಡಲಿಲ್ಲ. ಕೊನೆಗೆ ಹಾಸ್ಯವೆಂದರೆ ಭೀಭತ್ಸವಾಗಿ ಕಾಮನಹಬ್ಬದ ವಿಕಾರ ಚೇಷ್ಟೆಗಳೂ ಅಸಹ್ಯವಾದ ಹಾಡು ಗಳೂ ನಮ್ಮ ಜನರ ಪಾಲಿಗೆ ವಿನೋದ ಸಾಮಗ್ರಿಯಾದವು.

ಸಾಹಿತ್ಯದಲ್ಲಿ ಹಾಸ್ಯಕ್ಕೆ ಸರಿಯಾದ ಮಣೆ ಸಿಗದಿದ್ದರೂ ಜನಜೀವನ ದಲ್ಲಿ ಅದು ತನ್ನ 'ಪಟ್ಟಾ' ಗಳಿಸಿಕೊಂಡಿತು. ಬೀಗರ ಹಾಡು ಉರುಟಣೆ ಮೊದಲಾದ ಸನ್ನಿವೇಶಗಳಲ್ಲಿಯೂ ಸ್ವಲ್ಪ ಮೊದ್ದು ಆದ ಅಳಿಯ ಮನೆಗೆ ಬಂದ ಸಂದರ್ಭದಲ್ಲೂ ವಿನೋದವು ಸಾಂಪ್ರದಾಯಿಕವಾಗಿಹೋದರೂ ದಿನ ದಿನದ ಬಾಳಿನಲ್ಲಿ ವಿನೋದ ಅಲ್ಲಲ್ಲಿ ಹುಟ್ಟಿಕೊಳ್ಳುತ್ತಲೇ ಇತ್ತು. ನಗಲಾ ರದ ದೇಶ–ಜನ ನೆಲೆಯಾಗಿ ಬಾಳುವುದು ಅಸಾಧ್ಯ. ಜನಪದ ಸಾಹಿತ್ಯದಲ್ಲಿ ಆ ವಿನೋದದ ಸೆಲೆ ಇದೆ. ಈಚೆಗೆ ಆ ಶಿಲ್ಪ ಬೆಳೆಯುತ್ತಿದೆ. ಆಧುನಿಕ ಸಾಹಿತ್ಯದಲ್ಲಿ ತಿಳಿಯಾದ ವಿನೋದಕ್ಕೆ ಒಂದು ಸ್ಥಾನ ಸಿಕ್ಕಿದೆ. ವಿನೋದ ಪ್ರಿಯರಲ್ಲದವರು ಯಾರೂ ಸಿಗಲಾರದ ರಸಿಕರ ಊರೊಂದನ್ನು

ಗೊರೂರು ರಾಮಸ್ವಾಮಿ ಐಯ್ಯಂಗಾರ್ಯರು ಕನ್ನಡ ಜನರಿಗೆ ಗುರುತು ಮಾಡಿಕೊಟ್ಟಿದ್ದಾರೆ. ಬಹುಶಃ ಮಾಸ್ತಿಯವರ ರಂಗಪ್ಪನ ಕತೆಗಳಲ್ಲಿ ಅದು ಮೊದಲಾಯಿತೋ ಏನೋ.

ಹಾಸ್ಯಕ್ಕೆ ಮೂಲಪ್ರಕೃತಿ ಪರರ ತಪ್ಪನ್ನು ಬಯಲಿಗೆಳೆಯುವುದು. ಅದರಲ್ಲೂ ತಪ್ಪೇ ಇಲ್ಲವೆಂದು ಎಲ್ಲರೂ ತಿಳಿದಕಡೆ ತಪ್ಪೊಂದನ್ನು ಅಕಸ್ಮಾತ್ತಾಗಿ ಬಯಲಿಗಿಟ್ಟರೆ ಹಾಸ್ಯಕ್ಕೆ ಶಕ್ತಿ ಹೆಚ್ಚು. ವಿಷ್ಣು ಹಾಲುಗಡಲಲ್ಲಿ ಮಲಗಿದಾನೆ. ಅವನಿಗೆ ಹಾಲಿಗೆ ಕಡಮೆಯೆ? ಹಾಗಾದರೆ ಗೊಲ್ಲರ ಮನೆ ಹಾಲಿಗೇಕೆ ಆಸೆ? ಹೀಗೆ ಒಬ್ಬ ಕವಿ ಪ್ರಶ್ನೆಹಾಕಿ ನಮ್ಮನ್ನು ಸಿಟ್ಟಿಗೆಬ್ಬಿಸಿ—ನಿಜ, ಪರರ ಸೊತ್ತು ಎಲ್ಲರಿಗೂ ರುಚಿ ಎಂದು ಉತ್ತರ ಹೇಳಿ ನಮ್ಮನ್ನು ನಗೆಯಲ್ಲಿ ಮುಳುಗಿಸುತ್ತಾನೆ. ಜಗತ್ತಿನಲ್ಲಿ ಅಂದವಲ್ಲದುದು ಸೊಂಪಿಲ್ಲದುದು ಎಷ್ಟೋ ಇದೆ. ಇಂಥ ಸೊಟ್ಟು ಡೊಂಕನ್ನು ಬ್ರಹ್ಮ ಏಕೆ ನಿರ್ಮಿಸಿದನೋ ಯಾರು ಬಲ್ಲರು? ಕಾಳಿದಾಸ ಕವಿ ಅದಕ್ಕೆ ಒಂದೇ ಮಾತಿನಲ್ಲಿ ಉತ್ತರಕೊಟ್ಟು ನಮ್ಮ ಮನಸ್ಸಿನ ಭಾರವನ್ನು ಹಗುರಮಾಡಿದ. ಯಾವಾಗಲೂ ವೇದ–ವಾದಗಳಲ್ಲಿ ಮುಳುಗಿರುವ ನಮ್ಮ ವೈದಿಕಶಿರೋಮಣಿಗಳಿಗೆ ರಸಿಕತೆ ಕಡಮೆಯಲ್ಲವೆ. ಬ್ರಹ್ಮ ಆ ವೇದಗಳ ಗುಂಪಿಗೇ ತಳಹದಿ; 'ವೇದಾಭ್ಯಾಸ ಜಡ.' ಅಂಥವನ ಕೈಯಲ್ಲಿ ಅಂದವಾದುದು ಹುಟ್ಟಬೇಕಾದರೆ ಕೈತಪ್ಪಿಯೇ! ಇಂಥ ಶಿಲ್ಪವನ್ನೇ ಸರ್ವಜ್ಞಮೂರ್ತಿ 'ನಕ್ಕು ನಗಿಸುವಾ ನುಡಿ ಲೇಸು' ಎಂದುದು. ನಕ್ಕುನಗಿಸುವ ನುಡಿಗೆ ರಸಿಕರೇ ಬೇಕು. ಅವರ ಮಾತು 'ಶಶಿಯುದಿಸಿ ಬಂದಂತೆ.'

ಇನ್ನೊಬ್ಬರು ತಪ್ಪುಮಾಡಿದಾಗ ಸಿಟ್ಟುಗೊಳ್ಳದೆ ನಗುವುದೂ ಒಂದು ಒಳ್ಳೆಯ ಸಂಸ್ಕಾರ. ಅದರಿಂದ ಬಾಳಿನ ಅನುಭವದಲ್ಲಿ ಕಹಿ ಕಡಮೆಯಾಗುತ್ತದೆ. ಆದರೆ ಯಾವಾಗಲೂ ಪರರ ತಪ್ಪನ್ನೇ ನೋಡಿ ನಗುವುದು ಕೊನೆಗೆ ಅವಗುಣವೇ ಆದೀತು. ಆ ನಗೆ 'ಕಿವಿಯಲ್ಲಿ ಕೂರಿಸಿ ಬಡಿದಂತೆ' ಅಂಥ ಮನುಷ್ಯ ನಗೆಗಾರನಲ್ಲ, 'ಕುನ್ನಿ.' ನಿಜವಾದ ರಸಿಕತೆಗೆ ನಿರ್ಮಲವಾದ ಹಾಸ್ಯಕ್ಕೆ ತನ್ನ ತಪ್ಪುಗಳನ್ನು ಕೂಡ ನೋಡಿಕೊಂಡು ನಗುವ ಗುಣ ಬೇಕು. ಅದಕ್ಕೆ ಸೂಕ್ಷ್ಮವಾದ ಸತ್ಯದೃಷ್ಟಿ, ಹದವಾದ ಅನಾಸಕ್ತಿ ಬೇಕು. Laugh and grow fat ಎಂದು ಇಂಗ್ಲೀಷಿನಲ್ಲಿ ಹೇಳುತ್ತಾರೆ. ನಕ್ಕು

ನಕ್ಕು ಹೊಟ್ಟೆ ಬೆಳೆಸು ಎಂದು. ತನ್ನ ತಪ್ಪು ಬೆನ್ನಿಗಿಟ್ಟು ಅನ್ಯರ ತಪ್ಪು ಎಣಿಸುವವನಿಗೆ ಬೆಳೆಯುವುದು ಹೊಟ್ಟೆಯಲ್ಲ, ಗರ್ವ. ಹಾಸ್ಯವು ನಯವಾಗಿ, ಹಗುರಾಗಿ, ರುಚಿಯಾಗಿ, ಸಭ್ಯವಾಗಿ ಇರಬೇಕಾದರೆ ನಮ್ಮ ಕಣ್ಣೆದುರಿಗೇ ಕನ್ನಡಿ ಹಿಡಿದುಕೊಳ್ಳುವ ಯೋಗ್ಯತೆ ಬೇಕು. ಅಂಥಲ್ಲಿ 'ಗಾಯಕ್ಕೆ ಮದ್ದನ್ನು ಕತ್ತಿಗೇ ಸವರಿ ಹೊಡೆವಹಾಗೆ ಬೈಯುತ್ತಲೇ ನಗಿಸುವ ಹಾಸ್ಯ ಕುಶಲತೆ' ತಲೆದೋರುತ್ತದೆ.

ಇಷ್ಟೆಲ್ಲ ಪುರಾಣ ಹೇಳಿದುದು ಗಾಂಧೀಜೀ ದೊಡ್ಡ ನಗೆಗಾರರು ಎಂಬುದನ್ನು ವಿವರಿಸಲಿಕ್ಕೆ. ಅವರ ಹಾಸ್ಯ ಬಹಳ ಉತ್ತಮತರದ್ದು. ಒಂದುಸಲ ಗಾಂಧೀಜೀ ಬಂಗಾಲಾ ಪ್ರಾಂತದಲ್ಲಿ ಪ್ರವಾಸಮಾಡುತ್ತಿದ್ದರು. ಅವರ ಜೊತೆಯಲ್ಲಿ ಒಬ್ಬ ಹೆಸರಾದ ಬಂಗಾಲೀ ವಕೀಲರೂ ಇದ್ದರು. ಗಾಂಧೀಜೀ ರೈಲಿನಲ್ಲಿದ್ದುದರಿಂದ ಸ್ಟೇಷನುಗಳಲ್ಲೆಲ್ಲ ತುಂಬಾ ಗದ್ದಲ. ಆ ವಕೀಲರು ಬೇರೆ ಪೆಟ್ಟಿಗೆಯಲ್ಲಿ ಕೂತಿದ್ದವರು ರೈಲು ನಿಂತಾಗೆಲ್ಲ ಬಂದು ಗಾಂಧೀಜಿಯನ್ನು ನೋಡಿಕೊಂಡು ಹೋಗುತ್ತಿದ್ದರು. ಒಂದು ಕಡೆ ಗಲಾಟೆ ಬಹಳವಾಗಿದ್ದುದರಿಂದ ಆ ವಕೀಲರಿಗೆ ರೈಲು ಕದಲುವ ತನಕ ಗಾಡಿಯನ್ನು ಹತ್ತಲಾಗಲಿಲ್ಲ. ಬಾಗಿಲನ್ನು ಹಿಡಿದು ಕೊನೆಯ ಗಳಿಗೆಯಲ್ಲಿ ಹತ್ತಲು ಹೋಗಿ ಕೈಜಾರಿ ತಲೆಕೆಳಕಾಗಿ ಬಿದ್ದುಬಿಟ್ಟರು. ಅದೇ ರೈಲಿನಲ್ಲಿ ಅವರ ಮಗನೂ ಬರುತ್ತಿದ್ದ. ಅವನು ಒಡನೆಯೇ ಸರಪಣಿ ಎಳೆದು ಗಾಡಿ ನಿಲ್ಲಿಸಿದ. ವಕೀಲರಿಗೆ ಏನೂ ಪೆಟ್ಟಾಗಿರಲಿಲ್ಲ. ಅವರು ಗಾಂಧೀಜಿ ಇದ್ದ ಡಬ್ಬಿಗೆ ಬಂದು ನಮಸ್ಕಾರಮಾಡಿ 'ನೀವು ಗಾಡಿಯಲ್ಲಿದ್ದೀರಿ ಎಂತ ನಾನು ಬದುಕಿದೆ' ಎಂಧರು ಬಹಳ ಭಕ್ತಿಯಿಂದ. ಗಾಂಧೀಜಿ ನಗುತ್ತ 'ಹೌದು; ನಾನು ಇದ್ದುದಕ್ಕೇ ನೀವು ಬೀಳುವಹಾಗೆ ಆದದ್ದು. ಅದನ್ನು ಯಾಕೆ ಹೇಳುವುದಿಲ್ಲ?' ಎಂದರು. ಆ ವಕೀಲರಿಗೆ ಈ ವಿನಯ ರುಚಿಸದಿದ್ದರೂ ಆ ಹಾಸ್ಯ ಅರ್ಥವಾಗಿಯೇ ಇರಬೇಕು. ಅದರಲ್ಲಿ ತಾರತಮ್ಯ ವಿವೇಕವಿದೆ. ಮುಗಿಲಿಗೆ ಹಾರುವ ಭ್ರಾಂತಿಯನ್ನು ಹಿಡಿದು ನೆಲದ ಮೇಲೆ ನಿಲ್ಲಿಸುವ ಕುಶಲತೆಯಿದೆ.

ಪಾಶ್ಚಾತ್ಯ ದೇಶದಲ್ಲಿ ವಿನೋದವಾಡುವುದೂ ಹಾಸ್ಯ ಸವಿಯುವುದೂ ಒಂದು ಕಲೆಯಾಗಿದೆ. ಅದಕ್ಕಾಗಿ ಕೆಲವು ಪತ್ರಿಕೆಗಳು ಮೀಸಲಾಗಿವೆ.

ವಿಕಟ ಚಿತ್ರಗಳದೊಂದು ಹೊಸ ಶಿಲ್ಪವೇ ಹುಟ್ಟಿದೆ. ನಮ್ಮಲ್ಲೂ 'ವಿಕಟ' ಪತ್ರಿಕೆಗಳು ಇವೆಯೆಲ್ಲ ಎನ್ನಬಹುದು. ಹಾಗೆ ಅಂದವರಿಗೆ ಹಾಸ್ಯ ಎಂದರೆ ಏನು ಎಂಬುದೇ ಗೊತ್ತಿಲ್ಲವೆಂದು ಮರುಗಬೇಕಾದೀತು. ನಮ್ಮ ಜನಕ್ಕೆ ಆ ಕಲೆ ಇನ್ನೂ ಬರಬೇಕಾಗಿದೆ. ಒಬ್ಬ ಸದ್ಗೃಹಸ್ಥ ಗಾಂಧೀಜಿಗೆ ಕಾಗದ ಬರೆದ: 'ನೀವು ಮದ್ಯಪಾನ ನಿರೋಧಕ್ಕೆ ಪ್ರಯತ್ನಮಾಡಿದಹಾಗೆ ಜೂಜು, ಸಿನಿಮಾ ಮುಂತಾದುವನ್ನೂ ನಿಲ್ಲಿಸಿ.' ಕಾಂಗ್ರೆಸ್ ಸರಕಾರವೆಂದರೆ ಕೃತಯುಗವನ್ನು ನೆಲಕ್ಕೆ ಇಳಿಸುವ ಇಂದ್ರಜಾಲ ಎಂದು ತಿಳಿದಿರಬೇಕು ಆತ. ಗಾಂಧೀಜೀ ಆ ಮಾತನ್ನು ವಿವರಿಸಿ ವಿನೋದವಾಗಿ 'ಮದ್ಯ ಪಾನದ ಹಾಗೆ ಇವನ್ನು ಪಾಪವೆಂದು ಜನ ತಿಳಿದಿಲ್ಲ. ನಾನೇನಾದರೂ ಆ ರೀತಿ ಗಲಾಟೆಮಾಡಿದರೆ ನನ್ನ ಮಹಾತ್ಮಗಿರಿ ಹೋದೀತು, ಲಾಭವೇನೂ ಆಗಲಾರದು' ಎಂದು ಬರೆದರು. ಆ ರಸಿಕ ಮತ್ತೆ ಬರೆದ ಮಾರುದ್ದ ಕಾಗದ 'ನೀವು ಎಲ್ಲಾ ಬಿಟ್ಟವರು. ನಿಮಗೆ ಈ ಮಹಾತ್ಮಾಗಿರಿ ಆಸೆ ಇರಬಾರದು.' ಆ ಪಂಡಿತನ ಯೋಗ್ಯತೆಗೆ ಮೆಚ್ಚಿ ಗಾಂಧೀಜೀ ಒಂದು ಲೇಖವನ್ನೇ ಬರೆದು 'ವಿನೋದ ಇಷ್ಟು ಕೂಡ ಅರ್ಥವಾಗದವರುಂಟೆ?' ಎಂದರು. ಅಷ್ಟಾದರೂ ಆ ಪ್ರಾಣಿಗೆ ಅರ್ಥವಾಯಿತೋ ಇಲ್ಲವೋ.

ಈ ಮಹಾತ್ಮಗಿರಿ ಅವರ ಹಾಸ್ಯಕ್ಕೆ ಅನೇಕ ಸಲ ವಸ್ತುವಾಗಿದೆ. ಗಾಂಧೀಜೀ ೧೯೧೫ರಲ್ಲಿ ಕಾಶಿಗೆ ಹೋಗಿದ್ದರು. ಆಗ ಅವರಿನ್ನೂ ಮಹಾತ್ಮ ರಾಗಿರಲಿಲ್ಲ. ಈ ಅನುಭವಗಳನ್ನು 'ಸತ್ಯಶೋಧನೆ'ಯಲ್ಲಿ ವರ್ಣಿಸಿದಾರೆ. ಆದಾದಮೇಲೆ ವಿಶ್ವನಾಥನ ಬಳಿಗೆ ಒಂದೆರಡು ಸಲ ಹೋಗಿದ್ದರು. ಅವರಿಗೆ 'ಅಷ್ಟುಹೊತ್ತಿಗೆ ಮಹಾತ್ಮಾ ಬಿರುದು ಬಂದಿತ್ತು.' ಆದುದರಿಂದ ಅವರಿಗೆ ದೇವರ ದರ್ಶನವೂ ಆಗಲಿಲ್ಲವಂತೆ. 'ನಾನೇ ದರ್ಶನಪಾತ್ರನಾದ ಮೇಲೆ ನನಗೆ ಆ ದರ್ಶನಭಾಗ್ಯ ಹೇಗೆ ಸಿಗಬೇಕು?' ಜನ ಇವರನ್ನು ಏಕಾಂತವಾಗಿ ಬಿಟ್ಟರೆ ಅಲ್ಲವೆ ದರ್ಶನ! ನಕ್ಷತ್ರಕನಿಗಾದರೂ ಒಂದು ಗಡುವು ಇತ್ತು. ಹಣ ಕೊಟ್ಟಮೇಲೆ ಹೊರಟುಹೋದ. ಇವರು ಅವನನ್ನು ಮೀರಿಸಿದರು. ಕೆಚ್ಚಲಿಗೆ ಉಣ್ಣೆ ಹತ್ತಿದಹಾಗೆ. ಈ ಅನುಭವಕ್ಕೆ ಬೇಸತ್ತು 'ಮಹಾತ್ಮರ ಕಷ್ಟ ಮಹಾತ್ಮರಿಗೇ ಗೊತ್ತು' ಎಂದು ನಕ್ಕು ಅದನ್ನು ಪರಿಹರಿಸಿಕೊಳ್ಳು ತ್ತಾರೆ ಗಾಂಧೀಜೀ.

ಗಾಂಧೀಜಿಯ ಸಾಹಿತ್ಯದಲ್ಲಿ ಹೆಜ್ಜೆಹೆಜ್ಜೆಗೂ ಈ ಗಂಭೀರ ಹಾಸ್ಯ ಮಿನುಗುತ್ತದೆ. 'ಸತ್ಯಶೋಧನೆ'ಯಲ್ಲಿ ವಿನೋದಪೂರ್ಣವಾದ ಸನ್ನಿವೇಶ ತುಂಬಿಬರುತ್ತವೆ. ಉಳಿದ ಬರೆವಣಿಗೆಯಲ್ಲಿ ವರ್ಣನೆ ಇಲ್ಲ, ಕಥನ ಕಡಮೆ. ಅಲ್ಲಿ ಕಾಣುವ ಹಾಸ್ಯ ಮಾತುಗಾರಿಕೆಯದು; ಸರಸ ಸಲ್ಲಾಪದಲ್ಲಿ ಕೊನರುವ ನಿರ್ಮಲ ವಿನೋದ. 'ಹಿಂದ್ ಸ್ವರಾಜ್ಯ'ವನ್ನು ವಿಮರ್ಶಿಸಿ, ಚರ್ಚಿಸಿ ಒಂದು ವಿಶೇಷ ಸಂಚಿಕೆ ಪ್ರಕಟಿಸಲು ಒಂದು ಪತ್ರಿಕೆಯವರು ಏರ್ಪಾಟು ಮಾಡಿದರು. 'ಹಿಂದ್ ಸ್ವರಾಜ್ಯ' ಗಾಂಧೀ ಧರ್ಮದ ತಳಹದಿ; ಮೂಲ ಗ್ರಂಥ. ಆ ಸಂಚಿಕೆಗೆ ಒಂದು ಸಂದೇಶವನ್ನು ಕಳಿಸಿರೆಂದು ಅವರು ಗಾಂಧೀಜಿಯನ್ನು ಬೇಡಿದರು. ಹತ್ತೇ ಸಾಲಿನ ಒಂದು ಸಂದೇಶವನ್ನು ಕಳಿಸಿ, ಅದರಲ್ಲಿ ಕೊನೆಗೆ ಹೀಗೆ ಬರೆದರು. 'ದಕ್ಷಿಣ ಆಫ್ರಿಕಾದಲ್ಲಿ ಮೊಳೆಯುತ್ತಿದ್ದ ಕ್ಲೈಬ್ಯವನ್ನೂ ವಿನಾಶವನ್ನೂ ಇದು ನಿಲ್ಲಿಸಿತು. ನನ್ನ ಒಲವಿನ ಗೆಳೆಯ – ಈಗ ಆತ ತೀರಿಕೊಂಡಿದಾನೆ – ಇದು ಒಬ್ಬ ಹುಚ್ಚನ ಅಪಲಾಪ ಎಂದಿದ್ದ. ಓದುಗರು ಇವೆರಡೂ ಅಭಿಪ್ರಾಯಗಳನ್ನು ತಿಳಿದು ತೂಕ ಮಾಡಿಕೊಳ್ಳಲಿ.' ಹೀಗೆ ಎರಡೂ ಕಡೆಯ ವಾದವನ್ನೂ ಪುರಸ್ಕರಿಸಲು ಹಾಸ್ಯವೃತ್ತಿ ಇಲ್ಲದೆ ಸಾಧ್ಯವಿಲ್ಲ.

'ಆತ್ಮಕಥೆ' ಓದದೆ ಗಾಂಧೀಜಿಯ ಬಲ ತಿಳಿಯುವುದಿಲ್ಲ. ಅವರ ಮದುವೆಯ ಪ್ರಸಂಗದಲ್ಲಿ ಅದು ಮುಗುಳುನಗೆಯಾದರೆ, ಅವರ ಆಂಗ್ಲ ವೇಷಾಭ್ಯಾಸದ ಸಂದರ್ಭದಲ್ಲಿ ಬಾಯಿ ತುಂಬಿ ಬರುತ್ತದೆ. ಆ ಫಿಡಲ್ ಕಲಿಯುವುದೇನು, ಆ ನೃತ್ಯಾಭ್ಯಾಸವೇನು? ಶಾಸ್ತ್ರೋಕ್ತವಾಗಿ ಮಾತುಗಾರಿಕೆ ಕಲಿತು ಒಂದು ಸಲ ಬಹಳ ಸ್ವಾರಸ್ಯವಾಗಿ ಮಾತಾಡಬೇಕೆಂಬ ಸಂಕಲ್ಪದಿಂದ ಒಂದು ಸಭೆಗೆ ಹೋದರು. ಇಷ್ಟೆಲ್ಲ ಪೂರ್ವಸಿದ್ಧತೆಯ ಬೆಟ್ಟ ಈದದ್ದು ಇಲಿಮರಿಯನ್ನು. ಗಣಪತಿಪೂಜೆ ಮಾಡಿದ್ದೇ ತಡ ಮಂಗಳಾರತಿಗೇ ಹಾರಿದರು. ಎರಡನೆಯ ವಾಕ್ಯವೇ ಬಾಯಿಂದ ಹೊರಡಲಿಲ್ಲವಂತೆ. ಆಚಾರ್ಯರು ದೇವರ ಪೆಟ್ಟಿಗೆ ಬಿಚ್ಚುತ್ತಿರುವಾಗ ರಾಯರು ಊಟಕ್ಕೆಬ್ಬಿಸಿದರಂತೆ. ಆಚಾರ್ಯರು ಬಿಚ್ಚುತ್ತಿದ್ದ ದಾರ ಹಾಗೇ ಸುತ್ತಿ, ಪೆಟ್ಟಿಗೆ ಕಟ್ಟಿಟ್ಟು ಓಂ ಶಾಂತಿಶ್ಶಾಂತಿಃ ಎಂದು ಮೇಲಕ್ಕೆದ್ದರು. ಗಾಂಧೀಜಿಯ ಉಪನ್ಯಾಸವೂ ಹಾಗೆಯೇ ಆಯಿತು.

ನಮ್ಮವರಲ್ಲಿ ತೀರ ಎಳೆತನದಲ್ಲಿ ಮದುವೆಮಾಡುವ ರೂಢಿ ಈಗ ಕಡಮೆಯಾಗುತ್ತಿದೆ. ಆದರೆ ಗಾಂಧೀಜಿಗೆ ೭ನೆಯ ವಯಸ್ಸಿನಲ್ಲಿ ಮೂರನೆಯ ಬಾರಿ 'ನಿಶ್ಚಯ.' ಅವರಿಗೆ ಮದುವೆ–ಎಂದರೆ ಶೋಭನ ಗುಜರಾತಿನಲ್ಲಿ–ಆದದ್ದು ೧೩ನೆಯ ವಯಸ್ಸಿಗೆ. 'ಉಡುಗೆತೊಡಿಗೆ, ಮೇಳತಾಳ, ಮೆರವಣಿಗೆ, ಹಬ್ಬ – ವಿನೋದ, ಒಂದು ಹೊಸ ಹುಡುಗಿ ಆಟವಾಡಲಿಕ್ಕೆ' ಇಷ್ಟೇ ಅವರ ವಿಚಾರ. ಇಂಥ ಎಳಕರಿಗೆ ದಾಂಪತ್ಯದ ಶರೀರ ಸಂಬಂಧ ಹೇಗೆ ತಿಳಿಯಬೇಕು? ಅದಕ್ಕೆ ಇವರ ಅತ್ತಿಗೆ ಗುರು. 'ಆಕೆ ಪ್ರಥಮ ರಾತ್ರ ವ್ಯವಹಾರವನ್ನು ಬೋಧಿಸಿದರು.' ತಮ್ಮ ಹೆಂಡತಿಗೆ ಯಾರು ಹೇಳಿಕೊಟ್ಟರೆಂಬ ಪ್ರಶ್ನೆ ಈ ಮುದುಕನ ಮನಸ್ಸಿಗೆ ಹೊಳೆಯದೆ ಹೋಗಿಲ್ಲ. 'ನೀನು ಯಾರ ಹತ್ತಿರ ಕಲಿತೆ ಎಂದು ಆಕೆಯನ್ನು ಕೇಳಿದ ನೆನಪಿಲ್ಲ' ಎಂದು ಹೇಳಿ ಒಂದು ಕಿರುನಗೆಯನ್ನು ಹಾಯಿಸುತ್ತಾರೆ. ಆ ನಗೆ ಕೆಳಗಿನ ಮಟ್ಟಕ್ಕೆ ಇಳಿಯುವ ಸಂಭವವಿದೆ. ಅದನ್ನು ಒಡನೆಯೆ ಕತ್ತರಿಸಿ 'ಈಗಲೂ ಕೇಳಬಹುದಾಗಲಿ ನನಗೆ ಇಚ್ಛೆಯಿಲ್ಲ' ಎಂದು ನಮ್ಮ ದುಡುಕಿಗೆ ತಕ್ಕ ಶಾಸ್ತಿ ಮಾಡುತ್ತಾರೆ.

ಗಾಂಧೀಜಿಯ ಜೀವನ ಯಾತ್ರೆಯಲ್ಲಿ ಅನೇಕ ವಿಲಕ್ಷಣ ಪ್ರಸಂಗ ಬಂದಿವೆ. ಅವನ್ನು ಹೇಳುವಾಗ ಅವರ ವಿನೋದ ಮಿಂಚಿನಂತೆ ಓಡುತ್ತದೆ. ಬಾಳುವೆಯ ಮಟ್ಟವನ್ನು ಏರಿಸುವ ಹಂಬಲವನ್ನು ವಿವರವಾಗಿ ವರ್ಣಿಸಿ ಕೋಟು ಷರಾಯಿ ತೊಟ್ಟು 'ಗೃಹಪಾವನ ಮಾಡಿದೆ' ಎಂದಿದಾರೆ. ಹೆಂಡತಿಗೆ ಪಾರ್ಸೀ ವೇಷ ತೊಡಿಸಿದರು. ಮನೆಯಲ್ಲಿ ಕಿರಸ್ತಾನರ ಅಡಿಗೆ ಊಟದ ಪದ್ಧತಿ ಬಂತು. ಕಡೆಗೆ ಅರ್ಧ ದಿಗಂಬರ ಸನ್ಯಾಸಿ!

ಅವರ ಅಡಿಗೆಯ ಬ್ರಾಹ್ಮಣ ರವಿಶಂಕರ ಸ್ನಾನಮಾಡಿದರೆ 'ಲಿಂಗದ ಮೇಲೆ ನೀರು ಸುರಿದ ಹಾಗೆ ಮೈಮೇಲೆ ಸುರಿದುಕೊಂಡ' ಅಭಿಷೇಕ. ಅಡಿಗೆಯವನಿಗೂ ಯಜಮಾನನಿಗೂ ಬಹಳ ಗೆಳೆತನವಾಯಿತು. 'ಆದರೆ ಒಂದು ಸಂಕಟ: ಮಾಸಿದ ಬಟ್ಟೆ ಬಿಡೆನೆಂದು, ಅನ್ನ ಪರಿಶುಭ್ರವಾಗಿದೆ ಎಂದು' ಅವನು ಒಂದು ಪ್ರತಿಜ್ಞೆಯನ್ನೇ ಹಿಡದಿದ್ದ. ಅಷ್ಟೇ ಅಲ್ಲ. 'ಆ ಪ್ರತಿಜ್ಞೆಯನ್ನು ಬಹಳ ಎಚ್ಚರದಿಂದ ಪಾಲಿಸುತ್ತಿದ್ದ.' ಈ ಇಬ್ಬರ ಜೋಡಿಯಲ್ಲಿ ಅವನನ್ನು ಕುಚೋದ್ಯಮಾಡಿ ತಮ್ಮನ್ನು ಹಾಗೇ ಬಿಟ್ಟರೆ

ಸರಿಯೆ? ತಮ್ಮ ವಕೀಲಿ 'ನೋಡಲು ನಾಣ್ಯದ ಕುದುರೆ, ಒಳಗೆ ಬುದ್ಧಿಯೇ ಸೊನ್ನೆ. ಅಥವಾ ತೋಟ ಶೃಂಗಾರ ಒಳಗೆ ಗೋಣೀಸೊಪ್ಪು.' ಮೊದ ಮೊದಲು ವಾದಿಸಬೇಕೆಂದರೆ ಅವರ ಅವಸ್ಥೆ 'ಅತ್ತೆಯ ಮನೆಗೆ ಬಂದ ಹೊಸ ಸೊಸೆಗಿಂತ ಕಷ್ಟವಾಗಿ' ಇತ್ತು. ನ್ಯಾಯಾಲಯದ ಬಗ್ಗೆ ಅವರು ಆಡಿದ ಮಾತೂ ಸ್ವಾರಸ್ಯವಾಗಿದೆ. ಬೊಂಬಾಯಿ ಹೈಕೋರ್ಟಿನಲ್ಲಿ 'ನಿದ್ದೆಮಾಡು ವುದು ಒಂದು ಭೂಷಣ'ವಂತೆ. ನ್ಯಾಯದೇವತೆ ಸದಾ ಕಣ್ಣುಮುಚ್ಚಿ ಕೊಂಡು ನ್ಯಾಯಾನ್ಯಾಯದ ತೂಕಮಾಡುತ್ತಾ ಇರುತ್ತಾಳೆ. ಅಭಿಮಾನಕ್ಕೆ ಒಳಗಾಗಿ ನ್ಯಾಯ ಕೆಟ್ಟೀತು ಎಂದ ಹಾಗೆ. ಆದರೆ ನೇಟಾಲು ಸುಪ್ರೀಮ್ ಕೋರ್ಟು 'ಮುಖನೋಡಿ ಮಣೆ ಹಾಕಿತು.'

ಇವರಿಗೆ unwelcome visitor – ಶಿವಪೂಜೆಯ ನಡುವೆ ಬಂದ ಕರಡಿ ಎಂಬ ಬಿರುದು ಆಫ್ರಿಕದ ಬಿಳಿಯರು ಕೊಟ್ಟಿದ್ದು; ಅಗ್ರಿಮೆಂಟ್ ಎಂಬುದು ಗಿರ್ಮಿಟ್ ಆಗಿ, ಆಫ್ರಿಕದ ಹಿಂದೂಜನ ಗಿರ್ಮಿಟಿಯಾಗಳಾದುದು; ಕಾಶೀ ಕ್ಷೇತ್ರದಲ್ಲಿ ಪಂಡಾ ಜನರೊಡನೆ ವಾದಮಾಡಿ ಕಡೆಗೂ ಅವರಿಗೆ ಒಂದೇ ಕಾಸನ್ನು ಕೊಟ್ಟುದು; ಮಿತವ್ಯಯಕ್ಕಾಗಿ ಇವರು ಅಗಸನಾದುದು, ಕೆಲಸಿಗ ನಾದುದು; ಒಳ್ಳೇ ಅಗಸ ಎಂದು ಗೋಖಲೆ ಇವರಿಗೆ ಬಿರುದುಕೊಟ್ಟುದು– ಮೊದಲಾದ ಪ್ರಸಂಗ ಓದಿ ಆನಂದಿಸದವರಿಲ್ಲ. ಕಾಠೆವಾಡದ ಚಿಕ್ಕಪುಟ್ಟ ಸಂಸ್ಥಾನಗಳ ಶಿರಸ್ತೇದಾರ, 'ನಾಮರ್ದಾ' ವೇಷಭೂಷಣಗಳಿಂದ ಹೆಂಗಸ ರಂತೆ ಅಲಂಕಾರ ಮಾಡಿಕೊಳ್ಳುವ ರಾಜಮಹಾರಾಜರು, ತಾವು ಮೊಟ್ಟ ಮೊದಲು ಇಸ್ತ್ರೀ ಮಾಡಿದ ಪ್ರಥಮ ಪ್ರಯತ್ನದ ಕಾಲರು, ಬಾಯಾರಿ ಬಿಸಿಲಲ್ಲಿ ಜೀವಬಿಡುತ್ತಿದ್ದಾಗ ನೀರಿನ ಚಿಲುಮೆ ಸಿಕ್ಕರೆ 'ನೀವು ಕುಡಿಯಿರಿ' ಎಂದು ಮೊಗಲಾಯಿ ಮರ್ಯಾದೆಮಾಡುತ್ತಾ ನಿಂತ ಬಿಳಿಯ-ಕರಿಯ ಸಿಪಾಯಿಗಳ ಗುಂಪು, ಇವನ್ನು ಲೆಕ್ಕವಿಡಲು ಸಾಧ್ಯವೇ?

ತಾವು ಮೊದಲನೆಯ ಸಾರಿ ನೋಡಿದ ಕಾಂಗ್ರೆಸ್ಸಿನ ವರ್ಣನೆಯಲ್ಲಿ ಗಾಂಧೀಜಿಯ ಹಾಸ್ಯ ಬಹು ಕುಶಲವಾಗಿ ಮಿನುಗಿದೆ. 'ಕಾಂಗ್ರೆಸ್ಸು ವರುಷಕ್ಕೆ ಮೂರು ದಿನದ ಹಬ್ಬ! ಹಬ್ಬ ಮುಗಿದ ಕೂಡಲೇ ಅದು ನಿದ್ದೆ ಹೋಗುತ್ತದೆ.' ಸ್ವಯಂಸೇವಕ ದಳಕ್ಕೆ ಮನಸ್ಸಿನಲ್ಲಿ ಸೇವೆಮಾಡುವ

ಇಚ್ಛೆ ಮಾತ್ರ ಬಹಳವಂತೆ. ಬಸವನಿಗೆ ಹೇಳಿದರೆ ಬಾಲಕ್ಕೆ ಹೇಳಿದಂತೆ ಇವರ ಕೆಲಸ. ಇವರ ನಡುವೆ 'ಎರಡೂ ಕೆಟ್ಟ ಅಭಾಗ್ಯರು ಪ್ರತಿನಿಧಿಗಳು.' ಇನ್ನು ವ್ಯವಸ್ಥೆಯ ಮಾತು ಹೇಳುವಹಾಗೆಯೇ ಇಲ್ಲ. ಒಬ್ಬೊಬ್ಬರಿಗೊಂದು ಅಡಿಗೆಯ ಮನೆ. ಅವರ ದೃಷ್ಟಿ ಇವರಿಗೆ ದೋಷ, ಇವರ ದೃಷ್ಟಿ ಅವರಿಗೆ ಪಾಪ. ಅವುಗಳ 'ತುಂಬ ಉಸಿರು ಬಿಡದ ಹಾಗೆ ಹೊಗೆ.' ಪಾಕಶಾಲೆಯೂ ಅದೇ, ಪಾನಶಾಲೆಯೂ ಅದೇ, ಭೋಜನಶಾಲೆಯೂ ಅದೇ. ಅದು ಅಡಿಗೆಮನೆಯಲ್ಲ, ಪೆಟ್ಟಗೆ. ಎಲ್ಲ ದಿಕ್ಕಿನಲ್ಲೂ ಭದ್ರವಾದ ಮುಚ್ಚಳವೇ!' 'ಅಲ್ಲಿಯ ವಾಸನೆಯೋ' ಹೇಳತೀರದು. 'ಅದನ್ನು ನೆನೆದರೆ ವಾಂತಿ ಬರುತ್ತದೆ' ಯಂತೆ. ಇಲ್ಲಿಗೆ ಮುಗಿಯಲಿಲ್ಲ ನಮ್ಮ ನಾಗರಿಕತೆ. 'ಕೆಲವರು ರಾತ್ರಿ ತಮ್ಮ ವರಾಂಡಗಳಲ್ಲೇ ಮಲಮೂತ್ರ ವಿಸರ್ಜನೆಮಾಡಿ' ಪುಣ್ಯ ಕಟ್ಟಿಕೊಂಡರು. ಯಾರು ಅದನ್ನೆಲ್ಲ ಗುಡಿಸಬೇಕು. 'ಆ ಗೌರವ' ಗಾಂಧೀಜೀಗೆ 'ದಕ್ಕಿತು.' ಇನ್ನು ಕಾಂಗ್ರೆಸ್ ಸಭೆಯಲ್ಲೋ. ವಿಷಯನಿರ್ಮಾಣ ಸಭೆ ಒಂದು ನಗಾರಾಖಾನೆ; ಅಧ್ಯಕ್ಷ ಭಾಷಣ ಒಂದು ಮಹಾ ಗ್ರಂಥ. ಮುಖಂಡರಲ್ಲಿ ಇಬ್ಬರು ಎದ್ದು ಕಾಣುತ್ತಾರೆ. 'ರಾಜವೈಭವ'ದ ಫಿರೋಜ ಷಾ ಮೆಹತಾ; ಎಲ್ಲಿದ್ದರೆ ಅಲ್ಲಿ 'ದರಬಾರು' ಕಲೆಸುವ ಲೋಕಮಾನ್ಯರು.

ವ್ಯಕ್ತಿಚಿತ್ರದಲ್ಲಿ ಹಾಸ್ಯವನ್ನು ನಯವಾಗಿ ಸಿಂಪಡಿಸುವ ಕಲೆ ಗಾಂಧೀಜಿಗೆ ಸಾಧಿಸಿದೆ. ಆತ್ಮಕಥೆಯಲ್ಲಿ ಬರುವ ನಾರಾಯಣ ಹೇಮಚಂದ್ರನನ್ನು ಯಾರು ಮರೆಯಬಲ್ಲರು? ಇಂಥ ಹುಚ್ಚ ಬರಜೋಜೀ ಪಾದುಷಾ ಒಬ್ಬ ಇದಾನೆ. ಕುದುರೆಯ ಮೋರೆ ನೋಡಲಾರದೆ ಕರುಣೆಗೊಂಡು ಟ್ರಾಮ್ ಬಂಡಿಗೆ ನಮಸ್ಕಾರ ಮಾಡಿದನಂತೆ. ಆತ 'ಹುಟ್ಟಿದ್ದು ಪಾರಸೀಕುಲವಾದರೂ ತಿನ್ನುವುದು ಶಾಕಾಹಾರ' ವಂತೆ. ವಿಮರ್ಶೆಯ ನಿರ್ಭಯ ಯಾರನ್ನೂ ಬಿಡದು; ಎಲ್ಲರೂ ಅದಕ್ಕೆ ತುತ್ತೇ. ಗೋಖಲೆ ಗಾಂಧೀಜಿಗೆ ಗುರುಸಮಾನರು. ಅವರನ್ನೂ ಈ ಹಾಸ್ಯದ ಕತ್ತಿ ಸೋಕದೆ ಹೋಗಲಿಲ್ಲ. ಗೋಖಲೆಯ ಪ್ರತಿಯೊಂದು ಮಾತಿನಲ್ಲೂ ರಾನಡೇಯವರ ಮೇಲಿನ ಗೌರವದ ಮುದ್ರೆ ಒತ್ತಿರುತ್ತಿತ್ತು. ಅದನ್ನು ಗಾಂಧೀಜೀ ಹೀಗೆ

ತಿಳಿಸಿದಾರೆ: 'ರಾನಡೆಯುವರು ಹೀಗೆ ಹೇಳುತ್ತಿದ್ದರು ಎಂಬ ಮಾತು ಇವರಿಗೆ ಸೂತ ಉವಾಚ ಇದ್ದಂತೆ.'

ಎಂಥ ಗಂಭೀರ ಪ್ರಸಂಗದಲ್ಲೂ ಗಾಂಧೀಜಿಗೆ ಹಾಸ್ಯದ ರುಚಿ ತಪ್ಪಿಲ್ಲ. ಸಾಧಾರಣವಾಗಿ ಬಿಂಕವಿರಬೇಕಾದ ಕಡೆ ಇವರಿಗೆ ವಿನೋದ. ತಮ್ಮ ಹೆಂಡತಿಗೆ ಹೇಳಬಾರದ ಕಷ್ಟವನ್ನು ಕೊಟ್ಟಿದಾರೆ ಗಾಂಧೀಜೀ. ಅದರಲ್ಲಿ 'ಔಚಿತ್ಯಕ್ಕಿಂತ ಅಧಿಕಾರವೇ ಬಲ'ವಾಗಿತ್ತು. ದಾಂಪತ್ಯದಲ್ಲಿ 'ಲೋಪ ನನ್ನದು, ಆದರೆ ಕಷ್ಟ ಅನುಭವಿಸುವುದು ಮಾತ್ರ ಆಕೆಯದು.' ಲೋಕದಲ್ಲಿ ಔಚಿತ್ಯಮೀರಿ ಹೆಂಡತಿಯ ಮೇಲೆ ಅಧಿಕಾರ ತೋರಿಸದ ಗಂಡಂದಿರು ಎಷ್ಟು ಜನ? ಲೋಪ ತಮ್ಮದು, ಆದರೂ ಕಷ್ಟ ಅವರಿಗೇ ಹೊರಿಸದವರು ಯಾರು? ಒಂದು ಬಹುವ್ಯಾಪಿಯಾದ ಸಂಪ್ರದಾಯದ ತಿರುಳನ್ನೇ ಗಾಂಧೀಜಿ ವಿಮರ್ಶಿಸಿದಾರೆ. ನಮ್ಮ ಬೆರಳನ್ನೇ ನಮ್ಮ ಕಣ್ಣಿಗೆ ಚುಚ್ಚಿದಾರೆ. ಆದರೆ ಈ ನೋವಿನಿಂದ ಕಣ್ಣಲ್ಲಿ ಬರುವುದು ರಕ್ತವಲ್ಲ. ನಗೆಯ ನೀರು. ಒಂದು ಸಲ ಹಡಗಿನ ಪಯಣ. ದೊಡ್ಡ ತುಫಾನು ಬಂತು. ಹಡಗು ಮುಳುಗಿಹೋಗುತ್ತದೆಯೇನೋ ಎಂಬ ಹಾಗೆ ಅಲೆಗಳೆದ್ದವು. 'ಆಗ ಎಲ್ಲರ ನಾಲಗೆಯ ಮೇಲೂ ಈಶ್ವರಾಧೀನ ಎಂಬ ಒಂದೇ ಶಬ್ದ. ನಮಾಜು ಭಜನೆ ಒಂದೇ ಸಮನೆ ನಡೆಯಿತು. ಒಂದು ದಿನವೆಲ್ಲಾ ಹೀಗೆ ಕಳೆಯಿತು. ಆಗ ಜಾತಿ ಮತ ಭೇದಗಳು ಎಲ್ಲಾ ಹೋದವು. ತುಫಾನು ತೊಲಗಿಹೋಯಿತು. ಎಲ್ಲರ ಮೋರೆ ಅರಳಿದವು. ಅಪಾಯದ ಜೊತೆಯಲ್ಲೇ ದೇವರ ಸ್ಮರಣೆಯೂ ದೂರವಾಗಿ ಹೋಯಿತು. ಮೃತ್ಯುಭಯ ಕಳೆಯಿತು. ಒಡನೆಯೇ ಮಾಯೆ ಮತ್ತೆ ಕವಿದಿತು.'

ಬರೆಹಕ್ಕಿಂತ ಮಾತಿನಲ್ಲಿ ಗಾಂಧೀಜಿಯ ಹಾಸ್ಯರಸ ಹೆಚ್ಚು ಹೊಳೆಯುತ್ತದೆ. ಆ ನಕ್ಕು ನಗಿಸುವ ಕಲೆಗೆ ಮಾತಾಡುವಾಗ ದೊರೆವ ಅವಕಾಶ ಬರೆವಾಗ ಕಡಮೆ. ಅಂಥ ಅವಕಾಶವನ್ನು ಗಾಂಧೀಜೀ ಪೂರಾ ಬಳಸಿಕೊಂಡುಬಿಡುತ್ತಾರೆ. ಒಂದೇ ಗಳಿಗೆ ಅವರ ಬಳಿ ಕೂತರೆ ಸಾಕು, ಅವರ ವಿನೋದದ ರುಚಿ ಗೊತ್ತಾಗುತ್ತದೆ. ಗಾಂಧೀಜೀ ಅಂದರೆ ಏನೋ ಹಿಮಾಲಯಬೆಟ್ಟವಿದ್ದಹಾಗೆ. ಅವರ ಸುತ್ತಲೂ ಎಲ್ಲಾ ಛಳಿ, ಎಲ್ಲಾ ಗಂಭೀರ, ಎಲ್ಲಾ ಮೌನ ಎಂದು ಜನ ತಿಳಿಯುತ್ತಾರೆ. ನಮ್ಮಲ್ಲಿ ಶ್ರೇಷ್ಠರಾದವರ

ಸುತ್ತ ಯಾವಾಗಲೂ ಒಂದು ಮಹಾಗಾಂಭೀರ್ಯದ ಗೆರೆ ಎಳೆದಿರುತ್ತಾರೆ. ಆ ಮಹಾಜೀವಿಗಳಿಗೆ ಅದು ಗೊತ್ತೇ ಇರದಿದ್ದರೂ ಅವರ ಸುತ್ತಲಿನವರು ಮಾತ್ರ ಆ ಬಿಕ್ಕಟ್ಟು ಬಲವಾಗಿ ಇಡುತ್ತಾರೆ. ಅಲ್ಲಿ ಹೋಗಬೇಕಾದರೆ ಬದರಿಕಾಶ್ರಮದ ಪ್ರಯಾಣ ಮಾಡಿದಹಾಗೆ. ಸ್ವಲ್ಪ ತೂಕ ತಪ್ಪಿದರೆ ಪಪಾತ. ಪರ್ಣಕುಟಿಯಲ್ಲಿ ಇಂತಹ ಹುಚ್ಚು ಇಲ್ಲ. ಹಿಮಾಲಯವೇ ಇದುರಿಗೆ ಕೂತಿರುತ್ತದೆ. ಆದರೆ ನಮ್ಮ ಮೇಲೆ ಆ ಮಂಜಿನಗಡ್ಡೆ ಕವಿದು ಬೀಳುವುದಿಲ್ಲ. ಕುಣಿಕುಣಿವ ಗಂಗಾನದಿಯ ನೀರಲ್ಲಿ ಮಿಾಯುತ್ತೇವೆ. ಗಾಂಧೀಜೀ ಒಂದು ನಗೆ ಮಾತಾಡಿ ನಮ್ಮ ಛಳಿ ಕಳೆಯುತ್ತಾರೆ. ನಮ್ಮನ್ನು ಗೇಲಿ ಎಬ್ಬಿಸಿ ಹಗುರಾಗಿ ಎತ್ತಿ ಆ ನಗೆಯ ಗಂಗೆಯಲ್ಲಿ ಅದ್ದುತ್ತಾರೆ. ಆಯಿತು; ಅಲ್ಲಿಂದ ಮುಂದೆ ನಾವು ಅವರ ಗೆಳೆಯರು. ಆ ವಿನೋದ ದಲ್ಲೇ ಗಾಂಧೀಜಿಯ ಗೆಲವೆಣ್ಣು ಕೂತಿದಾಳೆ.

ಗಾಂಧೀಜಿಗೆ ೧೯೩೭ರಲ್ಲಿ ರಕ್ತದ ವೇಗ ತುಂಬ ಹೆಚ್ಚಿ ಮೈ ಬಹಳ ಅಸ್ವಸ್ಥವಾಯಿತು. ಆಗ ಅವರಿಗೆ ಬೇಕಾಗಿದ್ದುದು ಪೂರ್ಣ ವಿಶ್ರಾಂತಿ. ಮೈ ಮನಸುಗಳೆರಡಕ್ಕೂ ಹಿತವಾಗಿ ವಿರಾಮ ಸಿಕ್ಕರೆ ಆ ಬೇನೆ ಗುಣವಾಗ ಬಹುದು. ಆಗ–ಮೈಸೂರು–ಕರ್ನಾಟಕ ಆ ಭಾಗ್ಯ ಕಟ್ಟಿಕೊಂಡಿತು. ಕನ್ನಡ ಜನರ ಪುಣ್ಯ ಹಣ್ಣಾಗಿ ನಂದೀ ಬೆಟ್ಟದಲ್ಲಿ ಅವರು ವಿಶ್ರಾಂತಿ ತೆಗೆದು ಕೊಳ್ಳುವ ಹಾಗೆ ಏರ್ಪಾಡಾಯಿತು. ಅವರನ್ನು ನೋಡಿಕೊಳ್ಳಲು ಮೇಲ್ವಿ ಚಾರಣೆಗಾಗಿ ಅಮಾತ್ಯ ರಾಜಗೋಪಾಲಾಚಾರ್ಯರೇ – ಆಗ ಅವರು ಅಮಾ ತ್ಯರಾಗಿರಲಿಲ್ಲ – ನಿಂತಿದ್ದರು. ಅವರ ಜೊತೆಗೆ ದೇಶಪಾಂಡೆ ಗಂಗಾಧರ ರಾಯರು. ಮಹಾದೇವ ದೇಸಾಯಿ ಇದ್ದರೆಂದು ಬೇರೆ ಹೇಳಬೇಕಾ ದುದೇ ಇಲ್ಲ. ಇವರೆಲ್ಲರಿಗೂ ಕಣ್ಣಲ್ಲಿ ಕಣ್ಣು. ಗಾಂಧೀಜೀ ವಿಶ್ರಾಂತಿ ತೆಗೆದುಕೊಳ್ಳದೆ ಏನಾದರೂ ಕೆಲಸಮಾಡುತ್ತ ಮೈ ಬಳಲಿಸಿಕೊಳ್ಳುತ್ತಾರೆ ಯಲ್ಲ ಎಂದು ಇವರಿಗೆ ವ್ಯಥೆ. ಗಾಂಧೀಜೀ ಹಟಮಾರಿ ರೋಗಿ. ಅವರು ಹೋದದ್ದೇ ದಾರಿ. ಇವರೆಲ್ಲ ಗುಂಪುಗೂಡಿ ಆಲೋಚನೆ ಮಾಡಿದರು. ಗಾಂಧೀಜಿಯನ್ನು ಸುಮ್ಮನೆ ಇರುವಂತೆ ಒಪ್ಪಿಸಲು ಏನು ಉಪಾಯ? ಕೊನೆಗೆ ಒಬ್ಬರು ಅಂಜುತ್ತ ಅಂಜುತ್ತ 'ಬಾಪು, ನೀವು ಸದಾ ಏನಾದರೂ ಕೆಲಸ ಹಚ್ಚಿಕೊಂಡು ಕೂಡುತ್ತೀರಿ. ಸೋಮವಾರ ಬಿಡುವು ಅಂತ

ಹೆಸರು. ಆ ದಿನವೂ ಯಾವುದಾದರೂ ಒಂದು ಕೆಲಸ ಮಾಡುತ್ತಲೇ ಇರುತ್ತೀರಿ. ಒಂದು ದಿನವಾದರೂ ಬಿಡುವಾಗಿ ಇರಬಾರದೇ? ವಾರಕ್ಕೆ ಒಂದು ದಿನವಾದರೂ ಬಿಡುವು ಬೇಡವೇ? ಒಂದೇ ದಿನ. ಆ ಹೊತ್ತು ಓದಬಾರದು, ಬರೆಯಬಾರದು. ಸುಮ್ಮನೆ ಆಟ ಆಡಬೇಕು."

ಈ ಉಪದೇಶ ಕೇಳಿ ಗಾಂಧೀಜೀ ನಕ್ಕರು. ಏನು ಆಟ ಆಡಬೇಕು? 'ಏನು ಇಸ್ಪೇಟು ಆಡೋಣವೇ? ಇಲ್ಲ, ಪಿಂಗ್‌ಪಾಂಗಾಡೋಣವೋ?'

ಕಾಲು ಜಾರಿದಹಾಗಾಯಿತು. ಏನು ಹೇಳಬೇಕು ಈ ಪ್ರಶ್ನೆಗೆ. ಕೈಸೋಕಿದ್ದೇ ತಡ ಬೆನ್ನು ಮಣ್ಣುಮಾಡಿದಹಾಗಾಯಿತು ಈ ಕುಸ್ತಿ. 'ಯೋಚನೆಮಾಡಿ ಹೇಳುತ್ತೇನೆ' ಎನ್ನಬೇಕಾಯಿತು. ಅಂದದ್ದಷ್ಟೆ; ಯೋಚನೆ ಹರಿಯಲಿಲ್ಲ. ಮೌನವೇ ಉತ್ತರವಾಯಿತು.

ಅವರನ್ನೇ ಗೇಲಿ ಮಾಡುತ್ತ ಗಾಂಧೀಜೀ ಹೇಳಿದರು. 'ಏನು ಮತ್ತೆ? ನಿಮ್ಮ ಸೂಚನೆ ಗಾಳಿಗೇ ಹಾರಿಹೋಯಿತಲ್ಲ. ಅಷ್ಟೆ, ಮತ್ತೇನಾದೀತು? ಕೆಲಸ ಎಂದರೆ ಆಟ, ಆಟ ಎಂದರೆ ಕೆಲಸ ಆಗಬೇಕು. ಹಾಗಿರುವಾಗ ನೀವು ಏನು ತಾನೆ ಹೇಳೀರಿ?'

'ಉಹೂ. ಹಾಗಲ್ಲ. ಆಟ ಎಂದರೆ ಪೂರಾ ಬಿಡುವು; ಕೆಲಸ ಗಿಲಸ ಏನೂ ಇಲ್ಲ.'

'ಸರಿ, ಹಾಗಾದರೆ ನಾನೇ ಹೇಳಲೆ? ಬಡಗಿ ಸಾಮಾನು ತಂದುಕೊಡಿ. ಮುರುಕು ರಾಟೆ, ಸೊಟ್ಟ ಕದಿರು ಇಲ್ಲವೆ? ಅವನ್ನೆಲ್ಲ ಸರಿಮಾಡುತ್ತೇನೆ.'

'ಇಲ್ಲ ಇಲ್ಲ. ಅದಾಗದು. ನಿಮಗೆ ಸದಾ ಖಾದಿಯ ಚಿಂತೆಯೇ ಹಿಡಿದಿದೆ. ರಾಟೆ ಕೊಟ್ಟರೆ ಮತ್ತೆ ಅದೇ ಧ್ಯಾನವೇ. ಇಲ್ಲ, ಏನಾದರೂ ಒಂದು ಹೊಸದು ಬೇಕು.

'ಬಿಡುವು ಅಂದರೆ ಮೈಗಳ್ಳತನವೇ? ವಿಶ್ರಾಂತಿಯೆಂದರೆ ಕೆಲಸ ಬಿಟ್ಟು ಬೇರೆ ಕೆಲಸ ಮಾಡುವುದು; ಸೋಮಾರಿತನವಲ್ಲ. ಇದು ನೋಡಿ. ದಕ್ಷಿಣ ಆಫ್ರಿಕಾದಲ್ಲಿ ಮಾಡಿದಹಾಗೆ ಮೇಜು ಬೀರುಗಳನ್ನು ಮಾಡಲೇನು? ಇಲ್ಲ, ಟೋಪಿ ಹೊಲಿದುಕೊಡಲೇ?'

‘ಹೊ, ಅದು ಸರಿ. ಹಾಗಾದರೆ ನಾವು ನಿಜವಾಗಿ ‘ಗಾಂಧೀ ಟೋಪಿ’ಯನ್ನೇ ಮಾರಬಹುದು.’

‘ಏನು ಹೊಲಿಯಲಾರೆ ಎಂತಲೇ? ಆಫ್ರಿಕಾದಲ್ಲಿ ಕಸ್ತೂರಬಾಗೆ ಜಾಕೆಟ್ಟು ಹೊಲಿದುಕೊಟ್ಟದ್ದೆ. ಆಕೆಯನ್ನು ಕೇಳಿನೋಡಿ ಬೇಕಾದರೆ. ಆಕೆಗೆ ಅದು ಸರಿಯಾಗಿತ್ತೋ ಇಲ್ಲವೊ, ಅಂತೂ ತೊಡುತ್ತಿದ್ದಳು. ಒಂದು ವೇಳೆ ತೊಡದೆ ಹೋಗಿದ್ದರೂ ನಾನು ಹೊಲಿದುಕೊಟ್ಟದ್ದು ಮರೆತಾಳೆಯೇ.’

ಅವರ ಸೂಚನೆಯ ಹಾಗೆ ಇವರ ಸೂಚನೆ ಗಾಳಿಗೆ ಹಾರಲಿಲ್ಲ. ನಗೆಯಾಗಿ ಅವತರಿಸಿತು. ರೋಗಿಗೆ ನಗೆ ಪಥ್ಯವಲ್ಲವೆ!

ಫಿರೋಜಷಾ ಮೆಹತಾಗೆ ನಾಲಗೆಯ ತುದಿಯಲ್ಲೇ ಕಾನೂನು ಎಲ್ಲಾ ಇತ್ತಂತೆ. ಅದಕ್ಕೇ ಅವರಿಗೆ ವಕೀಲಿಯಲ್ಲಿ ಅಷ್ಟು ಹೆಸರು ಬಂದದ್ದು. ಗಾಂಧೀಜಿಯ ತುಟಿಯಲ್ಲಿ ನಗೆ ತುಳುಕುತ್ತಾ ಇರುತ್ತದೆ. ಸ್ವಲ್ಪ ಅವಕಾಶ ಸಿಕ್ಕರೆ ಸಾಕು ಹೊರಗೆ ಬಂದುಬಿಡುತ್ತದೆ. ಒಂದು ಸಲ ಸಂಯುಕ್ತ ಪ್ರಾಂತ್ಯದಲ್ಲಿ ತಿರುಗಾಡುತ್ತಿದ್ದರು. ಒಂದು ಊರಿನಲ್ಲಿ ಒಂದು ವಿಚಿತ್ರ ವಸ್ತುಸಂಗ್ರಹಾಲಯ. ಅದರ ವ್ಯವಸ್ಥಾಪಕ ಬಂದು ಗಾಂಧೀಜೀಯನ್ನು ಕೇಳಿದ: ನಿಮ್ಮ ಬಲಗೈಯ ಅಚ್ಚು ಗುರುತು ನಮಗೆ ಬೇಕು, ಅದನ್ನು ಇಲ್ಲಿ ಇಡುತ್ತೇವೆ. ಗಾಂಧೀಜಿಗೆ ಈ ವಿಲಕ್ಷಣ ಪ್ರಾರ್ಥನೆ ಕೇಳಿ ನಗು ಬಂತು. ‘ಅಲ್ಲವಯ್ಯಾ, ಇಂಥವೆಲ್ಲ ಕಳ್ಳರು – ಕೆಟ್ಟ ಚಾಳಿಯ ಜನರು ಇವರಿಂದ ಪೋಲೀಸರು ತೆಗೆದುಕೊಳ್ಳುತ್ತಾರೆ. ನಿನಗೇಕೆ ಬೇಕು? ಹೋಗಲಿ, ಕೈಯ ಬದಲು ನನ್ನ ಮೂಗಿನದೋ ಕಿವಿಯದೋ ಗುರುತು ತೆಗೆದುಕೊಳ್ಳಬಾರದೆ?’ ಎಂದು ತೇಲಿಸಿಬಿಟ್ಟರು. ಇನ್ನೊಂದು ಸಲ ಇಂಗ್ಲೆಂಡಿನಲ್ಲಿ ಯಾರೋ ಅಮೆರಿಕದ ಹೆಂಗಸು ಭಕ್ತಿಯಿಂದ ತಮ್ಮ ದೇಶಕ್ಕೆ ಬರಬೇಕೆಂದು ಅವರನ್ನು ಆಹ್ವಾನಿಸಿದಳು. ‘ಅಲ್ಲಿ ನೀವು ಅಂದರೆ ಎಲ್ಲರಿಗೂ ಹುಚ್ಚು’ ಎಂದು ಸ್ತುತಿ ಮಾಡಿದಳು. ಗಾಂಧೀಜಿಯ ಮುಂದೆ ಈ ಆಟವೇ? ‘ಸರಿಸರಿ. ನಾನು ಅಲ್ಲಿಗೆ ಬಂದರೆ ನಿಮ್ಮವರು ನನ್ನನ್ನು ಎಲ್ಲಾದರೂ ಒಂದು ಮೃಗಾಲಯಕ್ಕೆ ಕರೆದುಕೊಂಡು ಹೋಗಿ ಸೇರಿಸಿಬಿಟ್ಟಾರು.

ನನ್ನ ಸ್ನೇಹಿತರೆಲ್ಲ ಮೊದಲೇ ಎಚ್ಚರಿಕೆ ಹೇಳಿದಾರೆ' ಎಂದು ಇದ್ದವರನ್ನೆಲ್ಲ ನಗಿಸಿಬಿಟ್ಟರು.

ಇಂಥ ಗೆಣೆಯನೇ ಒಬ್ಬ—ಇಂಗ್ಲೆಂಡಿನ ಸಭೆಯೊಂದರಲ್ಲಿ—'ಗಾಂಧೀಜೀ, ನಿಮಗೆ ಯಾವಾಗಲಾದರೂ ಹಿಂಸೆಯ ಭಾವ ಬರುವುದಿಲ್ಲವೆ? ಎಂದಾದರೂ ಕಹಿ ಮಾತು ನೀವು ಆಡಿದೀರಾ?' ಎಂದು ಕೇಳಿದ. ಅಂಬಿನಂತೆ ನೇರಾಗಿ ಬಂತು ಉತ್ತರ. 'ಈ ಮಾತು ಕಸ್ತೂರಿಬಾಯನ್ನು ಕೇಳಿ ನೋಡಿ.' ಸಭೆಗೆ ಸಭೆಯೇ ಗೊಳ್ಳೆಂದು ನಕ್ಕರು. ಕೇಳಿದ ಪ್ರಶ್ನೆ ಕೊಂಚ ನಾಜೂಕಾದುದು. ಅದಕ್ಕೆ ಸ್ಪಷ್ಟವಾದ ಲೆಕ್ಕಾಚಾರದ ಉತ್ತರ ಕೊಟ್ಟರೆ ಸ್ವಾರಸ್ಯವಿಲ್ಲ. ಭಾರವಾಗುತ್ತದೆ. ಆ ಹೊತ್ತಿನಲ್ಲಿ ಆ ನಗೆನುಡಿಯೇ ಸರಿಯಾದ ಉತ್ತರ. ಆದರೆ ಅಂಥ ಉತ್ತರ ಆತ್ಮನಿಗ್ರಹದಿಂದ ಅಲ್ಲದೆ, ಸ್ಥಿತಪ್ರಜ್ಞೆಯಿಲ್ಲದೆ ಬರುವ ಸಂಭವವಿಲ್ಲ.

'ಅಪಶಬ್ದ ಭಯಂ ನಾಸ್ತಿ ಅಪ್ಪಳಾಚಾರ್ಯ ಸನ್ನಿಧೌ' ಎಂದು ಪಂಡಿತರಲ್ಲಿ ಒಂದು ರೂಢಿಯ ಮಾತು. ಅಪ್ಪಾಳಾಚಾರ್ಯರು ಹಿರಿಯ ಪಂಡಿತರು. ಅವರೆದುರಿನಲ್ಲಿ ಅಪಶಬ್ದ ಹೊರಡುವ ಹಾಗೇ ಇಲ್ಲ. ಬುದ್ಧಿಗೆ ಆ ಮಟ್ಟ ತಾನಾಗಿಯೇ ಅಲ್ಲಿ ಬರುತ್ತದೆ. ಡಂಭ, ಬಡಾಯಿ, ಮೋಸ ಯಾವುದೂ ಅವರ ಇದುರಿನಲ್ಲಿ ನಡೆಯುವುದಿಲ್ಲ. ಪರ್ಣಕುಟಿಯೊಳಗೆ ಹೋಗಿ ಕೂತರೆ ನಮ್ಮ ಇದುರಿಗೇ ನಾವು ಕೂತಂತೆ ಆಗುತ್ತದೆ. ಅಲ್ಲಿ ಯಾರಿಗೆ ಮೋಸಮಾಡಬೇಕು? ಯಾರ ಸಲುವಾಗಿ ಡಂಭ, ಬಡಾಯಿ? ಅದು ಅಂಥ ದುರ್ವಾರ ಶಕ್ತಿ.

ಯಾರೋ ದಂಪತಿಗಳು ತಮ್ಮ ಒಡವೆಗಳನ್ನೆಲ್ಲ ಗಾಂಧೀಜಿಗೆ ಒಂದು ಸಭೆಯಲ್ಲಿ ದಾನಮಾಡಿದರು. ಗಂಡನನ್ನು ಕೇಳಿದರು ಗಾಂಧೀಜೀ—'ಇದಕ್ಕೆ ನೀನು ಒಪ್ಪಿದೀಯಾ?' ಆತ ಹೇಳಿದ 'ಅವು ಆಕೆಯ ಒಡವೆ. ನನಗೇನು ಅಧಿಕಾರ ಅದರಮೇಲೆ; ಆಕೆಯ ಇಷ್ಟ.' ಗಾಂಧೀಜೀ ಹೇಳಿದರು. 'ನಿಮ್ಮ ವಯಸ್ಸಿನಲ್ಲಿ ನಾನು ಇಷ್ಟು ಬುದ್ಧಿವಂತ ಗಂಡನಾಗಿರಲಿಲ್ಲ.' ಈ ಮಾತು ಹಾಗೂ ಸರಿ, ಹೀಗೂ ಸರಿ.

ಗಾಂಧೀಜೀ ಯಾರನ್ನೂ ಬೇಡ ಎನ್ನುವುದಿಲ್ಲ. ಅದರಲ್ಲೂ ವಿರೋಧಪಕ್ಷಕ್ಕೆ ತೀರಾ ದರ್ಶನಸುಲಭರು. ಅದೊಂದು ಅವರ ವಿಲಕ್ಷಣ ಸ್ವಭಾವ.

ತಮ್ಮ ಅನುಯಾಯಿಗಳಿಗಿಂತ ತಮ್ಮ ವಿರೋಧಿಗಳ ಬಗ್ಗೆ ಆದರ ಹೆಚ್ಚು. ಒಮ್ಮೊಮ್ಮೆ ಅಂಥವರ ಮಾತು ಪೂರಾ ವಿಚಿತ್ರವಾಗಿ, ಸಂಭಾಷಣೆ ನೆಡೆಯುವುದೇ ಕಷ್ಟವಾಗುತ್ತದೆ. ಅಂಥ ಸಂದರ್ಭದಲ್ಲಿ ಉಪಾಯವಾಗಿ ಗಾಂಧೀಜೀ ಮಾತು ಮುಗಿಸುತ್ತಾರೆ.

ಮಧುರೆಗೆ ಹೋಗಿದ್ದಾಗ ಒಬ್ಬ ಸನಾತನಿ ಪಂಡಿತರು ಗಾಂಧೀಜಿಗೆ ಗಂಟು ಬಿದ್ದರು. ಗಾಂಧೀಜೀ ಹರಿಜನ ಚಳುವಳಿಗಾಗಿ ದೇಶವೆಲ್ಲ ಸುತ್ತುತ್ತಿದ್ದರು. ಆಗ ಹೋದಹೋದಲ್ಲೆಲ್ಲ ಅಸ್ಪೃಶ್ಯತೆ ಶಾಸ್ತ್ರಸಮ್ಮತವೋ ಅಲ್ಲವೋ ಎಂಬ ಚರ್ಚೆ ಏಳುತ್ತಿತ್ತು. ಸಾವಧಾನದಿಂದ ಎಲ್ಲೆಲ್ಲೂ ಚರ್ಚೆ ನಡೆಯುತ್ತಿತ್ತು. ಮಧುರೆಯ ಈ ಪಂಡಿತರೂ ಅದೇ ಮಾತೇ ತೆಗೆದರು.

'ಗುಡಿಗಳು ಇರುವುದು ಸ್ತ್ರೀ, ಶೂದ್ರರಿಗಾಗಿ. ಅವರಿಗೇ ದೇವಾಲಯ ಪ್ರವೇಶಾಧಿಕಾರ ಇರುವುದು. ಶಾಸ್ತ್ರ ಹಾಗೆ ಹೇಳುತ್ತವೆ. ಈಗಿನ ಕಾಲದಲ್ಲಿ ಎಲ್ಲರೂ ಕರ್ಮಚಂಡಾಲರಾಗಿದ್ದಾರೆ. ಶೂದ್ರರು ಮಾತ್ರವೇ ತಮ್ಮ ಸ್ವಧರ್ಮ ಬಿಟ್ಟಿಲ್ಲ. ಹಾಗೆಯೇ ಗರತಿಯರಾದ ಹೆಂಗಸರಿಗೂ ದೇವಾಲಯ ಪ್ರವೇಶಾಧಿಕಾರ ಉಂಟು.'

ಗಾಂಧೀಜೀ ಕೇಳಿದರು: 'ಒಬ್ಬ ಬ್ರಾಹ್ಮಣ ಕರ್ಮಚಂಡಾಲನಾಗಿದ್ದೂ ಅವನ ಹೆಂಡತಿ ಗರತಿಯಾಗಿದ್ದರೆ ಆಕೆಗೆ ದೇವಾಲಯ ಪ್ರವೇಶ ಉಂಟೆ?'

'ಆಕೆಗಂತೂ ಸರಿಯೇ ಸರಿ. ಆಕೆಯ ಪರಿಶುದ್ಧತೆ ಗಂಡನನ್ನು ಕೂಡ ಶುದ್ಧಗೊಳಿಸುತ್ತದೆ.'

'ಹಾಗೆಂದರೆ—ಗಂಡನಾದವನು ಬೇಕಾದ ಅಕೃತ್ಯ ಮಾಡಲಿ, ಪರಿಶುದ್ಧಳಾದ ಹೆಂಡತಿ ಇದ್ದರೆ ಸಾಕು, ತಾನೂ ಶುದ್ಧನಾಗುತ್ತಾನೆ ಎಂತಲೇ?'

'ಹೌದು. ಅವನ ಹೆಂಡತಿ ಅವನನ್ನು ಕಾಪಾಡುತ್ತಾಳೆ.'

'ಅಲ್ಲ; ಸಕಲ ಪಾಪಗಳನ್ನೂ ಅವನು ಮಾಡಲಿ, ಹೆಂಡತಿ ಪುಣ್ಯಶೀಲೆಯಾದರೆ ಆಯಿತೇ?'

'ಹೌದು. ಹೆಂಡತಿಯೇ ಅವನ ರಕ್ಷಣೆ. ಅವನು ಮಾಡಿದ್ದು ಪಾಪವೇ ಆದರೂ ಪರಿಹಾರವಾಗುತ್ತದೆ.'

ಗಾಂಧೀಜಿಗೆ ನಗೆ ತಡೆಯಲಾಗಲಿಲ್ಲ. ಆದರೂ ಮಾತು ಮುಂದರಿಸಿದರು. 'ಸರಿಸರಿ. ಒಳ್ಳೆಯ ಉಪಾಯ. ಪಾಪ ಮಾಡುವುದು ; ಮಾಡಿ ಅದರ ಫಲ ನಮಗೆ ಅಂಟದೆ ಇರಬೇಕಾದರೆ ಒಳ್ಳೆಯ ಹೆಂಡತಿ ಒಬ್ಬಳನ್ನು ಗಂಟುಹಾಕಿಕೊಂಡರೆ ತೀರಿತು.'

'ಅಷ್ಟೇ. ಅದೇ ಸರಿ.' ಸುತ್ತಲೂ ಇದ್ದವರಿಗೆ ನಗೆ ಹೋಗಿ ಅಸಹ್ಯ ಹುಟ್ಟಿರಬೇಕು.

ಗಾಂಧೀಜಿಗೆ ಇನ್ನೂ ಆಸೆ. ಪಾಪ, ಆ ಪಂಡಿತನ ಹುಚ್ಚು ಬಿಡಿಸೋಣ ಎಂದು. 'ಇದು ನೋಡಿ ಪಂಡಿತರೆ! ನಮ್ಮ ದೇಶದ ಹೆಂಗಸರೆಲ್ಲ ಪುಣ್ಯಶಾಲಿಗಳೇ ಎನ್ನೋಣ. ಅವರ ಪಾಪ ನಮಗೇನು ಗೊತ್ತು. ಅಂದ ಮೇಲೆ ನಮ್ಮ ದೇಶದವರೆಲ್ಲ ಪರಿಶುದ್ಧರೇ ಅಲ್ಲವೆ?'

'ಹಾಗಲ್ಲ. ಹೆಂಗಸರು ರಾಮಾಯಣಾದಿ ಗ್ರಂಥಗಳಲ್ಲಿ ಹೇಳಿದ ಹಾಗೆ ಪರಿಶುದ್ಧರಾಗಬೇಕು.'

'ಅದನ್ನು ಹೇಗೆ ತಿಳಿದುಕೊಳ್ಳುವುದು? ಹೇಗೆ ನಿರ್ಧಾರ ಮಾಡುವುದು?'

'ಅಗ್ನಿಪರೀಕ್ಷೆಯ ಮೂಲಕ. ಸೀತೆಯಹಾಗೆ ಅಗ್ನಿಪ್ರವೇಶ ಮಾಡಿ ಪಾತಿವ್ರತ್ಯ ಸ್ಥಾಪಿಸಬೇಕು.'

'ಅದರಲ್ಲಿ ಸುಟ್ಟುಕೊಂಡವರೆಲ್ಲ ಅಪವಿತ್ರರು ಎನ್ನಬೇಕೋ?'

'ಸಂದೇಹವೇನು? ನಿಸ್ಸಂದೇಹವಾಗಿಯೂ—'

ಈ ಚೆಲ್ಲಾಟ ಗಾಂಧೀಜಿಗೆ ಇನ್ನು ತಡೆಯಲಾಗಲಿಲ್ಲ. ಇಂಥ ಮೊಂಡನನ್ನು ಮಾಡುವುದೇನು! ಮಾತೇ ಮುಗಿಸಿದರು. 'ಸರಿ ನಮಸ್ಕಾರ. ತಾವಿನ್ನು ಹೊರಡಬಹುದು' ಎಂದು ಕಳಿಸಿದರು.

ಮಧ್ಯಪ್ರಾಂತದಲ್ಲಿ ಇಂಥವರೇ ಒಬ್ಬ ಸಾಧು ಇವರಿಗೆ ಅಡ್ಡಬಂದರು. ಗಾಂಧೀಜೀ ಒಂದು ಸಭೆಗೆ ಹೋಗಬೇಕಾಗಿತ್ತು. ಇವರು ಹೋಗುವಾಗ ಆ ಸಾಧುವಿನ ಶಿಷ್ಯರು ಬಾಗಿಲಿಗೆ ಅಡ್ಡಕಟ್ಟಿ ನಿಂತರು. ಗಾಂಧೀಜೀ ಮಾಡುವುದು ಅಧರ್ಮ. ಅದನ್ನು ನಿಲ್ಲಿಸಲು ಸತ್ಯಾಗ್ರಹಮಾಡಿ ಗುರುವಿಗೇ ತಿರುಮಂತ್ರ ಹೇಳಿದರೆ ಸರಿ ಎಂದು ಅವರ ಆಲೋಚನೆ. ಆ ಸಾಧುವನ್ನು ಕರೆಸಿ ಹೇಳಿದರು ಗಾಂಧೀಜೀ: 'ಇದು ಸತ್ಯಾಗ್ರಹವಲ್ಲ; ದುರಾಗ್ರಹ.

ಏನಾದರೂ ವಿಪರೀತಮಾಡಿ ಹುಯ್ಲು ಎಬ್ಬಿಸುವ ಹಂಚಿಕೆ ನಿಮ್ಮದು. ನಾನು ಪೋಲೀಸರನ್ನು ಕರೆಯಿಸಬೇಕು, ಇಲ್ಲ, ನಿಮ್ಮ ಮೇಲೆ ಕಾರು ಹಾಯಿಸಬೇಕು. ಇದಲ್ಲವೇ ನಿಮ್ಮ ಗತ್ತು? ನಾನು ಎರಡೂ ಮಾಡುವುದಿಲ್ಲ. ನಡೆದುಹೋಗುತ್ತೇನೆ.

'ನಾವು ನಿಮ್ಮ ಕಾಲು ಹಿಡಿದುಕೊಂಡು ಕೂತುಬಿಡುತ್ತೇವೆ.'

'ಅದು ಸತ್ಯಾಗ್ರಹವಲ್ಲ. ಧರ್ಮದ ಕೆಲಸಕ್ಕೆ ಹೀಗೆ ಅಡ್ಡ ಬರಬಹುದೇ? ಹೀಗೆ ಮಾಡಿದರೆ ನನ್ನ ಸಂಕಲ್ಪ ನಾನು ಮುರಿದೇನೇ?'

'ಹಾಗಾದರೆ ಏನು ಮಾಡಬೇಕು?'

'ಕಾಶಿಗೆ ಹೋಗಿರಿ. ನನಗೆ ಚಲೋ ಬುದ್ಧಿ ಕೊಡುವ ಹಾಗೆ ದೇವರನ್ನು ಬೇಡಿರಿ. ನಾನು ಮಾಡಿದ ಹಾಗೆ ಉಪವಾಸ ಮಾಡಿರಿ.'

ಇನ್ನೂ ಒಂದು ತರದ ಜನ ಉಂಟು. ಅವರು ಜಿಗಳಿಯ ಹಾಗೆ. ಹತ್ತಿದರೆ ಬಿಡುವುದೇ ಇಲ್ಲ. ತಲೆ ಚಿಟ್ಟು ಹತ್ತಿಸಿಬಿಡುತ್ತಾರೆ. ಒಬ್ಬ ಅಮೆರಿಕಾ ಹೆಂಗಸು ಪರ್ಣಕುಟಿಗೆ ಬಂದಿದ್ದಳು. ಆಗ ಗಾಂಧೀಜಿಗೆ ಬಿಡುವು ಇರಲಿಲ್ಲ. ಆದರೂ ಏನೋ ದೂರದಿಂದ ಬಂದಿದಾರಲ್ಲ ಎಂದು ಭೇಟಿಗೆ ಅವಕಾಶಕೊಟ್ಟರು. ಆಕೆಗೆ ಕೊಟ್ಟಿದ್ದ ೧೦ ನಿಮಿಷ ಆಯಿತು. ಇಪ್ಪತ್ತು ಆಯಿತು. ಆಕೆ ಏಳುವ ಹಾಗೇ ಕಾಣಲಿಲ್ಲ. ಸುಮ್ಮನೆ ಅಲ್ಲಿ ಹಾಗೆ, ಇಲ್ಲಿ ಹೀಗೆ ಎಂದು ಹರಟುತ್ತಿದ್ದಳು. ಗಾಂಧೀಜೀ ಏನು ಮಾಡಬೇಕು. ನಗುತ್ತ ಹೇಳಿದರು. 'ಈ ದೇಶದಲ್ಲಿ ಬಹಳ ಮಹಾತ್ಮರಿದಾರೆ. ಆದರೆ ನಿಮ್ಮೆದುರಿಗೆ ಇರುವ ಈ ಮಹಾತ್ಮ ಅವರೆಲ್ಲರ ಹಾಗೆ ಅಲ್ಲ. ಇವರು ಎಲ್ಲಾ ಜನರ ಹಾಗೆ ಊಟ ಮಾಡುತ್ತಾರೆ. ಆಟ ಆಡುತ್ತಾರೆ. ನಿದ್ದೆ ಕೂಡ ಹೋಗುತ್ತಾರೆ. ಈಗ ನೋಡಿ; ನಿಮ್ಮೆದುರಿಗೇ ನಿದ್ದೆ ಹೋಗುತ್ತಾರೆ' ಹಾಗೆಂದವರೇ ಮಲಗಿಬಿಟ್ಟರು. ಆ ಹೆಂಗಸು ದಿಕ್ಕುತೋಚದೆ ಹೊರಟು ಬರಬೇಕಾಯಿತು.

ಗಾಂಧೀಜಿಯ ನಗೆಯಲ್ಲಿ ಹೊಗೆ ಇಲ್ಲದೆ ಇಲ್ಲ. ಒಂದೊಂದು ಸಲ ಬಲವಾಗಿಯೇ ಚುಚ್ಚಿಬಿಡುತ್ತಾರೆ. ಆದರೆ ಹಾಗೆ ಚುಚ್ಚಿದಾಗ ರಕ್ತ ಬರುವುದಿಲ್ಲ. ವೈಯಲ್ಲಿ ಕೊಂಚ ವಿವೇಕ, ಕೊಂಚ ಔಚಿತ್ಯ ಓಡಾಡಿದ ಹಾಗೆ ಆಗುತ್ತದೆ. ಆ ಹೊಗೆ ಗಂಟಲು ಕಟ್ಟುವ ಬೆರಣಿ ಹೊಗೆಯಲ್ಲ. ಪರಿಮಳ

ಧೂಪದ ಹೊಗೆ. ಬೆಳಗಾಂವಿಯ ಕಾಂಗ್ರೆಸ್ಸಿನಲ್ಲಿ ಕನ್ನಡಿಗರು ತಮ್ಮ ತಿಂಡಿ ಪೋತತನವನ್ನು ಪೂರಾ ಬೆಳಗಿಬಿಟ್ಟರು. ಅದೇನು ಶ್ರೀಖಂಡ, ಆ ತುಪ್ಪವೇನು? ಆ ಹಾಲುಮೊಸರೇನು? ಕನ್ನಡಿಗರು ತುಂಬಾ ದೊಡ್ಡ ಮನಸಿನವರು; ಅವರ ಆತಿಥ್ಯ ಬಹಳ ಉದಾರವಾದುದು ಎಂದರು ಗಾಂಧೀಜೀ. ನಾವು ಹೆಮ್ಮೆಯಿಂದ ನಮ್ಮ ಹೊಟ್ಟೆಯ ಮೇಲೆ ಕೈಯೆಳೆಯುವುದರೊಳಗಾಗಿ ಇಂಥ ಆತಿಥ್ಯ ಬಡನಾಡಿನಲ್ಲಿ ಶುದ್ಧ ಮೂರ್ಖತನ ಎಂದುಬಿಟ್ಟರು. ಗಾಂಧೀಜಿಗೆ ಖಾದೀ ಬಟ್ಟೆಯಿಂದಲೇ ಒಂದು 'ಕುಟೀರ' ಅಣಿಮಾಡಿದ್ದರು. ಅವರೇ ಅಧ್ಯಕ್ಷರು ತಾನೆ ಆ ಕಾಂಗ್ರೆಸ್ಸಿಗೆ. 'ಅದು ಕುಟೀರ ಅಲ್ಲ, ಖಾದೀ ಅರಮನೆ' ಎಂದು ಆ ದುಂದುಗಾರಿಕೆಯನ್ನು ಜರಿದರು.

ತಮ್ಮ ಜೊತೆಗಾರರು ತಪ್ಪುಮಾಡಿದಾಗ ಗಾಂಧೀಜಿ ಸಿಟ್ಟುಮಾಡಿಕೊಳ್ಳುತ್ತಾರೆ. ನಗೆಮಾತಿನಲ್ಲಿ ಬುದ್ಧಿ ಹೇಳುತ್ತಾರೆ. ಆ ಮಾತಿನಲ್ಲಿ ಮೊನೆ ಇದೆ. ಅಂಬಿನಂತೆ ಅದು ತಾಗುತ್ತದೆ. ಆದರೆ ಆ ಮೊನೆಗೆ ವಿಷ ಸವರುವುದಿಲ್ಲ, ಸಂಜೀವಿನಿ ಸವರಿರುತ್ತಾರೆ. ನಮಗೆ ಆ ಮಾತಿನಿಂದ ನೋವಾಗುವುದಿಲ್ಲ. ನಾಚಿಕೆ ಆಗುತ್ತದೆ. ಅವರನ್ನು ನೋಯಿಸಿದೆವಲ್ಲ ಎಂದು ದುಃಖವಾಗುತ್ತದೆ. ನಿಜವಾಗಿಯೂ ಸಿಟ್ಟು ಬಂದವನನ್ನು ನಾವೂ ಎರಡು ಮಾತು ಅಂದುಬಿಡಬಹುದು. ನಮಗೂ ಕಾವು ಏರೀತು. ಇಲ್ಲಿ ಇದು ಸಿಟ್ಟೆ? ಈ ಕ್ರೋಧಾಭಿನಯಕ್ಕೆ ನಾವೇನು ಬದಲು ಹೇಳಬೇಕು? ಅದು ಅಸಹನೆಯ ಉರಿಗಣ್ಣಲ್ಲ; ಮಮತೆಯ ಹನಿಗಣ್ಣು.

ಅವರ ಮಾತಿಗೆ ಯಾರಾದರೂ ಇದಿರಾಡಿದಾಗ ಆ ನಗೆಯ ಲೀಲೆ ಅದ್ಭುತವಾಗಿ ಬಿಡುತ್ತದೆ. ಸಭೆ-ಸಮಾಲೋಚನೆಗಳಲ್ಲಿ ಹುಮ್ಮಸ್ಸಿನ ಹರೆಯದವರು ಉದ್ದುದ್ದ ಮಾತಾಡಿ ಅವರ ಮಾತನ್ನು ಅಲ್ಲಗಳೆಯುವುದುಂಟು. ಅದಕ್ಕೆ ಗಾಂಧೀಜೀಯ ಉತ್ತರ, ಮುಗುಳುನಗೆ. ಆ ಮುಗುಳು ನಗೆಯ ಅಲೆಗಳಲ್ಲಿ ವಾತಾವರಣವೇ ಬದಲಾಗಿ ಹೋಗುತ್ತದೆ. ಆ ಮಾತಿನ ಮಲ್ಲರನ್ನು ನೋಡಿ ಇದ್ದವರೆಲ್ಲ ನಗುವ ಹಾಗೆ ಆಗುತ್ತದೆ. ಗಾಂಧೀಜಿಯದೇ ಸರಿ ಎನಿಸುತ್ತದೆ. ಎಲ್ಲವೂ ಬರಿಯ ನಗೆಯಲ್ಲಿಯೆ ತೇಲಿ ಹೋಗುತ್ತದೆ.

ಕರಾಚಿ ಕಾಂಗ್ರೆಸ್ಸಿಗೆ ವಲ್ಲಭಭಾಯಿ ಅಧ್ಯಕ್ಷರು. ಆಗ ವರ್ಕಿಂಗ್

ಕಮಿಟಿಯನ್ನು ನೇಮಿಸಿದವರು ಗಾಂಧೀಜಿಯೇ. ಆ ಪಟ್ಟಿಯನ್ನು ಓದಿ ಕೆಲವು ಹೆಸರು ಏಕೆ ಸೇರಿತು, ಕೆಲವು ಏಕೆ ಬಿಟ್ಟಿತು ಎಂದು ನಗುತ್ತ ಕಾರಣ ತಿಳಿಸಿದರು. ಆ ನಗೆ ಅದನ್ನು ಅರಗಿಸಿಕೊಳ್ಳುವ ಹಾಗೆ ಮಾಡಿತು. ಇನ್ನೊಬ್ಬರಾದರೆ ಆ ಸ್ಪಷ್ಟೋಕ್ತಿಯ ಫಲ ಉಣ್ಣಬೇಕಾಗುತ್ತಿತ್ತು.

ಸಿ. ಆರ್. ರೆಡ್ಡಿ–ಈಗ ಆಂಧ್ರ ವಿಶ್ವವಿದ್ಯಾನಿಲಯದ ಸ್ಥಾನಪತಿ–ಒಂದು ಸಲ ಇಷ್ಟಾಗೋಷ್ಠಿಯಲ್ಲಿ ಅಂದರಂತೆ; "ಗಾಂಧೀಜೀ ಹಗಲೆಲ್ಲ ಹೇಳುತ್ತಾರಲ್ಲ: ಆ ಅಂತರ್ವಾಣಿ ಎನ್ನುವುದು ಏನು?" ಸರೋಜಿನೀದೇವಿ ಆ ಗುಂಪಿನಲ್ಲಿ ಇದ್ದರು. ಆಕೆಗೆ ಈ ಅವಹೇಳನೆ ಸಹಿಸಲಿಲ್ಲ. "ನಿಮ್ಮ ದಪ್ಪಬುದ್ಧಿಗೆ ಎಟುಕಲಾರದ ಸುದ್ದಿ ಅದು; ಅದರ ಗೊಡವೆ ಏಕೆ" ಎಂದರಂತೆ. ಇಂಥ ಕಟೂಕ್ತಿಯಲ್ಲಿ ವಿನೋದಕ್ಕಿಂತ ವಿರೋಧವೇ ಹೆಚ್ಚು. ಗಾಂಧೀಜಿಯದು ಹಾಗಲ್ಲ. ವಿರೋಧದಲ್ಲಿಯೂ ವಿನೋದವಿದೆ.

ಎರಡನೆಯ ಸಲ ದುಂಡುಮೇಜಿನ ಪರಿಷತ್ತು ಆದಾಗ ಗಾಂಧೀಜೀ ಹೋಗಬೇಕಾಗಿತ್ತು. ಗುಜರಾತಿನಲ್ಲಿ ಏನೋ ಸಣ್ಣಪುಟ್ಟ ಮಾತಿನಲ್ಲಿ ಅಧಿಕಾರಿಗಳು ಗಾಂಧೀ–ಇರ್ವಿನ್ ಒಪ್ಪಂದವನ್ನು ನಡೆಸಿರಲಿಲ್ಲ. ಅದಕ್ಕಾಗಿ ಹೊಡೆದಾಡುತ್ತಾ ಗಾಂಧೀಜೀ ಕೂತುಬಿಟ್ಟರು. ಆ ಕಂದಾಯದ ರಗಳೆಗೆ ಇವರೇಕೆ ತೊಡಗಬೇಕು? ಎಷ್ಟು ಜನ ನಾಡಿನಲ್ಲಿಲ್ಲ ಅದಕ್ಕೆ ಎಂದು ಎಲ್ಲರೂ ಗೊಣಗಿದರು. ಆ ವಿಷಯ ಸರಿಯಾಗುವವರೆಗೆ ನಾನು ಪರಿಷತ್ತಿಗೆ ಹೋಗುವುದೇ ಇಲ್ಲ ಎಂದು ಗಾಂಧೀಜೀ ಹಟ ಜೇರೆ ಹಿಡಿದರು. ಈ ಚಿಲ್ಲರೆ ಮಾತು ಯಾರಾದರೂ ನೋಡಿಯಾರು; ನೀವು ಪರಿಷತ್ತಿಗೆ ಹೋಗಬಾರದೇ ಎಂದು ಕೆಲವರು ಸೂಚಿಸಿದರು. ಗಾಂಧೀಜಿಗೆ ಔಚಿತ್ಯ ಜ್ಞಾನ ಕೊಂಚ ಮಂಕಾಗಿದೆ ಎಂಬ ಭಾವ, ಸೂಚಿಸಿದವರ ಮನಸ್ಸಿನಲ್ಲಿ ಇಲ್ಲದಿದ್ದರೂ ಸೂಚನೆಯಲ್ಲಿ ಇಲ್ಲದೆ ಇಲ್ಲ. ಗಾಂಧೀಜೀ ಶಾಂತವಾಗಿ ಹೇಳಿದರು; 'ಪುಡಿ ಕಾಸು ಭದ್ರವಾಗಿ ಇಟ್ಟವನಿಗೆ ರೂಪಾಯಿನ ಚಿಂತೆಯೇ ಬೇಡ.' ಕರ್ಮ ಕೌಶಲದ ಮೂಗುದಾರ ದೊಡ್ಡದೊಡ್ಡ ಕೆಲಸದಲ್ಲಿಲ್ಲ; ಸಣ್ಣ ಪುಟ್ಟ ಕೆಲಸದಲ್ಲಿ.

ವಿಠ್ಠಲಭಾಯಿ ಪಟೇಲರದು ತುಂಬಾ ಹರಿತವಾದ ಬುದ್ಧಿ. ವಿಮರ್ಶೆಯಲ್ಲಿ ಅದ್ವಿತೀಯರು. ಅವರು ಶಾಸನ ಸಭೆಯಲ್ಲಿದ್ದಾಗ ಬ್ರಿಟಿಷ್ ಸರ್ಕಾ

ರಕ್ಕೆ ಯಾವಾಗಲೂ ನಡುಕವೇ. ಕಾಂಗ್ರೆಸ್ಸಿನ ಹೊಸ ನಿಯಾಮಾವಳಿಯನ್ನು–ಕಾಂಗ್ರೆಸ್ಸಿಗಾಗಿ ಮಾಡಿದ್ದು–ವಿಮರ್ಶಿಸಬೇಕಾಗಿ ಬಂತು. "ವಿಠ್ಠಲ ಭಾಯಿಗೆ ಕೊಟ್ಟುಬಿಡಿ. ಎಂಥದನ್ನಾದರೂ ಚೂರುಚೂರು ಮಾಡುತ್ತಾರೆ. ಪರವಾ ಇಲ್ಲ" ಎಂದರು ಗಾಂಧೀಜೀ. ಆ ಸಭೆಯಲ್ಲಿ ನಿಯಮಾವಳಿಯನ್ನು ಟೀಕಿಸಿದವರನ್ನೇ ವಿಠ್ಠಲಭಾಯಿ ಬಲಿಹಾಕಿದರು.

ಹೈದರಾಬಾದಿನಲ್ಲಿ ಆರ್ಯ ಸಮಾಜದ ಸತ್ಯಾಗ್ರಹ ನಡೆದಾಗ ಗಾಂಧೀ ಸೇವಾಸಂಘದ ಮುಖ್ಯ ಸದಸ್ಯರಲ್ಲಿ ಒಬ್ಬರಾದ ಅಭಯದೇವ ಶರ್ಮ ಗಾಂಧೀಜಿಯನ್ನು ಕೇಳಿದರು : "ಈ ಸತ್ಯಾಗ್ರಹಕ್ಕೆ ನಾನು ನಾಯಕ ನಾಗಲಿ" ಎಂತ. ಗಾಂಧೀಜೀ ಹೇಳಿದರು : "ಓಹೋ ಅಗತ್ಯವಾಗಿ."

"ತಮ್ಮ ಆಶೀರ್ವಾದ ಬಲ ಇದೆಯಷ್ಟೆ"—ಶರ್ಮರಿಗೆ ಸಂತೋಷ.

"ಓಹೋ. ಆದರೆ ಸತ್ಯಾಗ್ರಹ ನಿಲ್ಲಿಸಲಿಕ್ಕೆ ನನ್ನ ಆಶೀರ್ವಾದ—" ನಗುತ್ತ ಗಾಂಧೀಜೀ ಹೇಳಿದರು. ಗಾಳಿಗೋಪುರ ಗಾಳಿಯಲ್ಲೇ ಕರಗಿ ಹೋಯಿತು.

ಈ ನಗೆಯಲ್ಲಿ ಆ ಪ್ರಭಾವ ಇರಲು ಅವರ ಅನಾಸಕ್ತಿಯೇ ಕಾರಣ. ನಮ್ಮ ನಗೆಯಲ್ಲಿ ಅಹಂಕಾರದ ಸೊಂಕು ಇದೆ; ಕಿಡಿಗೇಡಿತನದ ಚಪಲ ಇದೆ. ಅವರಿಗೆ ಹಾಗಲ್ಲ. ತಮ್ಮನ್ನು ನೋಡಿ ತಾವೇ ನಗುತ್ತಾರೆ. ಒಂದು ದಿನ ಹೊರಗೆ ಹೋಗಬೇಕಾದರೆ ಕೈವಸ್ತ್ರ ಸಿಗಲಿಲ್ಲ. ಎಲ್ಲಿ ಹೋಯಿತು ಎಂದು ಹುಡುಕಲು ಮೊದಲಿಟ್ಟರು. ಎಲ್ಲೆಲ್ಲಿಯೂ ಹುಡುಕಿದರು. ಬಿರುಗಾಳಿ ಬೀಸಿದ ಹಾಗೆ ಆ ಹುಡುಕಾಟ. ಸಭೆಗೆ ಹೋಗಬೇಕಾಗಿತ್ತು; ಅವಸರ. ಇನ್ನೊಂದು ಕೈವಸ್ತ್ರ ಕೊಟ್ಟರೆ ಇದು ಕೂಡದು, ಅದೇ ಬೇಕು. ಕಡೆಗೆ ಹಾಗೆಯೇ ಹೋದರು. ರಾತ್ರಿ ಮಲಗುವಾಗ ನೋಡುತ್ತಾರೆ. ಅವರ ಮೈ ಮೇಲೆಯೇ ಇದೆ ಆ ಕೈವಸ್ತ್ರ. ಅವರು ಹೊದ್ದುಕೊಳ್ಳುವ ಶಾಲಿಗೆ ಯಾವಾಗಲೋ ಪಿನ್ ಹಾಕಿ ಚುಚ್ಚಿದ್ದರು. ಅದು ಹಾಗೆಯೇ ಉಳಿದಿತ್ತು. ಅದನ್ನು ನೋಡಿ ಹೊಟ್ಟೆ ತುಂಬ ನಕ್ಕರು. ಎಲ್ಲರಿಗೂ ಹೇಳಿಹೇಳಿ ನಕ್ಕರು.

ಗಾಂಧೀಜಿಯ ಈ ರಸಿಕತೆ ಮೇಲಿನ ಮಟ್ಟಕ್ಕೆ ಸೇರಿದುದು. ತಾವು ಮಾಡಿದ ತಪ್ಪನ್ನು ಮರೆಮಾಚದ ಅನಾಸಕ್ತಿ ನಿರ್ಭಯಗಳು ಆ ರಸಿಕತೆಯ

ಲಕ್ಷಣ. ಅವರು ಆಡುವ ಯಾವ ಮಾತಿನಲ್ಲಿಯೂ ಕುದಿ ಇಲ್ಲ, ಕಾವು ಇಲ್ಲ. ಶಾಂತವಾಗಿ ಗಂಭೀರವಾಗಿ ಸಂಭಾಷಣೆಯನ್ನು ನಡೆಸುತ್ತಾರೆ. ಚರ್ಚೆ ಮಾಡಿದರೂ ಅಷ್ಟೆ. ಅದೊಂದು ಮಟ್ಟವಿದೆ. ಅದಕ್ಕೆ ಕೆಳಗೆ ಇಳಿಯುವುದಿಲ್ಲ. ಮಾತಾಡುವಾಗ ಹಾವಭಾವ ಪ್ರದರ್ಶನವಿಲ್ಲ. ಕೈ, ಬೆರಳು ಯಾವುದೂ ಆಡಿಸುವುದಿಲ್ಲ. ಸಭೆಗಳಲ್ಲಿ ಕೂಡ ಕೈ ಅಲ್ಲಾಡಿಸಿ ಮೋರೆ ಕಿವುಚುವ ವಾಗ್ಧೋರಣೆಯಿಲ್ಲ. ಮಾತು ಸ್ಫುಲಿಂಗಗಳಂತೆ ಸಿಡಿದು ಬರುತ್ತವೆ. ತಡೆಯಿಲ್ಲ, ತೊದಲಿಲ್ಲ. ಉತ್ತರಕ್ಕಾಗಿ ಯೋಚಿಸಬೇಕಾಗಿಲ್ಲ. ಅದೊಂದು ಅಖಂಡ ಸ್ರೋತಸ್ಸು. ಆ ನೀರಿನ ಸವಿ ತಿಳಿಯಾದ ಹಾಸ್ಯ ರುಚಿ.

ಆ ರುಚಿಯೇ ಅವರ ಬಾಳಿಗೆ ಅಗಾಧವಾದ ವಿನಯ ಶಕ್ತಿಯನ್ನು ಕೊಟ್ಟಿದೆ. ಇಷ್ಟು ಕೀರ್ತಿ ಗೌರವಗಳನ್ನು ಗಳಿಸಿಯೂ ಗಾಂಧೀಜೀ ಸಾಮಾನ್ಯರ ಹಾಗೆ ಇದ್ದಾರೆ. ಅವರ ವಿನಯ ಗಾಂಭೀರ್ಯದ ಬಗ್ಗೆ ಎಷ್ಟೋ ಕತೆಗಳಿವೆ. ಸಹಜವೇ. ಚಂಪಾರಣ್ಯದಲ್ಲಿ ಗಾಂಧೀಜೀ ಒಂದು ಸಭೆಯಲ್ಲಿ ಮಾತಾಡಬೇಕಾಗಿತ್ತು. ಚಂಪಾರಣ್ಯದ ಸತ್ಯಾಗ್ರಹದಿಂದ ಅಲ್ಲಿನ ಕೂಲಿ ಜನಕ್ಕೆಲ್ಲಾ ಗಾಂಧೀಜಿಯ ಮೇಲೆ ಭಕ್ತಿ. ಸಾವಿರಾರು ಜನ ಅವರ ದರ್ಶನಕ್ಕಾಗಿ ಆ ಸಭೆಗೆ ಬಂದರು. ಕೆಲವರು ಗಾಂಧೀಜೀ ಬರುತ್ತಿದ್ದ ರೈಲಿಗೆ ಹತ್ತಿದರು. ಒಬ್ಬ ಗೌಡ ಅವರು ಇದ್ದ ಡಬ್ಬಿಗೇ ಹತ್ತಿದ. ಗಾಂಧೀಜೀ ಯಾವಾಗಲೂ ಮೂರನೇ ತರಗತಿಯ ಡಬ್ಬಿಯಲ್ಲಿ ತಾನೆ ಪ್ರಯಾಣ ಮಾಡುವುದು. ಒಂದು ಹಲಗೆಯ ಮೇಲೆ ಅವರು ಮಲಗಿದ್ದರು. ಗೌಡ ಬಂದವನು ಅಷ್ಟು ಸ್ಥಳ ಅವರೊಬ್ಬರೇ ಹಿಡಿದಿರುವುದನ್ನು ನೋಡಿ, ನೀನೊಬ್ಬನೆಯೋ ಕಾಸು ಕೊಟ್ಟಿರುವುದು ಎಂದು ಏನೋ ಆಡಿ ಅಲ್ಲಿ ಕೂತ. ಗಾಂಧೀಜೀ ಎದ್ದು ಅವನಿಗೆ ಎಡೆಮಾಡಿ ಕೊಟ್ಟರು. ಆಮೇಲೆ ಅವನನ್ನು ಕೇಳಿದರು. 'ಎಲ್ಲಿ ಹೋಗುತ್ತೀ' ಎಂದು. "ಗಾಂಧೀ ಮಹಾತ್ಮನ ದರ್ಶನಕ್ಕಾಗಿ" ಎಂದು ಆ ಗೌಡ ಗಾಂಧೀಜಿಯನ್ನು ಕೊಂಡಾಡಿದ. ಡಬ್ಬಿಯಲ್ಲಿದ್ದವರೆಲ್ಲ ಒಳಗೊಳಗೇ ನಗುತ್ತಿದ್ದರು. ಇಳಿಯುವ ನಿಲುತಾಣ ಬಂದಾಗ ಡಬ್ಬಿಯ ಬಳಿಗೆ ಮುಂದಾಳುಗಳೆಲ್ಲ ಬಂದು ಗಾಂಧೀಜಿಯನ್ನು ಇದಿರುಗೊಂಡರು. ಅವರೇ ಗಾಂಧೀ ಎಂಬುದು ಆ ಗೌಡನಿಗೆ ಆಗ ತಿಳಿ

ಯಿತು. ಆ ಸಂದರ್ಭ ಎಂಥದು ಊಹಿಸಲಾರೆವೆ. ಅದೋ! ಗಾಂಧೀಜಿಯ ಕೈ ಅವನ ಬೆನ್ನಮೇಲೆ ಆಡುತ್ತಿದೆ. ನಗುತ್ತ ಅವನನ್ನು ಸಂತಯಿಸುತ್ತಿದ್ದಾರೆ.

ಗಾಂಧೀಜೀ ದಕ್ಷಿಣ ಆಫ್ರಿಕಾದಿಂದ ಬಂದ ಹೊಸದರಲ್ಲಿ ನಮ್ಮ ದೇಶದ ರಾಜಕಾರಣಿಗಳೆಂದರೆ ಮೊದಲನೆ ತರಗತಿ ಪ್ರಯಾಣದ ಶ್ರೀಮಂತರು. ಅವರ ವೇಷ ವೈಸರಾಯರಿಗಿಂತಲೂ ಜಂಭದ್ದು. ಇವರೋ ಬಡ ಕೂಲಿಯ ಹಾಗೆ. ದೊಡ್ಡ ದೊಡ್ಡ ನಿಲುತಾಣಗಳಲ್ಲಿ ಇವರನ್ನು ನೋಡಿ ಆ ದೇವತೆಗಳು ಏ, ಕೂಲಿ ಎಂದು ಕರೆದು ತಮ್ಮ ಸಾಮಾನನ್ನು ಹೊರಲು ಕೊಡುತ್ತಿದ್ದರಂತೆ. ಒಂದೆರಡು ಸಲ ಗಾಂಧೀಜೀ ಸದ್ದಿಲ್ಲದೆ ಕೂಲಿ ಕೆಲಸವನ್ನು ಮಾಡಿದುದೂ ಉಂಟೆಂದು ಹೇಳುತ್ತಾರೆ.

ಅಖಿಲ ಭಾರತ ಪ್ರವಾಸಮಾಡುವಾಗ ಒಂದುಕಡೆ ಬೇರೆ ರೈಲಿಗಾಗಿ ರಾತ್ರಿ ಕೆಲವು ಗಂಟೆ ಕಾದಿರಬೇಕಾಗಿತ್ತು. ಸಾಮಾನೆಲ್ಲ ಪ್ಲಾಟ್‌ಫಾರಂ ಮೇಲೆ ಇಳಿಸಿತ್ತು. ಪರಿವಾರದವರು ಮುಂದಿನ ಏರ್ಪಾಡಿಗಾಗಿ ಅಲ್ಲಿ ಇಲ್ಲಿ ಹೊರಟರು. ತಮ್ಮ ಕೆಲಸ ಮುಗಿಸಿಬಂದು ನೋಡುತ್ತಾರೆ. ಗಾಂಧೀಜೀ ಆ ಸಾಮಾನಿನ ನಡುವೆ ಅಲ್ಲಿಯೆ ಮಲಗಿಬಿಟ್ಟಿದ್ದರು. ಅದು ೧೯೩೦ರ ಕಾಲ. ಆಗ ಗಾಂಧೀಜೀ ಹಿಂದೂಸ್ತಾನದ ಕಣ್ಮಣಿ!

ಈ ವಿನಯದ ಹದಕ್ಕೆ ಅವರ ಹಾಸ್ಯಪ್ರವೃತ್ತಿಯೂ ಒಂದು ಕಾರಣ. ಅನಾಸಕ್ತ ಮನಸ್ಸಿಗೆ ಹಾಸ್ಯವು ಅಂತಸ್ಸಾಕ್ಷಿ ಇದ್ದಂತೆ. ಕಷ್ಟ ಸುಖಗಳನ್ನು ಸಮವಾಗಿ ತಿಳಿಯುವುದಕ್ಕೆ ನಗೆಯಂಥ ಸುಲಭಸಾಧನೆ ಇಲ್ಲ. ಸತ್ಯಾಗ್ರಹ ಪ್ರಾರಂಭಮಾಡಿದಾರೆ; ದಾಂಡಿಯ ದಂಡಯಾತ್ರೆ. ಇವರ ಶಿಬಿರದಲ್ಲಿ ಯುದ್ಧ ಸಿದ್ಧತೆಯುಲ್ಲ; ಬರಿಯ ನಗೆ ಮಾತು, ಹರಟೆ ಕಾಣಬರುತ್ತಿತ್ತು. ಸರಕಾರದ ಕಚೇರಿಗಳಲ್ಲಿ ಅಧಿಕಾರಿಗಳು ತಲೆ ಕೆರೆದದ್ದೂ ಕೆರೆದದ್ದೆ.

ದಾಂಡಿಯ ಕೊನೆಯ ದೃಶ್ಯವೂ ಹಾಗೆಯೆ. ನಡುರಾತ್ರಿಯಲ್ಲಿ ಅಧಿಕಾರಿಗಳು ಗಾಂಧೀಜಿಯನ್ನು ಸೆರೆಹಿಡಿಯಲು ಬಂದರಂತೆ. ಬಂದವರು ವಾರಂಟನ್ನು ತೋರಿಸಿದರು. ಗಾಂಧೀಜೀ ಕೇಳಿದರು: 'ಹಲ್ಲುಜ್ಜಿಕೊಂಡು ಬರಲೆ? ಅಷ್ಟು ಪುರಸತ್ತು ಇದೆಯೆ?'

ವಾಙ್ಮಯ ತಪದಲ್ಲಿ "ಅನುದ್ವೇಗಕರಂ ವಾಕ್ಯಂ" ಎಂದು ಸಾಧಕನಿಗೆ ಹೇಳಿದಾರೆ. ಗೀತೆಯಲ್ಲಿ ಅದರ ಜೊತೆಯಲ್ಲಿಯೆ "ಮನಃಪ್ರಸಾದಃ" ಎಂದಿದೆ. ಗಾಂಧೀಜೀ ಅಹಿಂಸೆಯನ್ನು ಪಾಲಿಸುವವರು. ಗೀತೆಯನ್ನು ನಂಬಿದವರು. ನಗೆಯೇ ಮೇಲಿನ ನಿಯಮಗಳ ಅರ್ಥ ಎಂದು ವ್ಯಾಖ್ಯಾನ ಮಾಡಿಕೊಂಡಂತಿದೆ. ಅವರ ನುಡಿಯಲ್ಲಿ ಉದ್ವೇಗವಿದ್ದರೂ ಅದು ಉದ್ವೇಗಕರವಲ್ಲ. ಆ ನಗೆಯಲ್ಲಿ ದಿಟ್ಟತನವಿದ್ದರೂ ಮನಃಪ್ರಸಾದವಿದೆ.

ಗಾಂಧೀಜಿಯ ಹಾಸ್ಯಪ್ರವೃತ್ತಿ ಅವರ ವಾಙ್ಮಯತಪದ ಜೀವಾಳವೋ ಏನೋ!

ಚಿಕ್ಕೆಗಳ ಚಂದ್ರಾಮ

ನಗೆಯ ಹಾಗೇ ಮಕ್ಕಳು. ಮಕ್ಕಳ ಆಟದ ಆನಂದ ನಿರ್ಮಲ ವಿನೋದದ ಸುಖವಿದ್ದಹಾಗೆ. ಬಾಳಿನಲ್ಲಿ ಬೇಸರ ಬಂದಾಗ ಎರಡೂ ಮದ್ದೇ. ಮೈಯನ್ನೂ ಮನಸ್ಸನ್ನೂ ಮುತ್ತಿದ ಜಡತೆಯನ್ನು ಕಳೆದು ಹೊಸ ಚೈತನ್ಯವನ್ನು ತುಂಬುತ್ತವೆ. ಮಕ್ಕಳು ದೇವರು ಇದ್ದಂತೆ ಎಂಬ ಕಲ್ಪನೆಯೊಂದು ನಮ್ಮಲ್ಲಿ ಮೊದಲಿನಿಂದಲೂ ರೂಢವಾಗಿದೆ. ಅಂತಲೇ ಮಕ್ಕಳನ್ನು ಎತ್ತಿ ಮುದ್ದಾಡದ ಕೈ ಮರಗೈ-ಮರುಳುಗೈ ಎನ್ನುತ್ತಾರೆ. ಮಕ್ಕಳಿಲ್ಲದ ಮನೆಯು ಪಕ್ಕಿಯಿಲ್ಲದ ವನವು-ಎಂದು ಸರ್ವಜ್ಞ ಹೇಳಿದ. ಇನ್ನೂ ಒಂದು ಹೆಜ್ಜೆ ಸರಿದು 'ಬಸಿರಾಗದವಳ ಬಾಳುವೆಯು ಬೇಸಗೆಯ ಬಿಸಿಲು ಕಾದಂತೆ' ಎಂದ. ಈ ಮನೋಭಾವದ ಪರಿಣಾಮವೇ ಬಾಲಕೃಷ್ಣ, ಹಾಲುಗಡಲಲ್ಲಿ ದೇವರು ಆಲದೆಲೆಯ ಮೇಲೆ ಮಗುವಾಗಿ ಮಲಗಿ ನಿದ್ದೆ ಮಾಡುತ್ತಿದಾನಂತೆ. ನಮ್ಮವರು ಹೀಗೆ ತಿಳಿದರೆ, ಏಸುಕ್ರಿಸ್ತನು ದೇವರ ರಾಜ್ಯ ಮಕ್ಕಳದೇ ಎಂದಿದಾನೆ. ಗಾಂಧೀಜೀ ಕೂಡ ಮಕ್ಕಳ ಮೋರೆಯಲ್ಲಿ ಸತ್ಯದ ಹೊಳಪನ್ನು ನೋಡಿರಬೇಕು ಎನಿಸುತ್ತದೆ.

ಗಾಂಧೀಜಿಗೆ ಮಕ್ಕಳನ್ನು ಕಂಡರೆ ಬಹಳ ಪ್ರೀತಿ. ನಗೆ, ಗೆಳೆಯುರು, ಹೊಸ ಗಾಳಿ, ಸತ್ಯ, ಮಕ್ಕಳು ಅಂದರೆ ತುಂಬಾ ಪ್ರೀತಿ. ಮಕ್ಕಳೊಡನೆ

ತಾವೂ ಮಗುವಾಗಿ ಆಟ ಆಡಿಕೊಳ್ಳುತ್ತಾರೆ. ಅವರ ಜೀವನದ ಅನೇಕ ಆನಂದಗಳಲ್ಲಿ ಮಕ್ಕಳೊಡನೆ ವಿನೋದವಾಡುವುದೂ ಒಂದು. ಎಷ್ಟೇ ಕೆಲಸವಿರಲಿ, ಮಕ್ಕಳನ್ನು ನೋಡಿದರೆ ಬಾಪು ಮಾತನಾಡಿಸದೆ– ಬಹಳ ಅವಸರವಿದ್ದ ಪಕ್ಷದಲ್ಲಿ ಮುಗುಳುನಗೆಯನ್ನಾದರೂ ಸೂಸದೆ– ಮುಂದು ವರಿಯುವುದು ಬಹುಶಃ ಇಲ್ಲವೇ ಇಲ್ಲ. ಒಮ್ಮೆ ಸೇವಾಗ್ರಾಮಕ್ಕೆ ಯಾರೋ ದಕ್ಷಿಣ ಆಫ್ರಿಕದವರು ಬಂದಿದ್ದರು. ಅವರು ಗುರುತಿನವರು. ಗಂಡ ಹೆಂಡತಿ, ಮಕ್ಕಳು. ಅವರು ಪರ್ಣಕುಟಿಯೊಳಗೆ ಬಂದಾಗ ಬಾಪು ನಗುತ್ತ ಸಂತೋಷದಿಂದ ಸ್ವಾಗತ ಮಾಡಿ ಮೊದಲು ಅವರ ಕಿರಿಯ ಮಗುವನ್ನು ಹತ್ತಿರ ಸೆಳೆದು ಕೆನ್ನೆ ಹಿಂಡಿ ಅದನ್ನು ನಗಿಸಿ ಅನಂತರ ತಂದೆತಾಯಿಯನ್ನು ಮಾತಾಡಿಸಿದರು.

ಮಕ್ಕಳಿಗೆ ಬಾಪೂವನ್ನು ಕಂಡರೆ ಬಹಳ ಆಸೆ, ಅಕ್ಕರೆ. ಆಶ್ರಮದಲ್ಲಿ ರುವ ಹುಡುಗರು ಅವರೊಡನೆ ದಿನವೂ ತಿರುಗಾಡಲಿಕ್ಕೆ ಹೋಗುತ್ತಾರೆ. ಆಗ ಆ ಹುಡುಗರು–ಈ ಮುದುಕ ಕೂಡಿ ಆಟ ಆಡುತ್ತಿರುವುದನ್ನು ಕಂಡರೆ ರವೀಂದ್ರನ 'Cycle of the Spring' ನಾಟಕ ನೆನಪಾಗುತ್ತದೆ. ಬಾಳು ಒಂದು ಚಕ್ರನಾಟ್ಯ. ಒಂದು ತುದಿಗೆ ಬಾಲ್ಯ, ಇನ್ನೊಂದು ತುದಿಗೆ ಮುಪ್ಪು ಎನಿಸುತ್ತದೆ.

ಆಶ್ರಮದ ಮಕ್ಕಳಿಗೆ ದಿನವೂ ಸಂಜೆಗೆ ಯಾರು ಬಾಪೂ ಕೈ ಹಿಡಿಯ ಬೇಕು, ಯಾರು ಅವರ ತೊಡೆಯಮೇಲೆ ಕೂಡಬೇಕು ಎಂಬ ಉತ್ಸಾಹದ ಹೋರಾಟ. ಒಬ್ಬ ಮಗು ಹೀಗೆ ಅದರ ಬಗ್ಗೆ ಬರೆದಿದಾನೆ: "ನಾವು ದಿನಾ ಸಂಜೆಗೆ ಹೀಗೆ ಜಗಳ ಆಡುತ್ತಿದ್ದೆವು. ಬಾಪೂ ನಮ್ಮಿಬ್ಬರನ್ನೂ ತೊಡೆಯ ಮೇಲೆ ಕೂಡಿಸಿಕೊಂಡು ನಮ್ಮ ಜಗಳ ಹರಿಸುತ್ತಿದ್ದರು."

ಅವರ ಜೊತೆ ಎಂದರೆ ಹುಡುಗರಿಗೆ ಸ್ವರ್ಗ. "ಬಾಪೂಗೆ ನಾವೆಲ್ಲ ಆರೋಗ್ಯವಾಗಿರಬೇಕು ಎಂದು ಆಸೆ; ಎಂತ ನಾವೆಲ್ಲ ಅಂಗಸಾಧನೆ ಮಾಡುತ್ತಿದ್ದೆವು. ಇದಕ್ಕಾಗಿ ಬೆಳಗು ಮುಂಜಾನೆ ಏಳುತ್ತಿದ್ದೆವು. ಬಾಪೂಗೆ ಈಸಲಿಕ್ಕೆ ಚೆನ್ನಾಗಿ ಬರುತ್ತದೆ. ನಮಗೆಲ್ಲ ಈಸು ಬರಬೇಕೆಂದು ಅವರ ಮನಸ್ಸು. ಒಂದೊಂದು ಸಲ ನಮ್ಮೆಲ್ಲರ ಜೊತೆಗೆ ತಾವೂ ಸಾಬರ್ಮತಿ ನದಿ ಯೊಳಗೆ ಇಳಿಯುತ್ತಿದ್ದರು.

'ಬಾಪೂ ಆಶ್ರಮ ಬಿಟ್ಟು ಆಗಾಗ ಪ್ರವಾಸ ಹೋಗುತ್ತಿದ್ದರು. ಎಲ್ಲಿ ಹೋದರೂ ನಮ್ಮನ್ನು ಮರೆಯುತ್ತಿರಲಿಲ್ಲ. ಪ್ರತಿ ವಾರವೂ ನಮಗೆ ಕಾಗದ ಬರೆದು-ನನ್ನ ಮುದ್ದಿನ ಹಕ್ಕಿಗಳೆ ಎಂದು ಕರೆಯುತ್ತಿದ್ದರು. ನಮ್ಮ ಅಕ್ಷರ ಡೊಂಕಾದರೆ ಸಿಟ್ಟಾಗುತ್ತಿದ್ದರು.

'ಬಾಪು ನಮಗೆ ವಿದ್ಯೆ ಕಲಿಸಿದ ರೀತಿ ಎಲ್ಲ ಮಕ್ಕಳೂ ಕಲಿವ ರೀತಿಯಲ್ಲ. ನಮ್ಮಲ್ಲಿ ಪುಸ್ತಕಪಾಠಕ್ಕಿಂತ ನೂಲುವುದೇ ಬಹಳ. ಆದರೆ ನೂಲುವಾಗಲೇ ಎಷ್ಟೋ ವಿಷಯ ಕಲಿಯುತ್ತಿದ್ದೆವು.".

ಬಾಪೂಗೆ ವಿದೇಶೀ ವಸ್ತುಗಳ ಮೇಲೆ ಎಷ್ಟು ಪ್ರೀತಿ ಎಂಬುದನ್ನು ಎಲ್ಲರೂ ಬಲ್ಲರು. ಈ ಹುಡುಗನ ತಂದೆಯ ಗೆಳೆಯ ಒಂದು ಸಲ ಕೆಲವು ಆಟದ ಸಾಮಾನು ತಂದುಕೊಟ್ಟರು ಇವನಿಗೆ. "ಬಾಪೂಗೆ ಇದು ಗೊತ್ತಾಯಿತು. ಆ ಸಾಮಾನನ್ನು ತೆಗೆದಿಟ್ಟುಬಿಟ್ಟರು. ಅವುಗಳೊಡನೆ ಆಡಗೊಡಲಿಲ್ಲ. ನನಗೇನೋ ತುಂಬಾ ವ್ಯಥೆಯಾಯಿತು. ಆದರೆ ಮುಂದೆ ಅವರು ಹಾಗೇಕೆ ಮಾಡಿದರೆಂಬುದು ತಿಳಿಯಿತು."

ಬಾಪೂ ಪುಣೆಯಲ್ಲಿ ಉಪವಾಸವನ್ನು ಕೈಗೊಂಡಾಗ ಈ ಹುಡುಗನೂ ಅಲ್ಲಿಯೇ ಇದ್ದ. ಇವನಿಗೆ ಆಗ ಮಲೇರಿಯಾ ಬಂತು. ಬಾಪು ಅದನ್ನು ಗಮನಿಸಿದರು. ಅವನ ತಂದೆಯನ್ನು ಕರೆದು ತಾರು ಕೊಟ್ಟು ಅವನ ತಾಯಿಯನ್ನು ಕರೆಸುವಂತೆ ಹೇಳಿದರು. "ಸ್ವತಃ ತಾವೇ ಅಷ್ಟು ಅಸ್ವಸ್ಥರಿದ್ದಾಗಲೂ ಬಾಪೂಗೆ ಎಲ್ಲರ ಬಗ್ಗೆಯೂ ಎಷ್ಟು ಯೋಚನೆ, ಎಷ್ಟು ಕಾಳಜಿ!" ಮೇಲೆ ಹೇಳಿದ ಮಾತು ಬರೆದ ಆಶ್ರಮ ಬಾಲಕ ಯಾರೆಂದು ಆ ಲೇಖನದಲ್ಲಿ ತಿಳಿಸಿಲ್ಲ. ಬಹುಶಃ ಮಹಾದೇವಭಾಯಿಯ ಮಗ ನಾರಾಯಣ ದೇಸಾಯಿ ಇರಬೇಕೆಂದು ಅನಿಸುತ್ತದೆ.

ಗಾಂಧೀಜೀ ದುಂಡು ಮೇಜಿನ ಪರಿಷತ್ತಿಗೆ ಹೋಗುವಾಗ ಹಡಗಿನಲ್ಲಿ ಕೂತು ಯಾವುದೋ ಒಂದು ಮಗುವಿನೊಡನೆ ಆಡುತ್ತಿದ್ದ ಚಿತ್ರ ಒಂದು ಆಗ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಮಗುವೂ ನಗುತ್ತಾ ಇದೆ. ಇವರಂತೂ ತಮ್ಮ ಹಲ್ಲಿಲ್ಲದ ಬಚ್ಚಬಾಯಿಂದ ನಗೆಯ ತೆರೆಯನ್ನೇ ಹಬ್ಬಿಸಿದಾರೆ. ಆ ನಗೆಯಲ್ಲಿ ಅಮರತೇಜದ ಹೊಳಪು ಇದೆ. ಮಕ್ಕಳು ಇದುರಿಗೆ ಇದ್ದರೆ ಸಾಕು, ಬಾಪು ಕೊಂಚಮಟ್ಟಿಗೆ ಜಗತ್ತನ್ನೇ ಮರೆಯುತ್ತಾರೆ.

ತಿರುಗಾಡಿ ಬರಲು ಹೊರಟರೆ ಯಾರಾದರೂ ಮಕ್ಕಳು ಜೊತೆಗೆ ಇದ್ದರೆ ಉಳಿದವರಿಗೆ ಆ ದಿನ ಮಾತುಕತೆಯ ಭಾಗ್ಯ ಕಡಮೆಯೇ.

ಒಮ್ಮೆ ಹುಡುಗರ ಗುಂಪು ಒಂದು ಗಾಂಧೀಜಿಯನ್ನು ಮುತ್ತಿತು. ಹಾಗೆ ಹೇಳದೆ ಕೇಳದೆ ಮೊದಲೇ ಏರ್ಪಾಟು ಮಾಡಿಕೊಳ್ಳದೆ ಯಾರಾದರೂ ದೊಡ್ಡವರು ಬಂದಿದ್ದರೆ ಅವರ ಫಜೀತಿ ಆಗಿಬಿಡುತ್ತಿತ್ತು. ಗೊತ್ತಾದ ಹೊತ್ತಿಗೆ ಎರಡೇ ನಿಮಿಷವಾದರೂ ಮೊದಲು ಭೇಟಿಗೆ ಸಾಧ್ಯವಿಲ್ಲ. ಆದರೆ ಮಕ್ಕಳ ಮುಂದೆ ಗಾಂಧೀಜೀ ಕರಗಿಹೋಗುತ್ತಾರೆ. ಅವರ ನಿಷ್ಠುರ ನಿಯಮಗಳೆಲ್ಲ ಹುಡುಗರ ಇದಿರಿಗೆ ಮನೆಯವರನ್ನು ಕಂಡ ನಾಯಂತೆ ಬಾಲ ಮುದುರಿಕೊಳ್ಳುತ್ತವೆ.

ಆ ಗುಂಪಿನಲ್ಲಿ ಹದಿಮೂರು ಜನ ಹುಡುಗರು ಇದ್ದರು. ಕೋಣೆಯಲ್ಲಿ ಬೇರೆ ಜನವೂ ಇದ್ದುದರಿಂದ ಅವರೆಲ್ಲರಿಗೆ ಒಟ್ಟಿಗೆ ಒಂದು ಸಾಲಾಗಿ ಕೂಡುವುದಕ್ಕಾಗಲಿ ನಿಲ್ಲುವುದಕ್ಕಾಗಲಿ ಸಾಧ್ಯವಾಗಲಿಲ್ಲ. ಅದನ್ನು ನೋಡಿ ಅವರಿಗೆ ಸ್ವಲ್ಪ ಕವಾಯತು ಕಲಿಸುವ ಇಚ್ಛೆ ಆಯಿತು ಬಾಪೂಗೆ. ಸರಿ. ಮೊದಲನೆಯ ಪಾಠ ಪ್ರಾರಂಭವಾಯಿತು.

'ಹೀಗೆ ಬನ್ನಿ. ನಿಮಗೆ ಎಣಿಸುವುದು ಬರುತ್ತದೆಯೆ? ಎಲ್ಲಿ–ಎಡಗಡೆಯಿಂದ ಬಲಗಡೆಗೆ ಎಣಿಸಿ. ನೀವು ಎಷ್ಟು ಜನ ಇದೀರೋ ನೋಡೋಣ' ಎಂದರು.

'ಒಂದು–ಎರಡು–ಮೂರು–ನಾಲ್ಕು–ನಾಲ್ಕು–ನಾಲ್ಕು—' ಆ ಹುಡುಗರಿಗೆ ಎಂದೂ ಇಂಥ ವಿನೋದ ಆಡಿ ಗೊತ್ತಿರಲಿಲ್ಲ. ಏನೋ ವಿಚಿತ್ರವೆನಿಸಿತು. ನಾಲ್ಕನೆಯವನು ಹೇಳಿದ್ದನ್ನೇ ಮುಂದಿನವನೂ ಹೇಳಿದ. ಹಾಗೆಯೇ ಸಾಗಿತು. ಏಳನೆಯವನೂ ಅದೇ ಹಾಡೇ. ಹಾಗೂ ಹೀಗೂ ಕಷ್ಟಪಟ್ಟು ಹದಿಮೂರು ಎಣಿಸುವ ಹಾಗೆ ಮಾಡಿ ಆಯಿತು. ಈ ಕವಾಯತು ಮೂರು ನಾಲ್ಕು ಸಲ ಮಾಡಿಸಿದ ಮೇಲೆ ಕೊನೆಯ ಸಲ ಸರಿಯಾಗಿ ಹೇಳಿದರು.

ಮುಂದೆ ಸಾಗಿತು ಆಟ. 'ಈಗ ಹೇಳಿರಿ ನಿಮಗೆ ಸರಿ ಬೆಸ ಗೊತ್ತಿದೆಯೆ?'

ಅವರಲ್ಲಿ ಒಬ್ಬಿಬ್ಬರು ಹುಡುಗರು ಹೂಂ ಎಂದರು. ಉಳಿದವರಿಗೆ ಸರಿ ಬೆಸ ಎಂದರೆ ಏನು ಎಂಬುದೇ ಅರ್ಥವಾಗಲಿಲ್ಲ. ಸರಿ. ಅವರಿಗೆ ಸರಿ ಬೆಸಗಳ ಚಿದಂಬರ ರಹಸ್ಯವನ್ನು ತಿಳಿಸಿಕೊಟ್ಟುದಾಯಿತು. ಇನ್ನು ಸಾಲುಗಳು ಆಗಬೇಕಲ್ಲ. 'ಒಳ್ಳೆಯದು. ಈಗ ಬೆಸಗಳೆಲ್ಲ ಅಲ್ಲಿಯೇ ನಿಲ್ಲಿ. ಸರಿಗಳೆಲ್ಲ ಒಂದೊಂದು ಹೆಜ್ಜೆ ಮುಂದೆ ಬನ್ನಿ.' ಹುಡುಗರಿಗೆ ಈ ಕವಾಯತೇನು ಗೊತ್ತು? ಪೆಚ್ಚುಪೆಚ್ಚಾಗಿ ಹಿಂದೆ ಮುಂದೆ ಸರಿದಾಡಿದರು. ಇದ್ದವರಿಗೆಲ್ಲ ನಗು ಬಂತು. ಅಂತೂ ಇಂತೂ ಎರಡು ಸಾಲು – ಏಳರದು ಒಂದು, ಆರರದು ಒಂದು–ಸಿದ್ಧಮಾಡಿಸಿ ಆಯಿತು.

ಅಲ್ಲಿಂದ ಗಾಂಧೀಜೀ ಹುಡುಗರ ಪರೀಕ್ಷೆಗೆ ಮೊದಲು ಮಾಡಿದರು.

'ನಿಮ್ಮಲ್ಲಿ ಯಾರು ಯಾರು ಬತ್ತಿ ಸೇದುತ್ತೀರೋ ಕೈಯೆತ್ತಿ, ನೋಡೋಣ.'

ಕೂಡಲೆ ಆರು ಕೈ ಮೇಲೆ ಹೋದವು. ಜೊತೆಯ ಹಿರಿಯರೆಲ್ಲ ಏಕೋ ಕೈಯೆತ್ತಿದರಲ್ಲ ಎಂದು ಸಹಾನುಭೂತಿಯಿಂದ ಮೂರು ಮಾವಿನ ಕಾಯಿ ಉದ್ದದ ಒಂದು ಪುಟ್ಟ ಮಗುವೂ ಕೈಯೆತ್ತಿತು. ಅವನ ಪಕ್ಕದಲ್ಲಿ ನಿಂತಿದ್ದ ಹಿರಿಯ ಹುಡುಗನಿಗೆ ಈ ಅಸತ್ಯ ಸಹನೆಯಾಗಲಿಲ್ಲ. 'ಲೋ ನೀ ಯಾಕೆ ಕೈಯೆತ್ತುತೀಯೋ? ನೀ ಯೇನು ಬತ್ತಿ ಸೇದುತೀಯಾ ಕೈ ಎತ್ತಲಿಕ್ಕೆ?' ಎಂದು ಅವನ ಕೈ ಕೆಳಗೆ ಇಳಿಸಿದ.

ಬತ್ತಿ ಸೇದುವುದರಿಂದ ಆಗುವ ನಷ್ಟದ ಬಗ್ಗೆ ಒಂದು ಚಿಕ್ಕ ಪಾಠವಾಯಿತು. ವಿಷಯ ಬದಲಿಸಿ,

'ಅದಿರಲಿ. ನಿಮ್ಮ ಮೇಷ್ಟ್ರು ಸುದ್ದಿ ಹೇಳಿ ನೋಡೋಣ. ನಿಮ್ಮ ಮೇಷ್ಟ್ರು ಒಳ್ಳೆಯವರೋ ಹೇಗೆ?'

'ಹೂಂ, ಹೂಂ.' ಎಲ್ಲರೂ ಒಟ್ಟಿಗೆ ಕೂಗಿದರು.

'ಪಾಠ ಚೆನ್ನಾಗಿ ಹೇಳುತ್ತಾರೆಯೇ?'

ಮತ್ತೆ ಹೂಂ ಹೂಂಗಳ ಗದ್ದಲ.

'ನಿಮ್ಮನ್ನು ಹೊಡೆಯುವದಿಲ್ಲವೇ?'

'ಇಲ್ಲ.'

'ಯಾವಾಗಲಾದರೂ ಒಂದು ಸಲ?'

'ಯಾವಾಗಲೂ ಇಲ್ಲ.'

'ಅದು ಹೇಗಯ್ಯ? ಒಂದು ಕೊಂಚವಾದರೂ ತಪ್ಪು ಇಲ್ಲದೆ ಪೂರಾ ಒಳ್ಳೆಯವರೇ ಆಗಿರುವವರನ್ನು ಯಾರನ್ನಾದರೂ ನೋಡಿದೀರಾ ನೀವು?'

ಒಂದೆರಡು ನಿಮಿಷ ಸದ್ದೇ ಇಲ್ಲ.

ಅವರಲ್ಲಿ ಮುಂದಾಳಾದವ ಮುಗುಳುನಗೆ ನಕ್ಕ. 'ಹೂಂ. ನೋಡಿ ದೇವೆ' ಅಂದು ಕಣ್ಣುಮಿಟುಕಿಸಿದ. ಆ ಹುಡುಗ ಹಾಗೆ ತಮ್ಮ ಬಗ್ಗೆ ಅಂದದ್ದನ್ನು ಕೇಳಿ ಬಾಪೂ ಬೆರಗಾದರು.

'ಅಲ್ಲಪ್ಪಾ ಅಲ್ಲ. ಉಂಟೆ? ನಾನು ಅಷ್ಟು ಒಳ್ಳೆಯವನು ಆಗಿದ್ದರೆ ಸರಕಾರದವರು ನನ್ನನ್ನು ಮೇಲೆ ಮೇಲೆ ಜೈಲಿಗೆ ಕಳಿಸುತ್ತಿದ್ದರೆ?'

ಹುಡುಗರಿಗೆ ಇದು ಅರ್ಥವಾಗಲಿಲ್ಲ. ದಂಗು ಬಡಿದು ನಿಂತರು.

'ಇಲ್ಲಿ ನೋಡಿ. ಮನುಷ್ಯರಲ್ಲಿ ಯಾರೂ ಅಷ್ಟು ಒಳ್ಳೆಯವರು ಇಲ್ಲ. ತಪ್ಪೇ ಇಲ್ಲದವನು ದೇವರು ಒಬ್ಬನೇ. ನಾವೆಲ್ಲರೂ ಆ ದೇವರ ಹಾಗೆ ಆಗುವ ಪ್ರಯತ್ನಮಾಡಬೇಕು. ದಿಟವೇ ಆ ದಾರಿ. ಎಂಥ ತಪ್ಪೇ ಮಾಡಲಿ ಯಾವಾಗಲೂ ದಿಟವಾಡಿ. ದಿಟ ಹೇಳಿದವರಿಗೆ ಎಂದಿಗೂ ದುಃಖವಿಲ್ಲ.'

ಬಹಳ ಹೊತ್ತಾಗಿತ್ತು. ಭೇಟಿಗಾಗಿ ಜನ ಹೊರಗೆ ಕಾದಿದ್ದರು. ಒಳಗೆ ಬರಹತ್ತಿದರು. ಬಾಲಕರ ಸ್ವರ್ಗದಿಂದ ಬಾಪು ವ್ಯವಹಾರದ ಭೂಮಿಗೆ ಇಳಿಯಬೇಕಾಯಿತು.

ಮಕ್ಕಳು ನಕ್ಷತ್ರಗಳು ಇದ್ದಂತೆ. ಭೂಮಿಯ ಮೇಲೆ ನಿಂತು ನೋಡಿ ದರೆ ಅವು ಮಿರುಗುವ ಕಿರುತಾರೆಯಾಗಿ ಕಾಣುತ್ತವೆ. ಮೇಲೆ ಏರಿ ನೋಡಬಲ್ಲೆವಾದರೆ ಅವು ಕಿರಿದೂ ಗುಂಡೂ ಆಗಿ ಕಾಣಲಿಕ್ಕಿಲ್ಲ; ಅಖಂಡ ಜ್ಯೋತಿಯಾಗಿ ಕಂಡಾವು. ನಮ್ಮ ಕಣ್ಣು ಆತ್ಮದ ದೃಷ್ಟಿಯಿಂದ ಬೆಳಗಿ ದರೆ ಮಕ್ಕಳ ಪರಿಶುದ್ಧಾತ್ಮದ ಪ್ರಕಾಶ ಕಂಡೀತು. ಇಲ್ಲದೆ ಇದ್ದರೆ ಬರೀ ಮಣ್ಣಿನ ಮುದ್ದೆಯಾದ ಮೈ ಕಂಡೀತು. ಮಗುವಿನ ಬಾಯಲ್ಲಿ ವಿರಾಟ್ ಪ್ರಪಂಚವನ್ನೇ ನೋಡಿದ ಭಾಗ್ಯ ಯಶೋದಾ ತಾಯಿಯದಾದರೆ, ಶಿಶು ಲೋಕದ ಅನಿರ್ವಚನೀಯ ಶಾಂತಿಯನ್ನು ಆಧ್ಯಾತ್ಮದೃಷ್ಟಿಯಿಂದ ಅರಿತು

ಕೊಳ್ಳುವ ದಿವ್ಯಕಲೆ ಗಾಂಧೀಜಿಯದು. ಅಂತಲೇ ಗಾಂಧೀಜಿಯ ನಗೆಯಲ್ಲಿ ಮಕ್ಕಳ ನಗುವಿನ ನಿರ್ಮಲ ಕಾಂತಿಯಿದೆ.

ಗಾಂಧೀಜಿಗೂ ಹಸುಮಕ್ಕಳಿಗೂ ಇರುವ ಈ ಗಂಟು ಹಿಡಿತಕ್ಕೆ ಸಿಗದ ಮಂತ್ರ. ಹಿಂದುಸ್ಥಾನದ ಹುಡುಗರಿಗೆ ಗಾಂಧೀಜಿಯ ಪರಿಚಯ ಇರುವುದು ಸಹಜ. ಕೆಲವರಿಗೆ ಗುರುತೂ ಇರಬಹುದು. ಆದರೆ ಪ್ರಪಂಚದ ಮೂಲೆ ಮೂಲೆಯಲ್ಲೂ ಮಕ್ಕಳ ನಡುವೆ ಗಾಂಧೀಜಿಯ ಮಾತು ಬರುತ್ತದೆ. ನಿಜಾಮು ಸಂಸ್ಥಾನದ ದೋರಣಕಲ್ಲಿನ ಬಿಷಪ್ ಅಜರಯ್ಯನವರು—ಬಿಷಪ್ ಎಂದರೆ ಕ್ರಿಸ್ತಮತದಲ್ಲಿ ಒಂದು ಪ್ರಾಂತದ ಧರ್ಮಾಧಿಕಾರಿ—ಅಮೆರಿಕಾ ದೇಶಕ್ಕೆ ಹೋಗಿದ್ದಾಗ ಅವರಿಗೆ ಆ ಅನುಭವವಾಯಿತು. ದಕ್ಷಿಣ ಪ್ರಾಂತಗಳಲ್ಲಿ ಸಂಚಾರಮಾಡುತ್ತಾ ಇವರು ಒಂದು ಸಲ ನೀಗ್ರೋ ಜನರ ಪ್ರಾಥಮಿಕ ಶಾಲೆಯೊಂದಕ್ಕೆ ಹೋದರು. ಆ ಶಾಲೆಯ ಮುಖ್ಯೋಪಾಧ್ಯಾಯರು ಇವರನ್ನು ಹಿಂದುಸ್ಥಾನದ ವಿಷಯವಾಗಿ ನಾಲ್ಕು ಮಾತು ಹೇಳುವಂತೆ ಕೇಳಿದರು. ಐದು ನಿಮಿಷದಲ್ಲಿ ಇವರು ಏನೋ ಚೂರುಚಾರು ಹೇಳಿದರು. ಅದು ಮುಗಿದ ಮೇಲೆ ತಮಗೆ ಬೇಕಾದ ಪ್ರಶ್ನೆ ಕೇಳುವಂತೆ ಹುಡುಗರಿಗೆ ಉಪಾಧ್ಯಾಯರು ಹೇಳಿದರು. ಶಾಲೆಯ ಮೇಲಿನ ತರಗತಿಯ ಹುಡುಗಿ ಒಬ್ಬಳು ಕೂಡಲೆ ಜಿಗಿದು ನಿಂತು 'ನಮಗೆ ಗಾಂಧೀ ಸುದ್ದಿ ಹೇಳಿ ಸ್ವಲ್ಪ' ಎಂದು ಕೇಳಿದಳು. ಭಾರತಕ್ಕೆ ಅಮೆರಿಕಾ ಇದ್ದಷ್ಟು ದೂರ ಯಾವುದಿದೆ? ಅದರಲ್ಲಿ ನೀಗ್ರೋ ಜನರಂಥ ಹಿಂದುಳಿದ ಜನರ ಪ್ರಾಥಮಿಕ ಶಾಲೆ. ಅಲ್ಲಿ ಈ ಪ್ರಶ್ನೆ! ಅದರಲ್ಲಿ ಅಷ್ಟು ಉತ್ಸಾಹ!

ಗಾಂಧೀಜೀ ಶಿಶುಪ್ರಪಂಚದಲ್ಲಿ ತಮ್ಮದೇ ಆದ ಒಂದು ಸ್ಥಾನವನ್ನು ಮಾಡಿಕೊಂಡಿದಾರೆ. ಎಷ್ಟೋ ಜನ ತಮ್ಮ ಮಕ್ಕಳ ಮೂಲಕ ಖಾದೀ ತೊಟ್ಟವರುಂಟು; ಗಾಂಧೀ ಶಿಷ್ಯರಾದವರುಂಟು. ಮಕ್ಕಳ ಪಾಲಿಗೆ ಗಾಂಧೀಜೀ ಕಿಂದರಿಜೋಗಿ. ಅವರ ನುಡಿ, ಅವರ ಪ್ರಭಾವ ಅಂತಹ ಸಮ್ಮೋಹಕ ಮಂತ್ರ. ಬೃಂದಾವನವಾಸಿಯಾಗಿದ್ದ ಹುಚ್ಚ ಬೈಜೂನ ಅಲೌಕಿಕ ಗಾಯನವಿದ್ದಂತೆ.

ಹಿಂದೂಸ್ತಾನದಲ್ಲಿಯೇ ಅಲ್ಲ. ಪ್ರಪಂಚದ ಮೂಲೆ ಮೂಲೆ

ಯಲ್ಲಿಯೂ ಕೂಡ ಗಾಂಧೀಜಿಯನ್ನು ಅರಿಯದ ಮಕ್ಕಳು ಅಪರೂಪ ಎಂಬುದು ಅನೇಕರಿಗೆ ಅನುಭವವಾಗಿದೆ. ಮಕ್ಕಳ ಶಿಕ್ಷಣದಲ್ಲಿ ನುರಿತು ಹೆಸರಾದ ಡಾಕ್ಟರ್ ಮಾಂಟಿಸೋರಿ ಬರೆದಿದಾರೆ. 'ಗಾಂಧೀಜಿಯನ್ನು ಅರಿಯದವರು ಯಾರು? ಯೂರೋಪಿನ ಮೂಲೆ ಮೂಲೆಗಳಲ್ಲಿ ಸಣ್ಣ ಪುಟ್ಟ ಮಕ್ಕಳಿಗೂ ಗೊತ್ತಿದೆ. ಗಾಂಧೀಜಿಯ ಚಿತ್ರವನ್ನು ತೋರಿಸಿದರೆ ಪ್ರತಿಯೊಬ್ಬರೂ ತಮ್ಮ ತಾಯಿನುಡಿಯಲ್ಲಿ ಓ ಗಾಂಧೀ, ಓ ಗಾಂಧೀ ಎಂದು ಉತ್ಸಾಹದಿಂದ ಗುರುತಿಸುತ್ತಾರೆ.' ಗಾಂಧೀಜೀ ಯೂರೋಪಿಗೆ ಹೋಗಿದ್ದರಲ್ಲ. ಆಗ ಅಲ್ಲಿನ ಕೆಲವು ಮುಖ್ಯ ಸಂಸ್ಥೆಗಳನ್ನು ನೋಡಿದರು. ಕೆಲವನ್ನು ನೋಡಲು ವೇಳೆ ಸಿಗಲಿಲ್ಲ. ಆದರೆ ಡಾಕ್ಟರ್ ಮಾಂಟಿಸೋರಿಯ ಶಿಶು ವಿಹಾರಗಳನ್ನು ಮಾತ್ರ ಮರೆಯದೆ ನೋಡಿ ಬಂದರು. ಗಾಂಧೀಜೀ ರೋಮ್ ನಗರಕ್ಕೆ ಹೋಗಲು ಮುಸಲೋನಿ ಅಲ್ಲ ಕಾರಣ; ಮಾಂಟಿ ಸೋರಿಯ ಶಿಶುವಿಹಾರ.

ಗಾಂಧೀಜೀ ನಂದೀ ಬೆಟ್ಟದಲ್ಲಿ ಇದ್ದಾಗ ಬೆಂಗಳೂರಿನ ಬಾಲಿಕಾ ಪಾಠಶಾಲೆಯೊಂದರ ಹುಡುಗಿಯರು ಅವರನ್ನು ನೋಡಿಹೋಗಲು ಬಂದಿದ್ದರು. ಬಾಪೂಗೆ ಅವರು ಇದ್ದಷ್ಟುಹೊತ್ತು ಸ್ವರ್ಗವೇ ಕೈಗೆ ಸಿಕ್ಕಹಾಗೆ ಆಯಿತು. ಅವರೊಡನೆ ಸೇರಿ ತಾವೂ ಆಟವಾಡಿದರು. ಆ ಹುಡುಗಿಯರು ಹಿಂದಿರುಗಿ ಬೆಂಗಳೂರಿಗೆ ಹೋದಮೇಲೆ ಬಾಪೂಗೆ ಒಂದು ಕಾಗದ ಬರೆದರು. ಬಾಪೂಗೆ ಆಗ ಖಾಯಿಲೆ. ದಿನವೂ ತಮ್ಮ ಸಾಮೂಹಿಕ ಪ್ರಾರ್ಥನೆಯಲ್ಲಿ ಬಾಪೂಗೆ ಬೇಗ ಗುಣವಾಗಲಿ ಎಂದು ದೇವರನ್ನು ಬೇಡಿಕೊಳ್ಳುತ್ತಿರುವುದಾಗಿ ಅವರು ಬರೆದರು. ಬಾಪೂ ಅವರಿಗೆ ಮಾರೋಲೆ ಬರೆದಾಗ ಆ ಮಕ್ಕಳನ್ನು ಪ್ರೀತಿಯ ಗಿಳಿಯ ಮರಿಗಳು ಎಂದರು. 'ಪ್ರೀತಿಯ ಗಿಳಿಯ ಮರಿಗಳೆ! ನಿಮ್ಮ ಕಾಗದ ನನಗೆ ಬಲಕೊಡುವ ಔಷಧ–ಟಾನಿಕ್–ಇದ್ದ ಹಾಗೆ ಇದೆ.'

ಆ ಗಿಳಿಯ ಮರಿಗಳು ಮತ್ತೊಂದು ಸಲ ನಂದೀ ಬೆಟ್ಟಕ್ಕೆ ಹಾರಿ ಬಂದವು. ಅವರೊಡನೆ ವಿನೋದವಾಡುತ್ತಾ ಬಾಪು ಕೇಳಿದರು. 'ಖಾದೀ ಅಂದರೆ ಏನು ನಿಮಗೆ ಗೊತ್ತಿದೆಯೆ? ಅದು ಚಲೋ ಪಕ್ಷಿ ಇರಬಹುದೆ ಅಥವಾ ಒಂದು ಆಟದ ಸಾಮಾನೋ?'

ಈ ಪ್ರಶ್ನೆ ಕೇಳಿದ ಮುದುಕನ ವಿನೋದಕ್ಕೆ ಗಿಳಿಯ ಮರಿಗಳು ನಕ್ಕವು. ಒಬ್ಬಳು ನಗುತ್ತ 'ಖಾದಿ ಎಂದರೆ ಬಟ್ಟೆ' ಎಂದಳು.

ಬಾಪೂ ಕೇಳಿದರು 'ಎಂಥ ಬಟ್ಟೆ ಅದು ?'

ವಿನೋದ ಹೋಗಿ ಪರೀಕ್ಷೆ ಆಯಿತು. ಇದಕ್ಕೇನು ಹೇಳಬೇಕು ? ಅವರಿಗೆ ಗೊತ್ತಾಗಲಿಲ್ಲ. ಕೊನೆಗೆ ಒಬ್ಬಳು 'ಒರಟು ಬಟ್ಟೆ' ಎಂದಳು. ಈಗ ಬಾಪೂನ ಸರತಿ ನಗುವುದು. ಪ್ರಶ್ನೆಗಳನ್ನು ಹಾಕಿ ಹಾಗೂ ಹೀಗೂ ಖಾದೀ ಅಂದರೆ ಕೈನೂಲಿನ ಬಟ್ಟೆ ಎಂದು ಹುಡುಗಿಯರಿಗೆ ತಿಳಿಸಿದುದು ಆಯಿತು. ಇನ್ನು ಅದರ ಉಪಯೋಗ –

'ಸರಿ. ಆ ಬಟ್ಟೆಯಾಕೆ ಉಡಬೇಕು ಗೊತ್ತೆ ? ಹೇಳಿ ನೋಡೋಣ.'

'ತಡತ ಬರುತ್ತೆ ಅಂತ.' ಒಬ್ಬ ಹುಡುಗಿ ಹೇಳಿದಳು.

'ಅಲ್ಲ. ಅದು ಸರಿಯಾದ ಕಾರಣ ಅಲ್ಲ. ಅದಕ್ಕಿಂತ ಒಳ್ಳೆಯ ಕಾರಣ ಹೇಳಬೇಕು.'

'ಆ ಬಟ್ಟೆ ಒಗೆದರೆ ಬೆಳ್ಳಗೆ ಆಗುತ್ತೆ.' ಇನ್ನೊಬ್ಬ ಹುಡುಗಿಯ ಉತ್ತರ.

'ಅದೂ ಸರಿಯಲ್ಲ. ಚೆನ್ನಾಗಿ ಯೋಚನೆ ಮಾಡಿಕೊಂಡು ಉತ್ತರ ಹೇಳಿ. ನಿಮ್ಮಲ್ಲಿ ಎಲ್ಲರಿಗಿಂತ ಯಾರು ಹೆಚ್ಚು ಬುದ್ಧಿವಂತರೋ ಅವರು ಹೇಳಿ ನೋಡೋಣ.' ತಿರುಗಿ ಅವರನ್ನು ಸರಿಯಾದ ಉತ್ತರಕ್ಕೆ ಕರೆದೊಯ್ಯ ಬೇಕಾಯಿತು.

'ಈ ಖಾದೀ ನೂಲು ಯಾರು ತೆಗೆಯುತ್ತಾರೆ ಗೊತ್ತೆ ? ನಿಮ್ಮ ತಂದೆ ತಾಯಿಯ ಹಾಗೆ ತಮ್ಮ ಮಕ್ಕಳ ಓದುಬರೆಹಕ್ಕಾಗಿ ತಿಂಗಳಿಗೆ ೪೦–೫೦ ರೂಪಾಯಿ ವೆಚ್ಚಮಾಡುವ ಭಾರೀ ಜನರಲ್ಲ, ಬಡವರು. ನಮ್ಮ ದೇಶದ ಜನರು ತೀರಾ – ಎಲ್ಲಿ ? ಆ ವಾಕ್ಯ ಮುಗಿಸಿ.'

ತಲೆಗೊಂದು ಉತ್ತರ. ಒಂದು ಹುಡುಗಿ ಸರಿಯಾದ ಉತ್ತರ ಹೇಳಿ ವಾಕ್ಯ ಮುಗಿಸಿದಳು.

'ತಿಳಿಯಿತೇ ? ನಮ್ಮ ದೇಶದ ಜನ ಬಡವರು. ನಿಮಗೆ ಇದ್ದ ಹಾಗೆ ಅವರಿಗೆ ಓದು ಬರಹ ಇಲ್ಲ. ನೀವು ಹಳ್ಳಿಗಳಿಗೆ ಯಾವಾಗಲಾದರೂ ಹೋಗಿದೀರಾ ? ಆ ಜನರಿಗೆ ಹೊಟ್ಟೆ ತುಂಬಾ ಹಿಟ್ಟಿಲ್ಲ. ಹಾಲಿಲ್ಲ,

ತುಪ್ಪ ಇಲ್ಲ. ಅಂಥ ಜನರೇ ನೂಲುವುದು. ಅದರಿಂದ ಒಂದು ದುಗ್ಗಾಣಿ ಬಂದರೆ ಅದೇ ಭಾಗ್ಯ. ಆ ಖಾದಿ ಬಟ್ಟೆ ನೀವು ಕೊಂಡರೆ ಅವರಿಗೆ ಆ ದುಗ್ಗಾಣಿ ಸಿಕ್ಕುತ್ತದೆ. ಆ ದುಗ್ಗಾಣಿಗೆ ಉಪ್ಪೋ ಮೆಣಸಿನಕಾಯೋ ಹಾಲೋ ಹಣ್ಣೋ ಕೊಳ್ಳುತ್ತಾರೆ. ಗೊತ್ತಾಯಿತೇ ಖಾದಿ ಬಟ್ಟೆ ಯಾಕೆ ಉಡಬೇಕು ಎನ್ನುವುದು.'

ಹುಡುಗಿಯರಿಗೆಲ್ಲ ಹರುಷವಾಯಿತು. ಅವರಲ್ಲಿ ಅಳ್ಳಿದೆಯ ಸರಕಾರಿ ನೌಕರರ ಮಕ್ಕಳು ಎಷ್ಟು ಜನವೋ! ಈ ಮಕ್ಕಳ ಕಾಟ ಮನೆಯಲ್ಲಿ ಅವರಿಗೆಲ್ಲ ಪ್ರಾಣಸಂಕಟವಾಗಿರಬೇಕು.

ಹಿಂದುಸ್ಥಾನದಂಥ ದೊಡ್ಡ ದೇಶದ ಯೋಗಕ್ಷೇಮುವನ್ನು ಹೊತ್ತ ಗಾಂಧೀಜೀ ಹೀಗೆ ಹುಡುಗರೊಡನೆ ಆಡಿಕೊಳ್ಳುವುದು ಕೆಲವರಿಗೆ ಸರಿ ಬೀಳುವುದಿಲ್ಲ. ಇದೆಲ್ಲ ವ್ಯರ್ಥ ಕಾಲಹರಣ ಎನ್ನುತ್ತಾರೆ. ಅಮಾತ್ಯ ರಾಜಗೋಪಾಲಾಚಾರ್ಯರು ಮಂತ್ರಿಯಾಗಿದ್ದಾಗ ದಿನಾಲೂ ಮುಂಜಾನೆ ತಮ್ಮ ಬಟ್ಟೆ ತಾವು ಒಗೆದುಕೊಳ್ಳುತ್ತಿದ್ದುದನ್ನು ಕಂಡು ಮದರಾಸು ಕಾಲೇಜಿನ ಹುಡುಗರು ಗಾಂಧೀಜಿಗೆ ದೂರು ಬರೆದಿದ್ದರು. 'ಇವರು ಬಟ್ಟೆ ಒಗೆವ ಅರ್ಧಗಂಟೆಯ ಕಾಲವನ್ನು ರಾಜಕಾರಣಕ್ಕೆ ಏಕೆ ಉಪಯೋಗಿಸ ಬಾರದು? ಇವರ ವೇಳೆ ನಾಡಿನ ಸೊತ್ತು.' ಸುಮಾರು ಅದೇ ತರದ ಪ್ರಶ್ನೆ ಯನ್ನು ಗಾಂಧೀಜಿಯ ಬಗ್ಗೆ ಅನೇಕರು ಕೇಳುತ್ತಾರೆ. ಅಮಾತ್ಯಶ್ರೇಷ್ಠರೇ ಹೀಗೆ ಕೇಳಿದರು: 'ದೇಶಸೇವೆಯ ಕೆಲಸ ಗುಡ್ಡದಷ್ಟು ಕಾದುಬಿದ್ದಿರುವಾಗ ಹುಡುಗರು ಹೆಂಗಸರು ಗುರುತಿನವರು ಎಂದು ಕೂತರೆ ಹೇಗೆ?' ಅದಕ್ಕೆಲ್ಲ ಗಾಂಧೀಜಿಯದು ಒಂದೇ ಉತ್ತರ. 'ಕರಿಯ ನಾಯನ್ನು ಬೆಳ್ಳಗೆ ಮಾಡಲು ಬಂದೀತೇ?' ಮನಸ್ಸು ಸ್ವಲ್ಪ ಮಿದುವಿದ್ದಾಗ ಬಾಪೂಜೀ ಸರ್ವಜ್ಞನಂತೆ ಹೀಗೂ ಅಂದಾರು:

ಊರೆಲ್ಲ ನಂಟರು ಕೇರಿ ಎಲ್ಲವು ಬಳಗ
ಧಾರುಣಿಯು ಎಲ್ಲ ಕುಲದೈವವಾಗಿನ್ನು
ಯಾರನ್ನು ಬಿಡಲಿ ಸರ್ವಜ್ಞ?—॥

ಗಾಂಧೀಜಿಯ ಹಿಡಿತವೇ ಅದು. ಅವರ ಬಾಳಿನಲ್ಲಿ ದೇಶಕ್ಕಿಂತ ರಾಷ್ಟ್ರಕ್ಕಿಂತ ಮಾನವ ಜೀವನ ದೊಡ್ಡದು. ಇದಕ್ಕೆ ಇದ್ದಷ್ಟು ಬೆಲೆ ಅದಕ್ಕೆ

ಇಲ್ಲ. ಅಥವಾ ಮೊದಲಿನದಕ್ಕೆ ಬೆಲೆಯೇ ಇಲ್ಲವೆಂದರೂ ಸರಿಯೆ. ಅವರ ಚಳುವಳಿಗೆ ದೇಶವಲ್ಲ ಕೇಂದ್ರ, ಮಾನವ ಜೀವನ. ಸ್ವರಾಜ್ಯಕ್ಕಿಂತ ಸತ್ಯ ಹೆಚ್ಚು ಎಂದು ಅವರು ಹೇಳಿದುದರಲ್ಲಿ ಇದೇ ಅರ್ಥ. ಹೇಗಾದರೂ ಮಾಡಿ ಸ್ವರಾಜ್ಯ ಗಳಿಸಿದರಾಯಿತು ಎಂಬುದು ಅವರಿಗೆ ಒಪ್ಪಿಗೆಯಿಲ್ಲ. ಶಠರಿಗೆ ಶಾಠ್ಯವೇ ಔಷಧ ಎಂದು ಲೋಕಮಾನ್ಯ ಟಿಳಕರು ತೋರಿಸಿಕೊಟ್ಟಾಗ ಗಾಂಧೀಜೀ ಶಾಂತವಾಗಿ ಉತ್ತರಕೊಟ್ಟರು: ಶಾಠ್ಯಂ ಪ್ರತ್ಯಾಪಿ ಸತ್ಯಂ. ಮುಸಲೋನಿ ಹಿಟ್ಲರರಿಗೆ ರಾಷ್ಟ್ರವು ಒಂದು ಕೌದಿ. ತಮ್ಮ ನಾಡಿನ ಜನ ಅದರ ಎಳೆಗಳು ಮಾತ್ರವಾದಾರು. ಆ ಎಳೆಗಳಿಗೆ ಬೇರೆ ವ್ಯಕ್ತಿತ್ವವಿಲ್ಲ. ಗಾಂಧೀಜಿಗೆ ಹಾಗಲ್ಲ. ಭಾರತ ಸಂತಾನಕೋಟಿಯಲ್ಲಿ ಪ್ರತಿಯೊಬ್ಬರೂ ಅವರಿಗೆ ವಿಶಿಷ್ಟವ್ಯಕ್ತಿ, ಚಿತ್ ಸ್ವರೂಪ; ತಮ್ಮಷ್ಟೇ ಪವಿತ್ರವಾದ ಸ್ವತಂತ್ರ ಪುರುಷ ತತ್ವ. ಈ ನೋಟವೇ ಅವರಿಗೆ ಮಹಾಮಹೋಪಾಧ್ಯಾಯರಾದ ಪಂಡಿತರೊಡನೆಯೂ ಅಜ್ಞಾನಾಂಧರಾದ ಗಾವಿಲರೊಡನೆಯೂ ಸರಸವಾಗಿ ಸ್ನೇಹಪೂರ್ಣವಾಗಿ ನಡೆದುಕೊಳ್ಳುವ ಶಕ್ತಿಯನ್ನು ಕೊಟ್ಟಿದೆ. ಅವರಿಗೆ ಗಂಡಾಗಲಿ ಹೆಣ್ಣಾಗಲಿ ಯಾರೂ ಅಪವಿತ್ರರಲ್ಲ, ಅನಾಮಧೇಯರಲ್ಲ. ಜೀವಿ ಜೀವಿಯೂ ಅಖಂಡ ಸತ್ಯದ ಅಂಶ, ಆನಂದ ಜ್ಯೋತಿಯ ಹಣತೆ. ಬೆಳಕು ಇಲ್ಲಿ ಉರಿಯದೆ ದೇಶದಲ್ಲಿ ಹೇಗೆ ಹರಡಿತು!

ಏಸುಕ್ರಿಸ್ತನದು ಒಂದು ಚಿತ್ರವಿದೆ. ಕಂಕುಳಲ್ಲಿ ಕುರಿಮರಿ ಒಂದನ್ನು ಎತ್ತಿಕೊಂಡು ಏಸು ಅದನ್ನು ಮುದ್ದಿಸುತ್ತಿದಾನೆ. ಆ ಕಣ್ಣಿನಲ್ಲಿ ಅಪಾರ ವಾದ ಪ್ರೀತಿ ತುಂಬಿ ಹರಿಯುತ್ತಿದೆ. ಆತನ ಹಿಂದೆ ಮುಂದೆ ಸುತ್ತಲೂ ಕುರಿಮರಿಗಳು ಸುತ್ತಿಕೊಂಡಿವೆ. ಬುದ್ಧದೇವನದೂ ಇಂಥ ಚಿತ್ರ ನೋಡಿದ ನೆನಪಿದೆ. ಬಾಪು ಶಿಶುಲೋಕದ ಅನಿರ್ವಚನೀಯ ಶಾಂತಿಯಲ್ಲಿ ಮುಳುಗಿ ಮಗುವೊಂದನ್ನು ಮಡಿಲಲ್ಲಿ ಕೂಡಿಸಿಕೊಂಡು ನಗುತ್ತಿದ್ದರು. ಸುತ್ತಲೂ ಮಕ್ಕಳು. ಬಾಪೂಜಿಯ ಮೋರೆ ಆಗತಾನೆ ಅರಳಿದ ಗುಲಾಬಿಯ ಹೂವಿ ನಂತೆ ತುಂಬಾ ಅಂದವಾಗಿತ್ತು. ಆ ನಗೆಯಲ್ಲಿ ಒಂದು ಅಲೌಕಿಕ ತೇಜ ವಿತ್ತು. ಆ ನೋಟವನ್ನು ನೋಡಿದಾಗ ಏಸುಕ್ರಿಸ್ತನ ಚಿತ್ರ ನೆನಪಿಗೆ ಬಂತು. ಹಸಿಗಣ್ಣು ಒರೆಸಿಕೊಳ್ಳಬೇಕಾಯಿತು.

ಗಾಂಧೀಜೀ ದಾಂಡೀ ಮಹಾಯಾತ್ರೆಮಾಡಿ ಲವಣ ಸತ್ಯಾಗ್ರಹ

ಮಾಡಿದಾಗ ಯರವಡಾ ಸೆರೆಮನೆಯ ರುಚಿ ನೋಡಬೇಕಾಯಿತು. ಅಲ್ಲಿಂದ ಆಶ್ರಮಕ್ಕೆ ಕಾಗದ ಬರೆದಾಗ ಆಶ್ರಮದ ಹುಡುಗರಿಗಾಗಿ ಒಂದು ಕಾಗದ ಬರೆದರು.

'ಮುದ್ದು ಹಕ್ಕಿಗಳೇ,

ರೆಕ್ಕೆ ಇಲ್ಲದೆ ಹಕ್ಕಿ ಹಾರುತ್ತದೆಯೆ? ಇಲ್ಲ. ಆದರೆ ನಾನೇನೋ ಪ್ರತಿ ದಿನವೂ ನನ್ನ ಮನಸ್ಸಿನಲ್ಲೇ ಹಾರಿಬರುತ್ತೇನೆ. ನೋಡಿ, ಇಲ್ಲಿ ವಿಮಲೆ ಇದಾಳೆ. ಇದೋ ಹರಿ! ಇಲ್ಲಿ ಧರ್ಮಕುಮಾರ. ನೀವೂ ನನ್ನ ಹಾಗೆಯೆ ಹಾರಿ ಬನ್ನಿ. ಮನಸ್ಸಿನಲ್ಲಿ ನೀವೂ ನನ್ನ ಬಳಿಗೆ ಬರಬಹುದು.

ಯೋಚನೆಮಾಡಲು ಶಕ್ತಿ ಬಂದಮೇಲೆ ನಮಗೆ ಗುರುವೇತಕ್ಕೆ? ಗುರು ದಾರಿ ತೋರಿಸಬಲ್ಲ. ಆಲೋಚನಾಶಕ್ತಿ ಕೊಡಬಲ್ಲನೇ? ಬುದ್ಧಿವಂತರಿಗೆ ಒಳ್ಳೆಯ ಆಲೋಚನೆಗಳೇ ಹೊಳೆಯುತ್ತವೆ.

ಪ್ರಭುಭಾಯಿಯ ಸಂಧ್ಯಾಪ್ರಾರ್ಥನೆಗೆ ನೀವೆಲ್ಲ ಸೇರುವಿರಲ್ಲವೆ. ನಿಮ್ಮಲ್ಲಿ ಶ್ರದ್ಧೆಯಿಂದ ಪ್ರಾರ್ಥನೆ ಮಾಡುವವರು ಯಾರು? ಬರೆಯಿರಿ. ಮಕ್ಕಳೆಲ್ಲ ರುಜು ಹಾಕಿದ ಕಾಗದ ಒಂದನ್ನು ನನಗೆ ಕಳಿಸಿ. ರುಜು ಮಾಡಲು ಬಾರದವರು ಹಂಸಪಾದದದ ಗುರುತು ಹಾಕಲಿ.

ಬಾಪೂ ಆಶೀರ್ವಾದಗಳು.'

ಕೆಲಸಮಾಡಿ ದಣಿದಾಗ ಮಕ್ಕಳೊಡನೆ ಆಡುವುದೂ ಒಂದು ಬಗೆಯ ವಿಶ್ರಾಂತಿ. ಬಾಪೂ ಈ ಕಲೆಯಲ್ಲಿ ತುಂಬಾ ಪಳಗಿದ ಕೈ. ಒಂದೇ ಒಂದು ಮುಗುಳುನಗೆಯಿಂದ ಎಳೆಯ ಮಕ್ಕಳ ಮನಸ್ಸನ್ನು ಎಳೆದುಕೊಂಡುಬಿಡುತ್ತಾರೆ. ಮಕ್ಕಳನ್ನು ಮುದ್ದಾಡಿ ಮಡಿಲಲ್ಲಿ ಮಲಗಿಸುತ್ತಾರೆ. ಎಷ್ಟೋ ಸಲ ಆ ಮೆದುವಾದ ನಗೆಯಾಟದಲ್ಲಿ ಮಗು ನಿದ್ದೆಹೋಗುತ್ತದೆ. ಮಕ್ಕಳ ನಡುವೆ ಬಾಪೂವನ್ನು ನೋಡಿದರೆ ಚಿಕ್ಕೆಗಳ ನಡುವೆ ಚಂದ್ರಾಮನನ್ನು ಕಂಡಂತೆ ಅನಿಸುತ್ತದೆ. ರಾಗದ್ವೇಷಪೂರ್ಣರಾದ ಹಿರಿಯರಿಗಿಂತ ಅವರ ನಡುವೆಯೇ ಇವರಿಗೆ ಹೆಚ್ಚು ಆನಂದ ಇದ್ದಂತೆ ತೋರುತ್ತದೆ. ಲಂಡನ್ನಿಗೆ ದುಂಡುಮೇಜಿನ ಪರಿಷತ್ತಿಗೆ ಹೋಗಿದ್ದಾಗ ಮಹಾಸಭೆಗಿಂತ ತಮಗೆ ಮಕ್ಕಳ ನಡುವೆಯೇ ಆನಂದ ಎಂದದ್ದು ನೆನಪಿಗೆ ಬರುತ್ತದೆ.

ಭಿನ್ನಮತಗಳ, ಪಕ್ಷಪಕ್ಷಗಳ, ದೇಶದೇಶಗಳ ಜಗಳದ ಕಡೆತವಲ್ಲಿ ಮಕ್ಕಳೆ ಅಮೃತಹಸ್ತ ಧನ್ವಂತರಿ. ಜಗತ್ತಿನ ರಾಗದ್ವೇಷದ ಕೋಲಾಹಲದಲ್ಲಿ ಮಕ್ಕಳ ಮನಸ್ಸೇ ಶಾಂತಿ–ಐಕ್ಯದ ಸ್ಥಾಯೀ ಶ್ರುತಿ. ಆ ಶ್ರುತಿಯನ್ನು ಗಾಂಧೀಜಿಯ ಹಾಗೆ ಗುರುತಿಸಿಕೊಂಡವರು ಈ ಕಾಲದಲ್ಲಿ ಮತ್ತೊಬ್ಬರು ಇಲ್ಲ.

ಅಹಿಂಸೆಯ ಅವತಾರ

ಮಕ್ಕಳು ಇದ್ದಂತೆಯೇ ಹೆಂಗಸರು. ವ್ಯವಹಾರದಲ್ಲಿ ಮುಳುಗಿ ಲೌಕಿಕ ಮಾಯೆಯಲ್ಲಿ ಪಂಡಿತರಾದ ಗಂಡುಜಾತಿಗೆ ಇರುವ ಸ್ವಾರ್ಥ ಕೌಟಿಲ್ಯಗಳು ಪ್ರೇಮಮಯಿಯಾದ ಸರಳಸ್ವಭಾವದ ಹೆಣ್ಣಿಗೆ ಎಲ್ಲಿಯವು? ಆಕೆಯದು ಭಾವನಾಪ್ರಧಾನವಾದ ವೃತ್ತಿ. ಅಲ್ಲದೆ ಅನಾದಿ ಕಾಲದಿಂಲೂ ಮನೆಯ ಪಂಜರದಲ್ಲೇ ಬೆಳೆದ ಗಿಣಿ. ಮಕ್ಕಳಿಗಿಂತ ಹೆಚ್ಚು ತಿಳಿವಿಗೆ ಗಂಡುಜಾತಿ ಹೆಣ್ಣಿಗೆ ಅವಕಾಶ ಕೊಟ್ಟುದು ಎಂದು?

ಹೆಣ್ಣು ರಸಸೃಷ್ಟಿಯ ಪರಮಾವಧಿ. ಅಹಿಂಸೆ ಪ್ರೇಮಗಳ ಚಿರಂತನ ಪೂಜಾರಿಣಿ. ಈ ಹೊಲಬು ಅರಿಯದೆ 'ಸ್ತ್ರೀ ಬುದ್ಧಿಃ ಪ್ರಳಯಾಂತಕಃ' ಎಂದವ ಪಾಪಿ. 'ನಾರಿ ಹೆಮ್ಮಾರಿ' ಎಂದವ ದ್ರಾಕ್ಷಿ ಹಣ್ಣು ಹುಳಿ ಎಂದ ನರಿ. ತನ್ನ ಮೈಯೊಳಗಿನ ಕಾಮಜ್ವರಕ್ಕೆ ಹೆಣ್ಣು ಕಾರಣಕ್ರಿಮಿ ಎಂದು ಹೇಳಿದ ತಿಳಿವಿಗೆ ಔಷಧ ಉಂಟೆ? ಕುಣಿಯಲಾರದ ಸೂಳೆ ನೆಲ ಡೊಂಕು ಎಂದಂತಿದೆ ಈ ವ್ಯವಹಾರ. ತನ್ನ ಲೋಭ ಮೋಹಗಳನ್ನು ಮರೆಮಾಡಿ ಕಾಮಿನೀಕಾಂಚನವೆಂದು ಸೂತ್ರ ಹೆಣೆದು ಮಂದಿಯನ್ನು ಮೋಸಗೊಳಿಸ ಹೋಗಿ ತನ್ನ ಬಲೆಯಲ್ಲಿ ತಾನೇ ಬಿದ್ದಿದಾನೆ ಗಂಡಸು.

ವಿಶ್ವದ ಇತಿಹಾಸದಲ್ಲಿ ಎಲ್ಲ ದಾಸ್ಯಗಳಲ್ಲಿ ಹೆಂಗಸರದೇ ಬಹಳ ಘೋರವಾದುದು. ಸಂಸಾರದ ಆಟದಲ್ಲಿ ಗಂಡು ಶಕುನಿಯ ದಾಳ ಆಡುತ್ತಿದಾನೆ. ಆಕೆ ಗೆಲ್ಲುವ ಸಂಭವವೇ ಇಲ್ಲ. ಸೋತು ಸೋತು ಸೋಲೇ

ತನ್ನ ಪಾಲಿಗೆ ಸರಿ ಎಂದು ಆಕೆ ತಿಳಿದಿದ್ದಾಳೆ. ಇದರಿಂದ ಯುಗಯುಗದ ದೌರ್ಜನ್ಯದ ಹೊರೆ ನಮ್ಮ ಪಾಲಿಗೆ ಕಾದಿದೆ. ಆ ಪಾಪ ಪರ್ವತವನ್ನು ಕರಗಿಸಬೇಕು. ಅದನ್ನು ತಲೆಯಮೇಲೆ ಹೊತ್ತು ನಾವು ಎಷ್ಟು ದೂರ ನಡೆದೇವು. ಆಕೆಗೆ ತನ್ನಪಾಡಿನ ಅರಿವು ಆಗಿದೆ. ಆ ಜ್ಞಾನೋದಯ ವನ್ನು ಅರಿತುಕೊಳ್ಳಬೇಕಾದುದು ಮಾನವ ಧರ್ಮ. ಹೀಗೆ ಗಾಂಧೀಜೀ ತಿಳಿದಿರಬೇಕು. ಇಲ್ಲದಿದ್ದರೆ Invariably man is the aggressor. ಯಾವಾಗಲೂ ಗಂಡುಸೇ ಕಾಲು ಕೆದರುವವನು, ಇವನದೇ ಎಲ್ಲ ದೌರ್ಜನ್ಯ ಎಂದು ಹೇಳುತ್ತಿದ್ದರೆ?

ಹೆಣ್ಣಿನ ಸಹಕಾರಕ್ಕೆ ಗಾಂಧೀಜೀ ಕೊಟ್ಟಷ್ಟು ಬೆಲೆ ಬೇರೆ ಯಾವ ಅವತಾರ ಪುರುಷನೂ ಕೊಟ್ಟಿಲ್ಲ ಪುರಾಣಯುಗದ ಮಾತು ಹಾಗಿರಲಿ, ಬುದ್ಧದೇವನೂ ಹೆಂಗಸಿಗೆ ಬಾಪೂ ಕೊಟ್ಟ ಸ್ಥಾನ ಕೊಡಲಿಲ್ಲ. ಹೆಣ್ಣು ಜನ್ಮಕ್ಕೆ ಮುಕ್ತಿಯ ಅಧಿಕಾರ ಇಲ್ಲವೆಂದ. ಉಳಿದವರಿಗಂತೂ 'ನಾರೀ ಸ್ತನಭರ ನಾಭೀದೇಶ'ದಲ್ಲಿ ಬರೀ 'ಮಾಂಸವಸಾದಿವಿಕಾರ'ವೇ ಕಂಡವು. ದಾಸರಿಗೆ ಕೂಡ 'ನಾರಿ ನರಕದ ದಾರಿ.'* ಮನುವಿಗಂತೂ ಹೆಂಗಸು

---

*ಹೆಣ್ಣಿನ ಬಗ್ಗೆ ಇಂಥ ಅಭಿಪ್ರಾಯ ಪಟ್ಟ ಕೀರ್ತಿ ಕೇವಲ ನಮ್ಮ ನಾಡಿಗೇ ಸಂದಿಲ್ಲ. ಇದು ಇಡೀ ಜಗತ್ತಿಗೆ ಹೊಂದಿದ ಮಾತು. "ಅರೇಬಿಯಾದಲ್ಲಿ ಹೆಣ್ಣು ಎಂದರೆ ಒಂದು ಸಾಮಾನು. ತಂದೆಯ ಸೊತ್ತು; ಮದುವೆಯಾದರೆ ಗಂಡನ ಸೊತ್ತು. ಗಂಡ ಸತ್ತರೆ ಉಳಿದ ಚರ ಸೊತ್ತಿನ ಹಾಗೆ ವಿಧವೆಯೂ ವಾರಸುದಾರರಿಗೆ ಸೇರಬೇಕು. ಅರೇಬಿಯಾದಲ್ಲಿ ಕುರೇಷ್ ಮನೆತನಗಳಲ್ಲಿ ಹೆಣ್ಣು ಹುಟ್ಟಿದರೆ ಅದಕ್ಕೆ ಸಾವೇ ತೊಟ್ಟಿಲು. ಯಹೂದ್ಯರಲ್ಲಿ ತಂದೆಯಾಗಲಿ ಅಣ್ಣ ತಮ್ಮಂದಿರಾಗಲಿ ಹೆಣ್ಣನ್ನು ಮಾರಬಹುದು. ಆದು ದರಿಂದ ಚೆಂದವಾದ ಹೆಣ್ಣು ಅವರಿಗೆ ಲಾಭ. ಕ್ರಿಸ್ತಾನರ ಮತದಲ್ಲಿಯಂತೂ ಜಗತ್ತಿನ ಮೂಲ ಪಾಪ ಹೆಣ್ಣು. ಹೆಣ್ಣಲ್ಲವೆ ಗಂಡನ್ನು ಕೆಣಕಿ ಬೆದೆಗೆ ತಂದುದು! ಆಗ ಆಕೆ ಆ ಕೆಲಸ ಮಾಡಿರದಿದ್ದರೆ ಇಂದಿಗೂ ಜನವೆಲ್ಲ ನಂದವನದಲ್ಲಿ ನಗ್ನಸೌಂದರ್ಯದಿಂದ ಸುಖವಾ ಗಿರಬಹುದಾಗಿತ್ತು. ಈಗಲೂ ಅವರಿಗೆ ಹೆಣ್ಣು ಸೈತಾನನ ಸೋದರಿ. ಸೀಜರ್ ಚಕ್ರ ವರ್ತಿಯ ಪಾಲಿನ ಮೃತ್ಯು, ಬೇಬಿಲಾನಿನ ವಿನಾಶಿನಿ, ಟ್ರಾಯ್ ಪಟ್ಟಣದ ವಿಧ್ವಂಸಿನಿ- ಯಾರು? ಹೆಣ್ಣು. ಇಂದಿಗೂ ಆಕೆಗೆ ಸ್ವರ್ಗದಲ್ಲಿ ಎಡೆಯುಂಟೋ ಇಲ್ಲವೋ ಪಾದರಿ ಗಳಿಗೇ ಸಂದೇಹ."

— ಖಾಲಿದ್ ಲತೀಫ್ ಗೌಬಾ; ಪೈಗಂಬರ್

'ಪ್ರಮಾದ ಪಥ'ದ ಕೈಗಂಬ. ಗಂಡುಸನ್ನು ಕೆಡಿಸಿ ಅಡ್ಡಹಾದಿ ಹಿಡಿಸಲೆಂದೇ ಹೆಣ್ಣಿನ ಅವತಾರ. ಗಂಡುಸು ತುಪ್ಪದ ಗಡಿಗೆ, ಹೆಣ್ಣು ಬೆಂಕಿಯ ಕುಂಡ ಎಂಬ ಗಾದೆಯೇ ಹುಟ್ಟಿಕೊಂಡಿತು.

ಇಷ್ಟೆಲ್ಲ ಶ್ರೀರಂಗನೀತಿ ಹೇಳಿಯೂ ಗಂಡು ಹೆಣ್ಣನ್ನು ಬಿಟ್ಟಿಲ್ಲ. ಅವನಿಗೆ ಆಕೆ 'ಭಾರ್ಯೆ.' ಅವನು 'ಭರ್ತ್ರ.' ಆಕೆ ಹೊರೆ, ಇವನು ಹೊರುವವನು. ಈ ವೈರಾಗ್ಯವೆಲ್ಲ ಆಕೆಯ ಕಾಟದಿಂದ ತನ್ನನ್ನು ಬಿಡಿಸಿಕೊಳ್ಳುವುದಕ್ಕೆ ಅಲ್ಲ. ತನ್ನ ಕೋಟೆಯಲ್ಲಿ ಆಕೆಯನ್ನು ಭದ್ರವಾಗಿ ಕಟ್ಟಿಹಾಕಲಿಕ್ಕೆ. ಆಕೆ ತನಗೆ ಅಗತ್ಯ. ಆದರೆ ಆ ಗುಟ್ಟು ಆಕೆಗೆ ತಿಳಿಯಬಾರದು.

ಗಂಡುಸಿನ ಈ ವಿಚಿತ್ರ ವೈರಾಗ್ಯ ಬಾಪೂಗೆ ಅರ್ಥವಿಲ್ಲದ ಅವಾಂತರ. 'ಇಬ್ಬರ ಆತ್ಮವೂ ಒಂದೇ. ಇಬ್ಬರ ಬಾಳೂ ಒಂದೇ. ಭಾವನೆಗಳೂ ಒಂದೇ. ಗಂಡು ಹೆಣ್ಣು ಪರಸ್ಪರಪೂರಕ ಸೃಷ್ಟಿ. ಒಬ್ಬರಿಗೊಬ್ಬರು ಆಸರೆ. ಒಬ್ಬರ ಸಂಪೂರ್ಣ ಸಹಾಯವಿಲ್ಲದೆ ಇನ್ನೊಬ್ಬರು ಬಾಳಲಾರರು.' ಇದೇ ಮಾತನ್ನೇ ಕಾಲಿದಾಸಕವಿ ಗಂಡು ಹೆಣ್ಣು ವಾಕ್-ಅರ್ಥಗಳಂತೆ ಎಂದು ಹೇಳಿದ. ಗಂಡಿನ ಕಾರ್ಯಕ್ಷೇತ್ರ ಬೇರೆ, ಹೆಣ್ಣಿನದು ಬೇರೆ. ಆದರೂ ಇಬ್ಬರದೂ ಒಂದೇ ಗುಣ, ಸಂಸ್ಕೃತಿ. ಗಂಡು ಉರಿ ಆದರೆ ಹೆಣ್ಣು ಬೆಳಕು.

ಅಷ್ಟೇ ಅಲ್ಲ. 'ಹೆಣ್ಣು ಅಹಿಂಸೆಯ ಅವತಾರ. ಅಹಿಂಸೆ ಎಂದರೆ ಕೊನೆ ಇಲ್ಲದ ಒಲವು. ಅಂದರೆ ಎಣ್ಣೆಯಿಲ್ಲದ ದುಃಖಸಹನ ಶಕ್ತಿ. ಈ ಶಕ್ತಿಯನ್ನು ಗಂಡಿನ ತಾಯಾದ ಹೆಣ್ಣಿಗಿಂತ ಹೆಚ್ಚಾಗಿ ತೋರಬಲ್ಲವರು ಯಾರು? ಗರ್ಭಧರಿಸಿ ಒಂಬತ್ತೂ ತಿಂಗಳು ಹೊತ್ತು ಸಲಹಿ ಆ ದುಃಖದೊಳಗೆಯೆ ಸುಖವನ್ನು ಕಾಣುವಲ್ಲಿ ಅದನ್ನು ತೋರುತ್ತಿದಾಳೆ. ಹೆರಿಗೆಯ ಬೇನೆಗಿಂತ ಹಿರಿಯ ನೋವು ಏನುಂಟು? ಆದರೆ ಸೃಷ್ಟಿಯ ಸಂತೋಷ ಭರದಲ್ಲಿ ಅದನ್ನೆಲ್ಲ ಮರೆತುಬಿಡುತ್ತಾಳೆ. ತಾನು ಪಡೆದ ಮಗು ದಿನದಿನಕ್ಕೆ ಬೆಳೆಯಲೆಂದು ನಿತ್ಯವೂ ಕಷ್ಟಪಡುವವರು ಯಾರು? ಆ ವಾತ್ಸಲ್ಯವನ್ನು ಹೆಣ್ಣು ಇಡೀ ಜಗತ್ತಿಗೇ ಬೀರಲಿ. ಹಿಂದೆ ಆಗಲಿ ಮುಂದೆ ಆಗಲಿ ತಾನು ಗಂಡುಸಿನ ಕಾಮದ ವಿಷಯ ಎಂಬುದನ್ನು ಆಕೆ ಮರೆಯಲಿ. ಆಗ ಗಂಡಿನ ಜೊತೆಯಲ್ಲಿ ಅವನ ತಾಯಿ, ಅವನ ಜನ್ಮದಾತ್ರಿ, ಅವನ ಸೂತ್ರಧಾರಿಣಿ ಎಂದು ಹೆಣ್ಣು ಸಗರ್ವವಾಗಿ ನಿಂತಾಳು. ಕಲಹದಲ್ಲಿ ಮುಳುಗಿ ಶಾಂತಿಯ

ಅನ್ಮೃತಕ್ಕಾಗಿ ಈ ಕುರುಕ್ಷೇತ್ರ ಬಾಯಾರಿದೆ. ಇವರಿಗೆ ಶಾಂತಿಯ ಕಲೆಯನ್ನು ಕಲಿಸುವುದು ಆಕೆಗೇ ಸಂದ ಭಾಗ್ಯ.'

ಹೆಣ್ಣು ಗಾಂಧೀಜಿಗೆ ತಾಯಿ. ಆಕೆ ಇಂದ್ರಿಯಭೋಗದ ಪದಾರ್ಥ ಎಂಬುದು ಹೊಲ್ಲ. ಹೆಣ್ಣು ಪಾವನರೂಪಿ. ಅಷ್ಟು ಹೊಲಸಾಗಿ ಆಕೆಯನ್ನು ತಿಳಿಯುವುದು ಸಾಧ್ಯವಿಲ್ಲ. ಹಿಂದಿನ ಕಾಲದಲ್ಲೂ ಒಂದೊಂದು ಸಲ ಮಿಂಚಿನಂತೆ ಹೆಣ್ಣಿನ ವಿಷಯದಲ್ಲಿ ಆದರ ಹೊಳೆದುಹೋಗಿದೆ. ನೂರು ತಪ್ಪುಮಾಡಲಿ ಹೆಣ್ಣನ್ನು ಹೂವಿನಿಂದಲೂ ಕೂಡ ಹೊಡೆಯಬೇಡ* ಎಂದು ತಂತ್ರಶಾಸ್ತ್ರದ ಹಾದಿ ಹಿಡಿದವರು ಹೇಳಿದಾರೆ. ವೈಷ್ಣವರು ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ಹೆಣ್ಣಿಗೆ ಪಾಪವೇ ಇಲ್ಲ† ಎಂದರು. ಮೊದಲು ಹೇಳಿದವರದು ವಿಚಿತ್ರ ವೈರಾಗ್ಯವಾದರೆ ಇವರದು ವಿಪರೀತ ರಾಗ. ಈ ಪಾಪ ಪುಣ್ಯಗಳ, ಬೆಂಕಿ ತುಪ್ಪಗಳ ವಿಷಯವ್ಯವಹಾರದಲ್ಲಿ ಗಾಂಧೀಜೀ ತೊಡಗಿಕೊಳ್ಳರು. ಗಾಂಧೀಜಿಯ ಬ್ರಹ್ಮಚರ್ಯ ಉತ್ತಮ ಜಾತಿಯದು. ಈ ಯುಗ ಕಂಡ ನೈಷ್ಠಿಕ ಬ್ರಹ್ಮಚಾರಿ ಅವರು. ಬ್ರಹ್ಮಚರ್ಯವ್ರತ ತೊಟ್ಟಮೇಲೆ ಅವರಿಗೆ 'ಹೆಣ್ಣು ಎನ್ನುವ ಜೀವವೆಲ್ಲ ತಂಗಿಯೋ ಮಗಳೋ ಆಗಿಹೋಯಿತು.' ಈ ನಿಟ್ಟನಲ್ಲಿ ನಡೆದವರಿಗೆ ಹೆಣ್ಣು ಅಗ್ನಿಕುಂಡವಲ್ಲ, ಯಜ್ಞಕುಂಡ.

ಈ ಗುಂಪಿಗೆ ಹೆಣ್ಣು ಪಾಪವರಿಯದ ಅಪ್ಸರೆ. ಆ ಗುಂಪಿಗೆ ಕಾಮಬಾಣ ಕೈಯಲ್ಲಿ ಹಿಡಿದ ಬೇಟೆಗಾತಿ. ಇಬ್ಬರ ಕಣ್ಣೂ ಹೆಣ್ಣಿನ ರೂಪದ ಮೇಲಿದೆ. ಇಬ್ಬರ ಮನಸ್ಸೂ ಆಕೆಯ ಭೋಗಕ್ಕೆ ಸೋತಿದೆ. ಇಬ್ಬರಿಗೂ ಗಂಡು ಹೆಣ್ಣು ಎಂಬ ಭೇದ ಕಣ್ಣಿಗೆ ಕಟ್ಟಿದೆ. ರೂಪಿನ ರಾಜ್ಯ ದಾಟದೆ ಈ ಭೇದ ಬಿಡದು. ಗಾಂಧೀಜಿಗೆ ಈ ನಾಮರೂಪ ಕಾಲ್ತೊಡಕಾಗುವು

---

* ಶತಾಪರಾಧೈಃ ವನಿತಾಂ ಪುಷ್ಪೇಣಾಪಿ ನ ತಾಡಯೇತ್ ।
ದೋಷಾಂ ನಗಣಯೇತ್ ಸ್ತ್ರೀಣಾಂ ಗುಣಾನ್ಯೈವ ಪ್ರಕಾಶಯೇತ್ ॥

—ಕುಲಾರ್ಣವ ತಂತ್ರ

† ಯಥಾ ಗವಿ ಯಥಾ ವಿಪ್ರೇ ಯಥಾ ವೇದಾಂತವೇದಿನೇ ।
ವನಿತಾಯಾಂ ತಥಾ ಶಕ್ರ ದುರಿತಂ ನೈವ ವಿದ್ಯತೇ ॥

—ಲಕ್ಷ್ಮೀತಂತ್ರ

ದಿಲ್ಲ. 'ಇಂದು ಹೆಣ್ಣು ನಿನ್ನ ಹೆಂಡತಿಯಾಗಿದ್ದಾಳು. ಹಿಂದೆಯೇ-ಮೊದ ಲಿಗೇ-ಹೆಣ್ಣು ನಿನ್ನ ತಾಯಿಯಾಗಿದ್ದಳೆಂಬುದನ್ನು ಮರೆಯಲೇಕೆ?' ಮೇಲಿನ ಎರಡೂ ಹಾದಿಗಳ ಸಾಹಿತ್ಯದಲ್ಲಿ ಹೆಣ್ಣೆಂದರೆ ರೂಪ ಸೌಂದರ್ಯದ ಅಧಿದೇವತೆ. ಬ್ರಹ್ಮಸೃಷ್ಟಿಯಲ್ಲಿ ಇಲ್ಲದ ಅಂದವೆಲ್ಲ ಕವಿಸೃಷ್ಟಿಯಲ್ಲಿ ಹೆಂಗ ಸಿಗೆ ಬಂದಿದೆ. ಈ ವಿಷಯದಲ್ಲಿ ತೋರಿಸಿದಷ್ಟು ಧಾರಾಳವನ್ನು ಕವಿಗಳು ಇನ್ನಾವುದರಲ್ಲೂ ತೋರಿಸಿಲ್ಲ. ಸೃಷ್ಟಿಯ ಬೇರೆ ಬೇರೆ ಪದಾರ್ಥಗಳಲ್ಲಿ ಕಾಣುವ ಚೆಲುವನ್ನೆಲ್ಲ ಸಂಗ್ರಹಿಸಿ ದೊಡ್ಡದೊಂದು ಗುಡಾಣದಲ್ಲಿ ಕುದಿಸಿ ಆ ಚೆಲುವಿನ ರಸದಿಂದ ಎರಕ ಹೊಯ್ದು ಹೆಣ್ಣಿನ ಗೊಂಬೆಯನ್ನು ಸೃಷ್ಟಿ ಸಿದಾರೆ ಇವರು. ಇಂಥ ಅಭಿನವ ಬ್ರಹ್ಮರಿಗೆ 'ಒಂದೇ ಒಂದು ನಿಯಮ' ವನ್ನು ಗಾಂಧೀಜೀ ಸೂಚಿಸುತ್ತಾರೆ. ಒಂದು ಒರೆಗಲ್ಲು ಕೊಡುತ್ತಾರೆ. 'ಅವರ ಬಗ್ಗೆ ಬರೆವಾಗ ನೀವು ಅವರನ್ನು ಏನೆಂದು ತಿಳಿದು ಬರೆಯುತ್ತೀರಿ? ನನ್ನ ಮಾತು ಕೇಳಿ. ಲೇಖನಿ ಹಿಡಿಯುವ ಮೊದಲು ಹೆಣ್ಣು ಎಂದರೆ ನಿಮ್ಮ ತಾಯಿ ಎಂದು ಧ್ಯಾನಿಸಿಕೊಳ್ಳಿ. ಬಾಯಾರಿದ ಭೂಮಿಗೆ ತಂಪು ನೀಡುವ ಮಳೆನೀರು ಆಕಾಶದಿಂದ ಸುರಿವಂತೆ ನಿಮ್ಮ ಲೇಖನಿಯಿಂದ ಪವಿತ್ರ ಸಾಹಿತ್ಯ ಹರಿದೀತು. ರೂಪ ವರ್ಣನೆಯ ವಿವರಗಳು ಸಾಹಿತ್ಯಕ್ಕೆ ಅಷ್ಟು ಅಗತ್ಯವೇನು? ನನಗೆ ಹಾಗೆ ಅನಿಸದು. ನಿಮ್ಮ ಸಾಹಿತ್ಯದಲ್ಲಿ ಹೆಣ್ಣನ್ನು ದೇವತೆ ಎನ್ನುತ್ತೀರಿ. ಆದರೆ ಅಲ್ಲಿರುವ ಭಾವ ಭಕ್ತಿಯಲ್ಲ, ಕಾಮ. ಅದು ಶುದ್ಧ ತಪ್ಪು.'

ಹೆಣ್ಣು ಅಬಲೆ ಎಂಬ ದುರ್ಭಾವವೊಂದು ಜನರಲ್ಲಿ ಹರಡಿದೆ. ಇದು ಹೀಗೆ ಏಕೆ ಎಂದು ಗಾಂಧೀಜೀ ಕೇಳುತ್ತಾರೆ. 'ಹೆಣ್ಣು ಅಬಲೆಯೆ? ಏತರಲ್ಲಿ ಅಬಲೆ? ನಾನಂತೂ ಅರಿಯೆ. ಗಂಡುಸಿನ ಹಾಗೆ ಹೆಣ್ಣು ಗೂಳಿ ಯಲ್ಲ; ಆ ಪಶುತ್ವ ಆಕೆಗೆ ಇವನಷ್ಟು ಇಲ್ಲ ಎಂಬುದು ಅದರ ಅರ್ಥವಾದರೆ ಸರಿ. ಆದರೆ ಆ ಮಾತಿನಿಂದ ಆಕೆ ಅಬಲೆ ಎಂದು ಅರ್ಥ ಹೊರಡುವುದಿಲ್ಲ. ಆಕೆಯ ಗುಣ ಉನ್ನತವಾದುದು ಎಂದು ಗೊತ್ತಾಗುತ್ತದೆ. ಕ್ಷಾತ್ರಬಲ ದಲ್ಲಿ ಆಕೆ ಅಬಲೆಯಾದರೆ ಕ್ಷಮಾಬಲದಲ್ಲಿ ಆಕೆ ಸಬಲೆ. ಹೆಣ್ಣು ಅಹಿಂಸೆ-ತ್ಯಾಗಗಳ ಪುತ್ಥಳಿ ಎಂದು ನಾನು ವರ್ಣಿಸಿದೇನೆ. ತಾನು ಗಂಡು ಜಾತಿಯ ಕೈಗೊಂಬೆ, ತನಗೆ ಏನೂ ಕೈಲಾಗದು ಎಂಬ ಭಾವವನ್ನು ಆಕೆ

ಬಿಡಬೇಕು. ಬಿಟ್ಟರೆ ತನಗೂ ತನ್ನ ಜೊತೆಗಾರನಿಗೂ–ತಂದೆ, ಮಗ, ಗಂಡ, ಯಾರೇ ಆಗಲಿ–ಜಗತ್ತನ್ನು ಹೆಚ್ಚು ವಾಸಯೋಗ್ಯವಾಗಿ ಮಾಡ ಬಲ್ಲಳು. ಆ ಶಕ್ತಿ ಆಕೆಗೆ ಉಂಟು. ನಿರರ್ಥಕವಾಗಿ ಜೀವಹಿಂಸೆ ಮಾಡುವ ಮಹಾ ಶಕ್ತಿ ಗಂಡುಸಿಗಿದೆ. ನಿಜ. ಇದನ್ನು ಕಲಿತು ಗಂಡುಸಿಗೆ ಇದಿರು ನಿಂತ ಹೆಣ್ಣು ಜಗದ್ಧಿತವನ್ನು ಮಾಡಲಾರಳು. ಗಂಡುಸು ತಪ್ಪು ಹೆಜ್ಜೆ ಹಾಕುತ್ತಿದಾನೆ. ಅದರಿಂದ ವಿನಾಶ ಕಾದಿದೆ. ಆ ವಿನಾಶಕ್ಕೆ ಅವನು ಒಬ್ಬನೇ ಹೋಗುವುದಿಲ್ಲ; ಹೆಣ್ಣನ್ನೂ ಎಳೆದುಕೊಂಡು ಹೋಗುತ್ತಾನೆ. ಅದು ಇಬ್ಬರನ್ನೂ ಕವಿಯುತ್ತದೆ. ಅವನನ್ನು ತಪ್ಪು ಹಾದಿಯಿಂದ ಸರಿಸಿ ವಿನಾಶದಿಂದ ಉಳಿಸುವುದು ಆಕೆಯ ಪುಣ್ಯವಾಗಲಿ.'

ಗಂಡಸಾಗಿ ಹುಟ್ಟಿದ್ದರೆ ಚೆನ್ನಾಗಿತ್ತು ಎಂಬ ಮಾತು ಹೆಂಗಸರಲ್ಲಿ ಅತಿ ಸಾಧಾರಣ. ಗಾಂಧೀಜೀ ಹೆಂಗುಸಿನ ಈ ಮೂರ್ಖತನಕ್ಕೆ ಮರುಗುತ್ತಾರೆ. ತಮ್ಮ ಜಾತಿಯುನ್ನು ತಾವೇ ಅಷ್ಟು ತುಚ್ಛವಾಗಿ ಕಾಣುವುದು ಸರಿಯಲ್ಲ. ಹೆಂಗುಸು ಹಾಗೆ ಬಯಸಲು ಕಾರಣವಿರಬಹುದಾಗಿದ್ದರೆ ಗಂಡುಸೂ ಹೆಣ್ಣಾಗಿ ಹುಟ್ಟಿದ್ದರೆ ಚೆನ್ನಾಗಿತ್ತು ಎಂದು ಬಯಸಲು ಕಾರಣವಿದೆ. ಆಂಧ್ರ ಪ್ರಾಂತದ ಗಲಾವಂತಿಯರನ್ನು ನೋಡಿ ಗಾಂಧೀಜೀ 'ನನಗೆ ಪುನರ್ಜನ್ಮ ಇರುವುದಾದರೆ ಇವರ ನಡುವೆ ಹುಟ್ಟಿ ಇವರ ಸೇವೆಮಾಡಬಯಸುತ್ತೇನೆ' ಎಂದರು. ಅಲ್ಲದೆ ಹೆಣ್ಣು ಲಕ್ಷ್ಮಿಯಲ್ಲವೆ. ಆಕೆಯ ಪವಿತ್ರ ಚರಿತ್ರೆ ಏನು ಕಡಮೆಯೇ?

ನಾಮರೂಪವನ್ನು ಮೀರಿ ಗಾಂಧೀಜೀ ಹೆಣ್ಣಿನಲ್ಲಿ ಆತ್ಮದ ಒಂದು ದಿವ್ಯ ತೇಜಸ್ಸನ್ನು ಕಂಡಿದಾರೆ. ಗಂಡಿನಲ್ಲಾಗಲಿ ಹೆಣ್ಣಿನಲ್ಲಾಗಲಿ ಧರ್ಮ ಅಧರ್ಮ, ಮಾನವತ್ವ–ಪಶುತ್ವ ಎರಡೂ ಬೆರೆತಿವೆ. ಅಧರ್ಮವನ್ನು ಬಿಟ್ಟು ಪಶುತ್ವವನ್ನು ಗೆದ್ದರೆ ಆ ದಿವ್ಯ ತೇಜಸ್ಸು ಬೆಳಗುತ್ತದೆ. ಹೆಣ್ಣಿನಲ್ಲಿ ಬೆಳಗು ವುದು ಅಹಿಂಸೆ–ಪ್ರೇಮ. ಈ ಹಾದಿಯಲ್ಲಿ ಗಾಂಧೀಜೀ ಹೆಣ್ಣು ಅನು ಗ್ರಹಮಯಿ ಎಂಬ ನಿಲುಕಿಗೆ ಬಂದಿದಾರೆ. ರಾಮಾನುಜೀಯ ಪಂಥದಲ್ಲಿ ಲಕ್ಷ್ಮಿಗೆ ಬಹಳ ಪ್ರಧಾನವಾದ ಸ್ಥಾನ. ಅವರ ನಾರಾಯಣನು ಲಕ್ಷ್ಮೀ ವಿಶಿಷ್ಟನಾದವ. ಲಕ್ಷ್ಮಿಯನ್ನು ಅವರು ಹೀಗೆ ವರ್ಣಿಸುತ್ತಾರೆ.

ಸಹಧರ್ಮಚರೀಂ ಶೌರೇಃ ಸಮ್ಮಂತ್ರಿತ ಜಗದ್ಧಿತಾಂ।
ಅನುಗ್ರಹಮಯೀಂ ವಂದೇ ನಿತ್ಯಮಜ್ಞಾತನಿಗ್ರಹಾಂ॥

ಲಕ್ಷ್ಮಿ ಶೌರಿಯ ಸಹಧರ್ಮಚರಿ, ಧರ್ಮದ ಸಂಗಾತಿ; ಯಾವಾಗಲೂ ಜಗದ್ಧಿತವನ್ನೇ ಚಿಂತಿಸುವವಳು; ಆಕೆ ಅನುಗ್ರಹಮಯಿ; ನಿಗ್ರಹ ಎಂಬುದನ್ನೇ ಅರಿಯದಾಕೆ. ಆಕೆಗೆ ನಮಸ್ಕಾರ. ಗಾಂಧೀಜಿಯ ಮನಸ್ಸಿನಲ್ಲೂ ಅದೇ ಭಾವನೆ ಇರಬೇಕೆನಿಸುತ್ತದೆ. ಅವರಿಗೆ ತಮ್ಮಲ್ಲಿರುವ 'ಎಲ್ಲ ಶುಭ ಗುಣವೂ' ತಮ್ಮ 'ತಾಯಿ ನೀಡಿದ ದಾನ.' 'ಅಂತಲೇ ಹೆಣ್ಣು ಎಂದರೆ ನನಗೆ ನನ್ನ ತಾಯಿಯ ಮೇಲೆ ಇದ್ದಷ್ಟು ಗೌರವ-ಭಕ್ತಿ. ಆಕೆ ಇಂದ್ರಿಯ ಭೋಗದ ವಸ್ತು ಎಂದು ನಾನು ಎಂದೂ ತಿಳಿದಿಲ್ಲ' ಎನ್ನುವುದು. ಹೆಂಗುಸಿನದು ಕ್ಷಾತ್ರವಲ್ಲ, ಕ್ಷಮೆ ಎಂದಾಗ ಅದೇ ಭಾವ; ಆಕೆಯ ಗುಣ ನಿಗ್ರಹವಲ್ಲ ಅನುಗ್ರಹ ಎಂದು. ಆಕೆಯು ಅಹಿಂಸೆಯ ಮೂರ್ತಿ ಎಂದಾಗಲೂ ಅದೇ ಭಾವ. ಆಕೆಯ ಕೆಲಸ ಜಗದ್ಧಿತ ಚಿಂತನೆ; ಜಗತ್ತಿಗೆ ಶಾಂತಿ ಬೀರುವುದು. ಆದರೆ ಗಂಡಸಿನ ದೌರ್ಜನ್ಯಜಾಲಕ್ಕೆ ಸಿಕ್ಕಿ ಹೆಂಗಸು ತನ್ನ ಸ್ವಭಾವ ಮರೆತು ಇದ್ದಾಳೆ. 'ಗಂಡುಸು ಹೆಂಗುಸನ್ನು ನಿಗ್ರಹಿಸಲು ಶಾಸನ-ಶಾಸ್ತ್ರ ಮಾಡಿದ್ದಾನೆ. ಆಕೆಯನ್ನು ತನ್ನ ಸಾಧನಸಾಮಗ್ರಿಯಾಗಿ ಮಾಡಿಕೊಂಡಿದ್ದಾನೆ. ಆಕೆಗೂ ಅದೇ ಪಾಠವಾಗಿದೆ. ಕಡೆಗೆ ಅದೇ ಸುಲಭವೂ ಸುಖವೂ ಆಗಿ ಕಂಡಿತು. ಕೆಳಗೆ ಬೀಳುವವರು ಇನ್ನೊಬ್ಬರನ್ನು ಜೊತೆಗೆ ಸೆಳೆದುಕೊಂಡು ಬಿದ್ದರೆ ಬೀಳಲು ಸುಲಭವಾಗುತ್ತದೆ.' ಈ ಸೆಳೆತದ ಸಾಧನವಾಗಿ ಕಾಮಶಾಸ್ತ್ರ, ಕೊಕ್ಕೋಕ ಮೊದಲಾದ ರತಿಶಾಸ್ತ್ರಗಳೆಲ್ಲ ಹುಟ್ಟಿದವು. ಗಂಡುಜಾತಿಯನ್ನು ಒಂದು ಮೇರೆ ತಪ್ಪದಹಾಗೆ ಇರಿಸಲು, ಅವರ ಅಧಿಕಾರ ತನಗೆ ಪೀಡೆಯಾಗದಂತೆ ಮಾಡಲು ಹೆಣ್ಣು ನಾನಾ ವಿದ್ಯೆಗಳನ್ನು ಕಲಿತಳು. ಒನಪು ಒಯ್ಯಾರ, ಬಿಂಕ ಬೇಟ, ಆಕೆಯ ಧರ್ಮವಾಯಿತು. ಇದನ್ನು ಕಂಡು ಗಾಂಧೀಜೀ ತುಂಬ ಮರುಗಿದ್ದಾರೆ. ಗಂಡುಸಿನ ಕಾಮವಾಸನೆಯನ್ನು ತೃಪ್ತಿಗೊಳಿಸುವುದೇ ಪರಮಾರ್ಥವೇ? ಎಂದು ಗದರಿಸಿ ಕೇಳುತ್ತಾರೆ. 'ಗಂಡುಸು ಕೊಟ್ಟ ಬಿರುದಿಗೆ ತಕ್ಕಂತೆ ಇರಬೇಕೆಂದು ನಿಮಗೆ ಆಸೆಯೇ? ನಿಮ್ಮ ರೂಪ ಸೌಂದರ್ಯವನ್ನು ಮನ ದಣಿಯುವ ಹಾಗೆ ವರ್ಣಿಸಿ ತೃಪ್ತಿಪಡಲಿ ಗಂಡುಸು ಎಂದು ನಿಮ್ಮ ಅಭಿಪ್ರಾಯವೇ? ಅದು ನಿಮಗೆ ಸಮ್ಮತವೇ? ಗಂಡಿನ ಕಣ್ಣಿಗೆ ನಿಮ್ಮ ರೂಪು ಅಂದವಾಗಿ ಕಾಣಲಿ ಎಂದು ಬಯಸುತ್ತೀರಾ?'

ಈ ಪ್ರಶ್ನೆ ಹಳ್ಳಿಯ ಹೆಂಗಸರನ್ನು ಕೇಳಿಲ್ಲ ಗಾಂಧೀಜೀ. ಕಲಿತವರಿಗೆ ಈ ಸವಾಲು ಹಾಕಿದಾರೆ. ಸೀತೆ ಅವರಿಗೆ ಆದರ್ಶ ಸ್ತ್ರೀ, ಆದರ್ಶ ಸತಿ. ' ಸೀತೆ ನಿಮ್ಮ ಹಾಗೆ ಸಿಂಗಾರ ಮಾಡಿಕೊಂಡು ರಾಮನ ಮನಸ್ಸು ಸೆಳೆಯುತ್ತಿದ್ದಿರಬಹುದೆ? ಛೆ, ಎಂದಿಗೂ ಇಲ್ಲ. ಸೀತೆ ರಾಮನ ದಾಸಿ ಆಗಿದ್ದಳು ಎಂದು ತಿಳಿದವರಿಗೆ ಸೀತೆಯ ಸ್ವತಂತ್ರ ಗುಣದ ಔನ್ನತ್ಯವಾಗಲಿ ರಾಮನ ಔದಾರ್ಯದ ವೈಶಾಲ್ಯವಾಗಲಿ, ಎರಡೂ ಗೊತ್ತಿಲ್ಲ. ಸೀತೆ ಕೈಲಾಗದ ಅಬಲೆಯಾಗಿರಲಿಲ್ಲ.'

ಸೀತೆ ಒಂದು ಸಲ ಗಂಡನಿಗೆ ಇದಿರಾಡಿದಳು. ರಾಮಾಯಣದಲ್ಲಿ ಈ ಪ್ರಸಂಗ ಬಹಳ ಮೆದುವಾಗಿ ವರ್ಣಿತವಾಗಿದೆ. ಗಂಡನೇ ದೇವರು ಎಂಬ ನೀತಿಗೆ ಗಂಡನಿಗಿಂತ ಧರ್ಮ ದೊಡ್ಡದು ಎಂಬ ಸೂತ್ರವನ್ನು ಸೀತೆ ಜೋಡಿಸಿದಾಳೆ. ಗಾಂಧೀಜಿಗೆ ಆ ಸಂದರ್ಭ ಬಹಳ ಮೆಚ್ಚಿನದು; ಬಹಳ ಬೆಲೆಯುಳ್ಳದ್ದು. ನಮ್ಮಲ್ಲಿ ಗಂಡಿಗೆ ಇದಿರಾಡುವುದು ಹೆಣ್ಣಿಗೆ ಒಂದು ಪಾಪವಾಗಿದೆ. ' ಧರ್ಮಕ್ಕಾಗಿ ಗಂಡನಿಗೆ ಇದಿರಾಡುವ ಕಲೆಯನ್ನೂ ನಮ್ಮ ಹೆಂಗಸರಿಗೆ ಕಲಿಸಬೇಕು ' ಎನ್ನುತ್ತಾರೆ ಗಾಂಧೀಜೀ. 'ಗಂಡನ ಕಾಮನಿರೋಧಕ್ಕೆ ತನಗೆ ಅಧಿಕಾರ ಇಲ್ಲ ಎಂದು ಹೆಂಗಸು ತಿಳಿದಿದಾಳೆ. ಅದು ತಪ್ಪು. ಆ ಅಧಿಕಾರ ಆಕೆಗೆ ಸಹಜವಾದುದು, ಮೂಲಭೂತವಾದುದು. ಈ ಮಾತನ್ನು ಗಾಂಧೀಜೀ ಸಾರಿಸಾರಿ ಹೇಳುತ್ತಾರೆ; ನಗೆ ಮಾತಿನಲ್ಲಿ, ಗಂಭೀರೋಪದೇಶದಲ್ಲಿ, ವಿಷಾದದ ಉದ್ಗಾರದಲ್ಲಿ—ಅನೇಕ ಪ್ರಕಾರವಾಗಿ ಅದು ಹೊರಬೀಳುತ್ತದೆ. ' ನನ್ನ ಹೆಂಡತಿಯೇ ನನಗೆ ಸರ್ವ ಸ್ತ್ರೀಲೋಕ. ಆಕೆಯನ್ನು ಅರ್ಥಮಾಡಿಕೊಂಡಾಗ ನನಗೆ ಇಡೀ ಹೆಣ್ಣು ಜಾತಿಯ ಮನಸ್ಸೇ ಅರ್ಥವಾಯಿತು.' ಅವರ ಆಶ್ರಮ ಜೀವನದಲ್ಲಿ ಆಫ್ರಿಕಾದಲ್ಲೂ ಹಿಂದುಸ್ಥಾನದಲ್ಲೂ ಅವರಿಗೆ ಅನೇಕ ಜನ ಹೆಂಗಸರೊಡನೆ ಬಾಳಬೇಕಾಗಿ ಬಂದಿದೆ. ಕೆಲವರು ಬಳಗದವರು ಕೆಲವರು ಗೆಳೆಯರು. ಇವರಲ್ಲಿ ಬೇರೆ ಬೇರೆ ಜಾತಿ ಬೇರೆ ಬೇರೆ ದೇಶದವರೂ ಇದ್ದರು. ಈಗಲೂ ಇದಾರೆ. ಇವರ ಕೆಲಸದಲ್ಲಿ ಅವರೂ ಪಾಲುಗೊಂಡಿದಾರೆ. ಅವರಿಗೆಲ್ಲ ಈ ಮಂತ್ರೋಪದೇಶವಾಗಿದೆ. ' ಅವರಿಗೆ ಈ ವಿದ್ಯೆ ಕಲಿಸಿದೇನೆ. ನನ್ನ ದಿನಗಳು ಬಹಳ ಉಳಿದಿಲ್ಲ. ಉಳಿದಿರುವ ಆಯುಷ್ಯದಲ್ಲಿ ಹೆಣ್ಣು ಜಾತಿಗೆ ಈ

ಸ್ವಾತಂತ್ರ್ಯ ಮಂತ್ರ ಕಲಿಸಬೇಕೆಂದಿದೇನೆ. ಅವರ ಮನಸ್ಸಿಗೆ ಈ ಸತ್ಯ ತಿಳಿಯುವ ಹಾಗೆ ಹೇಳಬೇಕೆಂದಿದೇನೆ' ಎನ್ನುತ್ತಾರೆ.

ಗಾಂಧೀಜಿಯ ಬಾಳು ಸೋತವರ ಗೆಲುವಿಗಾಗಿ ಮೀಸಲಾಗಿದೆ; ದಲಿತರ ಉದ್ಧಾರಕ್ಕಾಗಿ, ಬಡ ಕುರಿಗಳ ಮೋಕ್ಷಕ್ಕಾಗಿ ಮುಡಿಪಾಗಿದೆ. ಅಂತೇ ಸ್ತ್ರೀಜನ ಸಮಸ್ಯೆಯ ಬಗ್ಗೆ ಅವರಿಗೆ ಅಷ್ಟು ಉತ್ಸಾಹ. ಆ ಸೇವೆ ಯಲ್ಲಿ ಅವರಿಗೆ ಮಾತೃಪೂಜೆ ಕಂಡಿದೆ. ಈ ಪೂಜೆಗೆ ತಮಗೆ ಅರ್ಹತೆ ಇದೆ ಎಂದು ಅವರು ತಿಳಿದಿದಾರೆ. 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹಕ್ಕೆ ಬನ್ನಿ ಎಂದು ಹೆಂಗಸರನ್ನು ಕರೆದಾಗ ನನಗೆ ತಿಳಿಯಿತು–ಸ್ತ್ರೀಜನ ಸೇವೆಗೆ ನನಗೆ ಯೋಗ್ಯತೆ ಇದೆ ಎಂಬುದು. ನನ್ನ ಮಾತು ಅವರ ಹೃದಯಕ್ಕೆ ನೇರಾಗಿ ತಾಕುತ್ತಿದ್ದುದು ನನಗೇ ಅಚ್ಚರಿಯಾಯಿತು. ಮುಸ್ಲಿಮ್ ಹೆಂಗಸರಿಗೆ ಕೂಡ ನನ್ನ ಬಳಿ ನಿಸ್ಸಂಕೋಚ; ಅವರು ನನ್ನ ಮುಂದೆ ಪರದೆ ಹಾಕಿ ಕೊಳ್ಳುತ್ತಿರಲಿಲ್ಲ.'

ಹಿಂದೂಸ್ತಾನದ ಹೆಂಗಸರಲ್ಲಿ ಈಚೆಗೆ ಅದ್ಭುತವಾದ ಜಾಗೃತಿ ಉಂಟಾಗಿದೆ. ಮೊನ್ನೆ ಮೊನ್ನೆಯವರೆಗೆ ತೊತ್ತಾಗಿದ್ದ ಹೆಂಗಸು ಇಂದು ರಾಜಕೀಯ ರಂಗದಲ್ಲಿ ಸಮಾನವಾದ ಹೆಜ್ಜೆ ಹಾಕುತಿದಾಳೆ. ಗಾಳಿಬೆಳಕು ಸೋಕಿದರೆ ಮೈ ಮೈಲಿಗೆಯಾದೀತು ಎಂದು ಪರದೆಯ ಹಿಂದೆ ಹುದುಗಿಸಲ್ಪ ಟ್ಟಿದ್ದಾಕೆ ರಾಷ್ಟ್ರಮಾತೆ ಆಗಿದಾಳೆ, ಮಂತ್ರಿ ಆಗಿದಾಳೆ. ಅಡಿಗೆಯ ಮನೆ ಯಲ್ಲಿ ಸಂಜೆಗತ್ತಲಿನಲ್ಲಿ ಕರಿಯ ಜಾವುಗ ಬಂದರೆ ಚಿಟ್ಟನೆ ಚೀರಿಕೊಳ್ಳು ತ್ತಿದ್ದ ಮಹಾಧೀರೆ ಇಂದು ಪೋಲೀಸರ ಲಾಠೀ ಪ್ರಯೋಗವನ್ನು ತಾನಾಗಿ ಸಹಿಸುತ್ತಿದಾಳೆ. ಇದೆಲ್ಲ ಈ ಗಾಂಧೀಯುಗದಲ್ಲಿ ಆಗಿದೆ. ಗಾಂಧೀಜಿ ಗಿಂತ ಮೊದಲು ಹಿಂದೂಸ್ತಾನದ ಹೆಂಗಸರನ್ನು ಆ ಕೂಪದಿಂದ ಎತ್ತಲು ಹೆಣಗಿದವರು ಬಹಳ ಮಂದಿ ಇದಾರೆ. ಶಂಕರಾಚಾರ್ಯರಿಗೆ ಮೊದಲು ಅದ್ವೈತ ಇರಲಿಲ್ಲ ಎಂದಲ್ಲ. ಹಾಗೇ ಗಾಂಧೀಜಿಯ ಕೈವಾಡಕ್ಕೆ ಈ ಕೀರ್ತಿ ಮುಖ್ಯವಾಗಿ ಸಲ್ಲಬೇಕು.

'ಸತ್ಯಾಗ್ರಹದಿಂದಲೇ ಸ್ತ್ರೀಜನ ಸಮಸ್ಯೆಗೆ ನನ್ನ ಸೇವೆ ಮೊದಲಾ ಯಿತು' ಎಂದಿದಾರೆ ಗಾಂಧೀಜೀ. 'ಹಳ್ಳಿಯ ಹೆಂಗಸರಿಗೆ ಹಿಂದೆ ಅವರು ಯಾವಾಗಲೂ ಕಂಡು ಅರಿಯದ ಶಕ್ತಿ ಗೌರವಗಳನ್ನು ಕೊಟ್ಟಿತು ಸತ್ಯಾ

ಗ್ರಹ. ಉಪ್ಪಿನ ಸತ್ಯಾಗ್ರಹ ಸಾವಿರಾರು ಜನ ಹೆಂಗಳೆಯರನ್ನು ಅವರ ಗವಿಗಳಿಂದ ಹೊರಗೆಳೆದು ಗಂಡಸಿನೊಡನೆ ಸರಿಸಮವಾಗಿ ದೇಶಸೇವೆ ಮಾಡಲು ಹಚ್ಚಿತು.' ನಿಜವಾಗಿಯೂ ಹಿಂದುಸ್ಥಾನದ ಹೆಂಗಸರ ಮೋಕ್ಷ ಸತ್ಯಾಗ್ರಹದಿಂದ ಆದ ಹಾಗೆ ಮತ್ತಾವುದರಿಂದಲೂ ಆಗಿಲ್ಲ. ಕಾಂಗ್ರೆಸ್ಸಿನಲ್ಲಿ ನಿರ್ಭಯವಾಗಿ ನಲಿದಾಡುವ ನಾನಾ ಪ್ರಾಂತಗಳ ಕೇಸರೀ ಬಣ್ಣದ ಸ್ವಯಂ ಸೇವಕಿಯರೇ ಅದಕ್ಕೆ ಸಾಕ್ಷಿ. ಗಾಂಧೀಜೀ ಹೇಳಿದುದು ಅಭಿಮಾನದ ಮಾತಲ್ಲ. 'ಸತ್ಯಾಗ್ರಹ ನಮ್ಮ ಹೆಂಗಸರಿಗೆ ಹೊಸತೊಂದು ಶಕ್ತಿ, ದೃಷ್ಟಿ ಕೊಟ್ಟಿತು. ಅದರಲ್ಲಿ ಪ್ರಧಾನ ಪಾತ್ರವಹಿಸಲು ಹೆಂಗಸಿನ ರಾಮಬಾಣ–ಶಾಂತಿ ಸೈರಣೆ ಸತ್ಯ ನಿರ್ಭಯಗಳು. ಆಕೆಯ ಸ್ವಭಾವಕ್ಕೆ ಹಿಂಸೆ ಕೇವಲ ರಾಕ್ಷಸ ಗುಣ. ಆ ದಾರಿ ಆಕೆಯದಲ್ಲ. ಪರರಿಗಾಗಿ ದುಃಖ ನುಂಗುವುದು, ಜಗದ್ಧಿತಕ್ಕಾಗಿ ಆತ್ಮತ್ಯಾಗ ಮಾಡುವುದು ಆಕೆಯ ದಾರಿ. ಆಕೆಯ ಪ್ರಕೃತಿಯೇ ಅದನ್ನು ಆಕೆಗೆ ಕಲಿಸುತ್ತಿದೆ. ಮಕ್ಕಳನ್ನು ಹೆತ್ತು ಸಲಹುವ ಆಕೆಯ ಶರೀರ ಧರ್ಮವೇ ಆಕೆಗೆ ಸತ್ಯಾಗ್ರಹದ ತತ್ವವೇಕೆ, ಆಚರಣೆಯನ್ನೇ ಕಲಿಸುತ್ತಿದೆ. ಜಗತ್ತಿನಲ್ಲಿ ಕಾಲಿಟ್ಟ ಪ್ರತಿಯೊಂದು ಮಗುವೂ ಆಕೆಯ ಸಹನೆಯ ಹೂವು, ಆತ್ಮತ್ಯಾಗದ ನೋಂಪಿಯ ಹಣ್ಣು. ಅಲ್ಲಿಗೇ ಮುಗಿಯಲಿಲ್ಲ. ಆ ಅಹಿಂಸೆಯ ದಿವ್ಯಪ್ರೇಮದ ತಪಸ್ಸು. ಬಾಲ್ಯದಲ್ಲಿ ಮಗುವನ್ನು ಬೆಳೆಸುವಾಗ ಸಾವಿರ ಸಂದರ್ಭಗಳಲ್ಲಿ ಆ ವ್ರತದ ಕಠಿನ ಪರೀಕ್ಷೆಯಾಗುತ್ತದೆ. ನಮಗಾಗಿ, ನಮ್ಮಲ್ಲಿ ಅವರು ಇಟ್ಟ ಪ್ರೀತಿಗಾಗಿ, ಆ ಕಷ್ಟ ನಿಷ್ಠುರಗಳನ್ನು ಅವರು ಸೋಸುತ್ತಾರೆ. ಅವರಂತೆ ನಾವೂ ಮಾನವ ಕೋಟಿಯ ದುಃಖ ನಿವಾರಣೆಗಾಗಿ ಸಂತೋಷದಿಂದ, ಸಮರ್ಪಣೆಯ ದೃಷ್ಟಿಯಿಂದ, ದುಃಖಪಾನದ ವ್ರತ ಹಿಡಿಯಬೇಕೆಂಬುದೇ ಸತ್ಯಾಗ್ರಹದ ಸಂದೇಶ.' ಈ ದಾರಿಯಲ್ಲಿ ಗಂಡಸರಾದ ನಮಗಿಂತ ಅವರು ಶತಯೋಜನ ದೂರ ಮುಂದೆ ಹೋಗಿದಾರೆ. ಆ ಆನುಭವದಲ್ಲಿ ನಮಹಾದಿ ಇದೆ. ಅವರ ಮುಂದಾಳುತನದಲ್ಲಿ ನಮ್ಮ ಮೋಕ್ಷವಿದೆ.

ಅಹಿಂಸೆಯೇ ಪರಮಧರ್ಮ ಎಂದು ನಮ್ಮವರು ಹಿಂದೆಯೇ ಹೇಳಿದಾರೆ. ಕೋಟಿ ಗ್ರಂಥದಲ್ಲಿ ಅಡಕವಾದ ಧರ್ಮಸೂಕ್ಷ್ಮ ಇದು. 'ಪೂರ್ಣ ಅಹಿಂಸೆಯ ಇದಿರಿನಲ್ಲಿ ಬೆಳಕಿನ ಮುಂದೆ ಕತ್ತಲಿನಂತೆ ಹಿಂಸೆ ಕರಗಿಹೋಗು

ತ್ರದೆ' ಎಂದು ಯೋಗಾಚಾರ್ಯ ಪತಂಜಲಿ ಋಷಿ ಸಾರಿದಾನೆ. ಯೇಸು ಕ್ರಿಸ್ತನೂ ಅಹಿಂಸೆಯನ್ನೇ ನಂಬಿದ ಮಹಾನುಭಾವ. ಆದರೆ ಇಲ್ಲೆಲ್ಲೂ ಗಾಂಧೀಜಿಗೆ ಅಹಿಂಸೆಯ ಪಾಠ ಸಿಗಲಿಲ್ಲ; ಆ ದೀಕ್ಷೆ ಸಿಗಲಿಲ್ಲ. ಅವರ ಹೆಂಡತಿ ಕಸ್ತೂರಿಬಾಗೆ ಆ ಗುರುತ್ವ ಸಲ್ಲಬೇಕು.

'ನನ್ನ ಹೆಂಡತಿಯನ್ನು ನನ್ನ ಮನಸ್ಸಿಗೆ ತಕ್ಕಂತೆ ಬಗ್ಗಿಸುವ ಪ್ರಯತ್ನದಲ್ಲಿ ಆಕೆಯಿಂದ ನಾನೇ ಅಹಿಂಸೆಯ ಪಾಠವನ್ನು ಕಲಿತೆ. ನನ್ನ ಹಟಕ್ಕೆ ಮಣಿಯದೆ ದೃಢವಾಗಿ ವಿರೋಧಿಸುವುದೊಂದು ಕಡೆ; ನನ್ನ ಮೂರ್ಖ ದೌರ್ಜನ್ಯದ ಪೀಡೆ ಸದ್ದಿಲ್ಲದೆ ಸೈರಿಸುವುದು ಒಂದು ಕಡೆ. ಇದು ನನ್ನನ್ನು ನಾಚಿಸಿ ಆಕೆಯನ್ನು ಆಳಲಿಕ್ಕೇ ನಾನು ಹುಟ್ಟದೇನೆ ಎಂಬ ನನ್ನ ಪಿತ್ತವನ್ನು ಪೂರಾ ಇಳಿಸಿತು. ಹೀಗಾಗಿ ಪರಿಣಾಮದಲ್ಲಿ ಅಹಿಂಸೆಯ ಹಾದಿಯಲ್ಲಿ ಆಕೆ ನನ್ನ ಗುರು ಆದಳು. ನಾನು ದಕ್ಷಿಣ ಆಫ್ರಿಕಾದಲ್ಲಿ ಮಾಡಿದ್ದೇನು? ಆಕೆ ಅರಿಯದೆ ಅನುಸರಿಸಿದ ಸತ್ಯಾಗ್ರಹ ಧರ್ಮವನ್ನೇ ನಾನು ಅರಿತು ಬೆಳೆಸಿದೆ. ಅಷ್ಟೆ.' ಅಂತೆಯೇ ಸತ್ಯಾಗ್ರಹದಲ್ಲಿ ಪುಸ್ತಕ ಪಾಂಡಿತ್ಯದ ಗೋಜು ಇಲ್ಲ. ಅದಕ್ಕೆ ಬೇಕಾದುದು ದೃಢ ಆತ್ಮವಿಶ್ವಾಸ, ಅಚಲ ಪ್ರೇಮ. ಅದು ಜ್ಞಾನ ಮಾರ್ಗವಲ್ಲ, ಭಕ್ತಿಪಂಥ.

ಇದೇ ಕಾರಣವಿದ್ದೀತು, ಸ್ತ್ರೀಲೋಕದ ಮೇಲೆ ಗಾಂಧೀಜಿಗೆ ಇರುವ ಹಿಡಿತಕ್ಕೆ. ಇದಲ್ಲದೆ ಗಾಂಧೀಜಿಯ ಕಾಮಧೇನುವಾದ ರಾಟೆಗೂ ಹೆಂಗಸರಿಗೂ ಇರುವ ಸಂಬಂಧ ಯಾರಿಗೆ ಗೊತ್ತಿಲ್ಲ. ಚರಖಾ ಬಡಕೂಲಿ ಹೆಣ್ಣುಮಗಳ ಪಾಲಿನ ವಿಷ್ಣುಚಕ್ರ. ಆ ದಿನ ಮೊರೆ ಇಟ್ಟವಳು ಒಬ್ಬ ದ್ರೌಪದಿ. ಇಂದು ಹಿಂದುಸ್ಥಾನದ ಬಡ ಹೆಂಗಸರೆಲ್ಲರ ಗೋಳೂ ಕೇಳಿಸುತ್ತಿದೆ. ಮನೆಮನೆಯಲ್ಲಿಯೂ ಚಕ್ರಾವತಾರವಾಗಬೇಕಾಗಿದೆ; ದರಿದ್ರ ನಾರಾಯಣನ ಚಕ್ರ. ಹೀಗೆ ಹೇಳಿದವರು ಕವಿಯಲ್ಲ. ಅಲಂಕಾರಕ್ಕಾಗಿ ಹಾಗೆ ಹೇಳಲಿಲ್ಲ. ಹಾಗೆ ಅಂದವರು ಗಾಂಧೀ ದರ್ಶನಕ್ಕೆ ಬಂದಿದ್ದ ಒಬ್ಬ ಹೆಂಗಸು.

ಅದು ಹೇಗಾದರೂ ಇರಲಿ. ಸ್ತ್ರೀಲೋಕದ ಶ್ರದ್ಧೆ ವಿಶ್ವಾಸ-ಸಹಾಯ ಸಾಹಚರ್ಯ ಗಾಂಧೀಜಿಗೆ ದೊರೆತ ಹಾಗೆ ಯಾರಿಗೂ ದೊರೆತಿಲ್ಲ. ಗಾಂಧೀಜಿಗಾಗಿ ಬಡತನವನ್ನು ಸಂತೋಷದಿಂದ ಸ್ವೀಕರಿಸಿದ ಆಗರ್ಭ ಶ್ರೀಮಂತಿಸಿಯರು ಇದಾರೆ. ಬಾಪೂಜಿಯ ಶುಶ್ರೂಷೆಗೆ ಎಂದು ಆಜೀವ ಬ್ರಹ್ಮಚರ್ಯದ

ಕಠಿನ ವ್ರತವನ್ನು ತೊಟ್ಟ ಕೋಮಲೆಯರು ಉಂಟು. ಅವರ ಮನಸ್ಸಂತೋಷಕ್ಕಾಗಿ ಕೆಲವು ಜನ ಪರಮ ಸನಾತನಿಯರು ಸಂಪ್ರದಾಯವನ್ನು ಮುರಿದಿದಾರೆ. ಕೆಲವರು ಇಂಗ್ಲೀಷು ಹೆಂಗಸರು ಮಹಾತ್ಮರನ್ನು ಅನುಸರಿಸಿ ಸ್ವಜಾತಿಗೆ ಬೇಡದವರು ಆಗಿದಾರೆ. ಮೀರಾಬೇನಳಂತೂ ಸರ್ವ ಧರ್ಮವನ್ನೂ ಬಿಟ್ಟು 'ತಂ ಏಕಂ' ಅವರೊಬ್ಬರನ್ನೇ ಶರಣು ಹೋಗಿದಾಳೆ.

ಗಾಂಧೀಜಿಯ ಸೇನೆಯಲ್ಲಿ ಅಬಲೆಯರೇ ಬಹಳ. ಅಹಿಂಸೆಯ ಋಷಿಯಾದ ಇವರಿಗೆ ಇದು ಸರಿ ತಾನೆ! ಶುಶ್ರೂಷಾಪರಾಯಣೆ ಮೀರಾ ಬೇನ್, ಮೈಗಾವಲಿನ ಸುಶೀಲಾ ನಾಯರ್, ರಾಯಭಾರಿ ಅಮೃತಕುವರ್, ಉತ್ಕಲದ ಶಾಂತಿಲಕ್ಷ್ಮಿ ರಮಾದೇವಿ ಚೌಧುರಿ, ಜ್ಯೋತಿ ಸಂಘದ ಜೀವ ಮೃದುಲಾಬೇನ್, ತ್ಯಾಗಪ್ರಾಣೆ ಭಕ್ತಿಲಕ್ಷ್ಮಿ ಬಾ, ಗಾಂಧೀಸೇವಾ ಸೇನೆಯ ಕ್ಯಾಪ್ಟನ್ ಗೋಷೀಬೇ಼ ಪೆರೀನ್‌ಬೇನರು, ಸತ್ಯಾಗ್ರಹಿ ಪ್ರೇಮಾಕಂಟಕ್, ತಾಲೀಮೀ ಸಂಘದ ಆಶಾದೇವಿ ಮುಂತಾದವರು ಹಿಂದುಸ್ಥಾನಕ್ಕೆ ಚೆನ್ನಾಗಿ ಪರಿಚಿತರಾಗಿದಾರೆ. ಜನಸಾಮಾನ್ಯಕ್ಕೆ ಪರಿಚಯವಾಗದವರು ಇನ್ನೂ ಎಷ್ಟೋ ಮಂದಿ ಇದಾರೆ.

ಈ ಗುಂಪಿನಲ್ಲಿ ಈಚೆಗೆ ಕುಮಾರಿ ಅಮ್ತುಸ್ ಸಲಾಮಳ ಹೆಸರು ಕೊಂಚ ಪ್ರಚಾರವಾಯಿತು. ಸಿಂಧುಪ್ರಾಂತಕ್ಕೆ ಬಾಪೂಜಿಯ ಶಾಂತಿ ದೂತಿಯಾಗಿ ಈಕೆ ಸಂಧಾನಕ್ಕೆ ಹೋಗಿದಾಳೆ. ಹಿಂದು-ಮುಸ್ಲಿಮ್ ಸೌಹಾರ್ದಕ್ಕಾಗಿ ತನ್ನ ಪ್ರಾಣವನ್ನೇ ಬಲಿಕೊಡುವ ಮಹಾಸಂಕಲ್ಪ ಈಕೆಯದು.

ಕುಮಾರಿ ಸಲಾಮಳು ಇನ್ನೂ ಚಿಕ್ಕ ಪ್ರಾಯದ ಹುಡುಗಿ. ೨೩-೨೪ ವರುಷ ವಯಸ್ಸಿರಬಹುದು. ಮೈಯೋ ಎಲೆಯ ಬಳ್ಳಿಯ ಹಾಗೆ ಅತಿ ದುರ್ಬಲ. ಆರೋಗ್ಯವೂ ಅಷ್ಟೆ. ಸೇವಾಗ್ರಾಮದಲ್ಲಿ ಆಕೆಯ ಕೆಲಸ ಗಾಂಧೀಜಿಯ ಶುಶ್ರೂಷೆ. ಮೀರಾಬೇನ್ ಆಶ್ರಮದಲ್ಲಿ ಇಲ್ಲದಾಗ ಆಕೆಯ ಪಾಲಿನ ಕೆಲಸವೆಲ್ಲ ಈಕೆಯ ಪಾಲಿಗೆ. ಬಾಪೂಜಿಯ ಊಟ ಉಪಚಾರ ಈಕೆಯ ಕೆಲಸ.

ಸಲಾಮಳು ಸೇವಾಗ್ರಾಮಕ್ಕೆ ಬರುವ ಮೊದಲು ಸಾಬರಮತಿಯಲ್ಲಿಯೂ ಇದ್ದಳು. ಹಲವು ವರ್ಷಗಳಿಂದ ಈಕೆ ಆಶ್ರಮವಾಸಿನಿಯಾಗಿ

ಬಾಪೂಜಿಯ ಪರಿವಾರದೊಳಗೆ ಸೇರಿಹೋಗಿದಾಳೆ. ಈಕೆಯ ತಂದೆ ಪಟಿಯಾಲಾ ಸಂಸ್ಥಾನದಲ್ಲಿ ಮೀರ್ ಮುನಷಿ–ಮುಖ್ಯ ಮುತ್ಸದ್ದಿ–ಆಗಿದ್ದರು. ಸಾಧಾರಣ ಶ್ರೀಮಂತರ ಮನೆತನ. ಈಗಲೂ ಅವರ ಮಕ್ಕಳು–ಕುಮಾರಿಯ ಅಣ್ಣತಮ್ಮಂದಿರು–ಮುಂಬಯಿಯಲ್ಲಿ ಅಚ್ಚುಕಟ್ಟಾಗಿ ವ್ಯಾಪಾರ ಮಾಡಿಕೊಂಡು ಚೆನ್ನಾಗಿ ಗಳಿಸುತ್ತಿದಾರೆ. ಅವರ ಜೊತೆಯಲ್ಲಿ ಇದ್ದರೆ ಈಕೆಗೆ ಎಲ್ಲ ಸೌಖ್ಯವೂ ಉಂಟು. ಸಿರಿವಂತಿಕೆಯಲ್ಲಿ ಬದುಕಬಹುದು. ಅವರಿಗೂ ತಮ್ಮ ತಂಗಿ ತಮ್ಮ ನಡುವೆ ಇರಲಿ ಎಂಬ ಆಶೆಯಿದೆ.

ಆದರೆ ಬಾಪೂಜಿಯ ಆಶ್ರಮಜೀವನದ ರುಚಿ ನೋಡಿದ ಈ ಜೀವಿಗೆ ಮತ್ತೆ ಸಿಂಗಾರ ಬಂಗಾರದ ಬದುಕು ರುಚಿಸೀತು ಹೇಗೆ? ಆಶ್ರಮದಲ್ಲಿ ಬದುಕು ತುಂಬಾ ಕಷ್ಟವಾದುದು. ಮೈಗೆ ಆ ಒರಟು ಬಾಳು ಸಹಿಸೀತು. ಆದರೆ ಮನಸ್ಸಿಗೆ ಆ ನಿಯಮಗಳ ಪಾಲನೆ ಬಹಳ ಕಷ್ಟ. ಆದರೂ ಆಕೆ ಆಶ್ರಮವನ್ನು ಬಿಡಲಿಲ್ಲ.

ಕುಮಾರಿ ಸಲಾಮಳ ಮೈಕಟ್ಟು ತುಂಬಾ ಅದೃಢ. ಗಾಳಿ ಬೀಸಿದರೆ ಹಾರಿಹೋಗುವ ಹಾಗೆ ಇದಾಳೆ. ಆರೋಗ್ಯವೂ ಅಷ್ಟೆ. ಆದರೆ ಆ ಬಡಕಲು ಮೈಯಲ್ಲಿ ಇರುವ ಧೈರ್ಯ, ತ್ಯಾಗ ಬಹಳ ಹೆಚ್ಚಿನದು. ಸತ್ಯಾಗ್ರಹವೇ ಹಾಗೆ. ಆ ಸೇನೆಯಲ್ಲಿ ದುರ್ಬಲರಿಗೂ ರೋಗಿಗಳಿಗೂ, ಹೆಣ್ಣಿಗೂ ಗಂಡಿಗೂ, ಹುಡುಗರಿಗೂ ಮುದುಕರಿಗೂ ಎಲ್ಲರಿಗೂ ಸ್ಥಾನವುಂಟು.

ಇಲ್ಲೇ ಅಲ್ಲ. ವಿಲಾಯತಿಯಲ್ಲೂ ಇದೆ ಈ ಗುಂಪು. ಕಳೆದ ವರ್ಷ ರಾಜಕೋಟೆಯ ಪ್ರಕರಣದಲ್ಲಿ ರಾಯಭಾರಿಯಾಗಿ ನಡೆದು ವೈಸರಾಯ್–ಗಾಂಧೀ ಭೇಟಿಯನ್ನು ಸಾಂಗಗೊಳಿಸಿದ ಅಗಾಥಾ ಹ್ಯಾರಿಸನ್ ಯಾರಿಗೆ ಗೊತ್ತಿಲ್ಲ! ಚಕ್ರಗೋಷ್ಠಿಗೆಂದು ಇಂಗ್ಲೆಂಡಿಗೆ ಗಾಂಧೀಜೀ ಹೋಗಿದ್ದಾಗ ಭವ್ಯವಾದ ಅರಮನೆಗಳಲ್ಲಿ ವಾಸಮಾಡಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಬಡಬಗ್ಗರ ಕೇರಿಯಲ್ಲಿ ದೀನಸೇವಾಶ್ರಮದಲ್ಲಿ ಇದ್ದರು. ಆ ಕಿಂಗ್ಸ್ಲೀ ಹಾಲಿನಲ್ಲಿ ಇಂದಿಗೂ ಗಾಂಧೀಜೀ ನೆಟ್ಟ ಒಂದು ಮರ ಇದೆ. ಈಗಲೂ ಮಹಾತ್ಮರು ವಾಸವಾಗಿದ್ದ ಕೋಣೆ ಎಂದು ಒಂದು ಕೋಣೆಯನ್ನು ತೋರಿಸುತ್ತಾರೆ. ಗಾಂಧೀಜೀ ಅಲ್ಲಿ ಇಳಿಯುವ ಹಾಗೆ ಮಾಡಿದ್ದು ಆ ಕಿಂಗ್ಸ್ಲೀಹಾಲಿನ ಯಜಮಾನಿ ಮ್ಯೂರಿಯಲ್ ಲೆಸ್ಟರಳ ಭಕ್ತಿ.

ಗಾಂಧೀಜೀ ಹಿಂದೂ ಬೈರಾಗಿಗಳ ರೀತಿಯವರು. ಅರ್ಧ ದಿಗಂಬರ ಸನ್ಯಾಸಿ! ವಿಲಾಯತಿಯಲ್ಲಿ ಸಾಧುಸತ್ಪುರುಷರು ಕೂಡಾ ಪೂರ್ಣ ವಸ್ತ್ರ ಧಾರಿಗಳು. ಇಂಥ ವೇಷದಿಂದ ಇನ್ನೊಬ್ಬರು ಯಾರಾದರೂ ವಿಲಾಯತಿಗೆ ಹೋದರೆ ಹುಡುಗರು ಹುಚ್ಚುನಾಯನ್ನು ಕಲ್ಲಿನಿಂದ ಹೊಡೆದು ಕೊಲ್ಲು ವಂತೆ ಅಲ್ಲಿನ ಜನ ಮಾಡಿಯಾರು. ಆದರೆ ಇವರಿಗೆ ಎಷ್ಟು ಮರ್ಯಾದೆ! ಬೆಳಗಿನ ಜಾವದ ಛಳಿ ಅಲ್ಲಿ ಹಿಮದಂತೆ ಕೊರೆಯುತ್ತದೆ. ಇವರ ಪ್ರಾರ್ಥನೆ ಗಳಿಗೆ ಬರಬೇಕಾದರೆ ಅಲ್ಲಿನ ಜನರಿಗೆ ಅದೊಂದು ಕಠಿನ ಪರೀಕ್ಷೆ. ಇಷ್ಟಾ ದರೂ ಆ ನಾಲ್ಕು ದಿನ ಬಾಪೂಜಿಯ ಜೊತೆಯಲ್ಲಿ ಇದ್ದು ತಮ್ಮ ಬಾಳನ್ನು ಬೆಳಗಿಸಿಕೊಳ್ಳಬೇಕು ಎಂದು ಪ್ರಯತ್ನಪಟ್ಟವರಲ್ಲಿ ಹೆಂಗಸರೇ ಬಹಳ.

ಆ ಸೆಳೆತವನ್ನು ವಿಂಗಡಿಸಿ ವಿಮರ್ಶಿಸಿ, ಇಲ್ಲಿದೆ ಅದರ ಮೂಲ ಎಂದು ಹೇಳುವುದು ಬಲು ಕಷ್ಟ. ಹೆಣ್ಣಿನ ಬಾಳಿನಲ್ಲಿ ತ್ಯಾಗವೇ ಧ್ರುವಶ್ರುತಿ. ತ್ಯಾಗವನ್ನು ಕಂಡು ಅದು ಸಹಜವಾಗಿಯೇ ಮಿಡಿಯುತ್ತದೆ. ಧರ್ಮವು ಹೆಂಗಸರ ಗುತ್ತಿಗೆ ಎಂದು ಹೇಳುವುದುಂಟು. ಅದು ನಿಜ ಇರಬಹುದು. ಪಾಂಡಿತ್ಯಕ್ಕೆ ಜ್ಞಾನಕ್ಕೆ ದೂರವಾಗಿ ಕೇವಲ ಬಾಳ ತೀರ್ಥದಲ್ಲೇ ಮೀಯುವ ಜನ ಹೆಂಗಸರು ಆದುದರಿಂದ ಪವಿತ್ರ ಜೀವನದ ಪ್ರಭಾವ ಅವರನ್ನು ಎಳೆಯುತ್ತದೆಯೊ ಏನೋ! ಅಂತು ಅವರಿಗೆ 'ಉತ್ತಮರ ಸಂಗವದು ತೀರ್ಥ,' 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ.'

ಸೇವಾಗ್ರಾಮಕ್ಕೆ ಮೇಲಿಂದ ಮೇಲೆ ಯಾತ್ರಾರ್ಥಿಗಳಾಗಿ ಬರುವ ವಿಲಾಯತಿಯ ಹೆಂಗಸರು ಪಡಬೇಕಾದ ಕಷ್ಟ ಅವರಿಗೇ ಗೊತ್ತು. ಇಂದ್ರ ಲೋಕದಂಥ ವಿಲಾಯಿತಿ ಎಲ್ಲಿ! ಆಶ್ರಮದ ಕಠಿನ ಜೀವನ ಎಲ್ಲಿ! ಆದರೂ ಸಂತೋಷದಿಂದ ಅವರು ತಮ್ಮ ಯಾತ್ರೆ ಮಾಡುತ್ತಾರೆ. ಗಾಂಧೀಜೀ ರೋಮ್ ನಗರಕ್ಕೆ ಹೋಗಿದ್ದರಲ್ಲ. ಆಗ ಜನಸಂದಣಿಯಿಂದ ದೂರವಾಗಿ ಯಾವುದೋ ಒಂದು ಮೂಲೆಯಲ್ಲಿ ಗುಡಿಸಲು ಒಂದರಲ್ಲಿ ಏಕಾಂತವಾಗಿ ವಸತಿಮಾಡಿದ್ದರು. ಯಾರನ್ನೂ ನೋಡುವ ಗದ್ದಲ ಬೇಕಾಗಿರಲಿಲ್ಲ. ಒಂದು ದಿನ ಬೆಳಗ್ಗೆ ಯಾರೋ ಒಬ್ಬ ಸುರಸುಂದರಿ ಆ ಗುಡಿಸಿಲನ್ನು ಹುಡು ಕಿಕೊಂಡು ನಡೆದುಬಂದು ಗಾಂಧೀಜಿಯೊಡನೆ ಏಕಾಂತದಲ್ಲಿ ಮಾತಾಡ

ಬಯಸಿದಳು. ಆಕೆ ಮತ್ತಾರೂ ಅಲ್ಲ. ಇಟಲಿ ದೇಶದ ದೊರೆಯ ಕಿರಿಯ ಮಗಳು, ರಾಜಕುಮಾರಿ ಮೇರಿಯಾ.

'ಕಂಬನಿ'ಯಿಂದ ಕನ್ನಡನಾಡನ್ನು ತೋಯಿಸಿಹೋದ ಕೊಡಗಿನ ಗೌರಮ್ಮನ ಹೆಸರು ಎಲ್ಲರಿಗೂ ಗೊತ್ತಿರಬೇಕು. ಆಕೆ ಗಾಂಧೀಜಿಯನ್ನು ಒಮ್ಮೆ ಗೆದ್ದಳು. ಆಕೆಯ ಹಟಮಾರಿತನಕ್ಕೆ ಬಾಪೂ ಸೋತುಹೋದರು. ಅದು ನಡೆದುದು ಹೀಗೆ.

ಒಂದು ದಿನ ಸಂಜೆಗೆ ಗಾಂಧೀಜೀ ಗುಂಡಗುಟ್ಟೆಯಲ್ಲಿ ತಂಗಿದ್ದರು. ಅದು ಬಹಳ ರಮಣೀಯವಾದ ಪ್ರದೇಶ. ಅವರು ಇಳಿದ ಮನೆಗೆ ನೆರೆಯದೇ ಗೌರಮ್ಮನ ಮನೆ. ಗಾಂಧೀಜಿಯನ್ನು ತಮ್ಮ ಮನೆಗೆ ಕರೆದು ತರಬೇಕೆಂದು ಆಕೆಯ ಆಸೆ. ಆ ಊರಿನ ಸ್ವಾಗತಮಂಡಲಿಯವರು ಅದಕ್ಕೆ ಗಮನಕೊಡಲಿಲ್ಲ. ಈಕೆಗೆ ತುಂಬ ನೋವಾಯಿತು. ಅನ್ನ ನೀರೇ ಮುಟ್ಟಲಿಲ್ಲ. ಬೆಳಗಿನಿಂದ ಉಪವಾಸ. ಈ ಸುದ್ದಿ ಹೇಗೋ ಗಾಂಧೀಜಿಗೆ ತಿಳಿಯಿತು. ಗೌರಮ್ಮ ಅವರು ಇದ್ದಲ್ಲಿಗೆ ಬಂದಳು. ಬಂದವಳೇ ಅಳತೊಡಗಿದಳು. ಕುತ್ತಿಗೆ ಬಿಗಿದುಬಂತು. ಮಾತೇ ಆಡಲಾಗಲಿಲ್ಲ.

'ಉಪವಾಸ ಏಕಮ್ಮ ತಾಯಿ' ಎಂದರು ಬಾಪು.

'ನೀವು ನಮ್ಮ ಮನೆಗೆ ಬರಲಿ ಅಂತ.' ದುಃಖದಿಂದ ಕೊರಳು ಉಬ್ಬಿ ಬಂದಿತ್ತು. 'ನಿಮಗಾಗಿ ಕೆಲವು ಒಡವೆ ತೆಗೆದಿಟ್ಟಿದೇನೆ.'

'ಬಹಳ ಚಲೋದು. ಆದರೆ ಮೊದಲು ನಿನ್ನ ಉಪವಾಸ ನಿಲ್ಲಿಸಬೇಕು.'

'ನೀವು ಬರುತ್ತೀನಿ ಅಂತ ಮಾತುಕೊಟ್ಟರೆ—'

'ಮಾತು ಕೇಳಬೇಡ ತಂಗೀ. ತೆಗೆದುಕೋ. ಈ ಕಿತ್ತಲೆಹಣ್ಣು ತಿನ್ನು ಮೊದಲು. ಹಾಗೆಲ್ಲಾ ವ್ಯಾಪಾರ ಮಾಡುತ್ತಾರೆಯೆ? ನನ್ನ ಮೇಲೆ ನಂಬಿಗೆ ಇರಲಿ. ನಿನ್ನ ಪ್ರೇಮದ ದುರ್ವಾರಶಕ್ತಿಯಲ್ಲಿ ನಿನಗೆ ನಂಬಿಗೆ ಇರಲಿ.'

ಅಲ್ಲಿಗೂ ಆಕೆ ಹಣ್ಣು ಮುಟ್ಟಲಿಲ್ಲ. ಮಾತು ಆಗಲೇ ಕೊಟ್ಟು ಆಯಿತು ಎಂದು ಆಕೆಗೆ ಅರ್ಥವಾಗಲಿಲ್ಲ. ಮೀರಾಬೇನ್ ಹಣ್ಣು ಸುಲಿ

ದರು. ಗೌರಮ್ಮನಿಗೆ ಇನ್ನೂ ಅನುಮಾನ. 'ನೀವು ಬರುತೀರಾ ಹಾಗಾದರೆ' ಎಂದಳು.

'ಬರುತಾರೆ ತಗೋ ತಾಯಿ' ಮೀರಾಬೇನ್ ಹೇಳಿದರು. ನಗುತ್ತ ಗೌರಮ್ಮ ಹಣ್ಣು ತಿಂದಳು. ಅಲ್ಲಿಗೇ ಗಾಂಧೀಜೀ ಬಿಟ್ಟಾರೆ? ಕೊಟ್ಟ ಆಭರಣ ಮತ್ತೆ ತೊಡಬಾರದು ಎಂದು ನಿಯಮಮಾಡಿದರು. ಅದಕ್ಕೆ ಒಪ್ಪಿದಳು. ಗೌರಮ್ಮನಿಗೆ ಆಗ ಇಪ್ಪತ್ತೊಂದು ವರ್ಷ. ಮದುವೆಯಾಗಿತ್ತು. ಆಕೆಯ ಗಂಡ ಗೋಪಾಲಕೃಷ್ಣಯ್ಯನೂ ಜೊತೆಯಲ್ಲಿ ಇದ್ದರು. ಅತನನ್ನು ಕೇಳಿದರು ಗಾಂಧೀಜೀ: 'ಒಡವ ಕೊಡಬೇಕೆಂದು ಈಕೆಗೆ ಯಾರು ಹೇಳಿದರು?'

'ಯಾರೂ ಇಲ್ಲ. ಆಕೆಯದೇ ಇಚ್ಛೆ; ನಾನೂ ಒಪ್ಪಿಗೆ ಕೊಟ್ಟೆ.'

ಗಾಂಧೀಜಿಯ ದರ್ಶನಕ್ಕಾಗಿ ಆಸೆಪಡದವರು ಯಾರು? ಸಾವಿರಾರು ಮೈಲು ದೂರದಿಂದ ಜನ ಬರುತ್ತಾರೆ. ಕೆಲವರು ಕೇವಲ ದರ್ಶನಕ್ಕಾಗಿಯೇ ಬರುತ್ತಾರೆ. ಅವರು ಮಾತು ಕೂಡ ಆಡುವುದಿಲ್ಲ. ಒಂದು ಸಲ ಹಣ್ಣು ಹಣ್ಣು ಮುದುಕಿ ಒಬ್ಬಾಕೆ ಅವರ ದರ್ಶನಮಾಡಿಕೊಂಡಳು. ಆಕೆ ಗೌರಮ್ಮನ ಹಾಗೆ ಹಟವೂ ಹಿಡಿಯಲಿಲ್ಲ; ಒಡವೆಯೂ ಕೊಡಲಿಲ್ಲ. ಆಕೆಯ ಭಕ್ತಿಯೇ ಆಕೆಗೆ ಆ ಪುಣ್ಯ ಒದಗಿಸಿತು. ಇಲ್ಲದಿದ್ದರೆ ಆ ಸಂದರ್ಭದಲ್ಲಿ ಅದು ಯಾವ ರೀತಿಯಿಂದಲೂ ಸಾಧ್ಯವಿರಲಿಲ್ಲ.

ಸಂಯುಕ್ತ ಪ್ರಾಂತದಲ್ಲಿ ಗಾಂಧೀಜೀ ಪ್ರವಾಸಮಾಡುತ್ತಿದ್ದರು. ಬಿರುಗಾಳಿಯಂತೆ ಗಂಟೆಗೆ ಒಂದು ಹಳ್ಳಿ ದಾಟುತ್ತ ಪ್ರಯಾಣ ನಡೆದಿತ್ತು. ದ್ಹಾರಿಯಲ್ಲಿ ಒಂದು ಬಯಲು ಬಂತು. ಅಲ್ಲಿ ಮೋಟಾರಿನ ವೇಗ ಹೆಚ್ಚಿಸಿದರು. ಕೊಂಚ ದೂರ ಹೋದಮೇಲೆ ಥಟ್ಟನೆ ಟೈರು ಹರಿಯಿತು. ಆಗ ಸಣ್ಣಾಗಿ ಮಳೆ ಹನಿ ಉದುರುತ್ತಿತ್ತು. ಟೈರು ಸರಿಮಾಡಬೇಕಾಗಿದ್ದುದರಿಂದ ಗಾಡಿಯಲ್ಲಿ ಇದ್ದವರೆಲ್ಲ ಇಳಿದರು. ಆಗ ಒಬ್ಬ ಮುಪ್ಪಿನ ಮುದುಕಿ ಕೈಯಲ್ಲಿ ಕೊಡೆ ಹಿಡಿದು, ಕೋಲು ಊರಿಕೊಂಡು ಮೆಲ್ಲಗೆ ಹೆಜ್ಜೆ ಇಡುತ್ತ 'ಮಗು, ನಿಮ್ಮಲ್ಲಿ ಮಹಾತ್ಮಾ ಗಾಂಧಿ ಯಾರು?' ಎಂದು ಕೇಳುತ್ತ ಬಂದಳು. ಯಾರೂ ಉತ್ತರ ಕೊಡಲಿಲ್ಲ. ಆಕೆ ಮತ್ತೆ ಕೇಳಿದಳು. ಆಗ ಗಾಂಧೀಜಿಯೇ ಕೇಳಿದರು: 'ಏಕೆ ತಾಯಿ, ಆತನನ್ನು ಏಕೆ ಹುಡುಕುತ್ತೀಯಮ್ಮ?'

ಆಕೆ ಹೇಳಿದಳು. ‘ ಅಯ್ಯಾ ! ನನಗೆ ಈಗ ನೂರಾನಾಲ್ಕಾಯಿತು. ಕಣ್ಣು ಮಂದವಾಗಿವೆ. ನಾನು ಅನೇಕ ತೀರ್ಥಯಾತ್ರೆ ಮಾಡಿದೇನೆ. ಬದರಿಕಾಶ್ರಮಕ್ಕೂ ಹೋಗಿದ್ದೆ. ನನ್ನ ಮನೆಯಲ್ಲೇ ಎರಡು ಗುಡಿ ಕಟ್ಟಿಸಿ ಅವಕ್ಕೆ ಹೊಲಮನೆ ದತ್ತಿಬಿಟ್ಟು ನಡೆಸುತ್ತಿದೇನೆ. ರಾಮಕೃಷ್ಣರ ಅವತಾರ ವಿದ್ದಂತೆ ಈಗ ಮಹಾತ್ಮಾ ಗಾಂಧೀ ಅವತಾರ ಆಗಿದೆಯಂತೆ. ಆತನ ದರ್ಶನ ಆಗುವತನಕ ನನಗೆ ಸಾವು ಬಾರದಪ್ಪ.’ ಮಾತಾಡುವಾಗ ಆಕೆಯ ಕಣ್ಣಿನಲ್ಲಿ ಹನಿತುಂಬಿತು. ಇದಿರಿಗೆ ನಿಂತಿದ್ದಾತನೇ ಆತ ಎಂಬುದು ಆಕೆಗೆ ಹೊಳೆಯಿತು. ತಾನು ಯಾರ ದರ್ಶನ ಬಯಸಿದಳೋ ಆತನೇ ಆಕೆಯೊಡನೆ ಮಾತಾಡುತ್ತಿದ್ದ. ಆಕೆಯ ಆನಂದಕ್ಕೆ ಮೇರೆ ಉಂಟೆ? ಇಂಥ ಹೊತ್ತಿನಲ್ಲಿ ಅಲ್ಲದೆ ಮತ್ತೆ ಯಾವಾಗ ತನ್ನ ಬಾಳಿನ ಮಹಾಸಮಸ್ಯೆ ಬಿಡಿಸಬೇಕು. ‘ ಸ್ವಾಮಿ, ಈ ಆಸೆ, ಈ ದಾಹವನ್ನು ಶಮನಮಾಡುವುದು ಹೇಗೆ? ’ ಎಂದು ಕೇಳಿದಳು. ಆ ನೂರಾನಾಲ್ಕು ವರ್ಷದ ಮುದುಕಿಯೂ ಈ ಪ್ರಶ್ನೆ ಕೇಳಬೇಕೆ! ಗಾಂಧೀಜೀ ನಕ್ಕರು. ‘ ಹೌದು ತಾಯಿ. ಸುಖದ ಆಸೆ ಸಾಯದೆ ಕರ್ಮ ಬಂಧನ ತಪ್ಪದು ’ ಎಂದು ಆಕೆಯ ಸ್ವಂತ ಸುದ್ದಿ ವಿಚಾರಿಸಿದರು. ಆಕೆ ಹನ್ನೆರಡನೆ ವಯಸ್ಸಿಗೇ ವಿಧವೆಯಾದಳಂತೆ. ಆಗಿನಿಂದಲೂ ನಿಯಮವಾಗಿ ಬಾಳಿದಳು. ಆ ತಪಸ್ಸು–ನೇಮ ಎಲ್ಲಾ ಹೇಳಿದಳು. ಸದ್ಯ, ದಿನಕ್ಕೊಂದು ಸಲ ಒಂದು ಲೋಟ ದರ್ಭೆ ಹುಲ್ಲಿನ ರಸದ ಪಾನಕ ಕುಡಿಯುತ್ತಿದ್ದಳು.

ಆ ದಿನ ಬೆಳಗಿನಿಂದ ಅದೇ ಮರದ ಕೆಳಗೆ ಗಾಂಧೀಜಿಯ ದರ್ಶನಕ್ಕಾಗಿಯೆ ಆಕೆ ಕಾದುನಿಂತಿದ್ದಳು. ಓಡಾಡಲು ಆಕೆಗೆ ಬಲವಿರಲಿಲ್ಲ. ಕೊಡೆ ಹಿಡಿದು ಹಾಗೇ ನಿಂತಿದಾಳೆ. ಗಾಂಧೀಜಿಯ ಮೋಟಾರು ಅಂಬಿನ ವೇಗದಿಂದ ಹೋಗುತ್ತಿತ್ತು. ಟೈರು ಹರಿಯದಿದ್ದರೆ ಗಾಡಿ ನಿಲ್ಲುವ ಸಂಭವವೇ ಇರಲಿಲ್ಲ. ಆ ಮರದ ಅಡಿಯಲ್ಲಿ ಹರಿಯದೆ ಸ್ವಲ್ಪ ದೂರದಲ್ಲಿ ಹರಿದಿದ್ದರೂ ಆ ಮುದುಕಿಗೆ ದರ್ಶನ ಆಗುತ್ತಿರಲಿಲ್ಲ. ಹತ್ತೇ ಹೆಜ್ಜೆಯಾದರೂ ಅಲ್ಲಿಗೆ ನಡೆದುಹೋಗಲು ಆಕೆಗೆ ಸಾಧ್ಯವಾಗುತ್ತಿರಲಿಲ್ಲ. ಆಕೆಯ ನಿರ್ಮಲ ಭಾವನೆಯ ಬಲವೇ ಆಕೆಗೆ ಆ ಭಾಗ್ಯ ಕೊಟ್ಟಿತು. ಯಾದೃಶೀ ಭಾವನಾ ಯತ್ರ ಸಿದ್ಧಿರ್ಭವತಿ ತಾದೃಶೀ—ಅಲ್ಲವೆ!

ಗಾಂಧೀಜೀ ಎಂದರೆ ಹೆಣ್ಣು ಹೃದಯಕ್ಕೆ ದೇವರು ನೀಡಿದ ಮಹಾ ಪ್ರಸಾದವಿದ್ದಂತೆ. ಯಶೋದೆಗೆ ಕೃಷ್ಣನಿದ್ದಂತೆ ಅವರಿಗೆ ಗಾಂಧೀಜೀ ಒಂದು ನಿಧಿ. ಒಂದು ಹೆಣ್ಣು ಹೃದಯಕ್ಕೆ ಅಂಥ ಅನುಭವ ಆಯಿತು. ಗಾಂಧೀಜೀ ಇಂಗ್ಲೆಂಡಿಗೆ ಹೋದಾಗ ಒಬ್ಬ ಜರ್ಮನ್ ತರುಣಿ ಅವರನ್ನು ನೋಡಲು ಬಂದಳು. ಆಗ ಬರಹೋಗುವವರ ಗದ್ದಲ. ಭೇಟಿ-ಮಾತು ಕತೆಗಾಗಿ ಜನ ಒಂದೇ ಸಮನೆ ತುಂಬಿದ ಹೊಳೆಯಂತೆ ಬರುತ್ತಿದ್ದರು. ಯಾರೊಡನೆಯೋ ಮಾತು ನಡೆದಿದ್ದಾಗ ಆ ಜರ್ಮನ್ ಯುವತಿ ಆತುರ ದಿಂದ ಒಳಗೆ ನುಗ್ಗಿಬಂದಳು. ಪರಿಚಯದ ಸಲಿಗೆ ಇದ್ದುದರಿಂದ ಸಂಪ್ರ ದಾಯದ ಮಾತುಕತೆ ಯಾವುದೂ ನಡೆಯಲಿಲ್ಲ. ಆಕೆಯನ್ನು ನೋಡಿ ಗಾಂಧೀಜೀ ನೂಲುತ್ತಿದ್ದವರು ಒಂದು ಗಳಿಗೆ ಅದನ್ನು ನಿಲ್ಲಿಸಿ, ಕೈ ನೀಡಿ ದರು. ಆ ಕೈ ಬೆರಳೆಲ್ಲ ಒಣಗಿ ಮೂಳೆಯಾಗಿದ್ದರೂ ಅದರಲ್ಲಿ ಚಪಲತೆ ತುಂಬಿತ್ತು. ಆ ಕೈಯನ್ನು ಆಕೆ ತನ್ನೆರಡೂ ಕೈಗಳಿಂದಲೂ ಹಿಡಿದುಕೊಂ ಡಾಗ ಯಾವುದೋ ದಿವ್ಯ ಪದಾರ್ಥವೊಂದನ್ನು ಮುಟ್ಟಿದ ಹಾಗೆ ಆಕೆಯ ಭಾವನೆ.

'ಜರ್ಮನಿಗೆ ಹಿಂದಿರುಗಿ ಪ್ರಯಾಣವೇ' ಗಾಂಧೀಜೀ ಕೇಳಿದರು. ಆಕೆ ಹೌದು ಎನ್ನುವಂತೆ ತಲೆಬಾಗಿದಳು. ಆಕೆಗೆ ಹನಿಗಣ್ಣಾಗಿತ್ತು. ತುಟಿ ಅದುರುತ್ತಿದ್ದವು. ಏನೋ ಒಂದು ಗಾಢಾನುಭವ ಆಕೆಯ ಕುತ್ತಿಗೆ ಯನ್ನು ಬಿಗಿದಿತ್ತು. ಬಾಯಿಂದ ಮಾತು ಹೊರಡುವುದು ತುಂಬಾ ಕಷ್ಟ ವಾಯಿತು. 'ಗುಡ್ ಬೈ' ಇದೊಂದೇ ಮಾತು ಆಡುವಾಗ ಆಕೆಗೆ ಸಾಕಾಗಿ ಹೋಯಿತು. ಒಂದು ಹೆಜ್ಜೆ ಹಿಂದಿಟ್ಟು, ಆಕಾಶದ ಕಡೆಗೆ ಕೈಚಾಚಿ ಗಾಂಧೀಜಿಯನ್ನೇ ದಿಟ್ಟಿಸಿ ನೋಡುತ್ತ ನಿಂತಳು. ಅಳು ಉಕ್ಕಿ ಬಂತು. ಹಾಗೆಯೇ ಹೊರಟುಹೋದಳು.

ಗಾಂಧೀಜೀ ಮಾಡುವ ಎಲ್ಲ ಕೆಲಸಗಳಲ್ಲೂ ರಮಣೀಯವಾದ ಒಂದು ಬಗೆಯ ಆತ್ಮೀಯತೆ ಇದೆ. ಪ್ರತಿಯೊಂದು ಸಂದರ್ಭವೂ ಉತ್ತಮ ಕಾವ್ಯವಸ್ತು ಆಗುತ್ತದೆ. ದಕ್ಷಿಣ ಆಫ್ರಿಕಾದಲ್ಲಿ ಜನರಲ್ ಸ್ಮಟ್ಸ್ ಗಾಂಧೀ ಜಿಗೆ ಪ್ರತಿಕಕ್ಷಿ; ವಿರೋಧ ಪಕ್ಷದ ನಾಯಕ. ಅವನೇ ಇವರಿಗೆ ಜೈಲಿನ ರುಚಿ ಮೊದಲು ತೋರಿಸಿದುದು. ಜೈಲಿನೊಳಗೆ ಕೂತು ಗಾಂಧೀಜೀ

ಮಾಡಿದುದೇನು! ತನ್ನ ವಿರೋಧಿಗಾಗಿ ಒಂದು ಜೊತೆ ಕಾಲ್ಮರೆ ಹೊಲಿದರು. ಬಿಡುಗಡೆಯಾಗಿ ಹೊರಗೆ ಬಂದ ಕೂಡಲೆ ಮೊದಲು ಮಾಡಿದ ಕೆಲಸ ಎಂದರೆ ಆ ಜೊತೆಯನ್ನು ಸ್ಮಟ್ಸ್‌ಗೆ ಕಾಣಿಕೆಯಾಗಿ ಕೊಟ್ಟುದು. ಇಂಥ ರಸಮಯ ಸನ್ನಿವೇಶದಲ್ಲಿ ಬಳುಕದ ಹೃದಯ ಉಂಟೆ? ಹೂವಿಗಿಂತ ಮಿದು ವಾದ ಈ ಮಿಡಿತಕ್ಕೆ ಕರಗದ ಕಾಠಿಣ್ಯವೂ ಇದೆಯೇ?

ಈ ಆತ್ಮೀಯತೆಗೆ ವಿನೋದ, ಸಾವಧಾನ, ಸಾನುಭೂತಿಗಳು ಬೆರೆತು ಗಾಂಧೀಜಿಯ ಕೈಯಲ್ಲಿ ಅದೊಂದು ವಿಚಿತ್ರಕಲೆಯೇ ಆಗಿದೆ. ತಮ್ಮ ಬಳಿಗೆ ಬಂದ ಹೆಂಗಸರಿಗೆ ದೇಶಸೇವೆಯ ದೀಕ್ಷೆ ಕೊಡುವುದರಲ್ಲಿ ಈ ಕಲೆ ಯನ್ನು ಪೂರಾ ಉಪಯೋಗ ಮಾಡುತ್ತಾರೆ ಬಾಪು. ಸಕಲಾಭರಣ ಭೂಷಿತರಾಗಿ ಬಂದವರು ನಿರಾಭರಣ ಸುಂದರಿಯರಾಗಿ ಹಿಂದಿರುಗಿದಾರೆ. ವಿದ್ಯಾವತಿಯರಾಗಿ ರಾಜಕಾರಣ ಚರ್ಚಿಸಲು ಬಂದವರಿಗೆ ಸೂತ್ರದೀಕ್ಷೆ ಕೊಟ್ಟಿದಾರೆ. ಪರದೆಯೇ ಪಾತಿವ್ರತ್ಯ ಎಂದು ತಿಳಿದಿದ್ದವರನ್ನು ಪ್ರಚಾರಕ ವೃತ್ತಿಯ ಪಂಚಾಗ್ನಿ ತಪಸ್ಸಿಗೆ ಎಳೆದಿದಾರೆ. ನಗುನಗುತ್ತಲೇ ಅವರ ನಾಚಿಕೆಯನ್ನು ಕಳೆದು ಸ್ವತಂತ್ರದೃಷ್ಟಿಯ ಧೈರ್ಯವನ್ನು ಕೊಡುತ್ತಾರೆ. ಇಲಿಯನ್ನು ಹುಲಿಯಾಗಿ ಮಾಡುತ್ತಾರೆ. ಹುಲಿಯನ್ನು ಇಲಿಯಾಗಿ ಮಾಡುತ್ತಾರೆ.

ಒಂದು ಸಲ ಕೆಲವರು ಹೆಂಗಸರು ಗಾಂಧೀಜಿಯ ಭೇಟಿಗೆ ಬಂದಿದ್ದರು. ಅವರೆಲ್ಲರೂ ಹಣವಂತರ ಮನೆಯವರು. ನಗೆಮಾತು ನಾಲ್ಕು ನಡೆದಮೇಲೆ ಅವರಲ್ಲಿ ಹಿರಿಯಳಾಗಿದ್ದಾಕೆ ಖಾದೀ ಉಡುವುದಾಗಿ ಮಾತು ಕೊಟ್ಟಳು. ಗಾಂಧೀಜೀ ಕೇಳಿದರು: 'ನಿನಗೆ ಮದುವೆ ಆಗಿದೆಯೇನಮ್ಮ?'

'ಹೂಂ. ಆಗಿದೆ.'

ಪ್ರಶ್ನೆಗೆ ಮೊದಲಾಯಿತು. 'ನಿನ್ನ ಗಂಡ ಖಾದೀ ಹಾಕುತ್ತಾನೆಯೆ?'

'ಇಲ್ಲ.' ಈ ಮಾತು ಹೇಳುವಾಗ ಆಕೆಗೆ ತುಂಬಾ ನಾಚಿಕೆ; ಕೆನ್ನೆ ಕೆಂಪೇರಿತ್ತು.

'ಹಾಗಾದರೆ ನಿನ್ನ ಗಂಡ ನಿನ್ನನ್ನು ಖಾದೀ ತೊಡಗೊಡುತ್ತಾನೆಯೋ ಇಲ್ಲವೋ?'

ಇಕ್ಕಟ್ಟಿನ ಪ್ರಶ್ನೆ; ಏನು ಹೇಳಬೇಕು? 'ಅವರು ಹೇಳಿದ ಹಾಗೆ ಮಾಡುತ್ತೇನೆ.' ಗರತಿಯಾದವಳ ಉತ್ತರ ಅದು!

ಆದರೆ ಗಾಂಧೀಜೀ ಬಿಡಬೇಕಲ್ಲ. 'ಹಾಗಾದರೆ ನೀನು ಕೊಟ್ಟ ಮಾತಿನ ಗತಿಯೇನಮ್ಮ?' ನಗುತ್ತ ಕೇಳಿದರು.

ಆಕೆಗೆ ದಿಕ್ಕುತೋರದೆ ಕಕ್ಕಾಬಿಕ್ಕಿ ಆದಳು.

ಬಾಪುವೇ ದಾರಿ ತೆಗೆದರು. ಆಕೆಗೆ ಹೇಳಿಕೊಟ್ಟರು: 'ನಿನ್ನ ಗಂಡ ನನ್ನು ಒಪ್ಪಿಸಲಾರೆಯೇನು ನೀನು?'

ಅಂಜುತ್ತ ಅಂಜುತ್ತ ಆಕೆ ನುಡಿದಳು 'ಹೂಂ.'

'ಒಂದು ವೇಳೆ ಆತ ಖಾದೀ ತೊಡಬೇಡ ಎಂದರೆ ಆತನ ಮಾತು ಮೀರುತ್ತೀಯೆ, ಅಲ್ಲವೆ?'

ಉತ್ತರವಿಲ್ಲ; ಮೌನ.

ಮತ್ತೆ ಇವರೇ ಮಾತು ಸಾಗಿಸಿದರು. 'ಸೀತಾದೇವಿ ಶ್ರೀರಾಮ ಚಂದ್ರನ ಮಾತು ಮೀರಿದಾಳೆ, ಗೊತ್ತೆ ತಾಯಿ ನಿನಗೆ?'

ಆಕೆಗೆ ಆ ಕಥೆ ಹೊಳೆಯಲಿಲ್ಲ.

ಕೇಳು. ಶ್ರೀರಾಮಚಂದ್ರ ಅಡವಿಗೆ ಬರಬೇಡ ಎಂದು ಸೀತೆಗೆ ಹೇಳಿದಾಗ ಆಕೆ ಅವನ ಮಾತು ಕೇಳಿದಳೆ? ಇಲ್ಲ. ಆತನನ್ನು ಹಿಂಬಾಲಿಸುವುದೇ ತನ್ನ ಧರ್ಮ ಎಂದು ಆಕೆಗೆ ಗೊತ್ತು. ಆಕೆಯ ಹಾಗೆ ನೀನೂ ನಿನ್ನ ಗಂಡನನ್ನು ಪೂಜೆಮಾಡು. ಆದರೆ ನಿನ್ನ ಧರ್ಮಕ್ಕೆ ಆತ ಅಡ್ಡಿಬಂದರೆ ಮರ್ಯಾದೆಯಾಗಿ ಆತನ ಮಾತು ಮೀರಬೇಕು ತಿಳಿಯಿತೇನಮ್ಮ?'

ಆಕೆಯ ಗಂಡ ಬೇಡ ಎಂದರೂ ಖಾದೀ ತೊಡದೆ ಬಿಡುತ್ತಾಳೆಯೆ ಇನ್ನು! ಈಕೆಯನ್ನು ನೋಡಿ ಆತನೂ ತೊಡಬೇಕಷ್ಟೆ.

ಡಾಕ್ಟರ್ ಮಾಡ್ ರಾಯಡನ್ ಒಬ್ಬ ಆಂಗ್ಲ ವಿದುಷೀಮಣಿ. ಆಕೆಗೊಮ್ಮೆ ಗಾಂಧೀಜಿಯ ಸೌಜನ್ಯ ಅನುಭವಕ್ಕೆ ಬಂತು. ಲಂಡನ್ನಿನಲ್ಲಿ ಒಂದು ದೊಡ್ಡ ಸಭೆ. ಆ ಸಭೆ ಮುಗಿಸಿಕೊಂಡು ಗಾಂಧೀಜೀ ಮತ್ತೊಂದು ಸಭೆಗೆ ಹೋಗಬೇಕಾಗಿತ್ತು. ಇಲ್ಲಿಂದ ಆ ಸಭೆಗೆ ತನ್ನ ಮೋಟಾರಿನಲ್ಲಿ ಕರೆದುಕೊಂಡು ಹೋಗುವುದಾಗಿ ಆಕೆ ಗಾಂಧೀಜಿಗೆ ಹೇಳಿಕೊಂಡಿದ್ದಳು. ಸಭೆ ಮುಗಿದು ಹೊರಗೆ ಬಂದಾಗ ಜನದ ಗದ್ದಲವೋ ಗದ್ದಲ. ಸಾಗರದ

ಅಲೆಗಳಂತೆ. ಆಕೆಗೆ ಆ ಗದ್ದಲದಲ್ಲಿ ತನ್ನ ಕಾರು ಕಾಣಲಿಲ್ಲ. ಊರಿನ ಮೋಟಾರುಗಳೆಲ್ಲ ಅಲ್ಲೇ ಸುಳಿದಾಡುತ್ತಿದ್ದವು. ಆಕೆಯೇ ಹೇಳಿದಾಳೆ: 'ಲಂಡನ್ನಿನ ಕಾರುಗಳೆಲ್ಲ ಅವರು ಗಾಂಧೀಜೀ ತಮ್ಮ ಕಾರಿನಲ್ಲಿ ಕೂತುಕೊಳ್ಳುವ ಭಾಗ್ಯ ತಮಗೆ ಸಿಗಲಿ ಎಂದು ಅಲ್ಲೇ ಸುಳಿದಾಡಿದವು. ಗಾಳಿ ತಂಪಾಗಿತ್ತು. ಸ್ವಲ್ಪ ಮಳೆಯೂ ಬಂದಿತ್ತು. ಗಾಂಧೀಜಿಗೆ ಮೈತುಂಬ ಅರಿವೆ ಇರಲಿಲ್ಲ. ಇಂಥ ಪ್ರಸಂಗದಲ್ಲಿ ಅವರನ್ನು ಕಾಯಿಸ ಬಾರದು ಎನಿಸಿ ದುಃಖವಾಯಿತು. ನೀವು ಮತ್ತೊಂದು ಕಾರಿನೊಳಗೆ ಹತ್ತಿಬಿಡಿ; ನನ್ನ ಕಾರಿಗಾಗಿ ಕಾಯಬೇಡಿ ಎಂದೆ. ಬೇಡ ಬೇಡ, ನಿನ್ನ ಕಾರಿಗಾಗಿ ಕಾಯುತ್ತೇನೆ ಎಂದರು ಗಾಂಧೀಜೀ. ನನಗಂತು ತಲೆಯ ಮೇಲೆ ಒಂದು ಕಿರೀಟ ಇಟ್ಟಹಾಗೆ ಅನಿಸಿತು.' ಕೃಷ್ಣನ ಅರಮನೆಯ ವೈಭವವನ್ನು ಕಂಡು ಕುಚೇಲ ತಾನು ತಂದಿದ್ದ ಅವಲಕ್ಕಿಯ ಗಂಟನ್ನು ನಾಚಿಕೆಯಿಂದ ಮರೆಮಾಡಲು ಯತ್ನಿಸಿದನಂತೆ. ಕೃಷ್ಣನ ಚುರುಕುಗಣ್ಣಿಗೆ ಅದು ಬಿತ್ತು. ಕುಚೇಲನ ನಡುಗುವ ಕೈಯಿಂದ ಅದನ್ನು ಕಸಿದುಕೊಂಡು ಗಬಗಬ ಆ ಅವಲಕ್ಕಿ ಮುಕ್ಕಿದನಂತೆ. ಆ ದಿನ ಅವನಿಗೆ ದೇವರು ಅನುಗ್ರಹ ಕಿರೀಟ ಇಟ್ಟಾಗ ಇಂಥದೇ ಆನಂದ ಅನುಭವವಾಗಿರಬೇಕು.

ಇಂಥ ಮಹಾಪುರುಷನ ಸಾನ್ನಿಧ್ಯದಲ್ಲಿ ಕಲ್ಲೂ ಕೊನರೀತು; ಮಣ್ಣೂ ಉಸಿರಾಡೀತು. ದಧೀಚಿಯ ಮೂಳೆಗಳಿಂದ ದೇವತೆಗಳು ವಜ್ರಾಯುಧ ಮಾಡಿದರಂತೆ. ಗಾಂಧೀಜೀ ಮಾನವ ಹೃದಯಗಳನ್ನೇ ವಜ್ರಾಯುಧ ಮಾಡಿದರು. ಇಲ್ಲದಿದ್ದರೆ ಬಾರ್ಡೋಲಿಯ ಸತ್ಯಾಗ್ರಹದಲ್ಲಿ ಗಂಡು-ಹೆಣ್ಣು ತೋರಿಸಿದ ಪರಾಕ್ರಮ ಸಾಧ್ಯವಾಗುತ್ತಿತ್ತೆ? ಮಾತಿಗೆ ತಪ್ಪುವುದಕ್ಕಿಂತ ಜೈಲಿಗೆ ಹೋಗುವುದೇ ಲೇಸು ಎಂಬುದು ಜನರ ನೀತಿ ಆಯಿತು. ದಿನವೂ ನೂರಾರು ಯುವಕರು ಕಬ್ಬಿಣದ ಕಂಕಣಕ್ಕಾಗಿ ಕಾದಿರುತ್ತಿದ್ದರು. ಯಾರೂ ಹಿಂಜರಿವ ಹಾಗಿರಲಿಲ್ಲ. ಅಂಜುಗುಳಿ ಎಂದು ಹೆಸರಾದ ಹಿಂದೂ ಹೆಂಗಸರು ಕೂಡ ಕಲಿತನದಿಂದ ಮಾತಾಡಹತ್ತಿದರು. 'ಮಾತಿಗೆ ತಪ್ಪಿದವರುಂಟೆ? ನೀವು ಹೋಗಿ ಬನ್ನಿ, ನಾವೆಲ್ಲ ಮನೆಮಕ್ಕಳನ್ನು ನೋಡಿಕೊಳ್ಳುತ್ತೇವೆ' ಎನ್ನತೊಡಗಿದರು. 'ಸಮಯ ಬಂದರೆ ನಾವೂ ನಿಮ್ಮ ಜೊತೆಗೇ' ಎಂದರು. ಅದೂ ಆಯಿತು.

ಕನ್ಹಯ್ಯಾಲಾಲ ಮುನಷಿ ಗಾಂಧೀಜಿಗೆ ಶರಣು ಹೋಗಿ ಜೈಲಿಗೆ ನಡೆದರು. ಅವರು ಸಾಹಿತಿಗಳು, ಕಲಾವಿದರು. ರಂಗಮಹಲಿನ ಜೀವನದ ಜಾತಿ. ಅವರ ತಾಯಿ ತುಂಬಾ ಮುದುಕಿ. ನಡೆಯಲಾಗದಿದ್ದರೂ ಆಕೆ ಒಂದು ದಿನ ಗಾಂಧೀಜಿಯ ಪ್ರಾರ್ಥನೆಗೆ ಬಂದರು. ಎಲ್ಲಾ ಮುಗಿದ ಮೇಲೆ ಗಾಂಧೀಜೀ ಕೇಳಿದರು: 'ನಿನ್ನ ಮಗ ಮತ್ತೊಂದು ಸಲ ಜೈಲಿಗೆ ಹೋಗಬೇಕಾಗಿದೆ. ನೀನೇನು ಹೇಳುತ್ತೀ ಮತ್ತೆ?' ಆ ಮುದುಕಿ ನಿಶ್ಚಿಂತೆಯಿಂದ ಹೇಳಿದಳು. 'ಮಗನನ್ನು ನಿಮ್ಮ ಕೈಯಲ್ಲಿ ಇಟ್ಟದೇನೆ. ನಿಮಗೆ ತೋಚಿದಂತೆ ಮಾಡಿ.'

ಉಪ್ಪಿನ ಸತ್ಯಾಗ್ರಹದಲ್ಲಿ ಹೆಂಗಸರು ತೋರಿದ ಧೈರ್ಯ ಶೌರ್ಯ ಇತಿಹಾಸ ಯೋಗ್ಯವಾದವು. ಯಾರಾದರೂ ಉಪ್ಪಿನ ಸತ್ಯಾಗ್ರಹದಲ್ಲಿ ನಡೆದ ಪ್ರಸಂಗಗಳನ್ನೆಲ್ಲ ಪೋಣಿಸಿ ಬರೆದರೆ ಆಗ ತಿಳಿದೀತು, ಗಾಂಧೀಜಿಯ ಕೈವಾಡದಿಂದ ಹಿಂದೀ ಹೆಂಗಸರು ಎಷ್ಟು ಧೀರೆಯರಾಗಿ ಕಾದಿದರೆಂಬುದು. ಸರೋಜಿನೀದೇವಿ ಸಿಂಹಿಣಿಯಂತೆ ಸೇನೆಯನ್ನು ನಡೆಸಿದಳು. ಕನ್ನಡಿಗರ ಕಣ್ಗೊಂಬೆ ಕಮಲಾದೇವಿ ಕಲಿಯಂತೆ ನುಗ್ಗಿದಳು. ಗಂಡಸರು ಹಿಂಜರಿದ ಕಡೆ ಹೆಣ್ಣು ಮುಂದೆ ನುಗ್ಗಿತು. ಗುಜರಾತಿನ ಹೆಂಗಸರೆಲ್ಲ ಸೇರಿ ವೈಸ್‌ರಾಯ್‌ಗೆ ಒಂದು ಕಾಗದ ಕಳಿಸಿದರು. ಅದು ಕಾಗದವಲ್ಲ, ಕದನದ ಆಹ್ವಾನ.

'ಭರತಖಂಡದಲ್ಲಿ ಚಳುವಳಿಯ ಬೆಂಕಿ ಉರಿಯುತ್ತಿರುವಾಗ ನಾವು ತಟಸ್ಥರಾಗಿರಕೂಡದು. ಉಪ್ಪಿನ ಸತ್ಯಾಗ್ರಹದ ತತ್ವವನ್ನು ನಾವೂ ಒಪ್ಪುತ್ತೇವೆ. ನಮ್ಮ ಹಳ್ಳಿಗಳಲ್ಲಾಗಲೇ ಹೆಂಗಸರು ಉಪ್ಪುಮಾಡುತ್ತಿದಾರೆ. ನಾವು ಬೇರೆ ಕೆಲಸವನ್ನು ಹುಡುಕಬೇಕು. ವಿದೇಶೀ ವಸ್ತ್ರ ಬಹಿಷ್ಕಾರ, ಮದ್ಯಪಾನ ನಿರೋಧ ಇವೆರಡನ್ನೂ ನಾವು ಜರುಗಿಸಬೇಕೆಂದು ಗಾಂಧೀಜೀ ಹೇಳಿದಾರೆ. ಅದು ನಮಗೂ ಒಪ್ಪಿಗೆ. ನಾವು ಆ ಚಳುವಳಿ ಆರಂಭಿಸುತ್ತೇವೆ. ಆ ಪರದೇಶೀ ಬಟ್ಟೆ ನಮ್ಮ ದೇಶಕ್ಕೆ ಬಾರದಂತೆ ತಡೆಯುವುದು, ಮದ್ಯಪಾನವನ್ನು ನಿಲ್ಲಿಸುವುದು ನಮ್ಮ ಧರ್ಮ ಎಂದು ಮೊದಲು ನಿಮಗೆ ತಿಳಿಸುವುದು ಚೆನ್ನು. ತಿಳಿಸಿದೇವೆ.'

ಸರೋಜಿನಿ ಸಿರಿವಂತಿಕೆಯಲ್ಲಿ ಬಾಳು ಕಳೆದು ಮುಪ್ಪಿಗೆ ಮುಟ್ಟಿದ ಹೆಂಗಸು. ಬೊಂಬಾಯಿಯ ತಾಜಮಹಾಲು ಹೊಟೇಲು ಆಕೆಯ ಮನೆ. ಆಕೆ ಕಾಲಿಟ್ಟರೆ ಹೂವಿನ ಹಾಸಿಗೆಯ ಮೇಲೆ; ಮಲಗಿದರೆ ಹಂಸತೂಲಿಕಾ ತಲ್ಪ. ಇಂಥ ಜೀವ ಧರಸನಾ ಮುತ್ತಿಗೆಯಲ್ಲಿ ಮುಂದಾಳಾಗಿ ಹೋದಳು. ಯಾರೋ ಕೇಳಿದರು: ನಿಮ್ಮ ಅರಸು ಜೀವಕ್ಕೆ ಈ ಕಲ್ಲು ಮಣ್ಣು, ಬಿಸಿಲು ಬೆಂಕಿ ಹೇಗೆ ಒಗ್ಗೀತು? 'ಮನಸ್ಸು ಮಾಡಿದರೆ ಎಲ್ಲಾ ಒಗ್ಗುತ್ತದೆ. ನನಗೆ ಯಾವ ತರದ ತೊಂದರೆಯೂ ಕಾಣಲಿಲ್ಲ' ಎಂದರು ಆಕೆ. ಮಾತು ಆಡಿದುದು ಆಕೆಯೇ ಆದರೂ ಆಡಿಸಿದುದು ಗಾಂಧೀಜೀ.

ಗಾಂಧೀಜಿಯ ಅಭಿಪ್ರಾಯದಲ್ಲಿ ಬ್ರಹ್ಮಚರ್ಯವೇ ಹೆಣ್ಣಿಗೆ ಆದರ್ಶ. ಇಷ್ಟು ದಿನ ಬ್ರಹ್ಮಚರ್ಯವೆಂದರೆ ಗಂಡುಸಿನ ರಾಜ್ಯ ಎಂದೇ ಲೋಕ ತಿಳಿದಿತ್ತು. ಹೆಸರಿಗೆ ನಾಲ್ಕು ಆಶ್ರಮಗಳಿದ್ದರೂ ಹೆಣ್ಣಿಗೆ ಒಂದೇ ಆಶ್ರಮ; ಗಾರ್ಹಸ್ಥ್ಯ. ಸೂಳೆ ಮುಪ್ಪಾಗಿ ಜೋಗಿತಿಯಾದಂತೆ ಸನ್ಯಾಸದ ಆಶ್ರಮ. 'ಬ್ರಹ್ಮಚರ್ಯದ ಮಾತನ್ನೇ ಯಾರೂ ಹೆಣ್ಣಿಗೆ ಹೇಳಿಲ್ಲ. ಆದ್ದರಿಂದಲೇ ಈ ಅಸ್ತವ್ಯಸ್ತತೆ. ನಿಜವಾಗಿ ಬ್ರಹ್ಮಚರ್ಯ ಪಾಲನೆಯಲ್ಲಿ ಹೆಂಗಸಿನದೇ ಮುಖ್ಯ ಭಾಗ. ವಿಷಯಾಸಕ್ತರಾದ ಗಂಡುಜಾತಿ ಬ್ರಹಚರ್ಯವನ್ನೊಂದು ಗುಡ್ಡವಾಗಿ ಮಾಡಿದಾರೆ. ಸುಲಭವಾಗಿರಬೇಕಾದುದನ್ನು ಕಷ್ಟವಾಗಿ ಮಾಡಿದಾರೆ.'

ಬ್ರಹ್ಮಚಾರಿಣಿ ಲೋಕವನ್ನು ಬಿಟ್ಟವಳಲ್ಲ. 'ಅವಳಿಗೆ ಗೃಹನಿರ್ವಹಣ ಜ್ಞಾನವೂ ಅಗತ್ಯ, ಶಿಶುಸಂಗೋಪನ ಜ್ಞಾನವೂ ಬೇಕು. ಗವಿ ಸೇರಿದವಳು, ಏಕಾಕಿನಿಯಾದವಳು ಕುಮಾರಿಯಲ್ಲ. ಕುಮಾರಿ ಇಡೀ ಜಗತ್ತನ್ನೇ ಪುರುಷನೆಂದು ತಿಳಿದಾಳು. ಜಗತ್ತಿಗೇ ತಾಯಿಯಾದಾಳು, ತಂಗಿಯಾದಾಳು, ಮಗಳಾದಾಳು. ಪ್ರಪಂಚದ ಆಡಳಿತವನ್ನೇ ನಡಸಬಲ್ಲವಳಾದಾಳು. ಇಂಥ ಕುಮಾರಿ ಇದುವರೆಗೆ ಹುಟ್ಟಿರಲಿಕ್ಕಿಲ್ಲ. ಆದರೂ ಇದೇ ಆದರ್ಶ.

'ಇದರಲ್ಲಿ ಆದರ್ಶ ವಿವಾಹವೂ ಸಮಾವೇಶವಾಗಿದೆ. ಮದುವೆಯ ವಿಷಯವನ್ನು ಕಲಿಸಬೇಕೆ? ಈ ವೈಯಲ್ಲೇ ಆ ಜ್ಞಾನ ಅಡಗಿದೆ. ಆ ಸ್ವಭಾವವನ್ನು ಮಿತಿಯಲ್ಲಿಡಲು ಕೆಲವು ನಿಯಮ ಬೇಕು. ಬ್ರಹ್ಮಚರ್ಯವೇ

ಈ ವಿಷಯೋತ್ಸುಕ ಸ್ವಭಾವಕ್ಕೆ ಪೂರ್ಣ ಅಂಕುಶ. ಈ ನಿಗ್ರಹ ನಿಯಮವನ್ನು ಪಾಲಿಸಿದವಳು ಮದುವೆಯ ಕ್ಷುದ್ರನಿಯಮವನ್ನು ಪಾಲಿಸಲಾರಳೆ? ಮದುವೆಯೇ ಗುರಿ ಎಂದು ತಿಳಿದವಳಿಗೆ ಮದುವೆ ಎಂದರೇನೋ ಗೊತ್ತಿಲ್ಲ. ವಿಕಾರಕ್ಕೆ ಪಾಠ ಬೇರೆ ಬೇಕೆ? ತಾನೇ ಹೊರಬೀಳುತ್ತದೆ. ಮದುವೆ ಸುಲಭ. ಅದರಲ್ಲಿ ವಿಕಾರ ಶಾಂತಿಯಿದೆ. ಆದರೆ ಜಗತ್ತಿಗೆ ತಂಗಿಯಾಗಿ ಬಾಳುವುದು ಬಲು ಕಷ್ಟ. ಉತ್ಕೃಷ್ಟ ಸೇವಾಭಾವವುಳ್ಳ ಸ್ವಭಾವಸಿದ್ಧ ಬ್ರಹ್ಮಚಾರಿಣಿ ಮಾತ್ರವೇ ಜಗತ್ ಸೋದರಿಯಾಗಬಲ್ಲಳು.'

ಗಾಂಧೀಜೀ ಹೀಗೆ ಬ್ರಹ್ಮಚರ್ಯವನ್ನು ಎತ್ತಿಹಿಡಿಯುವುದರಿಂದ ಅವರು ಗೃಹಸ್ಥಾಶ್ರಮ ವಿರೋಧಿ ಎಂದು ಅನೇಕರು ತಿಳಿಯುತ್ತಾರೆ. ಗಾಂಧೀಜೀ ತಾವೇ ಪೌರೋಹಿತ್ಯ ವಹಿಸಿ ಕೆಲವು ಮದುವೆಮಾಡಿಸಿದಾರೆ; ಆಶ್ರಮದಲ್ಲೇ. ಅದರಿಂದ ಈ ನಿಂದೆ ದೂರವಾಗಬೇಕು. ಗಾಂಧೀಜಿಯೇ ಹೇಳಿದಾರೆ: 'ಗೃಹಸ್ಥಾಶ್ರಮಿಗಳ ವಿಷಯದಲ್ಲಿ ನನಗೆ ಹಗೆಯಿಲ್ಲ. ಅದೂ ಅಗತ್ಯವೆ; ಅದೂ ಚೆಲುವೇ. ಗೃಹಸ್ಥಾಶ್ರಮದ ಗರ್ಭದಲ್ಲಿ ಧರ್ಮವಿದೆ; ಆ ಧರ್ಮ ಸ್ತುತ್ಯ. ಆದರೆ ಸ್ವೇಚ್ಛಾವೃತ್ತಿ ನಿಂದ್ಯ.'

'ಹೆಣ್ಣು ಗಂಡಿನ ದಾಂಪತ್ಯಕ್ಕೆ ಅಡಿಗಲ್ಲು ಭೋಗ. ಅದರೊಳಗಿಂದ ತ್ಯಾಗವನ್ನು ಅರಳಿಸುವ ಪ್ರಯತ್ನವನ್ನು ಮಾಡಿದೆ ಹಿಂದೂಧರ್ಮ. ಎಲ್ಲ ಧರ್ಮಗಳೂ ಮಾಡಿವೆ. ಹೆಂಡತಿ ದಾಸಿಯಲ್ಲ, ಸಮಾನಾಧಿಕಾರವುಳ್ಳ ಗೆಳತಿ, ಸಹಚಾರಿಣಿ; ಇಬ್ಬರೂ ಪರಸ್ಪರ ಗುರುಗಳು. ಆಕೆ ತೊತ್ತಲ್ಲ, ಪಾಲುಗಾತಿ. ನಮಗೆ ಪ್ರತ್ಯಕ್ಷವಾಗಿ ಕಾಣುವ ನಿಸರ್ಗ ಸಹಜವಾದ ಭೇದವಲ್ಲದೆ ಹೆಣ್ಣು ಗಂಡಿನಲ್ಲಿ ನನಗೆ ಬೇರಾವ ಭೇದವೂ ಕಾಣುತ್ತಿಲ್ಲ.'

ಹೆಣ್ಣು ಎಂಬ ಜೀವ ಎಲ್ಲವೂ ಧೀರವಾಗಿ ನಡೆಯುವುದಿಲ್ಲ. ಅಲ್ಲಲ್ಲಿ ಒಂದು ಹೆಜ್ಜೆ ತಪ್ಪುತ್ತದೆ. ಒಂದು ಅಪಶ್ರುತಿ ಕೇಳಿಸುತ್ತದೆ. ಒಬ್ಬ ಅನುಭವಶಾಲಿಯಾದ ದೇಶಸೇವಕ ಒಮ್ಮೆ ಅರಿಯದ ಹುಡುಗಿಯೊಬ್ಬಳನ್ನು ಪಾಪಕ್ಕೆ ಸೆಳೆದ. ಆಕೆಗೆ ಅವನು ಪಾಠ ಹೇಳಿಕೊಡುತ್ತಿದ್ದ. ಇಬ್ಬರಿಗೂ ಮನಸ್ಸು ಕೂಡಿತು. ಮೈ ಕೂಡುವುದು ತಡವಾದೀತೇ? ಆದರೆ ಆಕೆ ಮದುವೆ ಆಗದ ಕನ್ಯೆ. ಈತ ಗೃಹಸ್ಥ. ಈ ಸಂಬಂಧದಿಂದ ಆ ಹುಡುಗಿ

ಬಸಿರಾದಳು. ಏನು ಮಾಡಬೇಕು? ಧರ್ಮಸಂಕಟ ಬಂತು. ಆ ಗಂಡುಸು ಗಾಂಧೀಜಿಯ ಮುಂದೆ ಎಲ್ಲವನ್ನೂ ಒಪ್ಪಿಕೊಂಡ. ಕಣ್ಣೀರು ಸುರಿಸಿದ. 'ಈ ಸಂಬಂಧವನ್ನು ಹೇಗೆ ಮುರಿಯಲಿ; ಅದು ಒಲವಿನ ಗಂಟು. ಕತ್ತಿಹಿರಿದು ಆ ಗಂಟು ಕತ್ತರಿಸಲೇ? ಅಹಿಂಸೆಯ ಹಾದಿಯನ್ನೇ ತುಳಿಯಬೇಕು' ಎಂದರು. ಆ ಹುಡಿಗಿಗೆ ಬಂದಿದ್ದ ವಿಪತ್ತನ್ನು ಮರ್ಯಾದೆಯಿಂದ ದಾಟಲು ಎಲ್ಲ ಏರ್ಪಾಡನ್ನೂ ಮಾಡಿದರು. ಪಾಪ ಕಾರಣನಾದ ಆ ಗಂಡುಸಿಗೆ ಎಲ್ಲ ವ್ಯವಹಾರವನ್ನೂ ಬಿಡಿಸಿ, ಆತನನ್ನು ತಮ್ಮ ಬಳಿಯಲ್ಲೇ ಇಟ್ಟುಕೊಂಡು ಮೂಕಸೇವೆಯ ತಪಸ್ಸಿನಿಂದ ಆ ಅವಮಾನ ಕಳೆದುಕೊಳ್ಳುವಂತೆ ಹೇಳಿದರು.

ನೀಲಾ ನಾಗಿನಿ ಎಂಬ ಅಮೆರಿಕನ್ ಯುವತಿಯ ಕತೆ ಗೊತ್ತಿದ್ದವರು ನಮ್ಮಲ್ಲಿ ಈಗಲೂ ಇದಾರೆ. ಆಕೆ ಇಲ್ಲಿ ಸಮಾಜಸೇವೆ ಮಾಡಲು ಬಂದಳು. ಮುಂದೆ ಅವಳನ್ನು ಗಾಂಧೀಜೀ ವಿನಾ ಮತ್ತಾರೂ ಮಡಿಲಲ್ಲಿ ಹಾಕಿಕೊಳ್ಳುವುದೇ ಕಷ್ಟವಾಯಿತು. ಆಶ್ರಮಕ್ಕೆ ಆಕೆಯನ್ನು ಕಳಿಸಿ ಒಂದು ಕಾಗದ ಬರೆದರು. 'ನೀಲಾನಾಗಿನಿ ಅಲ್ಲಿಗೆ ಬರುತ್ತಾಳೆ. ಅವಳು ಬಹಿರಂಗವಾಗಿಯೇ ವ್ಯಭಿಚಾರ ಮಾಡಿದಾಳೆ, ಸುಳ್ಳಾಡಿದಾಳೆ. ಈವೊತ್ತು ಸಾಧ್ವಿಯಾಗಿ ಕೂತಿದಾಳೆ. ಅದರಲ್ಲಿ ನನಗೆ ಕೃತ್ರಿಮ ಕಾಣಲಿಲ್ಲ; ತನ್ನ ದೋಷ ತನಗೆ ತಿಳಿದ ಮೇಲೆ ನಾನು ಹೇಳಿದಷ್ಟು ಮಾಡಿದಾಳೆ. ಅವಳ ಶುಭ ಸಂಕಲ್ಪದ ಪ್ರಕಾರ ಎಲ್ಲಾದರೂ ಅವಳು ಇರಲು ಸಾಧ್ಯವಾದರೆ ಅದು ಆಶ್ರಮದಲ್ಲೇ. ಬೇರೆ ಕಡೆ ಹೋದರೆ ಬಾಡಿಹೋದಾಳು; ಸ್ವೇಚ್ಛಾಚಾರಿಣಿಯಾದಾಳು. ಅಲ್ಲಿ ಬಂದಾಗ ಆಕೆಗೆ ಪೂರ್ವಜೀವನದ ಮಾತನ್ನು ನೆನಪು ಕೊಡಬಾರದು. ಆಕೆಯೇ ಆ ಮಾತು ತೆಗೆದರೂ ತಪ್ಪೇ. ಕಿರಿಯ ತಂಗಿ ಎಂದು ಅವಳನ್ನು ಭಾವಿಸಿ ಪ್ರೀತಿಯಿಂದ ನಡೆ. ಅವಳ ಜೀವನದ ಬಗ್ಗೆ ನನ್ನನ್ನು ಕೇಳಬೇಡ.'

ಪಾತಿತ್ಯದ ಉದಾಹರಣೆ ಅಲ್ಲೊಂದು ಇಲ್ಲೊಂದು ಸಿಕ್ಕರೆ ಅದನ್ನು ಸೈರಿಸಬಹುದು. ಈ ಪಾತಿತ್ಯವನ್ನೆ ಒಂದು ಕಸಬಾಗಿ ಮಾಡಿ ಹೆಣ್ಣನ್ನು ಶಾಶ್ವತನಾಗಿ ಕಾಮದ ಗೊಂಬೆಯಾಗಿ ಮಾಡಿದ ವೇಶ್ಯಾವೃತ್ತಿಯನ್ನು ಹೇಗೆ ಸೈರಿಸಬೇಕು. ಸೂಳೆ ಮುಪ್ಪಾಗಿ ಜೋಗಿತಿ ಆದಳು ಎಂಬ ವ್ಯಂಗ್ಯ

ವಿನೋದವಾಗಲಿ, ಸೂಳೆ ನಿತ್ಯಸುಮಂಗಲಿ ಎಂಬ ಮೂಢೋತ್ಸಾಹವಾಗಲಿ ಗಾಂಧೀಜಿಗೆ ಸರಿಬಾರದು. ವೇಶ್ಯಾವೃತ್ತಿ ಕಾಮುಕ ಸಮಾಜ ಒಡ್ಡಿದ ಕುತಂತ್ರ. ಅದರಲ್ಲಿ ಬಿದ್ದ ಹೆಣ್ಣಿಗೆ ಸಮಾಜದ ಉತ್ಸವ ಪರಿಷೆಗಳಲ್ಲಿ ಕೊಡುವ ಗೌರವ ಆ ತಂತ್ರದ ಮುಂಕುಬೂದಿ. ಗಾಂಧೀಜಿಗೆ ಪತಿತರಾದ ವೇಶ್ಯೆಯರನ್ನು ನೋಡಿದಾಗ ತಮ್ಮ ಅಕ್ಕತಂಗಿಯರ ನೆನಪಾಗುತ್ತದೆ. ಪತಿತ ಭಗಿನಿಯರು ಎಂದು ಅವರು ಇವರನ್ನು ಕರೆದಾಗ ಅದು ಅಲಂಕಾರದ ನುಡಿಯಲ್ಲ. ಬಿರಿದ ಎದೆಯಿಂದ ಒಸರಿ ಬಂದ ಆರ್ದ್ರವಾಣಿ. ವೇಶ್ಯೆ ಪತಿತಳಲ್ಲ; ಆಕೆ 'ನಮ್ಮ ಪಾತಿತ್ಯದ ಕುರುಹು. ನಮ್ಮ ಕೀಳುತನವನ್ನು ನೆನಪುಕೊಡುವ ವಸ್ತು.' ಅಂಥವರಲ್ಲೂ ಗಾಂಧೀಜೀ ದೊಡ್ಡ ಪರಿವರ್ತನೆ ಮಾಡಿದಾರೆ. ಎಷ್ಟೋ ಜನ ತಮ್ಮ ವೃತ್ತಿಯನ್ನು ಬಿಟ್ಟಿದಾರೆ. ರಾಟೆಯನ್ನು ಶರಣುಹೋಗಿ ಗರತಿಯರಾಗಿದಾರೆ.

ಗಾಂಧೀಜಿಯ ಪ್ರಭಾವವೇ ಅಂಥದು. ಅದರ ಇದಿರು ಕರಗದ ತಾಯಿ ಉಂಟೆ? ನಂದಿಬೆಟ್ಟದಲ್ಲಿದ್ದಾಗ ಬೆಂಗಳೂರಿಂದ ಬಂದ ಹೆಂಗಸರು ಯಾರು ಹಿಂದಿರುಗಬೇಕಾದರೆ ಖಾದಿ ಉಡದೆ ಹೋದವರು? ಒಬ್ಬ ಮುಗುದೆ ಮುತ್ತೈದೆ ಬಂದರು. ಬಾಳೆಯಹಣ್ಣು ದ್ರಾಕ್ಷೆ ತಂದು ಗಾಂಧೀಜಿಯ ಮುಂದಿಟ್ಟು ನಿಂತುಕೊಂಡರು. ಯಾರೋ ಹೇಳಿದರು: 'ಈಕೆಗೆ ಮಕ್ಕಳಿಲ್ಲ. ಮಕ್ಕಳು ಬೇಕು ಎಂದು ತುಂಬ ಆಸೆಯಿದೆ. ಅದಕ್ಕೆ ನಿಮ್ಮ ಆಶೀರ್ವಾದ ಬೇಕು ಎಂದು ಕೋರಿದಾಳೆ.' ಇದೇನು ವರ ಕೊಡುವ ಸಂಜೀವರಾಯನೆಂದು ಈಕೆ ತಿಳಿದಳೋ ಗಾಂಧೀಜಿಯನ್ನು ಎಂದು ಅಲ್ಲಿದ್ದವರಿಗೆ ಆಶ್ಚರ್ಯವೂ ಜುಗುಪ್ಸೆಯೂ ಆಗಿರಬೇಕು. ಗಾಂಧೀಜೀ ಸೂಚಿಸಿದರು: ಮೈಸೂರಿನ ಮಕ್ಕಳಲ್ಲಿ ಯಾರನ್ನಾದರೂ ದತ್ತು ತೆಗೆದುಕೊಳ್ಳಲಿ ಅಂತ. ಆಕೆ ಮುಗುಳುನಗೆ ನಕ್ಕಳು. ಗಾಂಧೀಜೀ ಬಿಡಲಿಲ್ಲ. 'ನಾಡಿನಲ್ಲಿ ಎಷ್ಟು ಜನ ಮಕ್ಕಳಿಲ್ಲ! ಅವರಲ್ಲಿ ಹಸಿದವರಿಗೆ ಅನ್ನ ನೀಡಲಿ, ಬೆತ್ತಲೆ ನಡಗುವವನಿಗೆ ಬಟ್ಟೆ ಕೊಡಲಿ, ಆಶ್ರಯ ಬೇಕಾದವನಿಗೆ ಆಶ್ರಯ ನೀಡಲಿ. ಹಾಗೆ ಮಾಡಿದರೆ ಇಡೀ ಮೈಸೂರಿಗೆ ಆಕೆ ನಿಜವಾದ ತಾಯಿ ಆದಾಳು.' ಆಕೆಯ ಮಾತು ಕನ್ನಡ. ಇವರ ಮಾತು ಇಂಗ್ಲೀಷು. ಆದರೂ ಇವರು ಈ ಮಾತು ಆಡುವಾಗ ಆ ಕಣ್ಣಲ್ಲಿ ಬೆಳಗಿದ ಶಾಂತಿ ಆಕೆಗೆ ಅರ್ಥವಾಯಿತು. ಕನ್ನಡ

ದಲ್ಲಿ ಇವರ ಮಾತು ಹೇಳಿದಾಗ ತಲೆಯಲ್ಲಾಡಿಸಿದಳು. 'ಆಕೆಗೆ ಸಮಾಧಾನವೇ ಕೇಳಿ' ಎಂದರು ಗಾಂಧೀಜೀ. ಸಮಾಧಾನ ಸೂಸುವ ಕಣ್ಣಿಂದ ಗಾಂಧೀಜಿಯನ್ನು ನೋಡಿ ತಲೆಬಾಗಿ ಆಕೆ ಹೊರಟುಹೋದಳು.

ಅದೇ ದಿನ ಬೆಂಗಳೂರಿಂದ ಎರಡು ಗುಂಪು ಹೆಂಗಸರು ಬಂದಿದ್ದರು. ಒಂದು ತಮಿಳು ಮಾತಾಡುವ ಜನ. ಇನ್ನೊಂದು ಕನ್ನಡ. ಕನ್ನಡದ ಕೃಷ್ಣಮ್ಮನ ಗಂಡ ಗಾಂಧೀಜೀ ನೋಡಲೆಂದು ತಮ್ಮ ಒಂದು ಯೋಜನೆಯ ಹಸ್ತಪ್ರತಿ ಬಿಟ್ಟುಹೋಗಿದ್ದರು. ಅದನ್ನು ತಿರುಗಿ ಒಯ್ಯಲು ಆಕೆ ಬಂದಿದ್ದರು. ಅದರಲ್ಲಿ ಯಾವುದೋ ನಾಲ್ಕು ಸಾಲನ್ನು ಗಾಂಧೀಜೀ ಹಿಂದೀಗೆ ಮಾಡಿಕೊಡಬೇಕೆಂದು ಆತನ ಆಸೆ. ಖಾದೀ ಸೀರೆ ಉಟ್ಟು ಬಾರದೆ ಪುಸ್ತಕ ಕೊಡುವುದಿಲ್ಲ ಎಂದರು ಗಾಂಧೀಜೀ. ಒಳ್ಳೇ ಪೀಕಲಾಟಕ್ಕೆ ಬಂತು. ಆಕೆಯ ಜೊತೆಯಲ್ಲಿ ಇನ್ನೊಂದು ಹುಡುಗಿಯೂ ಇತ್ತು. ಇಬ್ಬರೂ ಯೋಚಿಸತೊಡಗಿದರು. ಇವರ ಹಾಗೆಯೇ ತಮಿಳು ಹೆಂಗಸರೂ ಯೋಚನೆ ಮಾಡತೊಡಗಿದರು.

'ಹಾಗಾದರೆ ನೋಡಿ. ನಿಮ್ಮಲ್ಲಿ ಒಬ್ಬರನ್ನೊಬ್ಬರು ಸೋಲಿಸಿಬಿಡಬೇಕು' ಎಂದರು ಗಾಂಧೀಜೀ.

ಕನ್ನಡದ ಕಂದಮ್ಮ—ಆ ಹುಡುಗಿ—ಜಂಬ ಕೊಚ್ಚಿದಳು: 'ಈ ತಮಿಳರನ್ನು ನಾವು ಸೋಲಿಸಿಬಿಡುತ್ತೇವೆ.'

ಅವರೇಕೆ ಹಿಂದೆ ಬಿದ್ದಾರು? ಅವರೂ ಇವರನ್ನು ಸೋಲಿಸುವ ಮಾತಾಡಿದರು.

ಗಾಂಧೀಜೀ ಈ ಮೇಲಾಟಕ್ಕೆ ನಕ್ಕು 'ಹಾಗಾದರೆ ಕನ್ನಡ ತಮಿಳು ಹೆಂಗಸರೆಲ್ಲ ಒಳ್ಳೆಯವರು. ಗಂಡಸರೇ ಕೆಟ್ಟ ಅಲ್ಲವೇ' ಎಂದರು. ಎಲ್ಲರೂ ನಕ್ಕರು.

ಅಲ್ಲಿಯೆ ಕೆಳಗೆ ಖಾದೀ ಭಂಡಾರವಿತ್ತು. ಅಲ್ಲಿ ಖಾದೀ ಸೀರೆ ಕೊಂಡು ಉಟ್ಟು ಬಂದರು ಕೃಷ್ಣಮ್ಮನೂ ಆ ಕಂದಮ್ಮನೂ. ಅಷ್ಟು ಹೊತ್ತಿಗೆ ಯಾರೋ ಕಾಲೇಜು ಶಿಕ್ಷಕರು ಮಾತಾಡುತ್ತಿದ್ದರು. ಕನ್ನಡದ ಈ ಹೆಂಗಸರನ್ನೂ ಅವರ ಈ ಖಾದೀ ವೇಷವನ್ನೂ ನೋಡಿ ಗಾಂಧೀಜಿಗೆ

ಬಹಳ ಹರುಷವಾಯಿತು. ಆ ಶಿಕ್ಷಕರು ತಮಗೆ ಏನಾದರೂ ಒಂದು ಸಂದೇಶ ಕೊಡಬೇಕೆಂದು ಬೇಡಿದಾಗ ಗಾಂಧೀಜೀ ಇವರನ್ನು ತೋರಿಸಿ— 'ಇವರೇ ನನ್ನ ಸಂದೇಶ. ನೋಡಿ, ನಿಮ್ಮ ಹುಡುಗರು ಇವರಿಗಿಂತ ಹಿಂದೆ ಬೀಳದ ಹಾಗಿರಲಿ' ಎಂದರು.

ಒಡನೆಯೆ ಗಾಂಧೀಜೀ ಆ ಹಿಂದೀ ಭಾಷಾಂತರಮಾಡಿ ಆ ಪುಸ್ತಕ ವನ್ನು ಕೃಷ್ಣಮ್ಮನಿಗೆ ಕೊಟ್ಟು 'ನಿನ್ನ ಹೆಂಡತಿಯ ಸಂಕಲ್ಪಶಕ್ತಿಗೂ ಸಜ್ಜ ನಿಕೆಗೂ ಈ ಕೆಲಸ ಇಷ್ಟು ಸುಲಭವಾಯಿತು' ಎಂದು ಆಕೆಯ ಗಂಡನಿಗೆ ಕಾಗದ ಬರೆದುಕೊಟ್ಟರು. ಕೃಷ್ಣಮ್ಮನಿಗೆ ಮನಸ್ಸು ಕರಗಿತು. ಎಂದೆಂದಿಗೂ ಖಾದಿಯನ್ನೇ ಉಡುವುದಾಗಿ ಸಂಕಲ್ಪಮಾಡಿದಳು. ಜೊತೆಯಲ್ಲಿದ್ದ ಹುಡುಗಿ ೧೬-೧೭ ವರ್ಷದಾಕೆ. 'ನಿನ್ನನ್ನು ದತ್ತು ತೆಗೆದುಕೊಳ್ಳಲೇ ಅನಿಸು ತ್ತದೆ ಮಗು ನೀನು ಹೋಗಿ ನಿಮ್ಮ ಶಾಲೆಯಲ್ಲಿ ಹುಡುಗಿಯರಿಗೆಲ್ಲ ಖಾದೀ ಉಡಿಸುತ್ತೀಯಾ?' ಎಂದು ಕೇಳಿದರು. ಗಾಂಧೀಜಿಯ ಆಶೀರ್ವಾದ ಇದ್ದರೆ ಅದೇನು ಮಹಾಕೆಲಸ ಎಂತಲೋ ಏನೋ ಆ ಹುಡುಗಿ ಆಗಲಿ ಎಂದಳು.

ಈ ಸಂದರ್ಭ ಹೀಗಾದರೆ ಬೆಂಗಳೂರು ಮಹಿಳಾ ಸೇವಾ ಸಮಾಜಕ್ಕೆ ಹೋದಾಗ ಇನ್ನೊಂದು ತೆರ. ಅಲ್ಲಿ ೨೨೫ ರೂಪಾಯಿ ನಿಧಿ ಕೊಟ್ಟರು. ಸವಿಯಾದ ಸಂಗೀತ ಹಾಡಿದರು. ಅದರಿಂದ ಇವರಿಗೆ ತೃಪ್ತಿಯಾಗಲಿಲ್ಲ. 'ದರಿದ್ರನಾರಾಯಣನಿಗೆ ತೃಪ್ತಿಯೇ ಇಲ್ಲ. ಆ ಗುಡಾಣದಂಥ ಹೊಟ್ಟೆಯಲ್ಲಿ ನಿಮ್ಮ ಹಣಕ್ಕೂ ನಿಮ್ಮ ಒಡವೆಗೂ ಕೂಡ ಸ್ಥಳವಿದೆ. ನೀವು ಇಟ್ಟಿರುವ ಒಡವೆ ನಿಮ್ಮ ಸ್ತ್ರೀ ಧನ. ನಿಮಗೆ ಬೇಕಾದಹಾಗೆ ದಾನಮಾಡಬಹುದು. ನಿಮಗೆ ಅಧಿಕಾರವಿದೆ. ಆ ಒಡವೆಯಲ್ಲ ನಿಮಗೆ ಅಲಂಕಾರ. ನಿಮ್ಮ ಒಡವೆ ದಾನಮಾಡಿದರೆ ಬಡವರ ಸೇವೆ ಮಾಡಿದಹಾಗೆ ಆದೀತು' ಎಂದರು. ಒಡವೆ ಮಳೆಗರೆದಂತೆ ಸುರಿದವು.

ಹೆಂಗಸರ ಮೈಮೇಲಿನ ಒಡವೆಯನ್ನು ಗಾಂಧೀಜೀ ಸುಲಿದಹಾಗೆ ಯಾರೂ ಸುಲಿದಿಲ್ಲ. ಗಾಂಧೀಜಿಯ ನುಡಿಯಲ್ಲಿ ತಮ್ಮ ಅಖಂಡ ತ್ಯಾಗ ಶಕ್ತಿಯನ್ನು ಹೆಣ್ಣುಜೀವಕ್ಕೆ ತೋರಿಸುವ ಮಂತ್ರವಿದೆ. ಅಂಥ ನೋಟ ಬೇರೆ ಬದುಕಿನಲ್ಲಿ ಕಾಣದು. ಕಾಣದವರು ಅದನ್ನು ನಂಬುವುದೂ ಕಷ್ಟ.

ಬಡಗಾರ ಎಂಬುದು ಮಲಬಾರಿನಲ್ಲಿ ಒಂದೂರು. ಅಲ್ಲಿ ಒಂದು ಬಹಿ

ರಂಗ ಸಭೆ. ಜನ ಬಹಳ ನೆರೆದಿದ್ದರು. ಗಾಂಧೀಜೀ ತಮ್ಮ ಮೋಡಿ ಹಾಕಿದರು; ಹಾಕಿ, ಒಡವೆ ಕೊಡಿರೆಂದು ಸೆರೆಗೊಡ್ಡಿ ಬೇಡಿದರು. ಮಳೆ ಕರೆದಂತಾಯಿತು ಒಂದು ಗಳಿಗೆ. ಕೌಮುದಿ ಹದಿನಾರು ವರುಷದ ಹುಡುಗಿ. ಬಾಪೂಜಿಯ ಬಳಿಗೆ ಬಂದು ತನ್ನ ಕೈಯ ಬಂಗಾರದ ಬಳೆ ತೆಗೆದು ಅವರಿಗೆ ಕೊಟ್ಟು ಅವರ ಹಸ್ತಾಕ್ಷರ ಬೇಡಿದಳು. ಬಾಪೂ ಬರೆಯ ತೊಡಗಿದಾಗ ಕೌಮುದಿಯ ಇನ್ನೊಂದು ಕೈಯೂ ಬರಿದಾಯಿತು. ಆಕೆಯ ಕೈಗೆ ಇದ್ದುದೇ ಒಂದೊಂದು ಬಳೆ. ಬಾಪೂ ನೋಡಿದರು. 'ಒಂದೇ ಸಾಕಮ್ಮ ಒಂದಕ್ಕೇ ಹಸ್ತಾಕ್ಷರ ಕೊಡುತ್ತೇನೆ ತಾಯಿ' ಎಂದರು. ಅದಕ್ಕೆ ಉತ್ತರವಾಗಿ ತನ್ನ ಕೊರಲಿಗೆ ಕೈ ಹಾಕಿದಳು ಹುಡುಗಿ. ಕೊರಲ ಲ್ಲಿದ್ದ ಬಂಗಾರದ ಸರ ತೆಗೆಯುವುದು ಸುಲಭವಾಗಿರಲಿಲ್ಲ. ಆಕೆಯ ನಿಡಿದಾದ ಜಡೆಯಿಂದ ಅದನ್ನು ಬಿಡಿಸಿ ತೆಗೆಯಬೇಕಾಗಿತ್ತು. ಆ ಮಲಬಾರೀ ಮಗು ಅಷ್ಟು ಜನಸಂದಣಿಯಲ್ಲಿಯೂ ನಾಚದೆ ಅದನ್ನು ತೆಗೆದೇಬಿಟ್ಟಳು. ಜನ ಹರುಷದಲ್ಲಿ ಓಲಾಡಿದರು.

ಬಾಪೂಗೆ ಅಚ್ಚರಿಯಾಯಿತು. 'ಅಲ್ಲಮ್ಮ; ನಿಮ್ಮ ತಂದೆ ತಾಯಿಯನ್ನು ಕೇಳಬೇಡವೆ ಮಗು?' ಎಂದರು. ಕೌಮುದಿ ಮರುಮಾತೇ ಆಡಲಿಲ್ಲ. ಆಕೆಯ ತ್ಯಾಗ ಇನ್ನೂ ಮುಗಿದಿರಲಿಲ್ಲವೋ ಏನೋ! ಕಿವಿಗೆ ಕೈ ಹಾಕಿದಳು. ಜನಕ್ಕೆ ಇದೆಲ್ಲ ಮಿಂಚಿನಂತೆ ಕಣ್ಣು ಕುಕ್ಕಿತು. ಕಲ್ಲು ಗೊಂಬೆಗಳಾದರು. ಸಭೆಯೆಲ್ಲ ಒಂದೇ ಸಲ ಹೋ ಎಂದರು. ಆನಂದದ ಉಬ್ಬರ ತಡೆಯಲಾಗಲಿಲ್ಲ. ಕುಣಿದಾಡಿದರು. ಬಾಪೂಗೆ ಯಾರೋ ಹೇಳಿದರು. ಆ ಒಡವೆಗಳನ್ನೆಲ್ಲ ಹರಾಜು (ಲಿಲಾವು) ಮಾಡುತ್ತ ನಿಂತಿದ್ದಾತನೇ ಕೌಮುದಿಯ ತಂದೆ. ಒಂದೊಂದಾಗಿ ಆತನೇ ಮಗಳ ಒಡವೆ ಹರಾಜು ಮಾಡುತ್ತಿದ್ದ. ಆತನ ಕಣ್ಣಿನಲ್ಲಿ ಒಂದು ಅಲೌಕಿಕಾನಂದದ ಹೊಳಪು ಮಿನುಗುತ್ತಿತ್ತು. ಬಾಪೂಗೆ ತಡೆಯಲಾಗಲಿಲ್ಲ, ಆದರೂ ಕೌಮುದಿಗೆ ಹೇಳಿದರು. 'ಈಗ ಒಡವೆಯೇನೋ ಕೊಟ್ಟೆ ಕೌಮುದಿ. ಮತ್ತೆ ಅವನ್ನು ಎಂದೂ ಇಡದಿದ್ದರೆ ಈ ತ್ಯಾಗಕ್ಕೆ ಬೆಲೆ ತಾಯಿ.' ಕೌಮುದಿಗೆ ವಯಸ್ಸು ಎಳದು. ಆದರೂ ಹೃದಯ ಬೆಳೆದಮ್ದು; ದೃಢಕಂಠದಿಂದ ಆ ದೇವತೆ ತಥಾಸ್ತು ಎಂದಳು.

ಇಲ್ಲಿಗೆ ಬಾಪೂಜಿಯ ಮನಸ್ಸಿನ ಅಣೆಕಟ್ಟು ಒಡೆದುಹೋಯಿತು. ಕೌಮುದಿಗೆ ಹಸ್ತಾಕ್ಷರದ ಪುಸ್ತಕ ಕೊಡುವಾಗ ಎದೆ ತುಂಬಿಬಂತು. 'ಕೌಮುದಿ, ನೀನು ಕಳಚಿಕೊಟ್ಟ ಒಡವೆಗಿಂತ ನಿನ್ನ ತ್ಯಾಗವೇ ಹಿರಿಯ ಒಡವೆ ತಂಗೀ' ಎಂದರು.

ಹೆಂಗಸನ್ನು ಹೇಡಿ ಎಂದು ಗಾಂಧೀಜೀ ತಿಳಿದಿಲ್ಲ ಎಂದೇ ಈ ವಿಲಕ್ಷಣ ಜಾಗೃತಿ ಸಾಧ್ಯವಾಗಿದೆ. ಭಾರ್ಯೆ ಎಂಬ ಭಾವ ಗಾಂಧೀಜಿಗೆ ಸಮ್ಮತವಿಲ್ಲ. ಹೆಂಡತಿ ಗಂಡನಿಗೆ ಹೊರೆಯಲ್ಲ. ಇಬ್ಬರೂ ಸರಿಸಮ. 'ಅವನು ಸ್ವಾಮಿಯಾದರೆ ಈಕೆ ಸ್ವಾಮಿನಿ.' ಹೆಂಗಸು ಕೈಲಾಗದ ಪ್ರಾಣಿ, ಆಕೆಯ ಮಾನ ಕಾಪಾಡಲು ಗಂಡಸು ಬೇಕೇಬೇಕು ಎಂದು ತಿಳಿವುದು ತಪ್ಪು. 'ಹೆಣ್ಣಿನ ಮಾನ ಗಂಡಸು ಕಾಯಬಲ್ಲನೆ? ಅಂಥ ಉದಾಹರಣೆಯನ್ನು ನಾನು ಅರಿಯೆ. ಕಾಯಬೇಕೆಂದರೂ ಅವನಿಗೆ ಸಾಧ್ಯವೆ? ಸೀತೆಯ ಮಾನವನ್ನು ರಾಮಚಂದ್ರ ಕಾಯ್ದನೆ? ದ್ರೌಪದಿಯ ಮಾನ ಕಾಯ್ದವರು ಪಾಂಡವರೆ? ಇವರಿಬ್ಬರು ಸತಿಯರೂ ತಮ್ಮ ಪವಿತ್ರ ಗುಣದ ಬಲದಿಂದಲೇ ಮಾನ ಉಳಿಸಿಕೊಂಡರು.'

ಅಹಮದಾಬಾದಿನಲ್ಲಿ ಜ್ಯೋತಿಸಂಘವೆಂಬ ಮಹಿಳಾ ಸಮಾಜ ಒಂದಿದೆ. ಆ ಊರಿನ ಪುಣ್ಯವಂತರ ಗುಂಪು ಅದು. ಹೆಣ್ಣಿನ ಪಾತ್ರ ರಚನೆ ಮಾಡುವಾಗ ಈಚಿನ ಸಾಹಿತ್ಯದಲ್ಲಿ ಕಾಣಬಂದ ರೀತಿಯನ್ನು ಖಂಡಿಸಿ ಗುಜರಾತಿ ಸಾಹಿತ್ಯ ಸಮ್ಮೇಳನಕ್ಕೊಂದು ಪತ್ರ ಬರೆದಿದ್ದರು ಆ ಸಂಘದವರು. ಗಾಂಧೀಜಿಗೆ ಅವರ ದೂರು ಸರಿಕಂಡಿತು.

"ಈಗಿನ ಸಾಹಿತಿಗಳು ಬಣ್ಣಿಸುವ ಹೆಣ್ಣಿನ ಚಿತ್ರ ಪೂರಾ ಸುಳ್ಳು ಎನ್ನುತ್ತಾರೆ ಅವರು. ಸ್ತ್ರೀಪಾತ್ರ ಪೋಷಣೆಯಲ್ಲಿ ನೀವು ತೋರುವ ಮನೋಜಾಡ್ಯವನ್ನು, ಹೆಣ್ಣಿನ ಮೈಯ ವರ್ಣನೆಯಲ್ಲಿ ನೀವು ತೋರುವ ಆಸಕ್ತಿಯನ್ನು ನೋಡಿ ಅವರು ಬೇಸತ್ತಿದಾರೆ. ಅವರ ಶಕ್ತಿ ಸೌಂದರ್ಯಗಳೆಲ್ಲ ಅವರ ರೂಪಿನಲ್ಲೆ, ಗಂಡುಗಣ್ಣಿನ ಹೆಣ್ಣು ಹುಚ್ಚನ್ನು ತೃಪ್ತಿಪಡಿಸುವುದರಲ್ಲೆ ಇದೆಯೆ? ಅಬಲೆ ಕೈಲಾಗದವಳು; ಮನೆಗೆಲಸವೆ ಅವಳ ಮಹಾ ಕಾರ್ಯ; ಗಂಡನೇ ಅವಳ ದೇವರು–ಎಂದೇಕೆ ಹೆಣ್ಣನ್ನು ವರ್ಣಿಸು

ತ್ತೀರಿ? ಹೀಗೆಯೇ ಸದಾಕಾಲ ನಡೆಯಬೇಕೇ? ಹೆಣ್ಣು ಅಪ್ಸರೆಯೂ ಅಲ್ಲ, ಆಟದ ಗೊಂಬೆಯೂ ಅಲ್ಲ, ರಾಗ ವಿಕಾರಗಳ ಸಂಗ್ರಹವೂ ಅಲ್ಲ. ಗಂಡಸರಂತೆ ಹೆಂಗಸರದೂ ಮಾನವಜೀವ. ಅವರಿಗಿದ್ದಂತೆಯೆ ಹೆಂಗಸರಿಗೂ ಸ್ವಾತಂತ್ರ್ಯ ಇದೆ.

"ನಮ್ಮ ಸಾಹಿತ್ಯದಲ್ಲಿ ಹೆಣ್ಣೆಂದರೆ ದೇವಾಧಿದೇವತೆ ಎಂಬ ಭಾವ ತುಂಬಿದೆಯಂತೆ. ಈ ಭಾವ ತಪ್ಪು; ಪೂರಾ ತಪ್ಪು. ಒಂದು ಒರೆಗಲ್ಲು ಕೊಡುತ್ತೇನೆ ನೋಡಿ. ಹೆಣ್ಣಿನ ಬಗ್ಗೆ ಬರೆವಾಗ ನೀವು ಅವರನ್ನು ಏನೆಂದು ತಿಳಿದು ಬರೆಯುತ್ತೀರಿ? ನನ್ನ ಮಾತು ಕೇಳಿ, ಲೇಖನಿ ಹಿಡಿಯುವ ಮೊದಲು ಹೆಣ್ಣು ಎಂದರೆ ನಿಮ್ಮ ತಾಯಿ ಎಂದು ಧ್ಯಾನಿಸಿಕೊಳ್ಳಿ. ಆಗ, ಬಾಯಾರಿದ ಭೂಮಿಗೆ ತಂಪು ನೀಡುವ ಮಳೆನೀರು ಆಕಾಶದಿಂದ ಸುರಿವಂತೆ, ನಿಮ್ಮ ಲೇಖನಿಯಿಂದ ಪವಿತ್ರ ಸಾಹಿತ್ಯ ಹರಿದೀತು ಇಂದು ನಿಮ್ಮ ಹೆಂಡತಿಯಾಗಿದ್ದಾಳು ಹೆಣ್ಣು. ಇದಕ್ಕೆ ಹಿಂದೆಯೇ, ಮೊದಲೇ, ಆಕೆ ನಿಮ್ಮ ತಾಯಿ ಆಗಿದ್ದಳೆಂಬುದನ್ನು ಮರೆಯಲೇಕೆ? ಹೆಣ್ಣಿನ ಆಧ್ಯಾತ್ಮ ದಾಹವನ್ನು ವರ್ಣಿಸುವ ಬದಲು ಅವರ ರಾಗ ಮೋಹಗಳನ್ನು ಉದ್ದೀಪನಗೊಳಿಸುವ ಸಾಹಿತ್ಯವನ್ನೆ ನೀವು ಬರೆಯುವುದು? ನೀವು ಕಟ್ಟಿದ ಹುಚ್ಚು ಕಲ್ಪನೆಗೆ ಸರಿಯಾಗಿ ತಾವು ನಡೆಯಬೇಕೆಂಬ ಚಪಲವನ್ನು ತಿಳಿವಿಲ್ಲದ ಹೆಂಗಸರಲ್ಲಿ ಹುಟ್ಟಿಸಿ ಏನು ಮಾಡಬಯಸಿದೀರಿ? ಹೆಣ್ಣಿನ ರೂಪವರ್ಣನೆಯ ಸೂಕ್ಷ್ಮಾತಿ ಸೂಕ್ಷ್ಮ ವಿವರಗಳು ಸಾಹಿತ್ಯಕ್ಕೆ ಅಷ್ಟು ಅಗತ್ಯವೇನು? ಉಪನಿಷತ್ತುಗಳಲ್ಲಾಗಲಿ, ಕೊರಾನು ಬೈಬಲುಗಳಲ್ಲಾಗಲಿ ಅಂಥದೇನಾದರೂ ಇದೆಯೆ? ನಿಮಗೆ ಗೊತ್ತೆ? ಬೈಬಲಿಲ್ಲದ ಇಂಗ್ಲೀಷು ಸಾಹಿತ್ಯ ಶೂನ್ಯರಾಶಿ. ಆ ಸಾಹಿತ್ಯಕ್ಕೆ ಷೇಕ್ಸ್‌ಪಿಯರ್ ಒಂದು ಪಾಲಾದರೆ ಬೈಬಲ್ ಮೂರು ಪಾಲು. ಕೊರಾನು ಇಲ್ಲದಿದ್ದರೆ ಅರಬ್ಬೀ ಭಾಷೆಯನ್ನು ಜಗತ್ತು ಮರೆತೇ ಹೋಗುತ್ತಿತ್ತು. ಹಾಗೆಯೆ ತುಲಸೀದಾಸನಿಲ್ಲದೆ ಹಿಂದೀ ಸಾಹಿತ್ಯವೆ? ಊಹಿಸಲೂ ಸಾಧ್ಯವಿಲ್ಲವಲ್ಲ! ತುಲಸೀದಾಸ ಬರೆದುದರಲ್ಲಿ ಹೆಣ್ಣಿನ ಬಗ್ಗೆ ಈಗಿನ ಸಾಹಿತ್ಯದಲ್ಲಿ ಕಾಣುವ ರೀತಿಗೆ ಹೋಲುವಂಥದೇನಾದರೂ ಇದೆಯೆ, ಹೇಳಿ."

ಹೀಗೆ ಆ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಗಾಂಧೀಜೀ ಲೇಖಕರಿಗೆ ಬುದ್ಧಿ ಹೇಳಿದರು.

ಅಹಿಂಸೆಯ ಮಾತು ಎತ್ತಿದಾಗೆಲ್ಲ ಹೆಣ್ಣಿನ ಮಾನದ ಪ್ರಶ್ನೆ ಒಂದನ್ನು ತಂದು ನಿಲ್ಲಿಸುವುದು ಸಹಜವಾಗಿದೆ. ದುಷ್ಟನೊಬ್ಬ ಹೆಂಗಸನ್ನು ಕಾಡಿದರೆ ಆ ಅತ್ಯಾಚಾರವನ್ನು ನಿರೋಧಿಸದೆ ಇರುವುದು ಹೇಗೆ? ಗಾಂಧೀಜೀ ಅದಕ್ಕೆ ಚಲೋ ಉತ್ತರ ಕೊಟ್ಟಿದ್ದಾರೆ. ಆಕೆ ನಿರೋಧಿಸಬೇಕು; ಅಗತ್ಯವಾಗಿ. ಅದು ಆಕೆಯ ಧರ್ಮ. ಆದರೆ ಕತ್ತಿ ಕಠಾರಿ ಹಿಡಿದು ಅಲ್ಲ; ಹಿಂಸೆಯಿಂದ ಅಲ್ಲ. ತನ್ನ ಜೀವ ಕೊಟ್ಟಾದರೂ ನಿರೋಧಿಸಬೇಕು. ಹೆಣ್ಣಿನ ಮಾನ ಸಂರಕ್ಷಣೆ ಗಂಡಿನ ಆಸರೆಯಲ್ಲಿಲ್ಲ; ತನ್ನ ಪವಿತ್ರ ಚರಿತ್ರೆಯೇ ಆ ಆಯುಧ. 'ಒಂದು ವೇಳೆ ಅಂಥ ಅತ್ಯಾಚಾರದ ಸಂದರ್ಭ ಬಂದರೆ ಹೆಣ್ಣು ಸತ್ತಾಳು; ಸೋಲಲಿಕ್ಕಿಲ್ಲ. ಆದರೆ ಒಬ್ಬ ಹುಡುಗಿಯನ್ನು ಹೆಡಮುರಿಗೆ ಕಟ್ಟಿಹಾಕಿ ಬಾಯಿಗೆ ಬಟ್ಟೆ ತುರುಕಿದರೆ ಆಕೆಗೆ ಬಿಡಿಸಿಕೊಳ್ಳಲು ಕಸುವಿಲ್ಲದೆ ಹೋಗುತ್ತದೆ. ಅಂಥ ಹುಡುಗಿಗೆ ನಾನು ತಿಳಿದಷ್ಟು ಸುಲಭವಲ್ಲ ಸಾಯುವುದು ಎಂದು ಹೇಳುತ್ತಾರೆ. ಮಾನ ಕಾಪಾಡಿಕೊಳ್ಳುವ ಇಷ್ಟ ಬಲವಾಗಿದ್ದರೆ ಎಷ್ಟೇ ಕಟ್ಟಿಹಾಕಿದರೂ ಆಕೆ ಆ ಕಟ್ಟುಗಳನ್ನೆಲ್ಲ ಹರಿಯಬಲ್ಲಳು ಎಂದು ಹೇಳಲು ನನಗೆ ಸಾಹಸವಿದೆ. ಆ ದೃಢ ಸಂಕಲ್ಪವೇ ಆಕೆಗೆ ಸಾಯಲು ಬಲವನ್ನು ನೀಡುತ್ತದೆ. ಇಂಥ ಸಾಮರ್ಥ್ಯ ಸುಮ್ಮನೆ ಬಾರದು. ಅದಕ್ಕೆ ತಕ್ಕ ಶಿಕ್ಷಣ ಬೇಕು.'

'ಇದಕ್ಕಿಂತಲೂ ಚಿಲ್ಲರೆ ಮಾತಿಗೆ ಹೆಣ್ಣು ತನ್ನ ಜೀವ ಕೊಡುತ್ತಾಳೆ; ನನಗೆ ಗೊತ್ತಿದೆ. ರೂಢಿಯಲ್ಲಿರುವ ವಿದ್ಯಾಭ್ಯಾಸ ನಾನೊಲ್ಲೆ ಎಂದುದಕ್ಕೆ ಇಪ್ಪತ್ತು ವರುಷದ ಹುಡುಗಿಯೊಬ್ಬಳನ್ನು ಬಲು ಗೋಳಾಡಿಸಿದರಂತೆ; ಆ ಹುಡುಗಿ ಮೊನ್ನೆ ಸುಟ್ಟುಕೊಂಡು ಸತ್ತುಹೋದಳು. ಎಂಥ ಪ್ರಶಾಂತ ಗಾಂಭೀರ್ಯ, ಧೈರ್ಯದಿಂದ ಆಕೆ ಅಗ್ನಿಪ್ರವೇಶ ಮಾಡಿದಳೋ! ಸಾದಾ ದೀಪದಿಂದ ಸೀರೆಗೆ ಬೆಂಕಿ ಹಚ್ಚಿದಳು; ತುಟಿ ಎರಡು ಮಾಡಲಿಲ್ಲ, ಹಾ ಎನ್ನಲಿಲ್ಲ; ಆ ಘೋರ ದುರಂತ ಮುಗಿವ ತನಕ ಪಕ್ಕದ ಕೋಣೆಯೊಳಗಿದ್ದವರಿಗೆ ಕೂಡ ಏನೂ ಗೊತ್ತಾಗಲಿಲ್ಲ. ಆಕೆಯಂತೆ ಎಲ್ಲರೂ ಮಾಡಲಿ

ಎಂದಲ್ಲ ನಾನೀ ಮಾತು ಹೇಳುವುದು ; ಹೆಣ್ಣು ತನ್ನ ಜೀವನವನ್ನು ಹೇಗೆ ಬಲಿ ಕೊಡಬಲ್ಲಳೆಂದು ತೋರಿಸಲಿಕ್ಕೆ!'

'ಹೆಣ್ಣಿನ ಮನಸ್ಸಿಗೆ ವಿರೋಧವಾಗಿ ಅವಳನ್ನು ಕೆಡಿಸುವುದು ಅಸಾಧ್ಯ. ಅಸಂಭವ ಎನ್ನುತ್ತೇನೆ ನಾನು. ಆಕೆ ಅಂಜಿದರೆ, ಇಲ್ಲವೆ ತನ್ನ ನೀತಿ ಬಲವನ್ನು ಅರಿತುಕೊಳ್ಳಲಾರದೆ ಹೋದರೆ, ಅತ್ಯಾಚಾರ ನಡೆದೀತು, ಅಷ್ಟೆ. ಮಾನ ಕೆಡಿಸಬಂದ ದುರುಳನ ಮೈ ಕಸುವು ತನ್ನ ಅಳವಿಗೆ ಮೀರಿದರೆ, ಅವನ ಕೈಗೆ ದಕ್ಕುವ ಮೊದಲೇ ಆಕೆಯ ಪ್ರಾಣ ಹಾರಿಹೋದೀತು ; ಆಕೆಯ ಶುದ್ಧ ಚರಿತ್ರೆಯೇ ಆಕೆಗೆ ಆ ಬಲ ಕೊಡುತ್ತದೆ. ಸೀತೆಯ ದೃಷ್ಟಾಂತ ನೋಡು. ರಾವಣನ ದೇಹಬಲದ ಮುಂದೆ ಸೀತೆ ಗುಬ್ಬಚ್ಚಿ ; ಆದರೆ ಆಕೆಯ ನೀತಿಬಲ, ಆಕೆಯ ಪವಿತ್ರ ಚರಿತ್ರೆಯ ಇದಿರು ಆ ರಾಕ್ಷಸ ಬಲವೂ ಸೊಪ್ಪಾಯಿತು. ಹತ್ತುಸಾವಿರ ಮೋಸದ ಮಾತು, ರಮಿಸುವ ನುಡಿ ಹೇಳಿ ನೋಡಿದ ; ಆಕೆಯೊಪ್ಪದೆ ಆಕೆಯ ಮೈ ಮುಟ್ಟಲಿಕ್ಕೂ ಆಗ ಲಿಲ್ಲ, ಹಿಂಜರಿದ.'

ಇದೆಲ್ಲ ಬರೀ ಕನಸು. ಎಷ್ಟಾದರೂ ಹೆಣ್ಣು ಅಬಲೆ ಎನ್ನುವವರಿದ್ದಾರೆ. ಅವರನ್ನು ಕಂಡು ಗಾಂಧೀಜೀ ಕೆರಳಿಬಿಡುತ್ತಾರೆ. 'ಅಬಲೆಯೆ? ನಮ್ಮ ನಾಡಿನ ಹಳ್ಳಿಗಳಿಗೆ ಬನ್ನಿ ತೋರಿಸುತ್ತೇನೆ ಹೆಣ್ಣು ಅಬಲೆಯೋ ಸಬಲೆಯೋ? ಗಂಡಸಿಗಿಂತ ಹೆಂಗಸು ಹೆಚ್ಚು ಶಕ್ತಿವಂತಳು. ಅಲ್ಲಿ ಯಾವ ಹೆಂಗಸಾದರೂ ನಿಮಗೆ ಹೇಳಿಯಾಳು : ಹೆಣ್ಣಿಗೆ ಬೇಡ ಎನಿಸಿದರೆ ಹೆಣ್ಣು ಹೊಟ್ಟೆಯಲ್ಲಿ ಹುಟ್ಟಿದ ಯಾವ ಗಂಡಸೂ ಆಕೆಯ ಮೇಲೆ ಕೈಮಾಡಲಾರ. ನನ್ನ ದಾಂಪತ್ಯಾನುಭವದಿಂದ ಈ ಮಾತು ಹೇಳುತ್ತೇನೆ. ನನ್ನ ಅನುಭವ ಕೇವಲ ವೈಯುಕ್ತಿಕವಲ್ಲ. ಅಂಥ ಉದಾಹರಣೆ ಬೇರೆ ಇಲ್ಲವೇ ಇಲ್ಲವೆಂದಲ್ಲ. ಮಾನದ ಸೂರೆಗಿಂತ ಸಾವೇ ಲೇಸು ಎಂಬ ಮನೋಬಲವಿದ್ದರೆ ಎಂಥ ರಾವಣನೂ ಹೆಣ್ಣನ್ನು ಕೆಡಿಸಲಾರ. ಊಹುಂ ; ಇದು ಇಬ್ಬರ ಆಟ.'

ಅದು ಇಬ್ಬರ ಆಟ. ಗಂಡು ಹೆಣ್ಣು ಮನಸ್ಸಿನಿಂದ ಕೂಡದೆ ಅವರ ಮೈ ಕಲೆತರೆ ತಾನೆ ಏನು? ಹೆಣ್ಣಿನ ಮನಸ್ಸು ಇಲ್ಲದೆಯೆ–ಆಕೆಯ ಮನಸ್ಸಿಗೆ ವಿರೋಧವಾಗಿಯೂ ಕೂಡ, ಆಕೆಯ ಮೈಯನ್ನು ಬಳಸಲು ಸಾಧ್ಯವಿದೆ. ಇದರಿಂದ ಗಂಡಿಗೊಂದು ನೀತಿ, ಹೆಣ್ಣಿಗೊಂದು ನೀತಿ ಆಗಿದೆ.

ಇವನಿಗೆ ಇಲ್ಲದ ಅವಮಾನ ಆಕೆಗೆ ಇದೆ ಎಂಬ ದುಷ್ಟ ನೀತಿಯೊಂದು ಪ್ರಚಾರದಲ್ಲಿದೆ. ಈ ನೀತಿ ಹೆಣ್ಣಿಗೆ ಗಂಡು ಎರೆದ ಮಂಕುಬೂದಿ. ಗಾಂಧೀಜೀ ಈ ನೀತಿಯನ್ನು ತುಚ್ಛವಾಗಿ ಕಾಣುತ್ತಾರೆ. ಅದು ಅಸತ್ಯ, ಮೋಸ. ಯಾರು ಯಾರಿಗೆ ಅವಮಾನ ಮಾಡಬಲ್ಲರು? ಗಂಡಿಗೇ ಆಗಲಿ ಹೆಣ್ಣಿಗೇ ಆಗಲಿ ಇನ್ನೊಬ್ಬರು ಮಾಡಿದುದು ಅಫಮಾನವಾದೀತೆ? ನಮಗೆ ನಾವು ಮಾಡಿಕೊಂಡುದೇ ಅವಮಾನ!

೧೯೪೫ ರಲ್ಲಿ ಗಾಂಧೀಜೀ ಬಂಗಾಳಕ್ಕೆ ಹೋಗಿದ್ದರು. ಅಲ್ಲಿ ಮಹಿಷ ದಳಕ್ಕೆ ಮಿಡ್ನಪೂರಿಗೆ ಹೋಗಿದ್ದಾಗ ಒಂದು ಸಂಗತಿ ನಡೆಯಿತು. ಅಲ್ಲಿ ಅವರನ್ನು ನೋಡಲು ಬಂದ ಕೆಲವರು ಮಹಿಳೆಯರು ಗುಂಪಿಗೆ ದೂರವಾಗಿ ನಿಂತಿದ್ದರು. ನಾಚಿಕೆ, ಅಂಜಿಕೆ ಅವರ ಮೋರೆಯನ್ನು ತಗ್ಗಿಸಿತ್ತು. ಏನೋ ಭೀತಿ ಅವರ ಕಣ್ಣಲ್ಲಿತ್ತು. ಏಕೆ ದೂರ ನಿಂತಿದೀರಿ ಎಂದು ಗಾಂಧೀಜೀ ಕೇಳಿದರು. ಉತ್ತರ ಬರಲಿಲ್ಲ.

ಹತ್ತಿರ ಇದ್ದವರು ಯಾರೋ ಹೇಳಿದರು – ಇವರೆಲ್ಲ ಆಗಸ್ಟ್ ಕ್ರಾಂತಿ ಯಲ್ಲಿ ಪೋಲೀಸರ, ಸಿಪಾಯಿಗಳ ಅತ್ಯಾಚಾರಕ್ಕೆ ತುತ್ತಾಗಿ ಮಾನ ಕಳೆದು ಕೊಂಡ ಹೆಂಗಸರು. ಅವರ ಮನೆಯವರು ಅವರನ್ನು ತಿರಸ್ಕರಿಸಿರಲಿಲ್ಲ. ಆದರೂ ಅವರಿಗೇ ಒಂದು ನೋವು, ಸಂಕಟ; ತಾವು ಎಂಜಲು ಎಂಬ ಭಾವನೆ. ತಮ್ಮ ಪಾತಿವ್ರತ್ಯ ಭಂಗವಾಯಿತೆಂಬ ಅಳುಕು. ಸರಾಗವಾಗಿ ಸಮಾಜದಲ್ಲಿ ಓಡಾಡುತ್ತಿರಲಿಲ್ಲ. ನಾಚಿಕೆಯಿಂದ ನೀರಾಗಿದ್ದರು.

'ನಾಚಿಕೆ! ಅವರಿಗೇಕೆ ನಾಚಿಕೆ? ಏನು ಮಾಡಿದುದಕ್ಕಾಗಿ ನಾಚಿಕೆ? ಅತ್ಯಾಚಾರ ಮಾಡಿದವರು ನಾಚಬೇಕು; ಸಮಾಜದ ತೀರ್ಪಿಗೆ ಅಂಜಬೇಕು. ತೋಳದ ತಪ್ಪಿಗೆ ಕುರಿಗೆ ಶಿಕ್ಷೆಯೆ?' ಗಾಂಧೀಜೀ ನಗು ನಗುತ್ತ ಹೇಳಿದರು.

ಆ ಹೆಂಗಸರಿಗೆ ತಮ್ಮ ತಲೆಯ ಮೇಲಿದ್ದ ಹಿಮಾಲಯವೇ ಕೆಳಗೆ ಬಿದ್ದಂತಾಯಿತು. ಅವರ ಸಪ್ಪೆ ಮೋರೆಯಲ್ಲಿ ಮರಳಿ ಕಳೆ ಬಂದಿತು. ಮುದುಡಿಕೊಂಡಿದ್ದ ಮೈ ಮತ್ತೆ ದೃಢವಾಯಿತು. ಇನ್ನೇನು ಅಂಜಿಕೆ? ಇನ್ನೆತ್ತಣ ಸಂಕೋಚ? ದೇವರೇ ಬಂದು ತೊಳೆದ ಮೇಲೂ ಪಾಪವೆ?

ಈ ಅಭಯಕ್ಕೆ ಮಿಗಿಲಾದುದು ಸ್ತ್ರೀ ಜನಕ್ಕೆ ಹಿಂದೆ ಯಾವಾಗ ತಾನೆ ದೊರೆತಿತ್ತು ?

'ಅವರಿಗೆ ಸಮ್ಮತವಲ್ಲದುದರಲ್ಲಿ ಯಾರ ಮಾನ ಮರ್ಯಾದೆಯೂ ಹೋಗದು. ಒಬ್ಬ ಪಶು ಹೆಂಗುಸಿಗೆ ಮೈಮೇಲೆ ಎಚ್ಚರ ತಪ್ಪಿಸಿ ಆಕೆಯ ಮೈಯನ್ನು ಕೂಡಿದರೆ–ಆ ಅತ್ಯಾಚಾರದಿಂದ ಆಕೆಗೆ ಮಾನಗೇಡೇ? ಕುಟಿಲೆಯಾದ ಹೆಂಗುಸು ಒಬ್ಬಳು ಗಂಡುಸಿಗೆ ಮದ್ದು ಉಣಿಸಿ, ಮಾಟಮಾಡಿ, ಅವನಿಗೆ ಬುದ್ಧಿ ಕಳೆದು ತನ್ನ ಮನಸಿಗೆ ಬಂದಂತೆ ಅವನನ್ನು ಆಡಿಸಿದರೆ ಅವನ ಮಾನಕ್ಕೆ ಲೋಪವೇ? ಇವನಿಗೆ ಹೋಗದ ಮಾನ ಆಕೆಗೆ ಏನು ಹೋಯಿತು?'

ಡಾಕ್ಟರ್ ಮಾಡ್ ರಾಯಡನ್ ಗಾಂಧೀಜೀಗೆ ಸ್ತ್ರೀಲೋಕದ ಕೃತಜ್ಞತೆಯನ್ನು ಸಲ್ಲಿಸುತ್ತ ಹೇಳಿದ ಮಾತು ತುಂಬ ಮನೋಹರವಾಗಿದೆ. 'ಮಹಾತ್ಮನಿಂದ ನಾನು ನಿರೀಕ್ಷಿಸುವ ಹಿತ ಹೆಣ್ಣಿಗಾಗಿ, ಹೆಣ್ಣಾಗಿ ಪ್ರಪಂಚದಲ್ಲಿ ಸಾವಿಗಿಂತ ಘೋರವಾದವು ಇವೆ. ಅವಮಾನ ಅಂಥ ಘೋರವೇ ಸರಿ. ಆದರೆ ಇನ್ನೊಬ್ಬರು ಮಾಡಿದ ಕೃತ್ಯದಲ್ಲಿಲ್ಲ ಅವಮಾನ; ನಾವು ಮಾಡಿದುದರಲ್ಲಿ ಇದೆ. ಇಂಥ ಉತ್ತರ ಕೊಡಲು ಗಾಂಧೀಜಿಯಲ್ಲದೆ ಬೇರೆ ಯಾರಿಗೆ ಎದೆ ಇ ೆ? ಮಾನಿನೀ ಪ್ರಪಂಚವೆಲ್ಲ ಅದಕ್ಕಾಗಿ ಅವರಿಗೆ ಗೌರವದ ಆರತಿಯನ್ನು ಬೆಳಗಬೇಕು.'

ಕಸ್ತೂರಿಬಾ

ಮಹಾಪುರುಷರ ಸಂಗ ಹೆಜ್ಜೇನು ಸವಿದಂತೆ ಎಂದು ಹೇಳಿದಾಗ ಸರ್ವಜ್ಞಮೂರ್ತಿ ತನ್ನ ಬಿರುದನ್ನು ಮರೆತಿರಬೇಕು. ಇಲ್ಲವೆ, ಎಲ್ಲ ಬಲ್ಲವರಿಲ್ಲ ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡಿರಬೇಕು. ತಿಳಿದವನು ಹಾಗೆ ಹೇಳಬಹುದೆ ತಾನು?

ಶ್ರೀರಾಮಚಂದ್ರನಿಗಿಂತ ಸಜ್ಜನ ಉಂಟೆ? ಅಂಥವನ ಕೈಹಿಡಿದು ಸೀತಾದೇವಿ ಪಟ್ಟ ಸುಖವೇನು? ಹದಿನಾಲ್ಕು ವರ್ಷ ವನವಾಸ, ಅದರಲ್ಲಿ ರಾಕ್ಷಸಪೀಡೆ, ಅಶೋಕವನದ ಶೋಕ–ಇದನ್ನೆಲ್ಲ ಮೀರಿಸಿ ಅಗ್ನಿ ಪರೀಕ್ಷೆ! ಅಲ್ಲಿಗಾದರೂ ಮುಗಿಯಿತೆ? ಮುಂದೆ ಉತ್ತರ ಕಾಂಡದ ಭೀಷಣ. ಗುಡಿಯೊಳಗಿನ ದೇವರಿಗೆ ತೆಂಗಿನಕಾಯಿ ಒಡೆದು ಕರ್ಪೂರ ಬೆಳಗಿ ಒಂದು ಗಳಿಗೆ ಧ್ಯಾನದಲ್ಲಿ ಶಾಂತಿ ಪಡೆದು ಹೊರಟುಹೋಗುವ ಜನಕ್ಕೆ ಅಡವಿಯ ಕಗ್ಗತ್ತಲೆಯಲ್ಲಿ ಹಣತೆಯ ದೀಪದ ಬೆಳಕಿನಲ್ಲಿ, ಬಾವಲಿ ಹುಳುಹುಪ್ಪಟೆಗಳ ಹಾರಾಟದಲ್ಲಿ ಆ ದೇವರಲ್ಲದೆ ಬೇರೆ ಜೊತೆಯಿಲ್ಲದೆ ಬದುಕಬೇಕಾದ ಪೂಜಾರಿಯ ಭವಣೆಯೇನು ತಿಳಿದೀತು.

ಮಹಾಪುರುಷರ ಸಂಗ, ಶುಶ್ರೂಷೆ ತಂತಿಯ ಮೇಲೆ ನಡೆದಂತೆ. ತೂಕ ತಪ್ಪಿದರೆ ಮುಗಿಯಿತು. ಅದು ಅಸಿಧಾರಾವ್ರತ; ಅಲ್ಲ, ಅಗ್ನಿಪರೀಕ್ಷೆಯೇ ಸರಿ. ಅದರಲ್ಲೂ ಎಲ್ಲ ಸಾಧುಸಂತರದೂ ಒಂದು ತೂಕವಾದರೆ ಗಾಂಧೀಜಿಯದೇ ಒಂದು ತೂಕ. ತಮ್ಮ ಸಹವಾಸದಲ್ಲಿರುವವರೆಲ್ಲ ಉತ್ತಮ ಜಾತಿಯ ಜನರಾಗಬೇಕೆಂದು ಅವರಿಗೆ ತುಂಬಾ ಆಸೆ. ಆ ಆಸೆ ಅನೇಕ ಸಲ ಸುತ್ತಲಿನವರಿಗೆ ಪ್ರಾಣಸಂಕಟವಾಗುವುದುಂಟು. ಬಂಗಾರಕ್ಕೆ ಬಣ್ಣ ಕೊಡಲು ಪುಟಕ್ಕೆ ಹಾಕುವಂತೆ ಸಂಗಾತಿಗಳನ್ನು ಬಾಪು ಪುಟಕ್ಕೆ ಹಾಕುತ್ತಾರೆ. ಆ ಸಂಕಟದಲ್ಲಿ ಸಿದ್ಧಿಯಿದೆ, ಆ ಪುಟದಲ್ಲಿ ಶುದ್ಧಿ ಇದೆ.

ಬಾಪೂಜಿಯ ಪಟ್ಟಶಿಷ್ಯ ಮಹಾದೇವ ದೇಸಾಯಿಗೊಮ್ಮೆ ಈ ಪರೀಕ್ಷೆಯನ್ನು ತಡೆದುಕೊಳ್ಳುವುದು ಬಹಳ ಬಿಗಿಯಾಯಿತು. ಆ ಸಂದರ್ಭ, ಆ

ದುಃಖ 'ವರ್ಧಾಯಾತ್ರೆ'ಯಲ್ಲಿ ಹೇಳಿದೆ. ಮಹಾದೇವ ಭಾಯಿಗೇ ಇಂಥ ಅನುಭವ ಬಂದರೆ ಹಗಲಿರುಳೂ ಈ ಮುಳ್ಳುಪಾಲಕಿಯ ಸೇವೆ* ಮಾಡುವ ಕಸ್ತೂರಿಬಾಗೆ ಹೇಗಿರಬೇಡ!

ಕಸ್ತೂರಿಬಾಅನ್ನು ನೋಡಿದರೆ ಆಕೆ ಈ ಮಹಾ ಸಾಹಸ ಮಾಡಿದ ಧೀರೆ ಎನಿಸುವದೇ ಇಲ್ಲ. ಆ ಮೋರೆಯಲ್ಲಿ ಅಂಥ ಅಟ್ಟಹಾಸದ ಗುರುತೇ ಇಲ್ಲ. ಸರಲವಾದ ಮುಖಮುದ್ರೆ, ವಾತ್ಸಲ್ಯ ತುಂಬಿದ ಕಣ್ಣು. ವಯಸಿನಿಂದ, ವಯಸಿಗೆ ತಕ್ಕ ಅನುಭವದಿಂದ ಬಂದ ಒಂದು ಅಪೂರ್ವ ಶಾಂತಿ ಆ ಮೋರೆಯಲ್ಲಿ ಕಾಣುತ್ತದೆ. ಲಂಕೆಯಲ್ಲಿ ಅಗ್ನಿಪಾವನಳಾಗಿ ತುಂಬಿದ ಮನಸಿನಿಂದ ಹಿಗ್ಗಿದ ಎದೆಯಿಂದ ರಾಮನ ಬಳಿಗೆ ನಡೆದುಬಂದ ಸೀತಾದೇವಿಯ ಕಣ್ಣಿನ ಮಿಂಚಿನ ಗೊಂಚಲು ಇಲ್ಲಿ ಕಾಣುವುದಿಲ್ಲ. ವಾಲ್ಮೀಕಿ ಮುನಿಯ ಆಶ್ರಮದಲ್ಲಿ ಲವಕುಶರೊಡನೆ, ಉಳಿದ ಮುನಿಕುಮಾರರೊಡನೆ ರಾಮಾಯಣವನ್ನು ಹಾಡುತ್ತ ಅವರ ನಡುವೆ ಕುಳಿತ ಸೀತೆಯ ತುಂಬು ತಾಯ್ತನದ ನೋಟ ನೆನಪಾಗುತ್ತದೆ. ಆಶ್ರಮದಲ್ಲಿ ತನ್ನ ಮೊಮ್ಮಗನೊಡನೆ ಉಳಿದ ಮಕ್ಕಳೊಡನೆ ನಗುತ್ತ ನಲಿದಾಡುತ್ತ ನೂಲು ತೆಗೆವಾಗ ಆ ನೋಟವನ್ನು ನೋಡಿದರೆ ರಾಮಾಯಣದ ಈ ಚಿತ್ರ ಮತ್ತೆ ಮತ್ತೆ ನೆನಪಿನಲ್ಲಿ ಮೂಡಿ ಬರುತ್ತದೆ.

ಹೌದು; ಸೀತೆಯಂತೆ ಚಂದ್ರಮತಿಯಂತೆ ಕಸ್ತೂರಿಬಾ ಕಷ್ಟದಲ್ಲೂ ಸುಖದಲ್ಲೂ ಗಂಡನನ್ನು ನೆರಳಿನಂತೆ ಹಿಂಬಾಲಿಸಿದಾಳೆ. ಹೆಣ್ಣಿನ ನಿಜವಾದ ರೀತಿ ಅದೇ. ಗಂಡಾನೆ ಕೆಸರಿನಲ್ಲಿ ಹೊಕ್ಕರೂ ಅದರ ಹೆಣ್ಣು ಅದನ್ನು

---

*ನಮ್ಮ ಕಡೆ ವೈಷ್ಣವ ದೇವಾಲಯಗಳಲ್ಲಿ ಒಂದು ಸಂಪ್ರದಾಯವಿದೆ. ದೇವರಿಗೆ ಒಂದು ಪಾಲಕಿ ಮಾಡಿಸಿ ಅದರ ತುಂಬ ಉಕ್ಕಿನ ಮುಳ್ಳು ನೆಡಿಸುತ್ತಾರೆ. ಅಂಗುಲಕ್ಕೊಂದರಂತೆ ನೂರಾರು ಮುಳ್ಳು ಮೊನೆಯಾಗಿ ಅದರ ತುಂಬ ಹರಡಿರುತ್ತವೆ. ಜಾತ್ರೆಯಲ್ಲಿ ಆ ದೇವರ ದಾಸನು ನೇಮನಿಷ್ಠೆಗಳಿಂದ ದೇವರನ್ನು ಪೂಜಿಸಿ ಆ ಮುಳ್ಳುಪಾಲಕಿಯಲ್ಲಿ ಮಲಗಬೇಕು. ಹಾಗೆ ಮುಳ್ಳು ಹಾಸಿಗೆಯ ಮೇಲೆ ಮಲಗಿದ ಆ ಭಕ್ತನನ್ನು ಊರೆಲ್ಲ ಮನೆಮನೆಗೆ ಹೊತ್ತುಕೊಂಡು ಹೋಗಿ ದರ್ಶನ ಮಾಡಿಸಬೇಕು. ಬೆಳಗ್ಗೆ ಅವನು ಬದುಕಿದ್ದರೆ ಅದೊಂದು ಪುನರ್ಜನ್ಮ. ಮುನ್ನಾದಿನ ಅವನ ಹೆಂಡತಿಯ ಬಳೆ ಒಡೆಯಲಾಗುತ್ತದೆ. ಮರುದಿನ ಬೆಳಗ್ಗೆ ಅವಳಿಗೆ ಮತ್ತೆ ಬಳೆಯ ಅಲಂಕಾರ.

ಬಿಡದು ; ಬೆನ್ನು ಅಂಟಿಯೇ ಇರುತ್ತದೆ. ಚಂದ್ರ ರಾಹುಗ್ರಸ್ತನಾದರೆ ಚಿಕ್ಕೆ ದೂರ ಸರಿದಾವೆ; ವನವಾಸಕ್ಕೆ ಹೋಗುವ ಮುನ್ನ ಸೀತೆ ಕೇಳಿದಳಂತೆ ರಾಮನನ್ನು –'ಯಾವಾಗಲೂ ನಿನ್ನ ಪಾಲಿನದರದಲ್ಲಿ ಅರ್ಧಪಾಲು ಕೊಟ್ಟಿದೀಯೆ. ಈ ಕಷ್ಟದಲ್ಲೇಕೆ ಬೇಡ?' ಕಸ್ತೂರಿಬಾ ತನ್ನ ಅರ್ಧಪಾಲಿನ ಕಷ್ಟವನ್ನು ಸಂತೋಷದಿಂದ ಹೊತ್ತಿದಾಳೆ; ಹೊತ್ತು ಬಾಳನ್ನು ಹಸನು ಮಾಡಿಕೊಂಡಿದಾಳೆ, ಹದಮಾಡಿಕೊಂಡಿದಾಳೆ. ಅದರ ಫಲವಾಗಿ ಅಖಂಡ ಶಾಂತಿಯಲ್ಲಿ ಮಿಾಯುತ್ತಿದಾಳೆ.

ಶ್ರೀರಾಮ ಹರಿಶ್ಚಂದ್ರರಿಬ್ಬರೂ ಸತ್ಯಸಂಧರು. ಅವರ ಸತ್ಯಸಾಧನೆಯ ಹಾದಿಯಲ್ಲಿ ದುಃಖದ ಸುರಿಮಳೆಯಾಯಿತು. ಅವರ ಕಷ್ಟ ಪರಂಪರೆಗೆ ವಿಧಿಯೂ ಹಗೆಗಳೂ ಕಾರಣರಾದರು. ಆದರೆ ಗಾಂಧೀಜಿಯ ಸತ್ಯಶೋಧನೆಯಲ್ಲಿ ವಿಧಿಕೊಟ್ಟ ಕಷ್ಟ ಹತ್ತಾದರೆ ತಾವೇ ತಂದುಕೊಂಡದ್ದು ಇಪ್ಪತ್ತು. ಪರರ ದುಃಖವನ್ನು ತನ್ನ ದುಃಖವೆಂದು ತಿಳಿಯುವ ವೈಷ್ಣವ ಧರ್ಮಕ್ಕೆ ಇದು ಸಹಜ. "ಪೀಡ ಪರಾಯಿ ಜೋ ಜಾನೇರೇ ತೇನೆ ವೈಷ್ಣವ ಜನ ಕಹಿಯೆ"—ಇತರರ ಸಂಕಟವನ್ನು ತಿಳಿಯಬಲ್ಲವನೇ ವೈಷ್ಣವ-ಎಂಬ ಗೀತೆಯಲ್ಲಿ ಆ ಧರ್ಮಸೂತ್ರವಿದೆ. ಆ ಹಾಡು ಗಾಂಧೀಜಿಗೆ ತುಂಬಾ ಇಷ್ಟವಾದುದು.

ವ್ಯವಹಾರದಲ್ಲಿ ಕುಶಲಿಗಳಾಗಿ "ತಾನುಂಟೋ ಮೂರು ಲೋಕವುಂಟೋ" ಎಂದು ಬಾಳಿನ ಗುಡ್ಡವನ್ನೇರಿ ಹೋಗುವ ಜನರಿಗೆ ಗಾಂಧೀಜಿಯ "ಬೀದಿಯಲ್ಲಿ ಹೋಗುವ ಮಾರಿ, ಬಾಗಿಲು ಹೊಕ್ಕು ಹೋಗು" ಎಂದು ಕರೆವ ಪ್ರವೃತ್ತಿ ವಿಚಿತ್ರವಾಗಿ ಕಾಣಬಹುದು. ಕಸ್ತೂರಿಬಾಗೆ ತನ್ನ ಬಾಳಿನ ಕಲ್ಲಿನಲ್ಲಿ ಮುಗ್ಧ ಮನೋಹರ ಜೀವನದ ದಿವ್ಯಮೂರ್ತಿಯನ್ನು ಕೊನರಿಸುವ ಶಿಲ್ಪಕಲೆಯಾಯಿತು.

ಗಾಂಧೀಜೀ ಆಕೆಯನ್ನು ಕಾಡಿದಷ್ಟು ಯಾರೂ ತನ್ನ ಹೆಂಡತಿಯನ್ನು ಪೀಡಿಸಲಿಕ್ಕಿಲ್ಲ. ಯಾವ ಗಳಿಗೆಯಲ್ಲಿ ಏನು ಅನಾಹುತವಾದೀತೋ, ಎಲ್ಲಿ ದಾಂಪತ್ಯ ಜೀವನ ಮುರಿದೀತೋ ಎಂಬ ಹೆದರಿಕೆ ಕಸ್ತೂರಿಬಾಗೆ ಬಹಳ ಕಾಲ ಇದ್ದಿರಬೇಕು. ಗಾಂಧೀಜಿಗೆ ತನ್ನಂತೆ ತನ್ನವರು ಆಗಬೇಕೆಂಬ ಹಟ

ಬಹಳ. ತನ್ನ ಸಿದ್ಧಾಂತಗಳನ್ನು ತನ್ನವರೇ, ತನ್ನ ಮನೆಯವರೇ ಅನುಸರಿಸದೆ ಹೋದರೆ ಜಗತ್ತಿಗೆ ಹೇಗೆ ಅದನ್ನು ಉಪದೇಶ ಮಾಡುವುದು?

ಸತ್ಯಾಗ್ರಹಾಶ್ರಮವನ್ನು ಹೂಡುವಾಗ ಗಂಡಹೆಂಡರ ನಡುವೆ ದೊಡ್ಡದೊಂದು ಗೊಂದಲವೇ ಆಯಿತು. ಆಶ್ರಮದಲ್ಲಿ ಅಸ್ಪೃಶ್ಯತೆಯನ್ನು ಪಾಲಿಸಬಾರದೆಂದು ಗಾಂಧೀಜಿಯ ನಿರ್ಧಾರ. ಆ ಸಂಕಲ್ಪ ಬರೀ ಗಾಳಿಗೋಪುರವಾಗಬಾರದು. ತಾವು ಮಾಡಿದ ಯಾವ ಸಂಕಲ್ಪವೂ ಆಡಿದ ಯಾವ ಮಾತೂ ರೂಪುಗೊಳ್ಳದೆ ವ್ಯರ್ಥವಾಗಿ ಟೊಳ್ಳಾಗಿ ಹೋಗುವದು ಗಾಂಧೀಜಿಯ ಲೆಕ್ಕದಲ್ಲಿಲ್ಲ. ಅಂಥ ಮಾತು ಆಡದೆ ಬಿಟ್ಟಾರು; ಅಂಥ ವಿಚಾರದ ವೇಗವನ್ನು ತಡೆದುಕೊಂಡಾರು. ಅಸ್ಪೃಶ್ಯತೆಯ ಬಗ್ಗೆ ಅವರು ನಿರ್ಧಾರಮಾಡಿದುದೇ ತಡ, ತಮ್ಮ ವ್ಯವಹಾರದಲ್ಲಿ ಅದನ್ನು ಹರಿಯಿಸಿದರು. ಆಶ್ರಮದಲ್ಲಿ ಹರಿಜನರ ಕುಟುಂಬವೊಂದನ್ನು ತಮ್ಮ ಜೊತೆಗೆ ಇರಲು ತಂದಿಟ್ಟರು. ಕಸ್ತೂರಿಬಾಗೆ ಇದು ಸರಿ ಕಾಣಲಿಲ್ಲ. ಎಷ್ಟಾದರೂ ಹೆಣ್ಣು. ಧರ್ಮ ಸಂಪ್ರದಾಯಗಳನ್ನು ಮುರಿಯುವುದೇ ಹೆಣ್ಣಿನ ಮನಸಿಗೆ-ಅದರಲ್ಲೂ ಇಪ್ಪತ್ತೈದು ಮೂವತ್ತು ವರ್ಷಗಳ ಕೆಳಗೆ-ಒಪ್ಪದ ಮಾತು; ಹೋಗಲಿ, ಮುರಿದರೂ ಅದಕ್ಕೊಂದು ಹದ ಬೇಡವೆ? ಮುಟ್ಟಬಾರದ ಹೇಸಿ ಜನರನ್ನು ಮುಟ್ಟದರೆ ಅವರನ್ನು ಮನೆಯೊಳಗೇ ಸೇರಿಸುವುದೇ? ಕಸ್ತೂರಿಬಾ ಗಂಡನಮಾತನ್ನು ಬಲವಾಗಿ ವಿರೋಧಿಸಿದಳು. ಇಬ್ಬರ ನಡುವೆ ದಾಟಲಾರದ ಹೊಳೆಯೊಂದು ಹರಿದಂತಾಯಿತು. ಕಸ್ತೂರಿಬಾನ ಕಣ್ಣೀರಾಗಲಿ ದಾಂಪತ್ಯದಲ್ಲಿ ನುಸುಳಬಹುದಾದ ಧೀರ್ಘ ವಿರಸವಾಗಲಿ ಗಾಂಧೀಜಿಯ ಮನಸ್ಸನ್ನು ಅಲುಗಾಡಿಸಲಿಲ್ಲ. ತಮ್ಮ ಸಿದ್ಧಾಂತಕ್ಕಾಗಿ ಎಂಥ ಬಲಿದಾನವನ್ನಾದರೂ ಕೊಡುವ ಸಾಧಕ ಜಾತಿ ಇವರದು. ಹೆಂಡತಿಯ ಮೇಲಿನ ಪ್ರೇಮ ತಾವು ಆರಿಸಿಕೊಂಡ ಕರ್ತವ್ಯಕ್ಕೆ ಅಡ್ಡಿಬಂದರೆ ಅದು ಅಲ್ಪಗುಣ, ಕ್ಲೈಬ್ಯವಾದೀತು. ಗಾಂಧೀಜೀ ಹೆಂಡತಿಗೆ ಹೇಳಿದರು: "ಆಶ್ರಮದಲ್ಲಿರುವವರು ಹೀಗೆಯೇ ನಡೆಯಬೇಕು ಎಂದು ಕೆಲವು ನಿಯಮಗಳನ್ನು ಮಾಡಲಾಗಿದೆ. ಅವು ಯಾರಿಗೂ ತಪ್ಪಿದ್ದಲ್ಲ. ನಿನಗೆ ಅವರಂತೆ ನಡೆಯುವದಾಗದಿದ್ದರೆ ಬೇರೆಯಾಗಿ ಇರು. ಬೇರೆ ಮನೆಮಾಡಿ ಅನುಕೂಲ ಮಾಡಿಕೊಡುತ್ತೇನೆ."

ಕಸ್ತೂರಿಬಾ ಸಂತೋಷದಿಂದ ಆಶ್ರಮ ನಿಯಮಗಳಿಗೆ ಒಪ್ಪಿಕೊಂಡಳು. ತನಗೆ ಎಲ್ಲಕ್ಕಿಂತ ಹಿರಿದಾದ ಧರ್ಮ ಪತಿಸೇವೆ. ಧರ್ಮಶಾಸ್ತ್ರ ವಿವೇಚನೆಮಾಡುವ ಯೋಗ್ಯತೆ ತನ್ನದೆ? ಧರ್ಮಾಧರ್ಮದ ಹೊಣೆ ಗಂಡನಿಗೇ ಇರಲಿ. ತನಗೆ ಪತಿಸೇವೆಯೊಂದು ಸಾಕು ಎಂದುಕೊಂಡಳೇನೋ. ಮನಸ್ಸನ್ನು ಒಗ್ಗಿಸಿಕೊಂಡಳು. ಹರಿಜನರ ಹುಡುಗಿ 'ಲಕ್ಷ್ಮಿ' ಆಕೆಗೆ ಮಗಳಾದಳು.

ಈ ರೀತಿಯ ವಿರಸ ಗಾಂಧೀಜಿಯ ದಾಂಪತ್ಯ ಜೀವನದಲ್ಲಿ ಮೊದಲಿನಿಂದಲೂ ಇದೆ. ಎಳೆತನದಿಂದಲೂ ಅವರು ಭಾರ್ಯಾಸಕ್ತರು. ಹೆಂಡತಿಯ ಮೇಲೆ ಅವರಿಗೆ ತುಂಬಾ ಪ್ರೇಮ. ಆಕೆಯನ್ನು ಆದರ್ಶಸ್ತ್ರೀಯಾಗಿ ಜಗತ್ತಿಗೊಂದು ಮೇಲ್ಪಂಗ್ತಿಯಾಗಿ ಮಾಡುವ ಬಯಕೆಯಿಂದ ಆಕೆಯನ್ನು ನಾನಾ ನಿರ್ಬಂಧಗಳಿಗೆ ಗುರಿಮಾಡಿದಾರೆ. ಒಂದು ಸಲ ಆಕೆಯನ್ನು ತೌರುಮನೆಗೆ ದೂಡಿಬಿಟ್ಟರು. ಕಡುತರ ಕಷ್ಟಗಳ ಪಾಲುಮಾಡಿದ ಮೇಲೆಯೇ ಆಕೆಯನ್ನು ಹಿಂದಿರುಗಿ ಕರೆಯಿಸಿದುದು.

ನೊದಲು ಗಂಡನಂತೆ ಅಧಿಕಾರ ನಡೆಸಿದವರು ಮುಂದೆ ಕಸ್ತೂರಿಬಾಗೆ ಗಾಂಧೀಜೀ ಮಣಿದುಹೋದರು. ಗಂಡಿನ ಅಧಿಕಾರಕ್ಕೆ ಹೆಣ್ಣು ಒಳಗಾಗದಿದ್ದರೆ ನಮ್ಮ ಸಮಾಜದಲ್ಲಿ ಪರಿಣಾಮವುಂಟೆ? ಅದರಲ್ಲೂ ಗಂಡನಿಗೆ ಹೆಂಡತಿಯ ಮೇಲೆ ಸರ್ವಾಧಿಕಾರ ತಾನೆ. ಮಾತುಮಾತಿನಲ್ಲೂ ಗಾಂಧೀಜೀ ಗೆದ್ದರು; ಕಸ್ತೂರಿಬಾ ಸೋತಳು. ಆದರೆ ಇವರು ಗೆದ್ದರೂ ಸೋತರು; ಆಕೆ ಸೋತರೂ ಗೆದ್ದಳು. ಹೆಣ್ಣು ಗೆಲ್ಲುವ ದಾರಿ ಸೋಲಿನದು, ಒಲವಿನದು. ಅದು ಇದಿರಾಳಿಯನ್ನು ಕಾಲು ಕೆಳಗೆ ತುಳಿದು ಒರಸಿಹಾಕುವ ಹಿಂಸೆಯ ಹಾದಿಯಲ್ಲ. ಮೇಲೆತ್ತಿ ಎದೆಗವಚಿ ಲಾಲಿಸುವ ಅಹಿಂಸೆಯ ಒಲವಿನ ದಾರಿ. ಆ ಸೋಲಿನಲ್ಲಿ ಗೆಲವಿನ ಮಂತ್ರವಿದೆ.

ಒಂದು ಸಲ ಗಾಂಧೀಜೀ ಕಸ್ತೂರಿಬಾನನ್ನು ಬಹಿರಂಗವಾಗಿ ಪೂರಾ ನಾಚಿಕೆಗೆ ಈಡುಮಾಡಿದರು. ಅವಮಾನದ ನೀರಿನಲ್ಲಿ ಅದ್ದಿಬಿಟ್ಟರು. ಸತ್ಯಾಗ್ರಹ ಧರ್ಮದ ನಿಯಮಗಳಲ್ಲಿ ಅಸಂಗ್ರಹ ಒಂದು ಮುಖ್ಯ ವ್ರತ. ನಾಳಿನ ಚಿಂತೆಯಿಲ್ಲದೆ ಈ ದಿನ ಬಾಳಬೇಕು. ನಾಳಿನದು ದೇವರಿಗೆ ಸೇರಿದ ಭಾರ. ಆಶ್ರಮದಲ್ಲಿ ಯಾರೂ ಒಂದು ಬಿಡಿಕಾಸನ್ನೂ ಸಂಗ್ರಹ

ಬುದ್ಧಿಯಿಂದ ತೆಗೆದಿಡಬಾರದು. ಕಸ್ತೂರಿಬಾ ಒಂದು ಸಲ ಎರಡೋ ಮೂರೋ ರೂಪಾಯಿ ಯಾವಾಗಲಾದರೂ ಪ್ರಸಂಗ ಬಿದ್ದಾಗ ಉಪಯೋಗಕ್ಕೆ ಇರಲಿ ಎಂದು ತೆಗೆದು ಇಟ್ಟಿದ್ದರು. ಇದು ಗಂಡನಿಗೆ ತಿಳಿಯಿತು. ತನ್ನ ಸಹಧರ್ಮಚಾರಿಣಿಯೇ ಹೀಗೆ ಮಾಡಿದುದು ಗಾಂಧೀಜೀಗೆ ತುಂಬಾ ನೋವಾಯಿತು. ತಮ್ಮಲ್ಲಿ ಅಸಂಗ್ರಹಬುದ್ಧಿ ಪೂರ್ಣವಾಗಿ ಬೆಳೆದಿದ್ದರೆ ಆಕೆಗೆ ಈ ಬುದ್ಧಿ ಬರುತ್ತಿತ್ತೆ? ಆಕೆ ಮಾಡಿದ ವ್ರತಭಂಗ ತಮ್ಮ ಅಪೂರ್ಣತೆಯ ಕುರುಹು. ಆ ದಿನ ಸಂಜೆಗೆ ಪ್ರಾರ್ಥನೆಯ ಹೊತ್ತಿನಲ್ಲಿ ಎಲ್ಲರ ಇದಿರಿನಲ್ಲಿ ಗಾಂಧೀಜಿ ದುಃಖ ತುಂಬಿದ ಎದೆಯಿಂದ ಕಸ್ತೂರಿಬಾನ ತಪ್ಪನ್ನು ವಿವರಿಸಿ ಆಕೆಯನ್ನು ದಂಡಿಸಿದರು. ಆಶ್ರಮವಾಸಿಗಳೆಲ್ಲ ಚಿಕ್ಕವರು. ಆಕೆಯನ್ನು ತಾಯಿ ಎಂದು ತಿಳಿದು ನಡೆದುಕೊಂಡವರು. ಅವರಿದಿರಿನಲ್ಲಿ ಈ ಅವಮಾನದ ಶಿಕ್ಷೆ. ಹೇಗಿರಬೇಕು ಆಕೆಯ ಮನಸ್ಸು!

ಇನ್ನೊಂದು ಸಲ ಯಾರೋ ಜೇನೆ ಬಿದ್ದರು. ರೋಗಿಗೆ ಸರಿಯಾದ ಆರೈಕೆ ನಡೆಯಲಿಲ್ಲವೆಂದು ಗಾಂಧೀಜಿಗೆ ಅನಿಸಿತು. ಹೆಂಡತಿಯನ್ನು ಕೇಳಿದರು. ಆಕೆಗೆ ಮನುಷ್ಯ ಜೇನೆ ಬಿದ್ದ ಸುದ್ದಿಯೇ ಗೊತ್ತಿರಲಿಲ್ಲ. ಆಶ್ರಮದ ಯಜಮಾನಿ ಆಕೆ. ಈ ಸುದ್ದಿ ಆಕೆ ತಿಳಿದುಕೊಳ್ಳದಿದ್ದುದು ಅವರಿಗೆ ಸರಿಕಾಣಲಿಲ್ಲ. ಗಾಂಧೀಜಿಯ ಸತ್ಯದೃಷ್ಟಿಯ ಒರೆಗಲ್ಲು ಬಹಳ ತೀಕ್ಷ್ಣವಾದುದು. ಸಾಮಾನ್ಯಜನರಿಗೆ ಅವರ ಸತ್ಯ ಪಕ್ಷಪಾತದಲ್ಲಿ ಕೊಂಚ ವೈಚಿತ್ರ್ಯ ಕಂಡುಬರುತ್ತದೆ. ನಾವು ಫಲಾಪೇಕ್ಷಿಗಳು. ನಮ್ಮ ಕೆಲಸ ಪಣ್ಣಾದರೆ ಸಾಕು, ಯಾವ ದಾರಿಯಾದರೇನು ಎಂಬ ಮನೋವೃತ್ತಿ ನಮ್ಮದು. ಅವರಿಗೆ ಹಾಗಲ್ಲ. ಕೆಲಸ ಆಗಲಿ ಬಿಡಲಿ, ಹಿಡಿದ ಹಾದಿ ಸತ್ಯವಾಗಿರಬೇಕು. ಕಸ್ತೂರಿಬಾ ತನ್ನ ಕೆಲಸದಲ್ಲಿ ಅಶ್ರದ್ಧೆ ತೋರಿಸಿದಳೆಂದು ಅವರಿಗೆ ಅನಿಸಿತು. ತನ್ನ ಮಗ ಜೇನೆ ಬಿದ್ದಿದ್ದರೆ ಆಕೆಗೆ ತಿಳಿಯದೆ ಇರುತ್ತಿತ್ತೆ? ಆಕೆಗೆ ಇನ್ನೂ ಸಮದೃಷ್ಟಿ ಸಮನಿಸಿಲ್ಲ. ಆಕೆಗೆ ತನ್ನ ತಪ್ಪನ್ನು ತಿಳಿಸಿಕೊಡಬೇಕು ಎನಿಸಿತು ಗಾಂಧೀಜಿಗೆ. ಆ ದಿನ ಸಂಜೆಗೆ ಪ್ರಾರ್ಥನೆಯ ಹೊತ್ತಿನಲ್ಲಿ ಬಹಿರಂಗವಾಗಿ ಆ ಕೆಲಸಮಾಡಿದರು. "ನಿನ್ನ ಮಗ ದೇವದಾಸ ಕಾಯಿಲೆ ಬಿದ್ದಿದ್ದರೆ ನಿನಗೆ ಗೊತ್ತಾಗುತ್ತಿತ್ತು; ಉಳಿದವರು ಕಾಯಿಲೆ ಬಿದ್ದಿದ್ದರೆ ನಿನಗೆ ಸುದ್ದಿ ಕೂಡಾ ಗೊತ್ತಾಗಬಾರದೆಂದರೆ ಏನು?"

ಬರೀ ಅವಮಾನವಾದರೆ ಹೋಗಲಿ; ದುಡಿತದಲ್ಲೂ ಅಷ್ಟೆ. ಗಾಂಧೀಜೀ ಆಕೆಗೆ ಕೊಟ್ಟ ಕಷ್ಟ ಹೆಂಡತಿಯ ಮೇಲೆ ಪ್ರೀತಿಯುಳ್ಳ ಯಾವ ಗಂಡನೂ ತನ್ನ ಹೆಂಡತಿಗೆ ಕೊಟ್ಟಿರಲಾರ. ಇಷ್ಟು ದೊಡ್ಡ ಮಹಾತ್ಮನ ಹೆಂಡತಿಯಾಗಿಯೂ ಕಸ್ತೂರಿಬಾಗೆ ಅಡಿಗೆ ಮನೆಕೆಲಸಗಳು ತಪ್ಪಿಲ್ಲ. ಸೇವಾ ಗ್ರಾಮಕ್ಕೆ ಬಂದಮೇಲೆ ಗಾಂಧೀಜಿಯ ಪರಿವಾರ ಕಡಿಮೆಯಾಗಿದೆ. ಅತಿಥಿ ಗಳೂ ಕಡಮೆ. ಬಂದವರಿಗೆಲ್ಲ ವಾರ್ಧಾದಲ್ಲೇ ವಸತಿ. ಅಲ್ಲಿಂದ ಸೇವಾ ಗ್ರಾಮಕ್ಕೆ ದರ್ಶನಾರ್ಥವಾಗಿ ಬಂದು ಕೆಲಸ ಮುಗಿಸಿಕೊಂಡು ವಾರ್ಧಾಕ್ಕೆ ಹಿಂದಿರುಗುತ್ತಾರೆ. ಸಾಬರಮತಿಯಲ್ಲಿದ್ದಾಗ ಪರಿವಾರ ತುಂಬಾ ದೊಡ್ಡದು. ಬಂದು ಹೋಗುವ ಜನವೂ ಬಹಳ. ಈ ದೊಡ್ಡಸೇನೆಯ ಸಮಾರಾಧನೆ ಕಸ್ತೂರಿಬಾಗೆ ಸೇರಿದ ಕೆಲಸ. ಹಗಲೆಲ್ಲಾ ಕಸ್ತೂರಿಬಾಗೆ ರೊಟ್ಟಿ ಸುಡುತ್ತ ಅಡಿಗೆಮನೆಯಲ್ಲೇ ಕೊಳೆಯಬೇಕಾಗುತ್ತಿತ್ತು. ಏನೋ ದೈಹಿಕ ಕಷ್ಟ ಸಹಿಸಿದರೂ ಸಹಿಸಬಹುದು ಎಂದುಕೊಂಡರೆ ಅಲ್ಲಿಗೆ ಮುಗಿಯಬೇಕಲ್ಲ ಈ ಕತೆ. ಮನೆಯ ಪಾಯಿಖಾನೆಗಳನ್ನು ಗುಡಿಸಬೇಕು. ತಾವು ತಮ್ಮ ಹೆಂಡತಿ, ಅವನ್ನು ಗುಡಿಸಿ ಮೇಲ್ಪಂಕ್ತಿಹಾಕದಿದ್ದರೆ ಜೊತೆಗಾರರು ಹೇಗೆ ಆ ಕೆಲಸಕ್ಕೆ ಒಪ್ಪಿಯಾರು? ಅವರನ್ನು ಕೇಳುವುದು ಹೇಗೆ? ಕಸ್ತೂರಿಬಾ ಇದಕ್ಕೆ ಸುಲಭವಾಗಿ ಒಪ್ಪಲಿಲ್ಲ. ಒಪ್ಪಿಕೊಂಡಾಗಲೂ ಆ ಕೆಲಸವನ್ನು ಹೀನವೆಂದು ತಿಳಿದು ಮಾಡುತ್ತಿದ್ದರು. ಆದರೆ ಗಾಂಧೀಜಿಯ ಪವಿತ್ರ ಜೀವ ನದ ಸೆಕೆ ತಗುಲಿದರೆ ಅಂಥ ಅಭಿಮಾನವು ಎಷ್ಟು ದಿನ ತಾನೆ ಉಳಿದೀತು?

ದಕ್ಷಿಣ ಆಫ್ರಿಕದಲ್ಲಿ ಇಂಥದು ಒಂದು ವಿರಸ-ಸರಸ ನಡೆಯಿತು. ಆ ವಿರಸದ ಕೆಸರಿನಲ್ಲೂ ಹುಟ್ಟಿಬಂದದ್ದು ಕೊನೆಗೆ ಸರಸದ ಕಮಲವೇ. ಗಾಂಧೀಜೀ ಒಂಟಿಯಾಗಿ ಸಂಸಾರಮಾಡುವ ನಾಗರಿಕಜಾತಿಯಲ್ಲ. ನಾಲ್ಕು ಜನ ಕಲೆತು ಬದುಕಬೇಕು ಎಂಬ ಹಳೆಯಕಾಲದ ಅವಿಭಕ್ತಕುಟುಂಬ ಪದ್ಧತಿಯವರು. ಅವರ ಜೀವನವೆಲ್ಲ ಆಶ್ರಮಗಳಲ್ಲೋ ಅದೇ ಜಾತಿಯ ಬೇರೆ ಸಂಸ್ಥೆಗಳಲ್ಲಿಯೋ ಕಳೆದಿದೆ. ದರ್ಬಾನಿನಲ್ಲಿ ವಕೀಲರಾಗಿದ್ದಾಗಲೂ ಗಾಂಧೀಜಿಗೆ ಈ ಸಾಮೂಹಿಕಜೀವನದ ಚಪಲ ಇತ್ತು. ಅವರು ದೊಡ್ಡ ಬ್ಯಾರಿಸ್ಟರ್. ಅವರ ಕೆಲಸಕ್ಕೆ ಹಲವರು ಗುಮಾಸ್ತರು ಬೇಕಾಗಿತ್ತು. ಅವ ರಿಗೆಲ್ಲ ಗಾಂಧೀಜಿಯ ಮನೆಯಲ್ಲೇ ವಾಸ. ಆ ಗುಮಾಸ್ತರೆಲ್ಲ ಹಿಂದೂ

ಗಳಲ್ಲ. ಹಿಂದೂಗಳಲ್ಲಿಯೂ ಒಂದು ಜಾತಿಯವರಲ್ಲ. ಆಗ ಗಾಂಧೀಜಿಯ ಬದುಕು ಎಲ್ಲಾ ಇಂಗ್ಲೀಷ್ ಪದ್ಧತಿಯಂತೆ. ಪ್ರತಿಯೊಂದು ಕೋಣೆಗೂ ಆ ಪದ್ಧತಿಯಲ್ಲಿ ಬಚ್ಚಲು ಬೇಕು. ಅದಕ್ಕೆ ಅನುಕೂಲ ಇಲ್ಲದೆ ಕೋಣೆಗಳಲ್ಲಿ ಕೆಲವು ಪಾತ್ರೆಗಳನ್ನು ಇಟ್ಟಿದ್ದರು. ಪಳಗಿಹೋದ ಗುಮಾಸ್ತೆಗಳು ತಮ್ಮ ಕೋಣೆಯ ಪಾತ್ರೆ ತಾವೇ ಚೊಕ್ಕಟ ಮಾಡುತ್ತಿದ್ದರು. ಉಳಿದವನ್ನು ಗಾಂಧೀಜಿಯೋ ಕಸ್ತೂರಿಬಾನೋ ತೆಗೆದು ತೊಳೆಯುವ ರೂಢಿ. ಆಳುಗಳನ್ನು ಇಡುವುದು ಗಾಂಧೀಜಿಗೆ ಅಭ್ಯಾಸವಿಲ್ಲ. ಅದು ಅವರಿಗೆ ಒಪ್ಪಿಗೆಯೂ ಅಲ್ಲ. ಒಂದುಸಲ ಒಬ್ಬ ಕಿರುಸ್ತಾನ ಗುಮಾಸ್ತ ಬಂದ ಹೊಸದಾಗಿ. ಅವನಿಗೆ ಇವರ ಮನೆಯ ಆಚಾರ ತಿಳಿಯದು. ಅವನ ಕೋಣೆಯ ಪಾತ್ರೆಗಳನ್ನು ತೊಳೆಯುವುದು ಈ ದಂಪತಿಗಳ ಪಾಲಿಗೆ ಬಿತ್ತು. ಮೊದಲು ಆತ ಪಂಚಮವರ್ಣದವನು. ಅವನ ಪಾತ್ರೆ ತಾನಾಗಲಿ ತನ್ನ ಗಂಡನಾಗಲಿ ತೊಳೆಯುವುದು ಕಸ್ತೂರಿಬಾಗೆ ಸಹಿಸಲಿಲ್ಲ. ಆದರೂ ಮಾಡಲೇಬೇಕು. ಮನೆಯಲ್ಲಿ ಆಳುಕಾಳುಗಳಿದ್ದರೆ ತಾನೆ. ಆ ಪಾತ್ರೆ ಕೈಯಲ್ಲಿ ಹಿಡಿದು ಮೆಟ್ಟಲು ಇಳಿಯುವಾಗ ಗಾಂಧೀಜೀ ಅತ್ತ ಬಂದರು. 'ಕಣ್ಣು ಕೆಂಪೇರಿತ್ತು ಆಕೆಗೆ. ಕೆನ್ನೆಯಮೇಲೆ ಮುತ್ತಿನಸರದ ಹಾಗೆ ಕಣ್ಣೀರು ಹಸಿಹಸಿಯಾಗಿ ಉದುರುತ್ತಿತ್ತು.' ಕೋಪದಿಂದ ಆಕೆ ಗಂಡನನ್ನು ಆಕ್ಷೇಪಿಸಿದರು.

ಗಾಂಧೀಜಿಗೆ ತಮ್ಮ ಹೆಂಡತಿ ತಮ್ಮ ಹಾದಿಯಲ್ಲಿ ಸಂತೋಷವಾಗಿ ಬರಬೇಕು. ಹೀಗೆಲ್ಲ ಅರೆಬರೆ ಮನಸ್ಸಿನಿಂದ ಮಾಡಬಾರದು ಎಂದು ಅಭಿಪ್ರಾಯ. ತಮ್ಮ ಹೆಂಡತಿ ಒಳ್ಳೆಯವಳಾಗಬೇಕೆಂಬ ಆಸೆ. ಆಕೆಗೆ ಬುದ್ಧಿ ಕಲಿಸದಿದ್ದರೆ ಹೇಗೆ? ಅಭಿಮಾನದಲ್ಲಿ ಈ ಕಾಠಿಣ್ಯ. ಹೆಂಡತಿಯ ಮೇಲೆ ತುಂಬಾ ಕನಿಕರ. ಆದರೆ ಆ ಕನಿಕರದಲ್ಲಿಯೂ ತುಂಬಾ ಸ್ಥೈರ್ಯ.

'ಇಂಥ ಹುಚ್ಚಾಟ ನನ್ನ ಮನೆಯಲ್ಲಿ ಸಹಿಸಲಾರೆ' ಎಂದರು ಗದರಿಸುತ್ತ. ಈ ಮಾತು ಅಂಬಿನಂತೆ ಆಕೆಯನ್ನು ಚುಚ್ಚಿದವು.

ಆಕೆಯೂ ಗಟ್ಟಿಯಾಗಿಯೇ ಬದಲು ಹೇಳಿದರು. 'ನಿಮ್ಮ ಮನೆಯಲ್ಲಿ ನೀವೇ ಇದ್ದುಕೊಳ್ಳಿ. ನಾನೆಲ್ಲಾದರೂ ಹೊರಟುಹೋಗುತ್ತೇನೆ.' ಗಾಂಧಿಜೀ ಆಗ ಮೈಮರೆತರು ಅವರ 'ದಯೆಯೆಲ್ಲ ಬತ್ತಿಹೋಯಿತು. ಆ ದಿಕ್ಕಿಲ್ಲದ ಹೆಂಗಸನ್ನು ರೆಟ್ಟೆಹಿಡಿದು ಬೀದಿಯ ಬಾಗಲಿಗೆ ಎಳೆದು ತಂದರು.

ಬಾಗಿಲು ತೆಗೆದು ಹೊರಗೆ ದಬ್ಬಬೇಕು. ಆಕೆಯ ಕೆನ್ನೆಗುಂಟ ಕಣ್ಣೀರು ಧಾರೆಯಾಗಿ ಹರಿಯಿತು. 'ನಿಮಗೇನು ನಾಚಿಕೆ ಇಲ್ಲವೇ? ಮೈಮೇಲೆ ಎಚ್ಚರ ಕೊಂಚವೂ ಬೇಡವೆ? ಈ ದೇಶದಲ್ಲಿ ನಾನು ಎಲ್ಲಿ ಹೋಗಲಿ? ಇಲ್ಲೇನು ನನ್ನ ತಂದೆತಾಯಿ ಇದಾರೆಯೆ? ಬಂಧುಬಳಗ ಇದಾರೆಯೆ? ನಿಮ್ಮ ಕೈಹಿಡಿದಿದ್ದಕ್ಕೆ ಸಾರ್ಥಕ ಆಯಿತು. ನೀವು ಕೊಟ್ಟ ಕಷ್ಟ ಎಲ್ಲಾ ಸೈರಿಸಿಕೊಂಡು ನೀವು ಹೊಡೆದ ಹೊಡೆತಗಳನ್ನೆಲ್ಲ ತಿನ್ನಬೇಕಲ್ಲವೆ ಮದುವೆ ಯಾದಕ್ಕೆ. ದಮ್ಮಯ್ಯ, ಪುಣ್ಯ ಬಂದೀತು ನಿಮಗೆ – ಬಾಗಿಲು ಮುಚ್ಚಿ ಮರ್ಯಾದೆ ಉಳಿಸಿಕೊಳ್ಳಿ. ಬೀದಿ ಜನ ನಮ್ಮ ಜಗಳ ನೋಡಿಗೀಡಿಯಾರು' ಎಂದು ಅಳುತ್ತ ಆಕೆ ಅಂದರು.

ಮುಖದಲ್ಲಿ ಗಾಂಭೀರ್ಯ ತೋರಿಸಿದರೂ ಒಳಗೆ ತುಂಬಾ ನಾಚಿಕೆ. ಬಾಗಿಲು ಮುಚ್ಚಿದರು. ಹೆಂಡತಿಗೆ ಗಂಡನನ್ನು ಬಿಟ್ಟುಹೋಗುವುದು ಸಾಧ್ಯವಿರದಿದ್ದರೆ ಗಂಡನಿಗೂ ಹೆಂಡತಿಯನ್ನು ಬಿಡುವುದು ಸಾಧ್ಯವಿರಲಿಲ್ಲ. ಇಬ್ಬರ ನಡುವೆ ಎಷ್ಟೋ ವಿರಸ ಸುಳಿಯುತ್ತಿದ್ದವು. ಆದರೆ ಕೊನೆಗೆ ಎಲ್ಲಾ ಸರಸ – ಸಮಾಧಾನ. ಅಸಾಧಾರಣ ಸಹನೆಯಿಂದ ಆಕೆಯೇ ಕಡೆಗೆ ಗೆದ್ದಿದ್ದಾಳೆ.

ತಾವು ಆಕೆಯನ್ನು ಪೀಡಿಸಿದ ಹಾಗೆ ಈಗ ಆಕೆ ತಮ್ಮನ್ನು ಪೀಡಿಸಿ ದರೆ ಏನೂ ತಪ್ಪಲ್ಲ; ತಮಗೆ ಆ ಶಿಕ್ಷೆ ಸಮ್ಮತ ಎನ್ನುತ್ತಾರೆ ಬಾಪೂ. 'ಆದರೆ ಇಬ್ಬರೂ ಪಳಗಿದ ಗೆಳೆಯರು. ಇಬ್ಬರಿಗೂ ಕಾಮಭಾವನೆ ಇಲ್ಲ. ಕಸ್ತೂರಿಬಾ ಅಂತೂ ಅನಾಸಕ್ತಳಾಗಿ ಕಾಯಿಲೆಗಳಲ್ಲಿ' – ಗಾಂಧೀಜಿಗೆ ಕಾಯಿಲೆ ಆದಾಗ–'ತುಂಬಾ ಶ್ರದ್ಧೆಯಿಂದ ಆರೈಕೆಮಾಡಿದ್ದಾಳೆ. ದಾಂಪತ್ಯ ದಲ್ಲಿ ಸಮಾಧಾನ, ಶಾಂತಿ ಸಂತೋಷಗಳು ಬೆಳೆದಿವೆ.'

ಕಸ್ತೂರಿಬಾನ ಬಾಳೆಲ್ಲ ಇಂಥ ವಿರಸದಿಂದಲೇ ತುಂಬಿಹೋಗಲಿಲ್ಲ. ಗಂಡನ ಸತ್ಯಶೋಧನೆಯ ಸಂತೋಷದಲ್ಲಿ ಪಾಲುಗಾತಿಯಾಗಿ ತನ್ನ ಬಾಳನ್ನು ಬೆಳಗಿಸಿಕೊಂಡಿದ್ದಾಳೆ. ತಾನು ತನ್ನವರು ಎಂಬ ಸಂಕುಚಿತ ಭಾವನೆಯನ್ನು ಬಹಳ ದಿನದ ಹಿಂದೆಯೇ ಕಳೆದುಕೊಂಡಿದ್ದಾಳೆ. ಪವಾ ಹಾರಿ ಬಾಬಾ ಎಂಬ ಸಾಧುವಿನ ಕತೆಯಲ್ಲಿ ಒಂದು ವಿಲಕ್ಷಣ ಘಟನೆ ಬರು ತ್ತದೆ. ಆತನಿಗೆ ಒಂದು ದಿನ ಹಾವು ಕಚ್ಚಿತು. ಆಗ ಆ ಸಾಧು ಇದು

ದೇವರು ಕಳಿಸಿದ ಸಂದೇಶ, ಇದು ಆ ಸಂದೇಶ ತಂದ ದೂತ ಎಂದು ಹೇಳಿದನಂತೆ. ಕಸ್ತೂರಿಬಾ ಕೂಡ ಹಾಗೆಯೇ ಗಾಂಧೀಜೀ ಕೊಟ್ಟ ಎಲ್ಲ ಕಷ್ಟವನ್ನೂ ಹಸಾದವೆಂದು ಸ್ವೀಕರಿಸಿದಳು. ಹಾಗೆ ಮಾಡಿ ಗಾಂಧೀ ಜಿಯ ಮನ ಒಲಿಸಿದಳು, ಅವರಿಂದ ಮನ್ನಣೆ ಪಡೆದಳು. ಗಾಂಧೀಜೀ ಆಕೆಯನ್ನು ಗೌರವಿಸಿದ ಹಾಗೆ ಯಾರೂ ತಮ್ಮ ಹೆಂಡತಿಯನ್ನು ಮನ್ನಿಸಿರ ಲಾರರು. ಆಕೆ ತಮ್ಮ ಗುರು ಎಂದರು. ಅಹಿಂಸೆಯನ್ನು ತಮಗೆ ಕಲಿ ಸಿದ್ದು ಆಕೆಯ ಮೂಕ ತಪಸ್ಸು ಎಂದು ಸಾರಿ ಹೇಳಿದರು.

ಆಕೆಯ ತಪಸ್ಸು ಹಿಂದಿನ ಯಾವ ಹೆಸರಾದ ಪತಿವ್ರತೆಯ ತಪ ಸ್ಸಿಗೂ ಕಡಮೆಯಾಗಿಲ್ಲ. ಗಂಡನ ಜೊತೆಯಲ್ಲಿ ಹೆಜ್ಜೆಗೆ ಸರಿಯಾಗಿ ಹೆಜ್ಜೆಹಾಕುತ್ತಾ ಧರ್ಮದ ಹಾದಿಯಲ್ಲಿ ಸಹಧರ್ಮಚಾರಿಣಿಯಂತೆ ನಡೆ ದಿದಾಳೆ. ದಾರಿಯಲ್ಲಿ ಕಾಲು ನೋವಾಗಿರಬಹುದು. ಗಂಡನ ಗಾಳಿ ಗಾಲಿಗೆ ಸರಿಯಾಗಿ ಓಡಲಾರದೆ ನಿಂತುನಿಂತು ಹಾದಿ ನಡೆದಿದ್ದಾಳು. ನಡೆವಾಗ ನೋವಿನಿಂದ ಬೇಸತ್ತು ಕಣ್ಣೀರಹೊಳೆ ಹರಸಿದ್ದಾಳು. ಆದರೆ ಹಿಡಿದ ಕೈ ಬಿಡದೆ ಗಾಂಧೀಜಿಯನ್ನು ಅನುಸರಿಸಿ ಬಂದಿದಾಳೆ. ಹೆಂಗಸಿಗೆ ಮನೆಯೆಂದರೆ ತುಂಬ ಪ್ರೀತಿ. ಆಕೆ ಮನೆಯ ಒಡತಿ; ಗೃಹಿಣಿಯೆಂದು ಹೆಸರಲ್ಲವೆ? ಗಾಂಧೀಜೀ ತಮ್ಮ ಮನೆಯನ್ನೇ ಮುರಿದರು; ಮುರಿದು ಆಶ್ರಮ ಮಾಡಿದರು. ಬ್ರಹ್ಮಚರ್ಯದ ವ್ರತತೊಟ್ಟು ತಮ್ಮ ಪತಿಪತ್ನೀ ಸಂಬಂಧವನ್ನೇ ಅಳಿಸಿದರು. ಹಾಗೆ ಮಾಡುವಾಗ ಕಸ್ತೂರಿಬಾನನ್ನು ಕೇಳಲೇ ಇಲ್ಲ. ರಾಮನೊಡನೆ ವನವಾಸಕ್ಕೆ ಹೋಗಬೇಕಾದರೆ ಲಕ್ಷ್ಮಣ ಊರ್ಮಿಳೆಯನ್ನು ಕೇಳಿದನೆ, ಆಕೆಗೆ ಹೇಳಿದನೆ? ತಮ್ಮ ಸತ್ಯಶೋಧನೆಗೆ ಬ್ರಹ್ಮಚರ್ಯ ಅಗತ್ಯವೆಂದು ಹೊಳೆದಕೂಡಲೆ ಆ ನಿಯಮವನ್ನು ಹಿಡಿದರು. ಅಸ್ಪೃಶ್ಯತೆಯ ಮಾತೂ ಅಷ್ಟೆ. ತಮ್ಮ ಸತ್ಯಾಗ್ರಹ ಯುದ್ಧದಲ್ಲಿ ಕಸ್ತೂರಿಬಾ ಕೂಡ ಸೆರೆಮನೆಗೆ ಹೋಗಬೇಕು ಎನಿಸಿತು. ಕಸ್ತೂರಿಬಾ ಇದು ಯಾವುದರಲ್ಲೂ ಹಿಂಜರಿದಿಲ್ಲ. ಧೀರೆಯಂತೆ ಎಲ್ಲವನ್ನೂ ಸಾಧಿಸಿದಾಳೆ. ತನ್ನ ಸಾಮಾನ್ಯ ಜೀವನವನ್ನು ವೈರಾಗ್ಯದಿಂದ ಹದಗೊಳಿಸಿ ಸತ್ಯದಿಂದ ಹೊಸದಾಗಿ ಭವ್ಯವಾಗಿ ಕಟ್ಟಿಕೊಂಡಿದಾಳೆ. ಹಿಂದಿನ ಸೀತೆ ಚಂದ್ರಮತಿ ಯರಿಗಿಂತ ಇಂದಿನ ಈ ತಪಸ್ವಿನಿ ಯಾವುದರಲ್ಲಿ ಕಡಿಮೆ?

ಕಸ್ತೂರಿಬಾ ಅವರಿಗಿಂತ ಒಂದು ತೂಕ ಹೆಚ್ಚೆಂದರೆ ತಪ್ಪಾಗಲಾರದು. ಹೀಗೆಂದರೆ ಸೀತಾ ಚಂದ್ರಮತಿಯರ ಯೋಗ್ಯತೆಗೆ ಎಳ್ಳಷ್ಟೂ ಕುಂದಕವಾಗುವುದಿಲ್ಲ. ಅವರಿಗೆ ಒದಗಿದ ಪರೀಕ್ಷೆಗಿಂತ ಈಕೆಯ ಪಾಲಿಗೆ ಬಂದುದು ಹೆಚ್ಚು ವಿಷಮವಾದುದು, ಹೆಚ್ಚು ಕಠಿಣವಾದುದು ಎಂದು ಅದರ ಭಾವ. ಶ್ರೀರಾಮ ಹರಿಶ್ಚಂದ್ರರಿಗೆ ತಮ್ಮ ಸತ್ಯಮಾರ್ಗದಲ್ಲಿ ನಡೆವಾಗ ತಮ್ಮ ದಾಂಪತ್ಯ ಜೀವನವನ್ನು ತಲೆಕೆಳಗೆಮಾಡಬೇಕಾದ ಆವಶ್ಯಕತೆ ಇರಲಿಲ್ಲ. ನಡುವೆ ಒದಗಿ ಬಂದ ಕುತ್ತ ಕಳೆದಮೇಲೆ ಮತ್ತೆ ಅವರ ಬಾಳು ಮೊದಲಿನ ನೆಲೆಗೇ ಬಂದು ನಿಂತಿತು. ಗಾಂಧೀಜಿಯದು ಹಾಗಲ್ಲ. ಇವರ ಸತ್ಯ ಮಾರ್ಗದಲ್ಲಿ ಮೊದಲಿನ ತಳವನ್ನು ಪೂರಾ ಕೀಳಬೇಕಾಯಿತು. ಬುದ್ಧ ದೇವನಂತೆ ತಮ್ಮ ಮೊದಲಿನ ಬಾಳನ್ನು ಗಾಂಧೀಜೀ ತ್ಯಜಿಸಿಬಿಟ್ಟರು. ಜಗದ್ಧಿತದ ಹಾದಿ ಹಿಡಿದರು. ಈ ಗುರಿಯನ್ನು ಬೆನ್ನುಹತ್ತಿ ನಡೆದವರೆಲ್ಲ ತಪ್ಪದೆ ಸನ್ಯಾಸಿಗಳಾಗಿದಾರೆ. ಬುದ್ಧಭಗವಾನನು ಹರೆಯದ ಹೆಂಡತಿಯನ್ನು ಆಕೆಯ ತಪ್ಪು ಏನೂ ಇಲ್ಲದೆಯೆ ಆಕೆಗೆ ಹೇಳದೆ ಕೇಳದೆ ನಡುರಾತ್ರಿಯಲ್ಲಿ ಬಿಟ್ಟುಹೋದ. ರಾಮಾನುಜಾರ್ಯರು ತಿಳಿಯದೆ ಮಾಡಿದ ಸಣ್ಣತಪ್ಪಿಗಾಗಿ ಹೆಂಡತಿಯನ್ನು ಬಿಟ್ಟು ಸನ್ಯಾಸಿಯಾದರು. ದಾಸರು ಭಕ್ತರು ಎಲ್ಲರೂ ಅಷ್ಟೆ. ಗಾಂಧೀಜೀ ಸನ್ಯಾಸಿಯಾಗಿದ್ದೂ ದಾಂಪತ್ಯ ಜೀವನವನ್ನು ನಡೆಸಿದಾರೆ. ಬುದ್ಧದೇವನ ವೈರಾಗ್ಯದಾಹ ಇವರಿಗೆ ಇಲ್ಲದೆ ಇಲ್ಲ. ಆಚಾರ್ಯರ ಪತ್ನಿ ಮಾಡಿದಂಥ ಮಹಾಪರಾಧಗಳನ್ನು ಕಸ್ತೂರಿಬಾ ಮಾಡದೆ ಇಲ್ಲ. ದಾಸರಿಗೆ ಇದ್ದ ದೇವರ ದರ್ಶನದ ಹಂಬಲ ಇವರಿಗೂ ಇದೆ. ಆದರೆ ಇವರ ಹೆಂಡತಿ ಉಳಿದಕಡೆ ನಡೆದಂತೆ ಇವರಿಗೆ 'ದಂಡಿಗೆ ಬೆತ್ತ ಹಿಡಿಸಿದ'ಳಿಲ್ಲ. ಕಸ್ತೂರಿಬಾ ಕೊಂಚ ಎಚ್ಚರ ತಪ್ಪಿದ್ದರೆ ಹಕ್ಕಿ ಹಾರಿಹೋಗಬಹುದಾಗಿತ್ತು. ಆಕೆ ಆ ತೂಕ ಕಾಯ್ದುಕೊಂಡಳು. ಹಕ್ಕಿ ಗೂಡುಬಿಟ್ಟು ಹಾರಿತು. ಆದರೆ ಜೊತೆ ಬಿಟ್ಟು ಹೋಗಲಿಲ್ಲ. ಗಾಂಧೀಜಿಯದು ಎಷ್ಟೇ ದೊಡ್ಡಜೀವವಾದರೂ ಕಸ್ತೂರಿಬಾನ ತಪಸ್ಸು ಇರದಿದ್ದರೆ ಈ ಸೊಬಗಿನ ಪವಾಡ ನಡೆಯುತ್ತಿತ್ತೊ ಇಲ್ಲವೋ!

ಈ ಮಾತು ಚೆನ್ನಾಗಿ ಅರ್ಥವಾಗಲು ಒಂದು ಸಂಗತಿ ಹೇಳಬಹುದು. ಗಾಂಧೀಜೀ ೧೯೩೦ರಲ್ಲಿ ಎರವಡಾ ಸೆರೆಮನೆಯಲ್ಲಿದ್ದರು. ಕಸ್ತೂರಿಬಾ ಸತ್ಯಾಗ್ರಹವನ್ನು ಪ್ರಚಾರಮಾಡುತ್ತ ನಾಡಿನ ನಾಲ್ಕೂ ಮೂಲೆಗಳನ್ನು ಸುತ್ತುತ್ತಿದ್ದಳು. ಆಕೆಯ ಆರೋಗ್ಯವೂ ಸರಿಯಾಗಿರಲಿಲ್ಲ. ಆಕೆಗೆ ತನ್ನ ಸೀರೆಗಾಗಿ ನೂಲು ನೂತುಕೊಳ್ಳಲು ಸಾಕಷ್ಟು ವೇಳೆ ಸಿಕ್ಕುತ್ತಿರಲಿಲ್ಲ. ಗಾಂಧೀಜೀ ಇದನ್ನು ಊಹಿಸಿಕೊಂಡರು. ಆಕೆಗಾಗಿ ತಾವು ನೂತು ಆ ದಾರವನ್ನು ಕಳಿಸಿದರು, ಸೀರೆ ಮಾಡಿಕೊಳ್ಳಿಂದು. ಸೆರೆಮನೆಯ ಅಧಿಕಾರಿಗಳು ಈ ಒಲವಿನ ಕಾಣಿಕೆಯನ್ನು ಕಸ್ತೂರಿಬಾಗೆ ಕಳಿಸಲು ಒಪ್ಪಲಿಲ್ಲ. ಗಾಂಧೀಜೀ ಬಹಳ ಹೇಳಿದರು. ಈ ನೂಲನ್ನು ಯಾವ ಸಭೆಗೂ ಒಯ್ಯುವುದಿಲ್ಲ, ಇದರಿಂದ ಯಾವ ವಿಧವಾದ ರಾಜಕೀಯ ಲಾಭವನ್ನೂ ಹೊಂದುವುದಿಲ್ಲ, ಕಸ್ತೂರಿಬಾಗೆ ಸೀರೆ ಮಾಡಿಸಿಕೊಡುವ ಸುದ್ದಿ ಕೂಡಾ ಯಾರಿಗೂ ತಿಳಿಯದಂತೆ ನೋಡಿಕೊಳ್ಳುತ್ತೇವೆ ಎಂತ.

ಗಾಂಧೀಜಿಯ ಒಲವಿನ ಕಾಣಿಕೆಯ ಸಂಗತಿ ಹಾಗೆ ಮುಚ್ಚಿ ಮರೆತು ಹೋಗುವುದು ಸೆರೆಮನೆಯ ಅಧಿಕಾರಿಗಳಿಗೆ ಸರಿತೋರಲಿಲ್ಲವೇನೊ. ನೂಲನ್ನು ಕಳಿಸದೆ ತಡೆದರು. ಸುದ್ದಿಯೇನೋ ನಾಲಗೆ ಕುದುರೆಯ ರೆಕ್ಕೆಗಳ ಮೇಲೇರಿ ಸಾವಿರ ಹಳ್ಳಿಗೂ ಮುಟ್ಟಿತು.

ಸಾಧಾರಣವಾಗಿ ಕಸ್ತೂರಿಬಾ ವಿಷಯವಾಗಿ ಗಾಂಧೀಜೀ ಮಾತನಾಡುವುದಿಲ್ಲ. ಎಲ್ಲಿಯಾದರೂ ಒಂದುಸಲ ಆ ತುಂಬುಪ್ರೀತಿ ತುಳುಕುತ್ತದೆ. ಅದು ಹಾಗೆ ಚಿಮ್ಮಿದಾಗ ಎಷ್ಟು ಸೊಬಗು! ಉಪ್ಪಿನ ಸತ್ಯಾಗ್ರಹದಲ್ಲಿ ಗಾಂಧೀಜೀ ಸೆರೆ ಆದಾಗ ಕಸ್ತೂರಿಬಾ ಹತ್ತಿರ ಇರಲಿಲ್ಲ. ದೇಶಾಟನದಲ್ಲಿ ಇದ್ದರು. ಜೈಲಿಗೆ ಹೋಗುವಾಗ ಯಾರೋ ಗಾಂಧೀಜಿಯನ್ನು ಕೇಳಿದರು: ಕಸ್ತೂರಿಬಾಗೆ ಏನು ಹೇಳಬೇಕು? ಅವರು ನಗುತ್ತ ಹೇಳಿದರು. "ಆಕೆಗೇನು ಹೇಳುವುದು? ಆಕೆ ಧೀರಸತಿ."

ಕಾಮಿನೀ ಕಾಂಚನವನ್ನು ಬಿಡುವುದು ಎಂದರೆ ಅದನ್ನು ಬಿಟ್ಟು ಓಡುವುದಲ್ಲ. ಮನಸ್ಸಿನಿಂದ ಅವರ ಆಸೆಯನ್ನು ಕಿತ್ತೊಗೆಯುವುದು ಎನ್ನುತ್ತಿದ್ದರಂತೆ ರಾಮಕೃಷ್ಣ ಪರಮಹಂಸರು. ಅವರ ಬಾಳಿನಲ್ಲಿ ಆ ಸತ್ಯ ಕೊಂಚ ಮಟ್ಟಿಗೆ ಅನುಭವಕ್ಕೆ ಬಂತು. ಅದೇ ಹಾದಿಯಲ್ಲೇ ನಡೆದು ಗಾಂಧೀಜೀ–

ಕಸ್ತೂರಿಬಾ ಇಬ್ಬರೂ ಹೊಸದೊಂದು ಬೆಳಕು ತೋರುತ್ತಿದಾರೆ. ರಾಮ ಕೃಷ್ಣ ಪರಮಹಂಸರು ಸಂನ್ಯಾಸದಲ್ಲಿ ಔದಾರ್ಯ ಬೆರೆಸಿ, ಶಾರದಾಮಣಿದೇವಿಗೆ ತಮ್ಮ ಸಾನ್ನಿಧ್ಯದಲ್ಲಿ ತಾವು ಕೊಟ್ಟು ಅಲ್ಲಿಯತನಕ ಜಗತ್ತು ನೋಡದ ಕೇಳದ ಒಂದು ಸೊಬಗನ್ನು ತೋರಿದರು. ಗಾಂಧೀಜೀ-ಕಸ್ತೂರಿಬಾ ದಂಪ ತಿಗಳು ದಾಂಪತ್ಯವನ್ನು ಕಾಮದ ಕೆಸರಿನಿಂದ ಎತ್ತಿ ವೈರಾಗ್ಯದ ತಳ ಹದಿಯ ಮೇಲೆ ನಿಲ್ಲಿಸಿ ನಿಜವಾದ ಧರ್ಮಪ್ರೇಮಗಳಿಂದ ಕಟ್ಟಿ ಹಿಂದೆಂದೂ ಕಾಣದ ಹೊಸ ಸೊಬಗನ್ನು ಬೀರುತ್ತಿದಾರೆ.

ವಿಶ್ವಕುಟುಂಬಿ

ಬಾಪೂ ವಿಶ್ವಕುಟುಂಬಿ. ಎಲ್ಲವೂ ಬೇಕು. ಎಲ್ಲರೂ ಬೇಕು. ಅವರ ವ್ಯವಹಾರ ನಿತ್ಯ ಶತಾವಧಾನ ಇದ್ದಂತೆ. ಹತ್ತೂ ನಿಟ್ಟಿಗೆ ದಶರಥ ಚಕ್ರವರ್ತಿ ತನ್ನ ರಥ ಓಡಿಸುತ್ತಿದ್ದನಂತೆ. ಅದೂ ಒಂದು ಪರಾಕ್ರಮವೇ. ಬಾಪೂ ಕೋಟಿ ದಿಕ್ಕಿನಲ್ಲಿ ತಮ್ಮ ಮನಸ್ಸನ್ನು ಹರಿಸುತ್ತಾರೆ. ಪರಕೋಟಿ ಮಾತಿನಲ್ಲಿ ತೊಡಗುತ್ತಾರೆ. ಕೋಟಿ ಸಂಬಂಧ ಬೆಳಸುತ್ತಾರೆ. ಬೆಳಗ್ಗೆ ಗಾಳೀಸವಾರಿಗೆ ಹತ್ತು ಜನ ಹಿಂದೆಯೆ ಇರುತ್ತಾರೆ. ದಿನವೂ ಪ್ರಪಂಚದ ಮೂಲೆ ಮೂಲೆಗಳಿಂದ ಜನ ನೋಡಲು ಬರುತ್ತಾರೆ. ಒಬ್ಬೊಬ್ಬರದು ಒಂದು ದುಃಖ. ಒಬ್ಬೊಬ್ಬನದು ಒಂದು ಸಮಸ್ಯೆ. ಎಲ್ಲರಿಗೂ ಸಮಾ ಧಾನ ಬೇಕು.

ಚೀನಾದೇಶದ ಪ್ರತಿನಿಧಿಯಾಗಿ ಅಧ್ಯಕ್ಷ ತೈ ಚಿ ತೌ ಮೊನ್ನೆ ತಾನೆ ಸೇವಾಗ್ರಾಮಕ್ಕೆ ಬಂದಿದ್ದರು. ಗಾಂಧೀಜೀ ಅವರಿಗೂ ಅವರ ಜೊತೆಗಾರ ರಿಗೂ ಖಾದೀ – ಅಹಿಂಸೆಗಳ ಸಂದೇಶವನ್ನೇ ಹೇಳಿದರು. ಹೊರಟು ಬರುವಾಗ ತೈ ಚಿ ತೌ ಗಾಂಧೀಜಿಯ ದೀರ್ಘಾಯುವನ್ನು ಕೋರಿದರು.

“ ಚೀಣದ ಯೋಗಕ್ಷೇಮಕ್ಕಾಗಿ, ಹಿಂದೂಸ್ಥಾನದ ಯೋಗಕ್ಷೇಮ ಕ್ಕಾಗಿ–ಅಷ್ಟೇಕೆ ಇಡೀ ಮಾನವಕೋಟಿಯ ಯೋಗಕ್ಷೇಮಕ್ಕಾಗಿ ನಿಮಗೆ ದೀರ್ಘಾಯುವಿರಲಿ ಎಂದು ಬೇಡುತ್ತೇನೆ ” ಎಂದರು.

ಗಾಂಧೀಜೀ ನಗುತ್ತ "ನನ್ನ ಕುಟುಂಬ ದೊಡ್ಡದು. ೩೫ ಕೋಟಿ ಜನರದು" ಎಂದರು.

ತೈ ಚಿ ತಾ ಮುಂದುವರಿಸಿದರು. "ಏಕೆ? ಇಡೀ ಮಾನವಜಾತಿಯೇ ನಿಮ್ಮ ಕುಟುಂಬ" ಎಂದರು.

'ನಿಜ. ಈ ೩೫ ಕೋಟಿ ಕುಟುಂಬದ ಯೋಗಕ್ಷೇಮವನ್ನು ನಾನು ಹೊರಬಲ್ಲೆನಾದರೆ ನೀವು ಹೇಳಿದ ಹಾಗೂ ಅಂದೇನು' ಎಂದರು ಗಾಂಧೀಜೀ.

ಸರೋಜಿನೀದೇವಿ ಒಂದು ಕಡೆ ಹೇಳಿದಾರೆ. 'ನಮ್ಮ ದೇಶದಲ್ಲಿ ಇಬ್ಬರು ಮಹಾತ್ಮರಿದಾರೆ. ಒಬ್ಬರು ರಮಣ ಮಹರ್ಷಿ. ಇನ್ನೊಬ್ಬರು ಗಾಂಧೀಜೀ. ಅವರು ಎಲ್ಲರಿಗೂ ಶಾಂತಿ ಕೊಡುತ್ತಾರೆ. ಇವರು ಯಾರನ್ನೂ ಶಾಂತವಾಗಿ ಕೂಡಗೊಡುವುದಿಲ್ಲ. ಇಬ್ಬರದೂ ಒಂದೇ ಉದ್ದೇಶ.'

ಮಹರ್ಷಿ ಅವಧೂತಮಾರ್ಗದ ಅದ್ವೈತಯೋಗಿ. ಗಾಂಧೀಜೀ ಅನಾಸಕ್ತಿಮಾರ್ಗದ ಕರ್ಮಯೋಗಿ. ಅವರಿಗೆ ಮನಸ್ಸು ಹಗೆ. ಮನಸ್ಸಿನಿಂದಲೇ ಬಂಧನ, ಮನಸ್ಸಿನಿಂದಲೇ ಮೋಕ್ಷ. ಮನಸ್ಸನ್ನು ನಾಶಗೊಳಿಸುವ ವಿಚಾರಮಾರ್ಗ ಮಹರ್ಷಿಯದು. ಗಾಂಧೀಜಿಗೆ ಆಸಕ್ತಿ ಹಗೆ. ಕರ್ಮದಲ್ಲಿ ಆಸಕ್ತರಾದರೆ ಬಂಧನ. ಅನಾಸಕ್ತರಾದರೆ ಮೋಕ್ಷ. ಆಸಕ್ತಿಯನ್ನು ನಾಶಗೊಳಿಸುವ ನಿಷ್ಕಾಮಯೋಗ ಇವರದು. ಇಬ್ಬರ ಹಾದಿಗೂ ಗಾವುದ ಗಾವುದ ಅಂತರವಿದ್ದಂತೆ ಕಂಡರೂ ಅಂತರವಿಲ್ಲ. ಇಬ್ಬರ ಗುರಿಯೂ ಒಂದೇ. ಅವರಿಗೆ ಜಗತ್ತು ಸುಳ್ಳಾದುದರಿಂದ ಮನಸ್ಸು ಬಂಧನ. ಇವರಿಗೆ ಜಗತ್ತು ಸತ್ಯವಾದುದರಿಂದ ಆಸಕ್ತಿ ಬಂಧನ. ಇಬ್ಬರೂ ಮಾಡುವುದು ಒಂದೇ. ತಮಗೆ ಬಂಧನವಾದುದನ್ನು ಕಳೆಯುವುದು.

ಆಸಕ್ತನಾದವನಿಗೆ ತನ್ನ ಮನೆ ಮಕ್ಕಳ ಚಿಂತೆ. ಉದಾರಚರಿತರಾದ ಅನಾಸಕ್ತರಿಗೆ ಪ್ರಪಂಚವೆಲ್ಲ ಅವರ ಕುಟುಂಬವೇ.* ಎಲ್ಲರ ಪಾಪ

---

*ಅಯಂ ನಿಜೋ ಪರೋ ಗಣನಾ ಲಘುಚೇತಸಾಂ ।
ಉದಾರಚರಿತಾನಾಂತು ವಸುಧೈವ ಕುಟುಂಬಕಂ ॥

ಭವಭೂತಿ : ಉತ್ತರರಾಮಚರಿತೆ.

ತನ್ನ ತಾನರಿದಂಗೆ ಭಿನ್ನಭಾವನೆಯಿಲ್ಲ ।
ತನ್ನವರಿಲ್ಲ ಪರರಿಲ್ಲ ತ್ರೈಭುವನ ।
ತನ್ನೊಳಗಿಹುದು ಸರ್ವಜ್ಞ ॥

ಪುಣ್ಯವೂ ಅವರದೇ. ಗಾಂಧೀಜಿಯ ದಿನಚರಿತ್ರೆಯಲ್ಲಿ ಒಂದು ನಿಮಿಷ ವಾದರೂ ವಿರಾಮವಿಲ್ಲ. ಸದಾ ಯಂತ್ರ ತಿರಗುತ್ತ ಇರುತ್ತದೆ.† ಇದೆಲ್ಲ ಗದ್ದಲದ ನಡುವೆ ಅವರ ಧ್ಯಾನ–ಈಶ್ವರ ಪ್ರಣಿಧಾನಗಳು ನಡೆದೇ ಇರುತ್ತವೆ. 'ಒಂದು ಗಳಿಗೆಯೂ ದೇವರನ್ನು ಬಿಟ್ಟಿರಲಾರದ' ಜೀವ ಅವರದು.

ಯಾವ ಕೆಲಸವನ್ನು ಮಾಡಿದರೂ ಅದನ್ನು ಸರ್ವಾಂಗಪರಿಪೂರ್ಣ ತೆಯ ದೃಷ್ಟಿಯಿಂದ ಮಾಡುತ್ತಾರೆ. ಪರ್ಣಕುಟಿಯಲ್ಲಿ ಒಂದು ಕಣವಾ ದರೂ ಧೂಳು ಇದ್ದೀತೇ? ಯಾರೂ ಎದುರಿಗಿಲ್ಲದಿದ್ದರೆ ತಾವೇ ಗುಡಿಸು ತ್ತಾರೆ. ಅವರು ಕಾಗದಗಳನ್ನು ಮಡಿಸುವುದೂ ಹರಿಯುವುದೂ ಒಂದು ಸೊಗಸು. ಪತ್ರ ಬಂದರೆ ಅದರಲ್ಲಿ ಬರೆಯದೆ ಉಳಿದ ಬಿಳಿಯ ಕಾಗದ ಹರಿದು ಉಪಯೋಗಿಸುತ್ತಾರೆ. ಒಂದೇ ಮಗ್ಗಲು ಬರೆದ ಕಾಗದದ ಹಿಮ್ಮ ಗ್ಗಲಿಗೆ ಬರೆಯುತ್ತಾರೆ. ಗುಂಡುಸೂಜಿಗಳನ್ನು ಜೋಪಾನ ಮಾಡುತ್ತಾರೆ. ಅವರು ಬರೆದ ಕೆಲವು ಮುಖ್ಯವಾದ ಬರಹಗಳು ಹಾಗೆ ಹಿಮ್ಮಗ್ಗಲಿಗೆ ಬರೆಯಲ್ಪಟ್ಟವೆ. ತಮಗೆ ಬಂದ ಲಕೋಟೆಗಳನ್ನು ಕತ್ತರಿಸಿ ತಿರುವಿಹಾಕಿ ಅವನ್ನೇ ಮತ್ತೆ ಲಕೋಟೆಗಳಾಗಿ ಮಾಡುತ್ತಾರೆ.

ಬಾಪೂಗೆ ದಿನವೂ ಬರುವ ಕಾಗದಪತ್ರ ಒಂದು ಹೊರೆ. ಸಾವಿರ ಕಡೆಯಿಂದ ಕಾಗದ. ಈಗಂತೂ ಗಾಂಧೀಜಿಗಾಗಿಯೇ ಸೇವಾಗ್ರಾಮದಲ್ಲಿ ಒಂದು ಅಂಚೆಮನೆಯಾಗಿದೆ. ಸಾವಿರ ತರದ ಕಾಗದ ಬರುತ್ತವೆ. ಒಬ್ಬರು ಹರಿಜನ ಸೇವೆಯಲ್ಲಿ ಸಲಹೆ ಕೇಳುತ್ತಾರೆ. ಒಬ್ಬರು ಬ್ರಹ್ಮಚರ್ಯ ಪಾಲನೆಯಲ್ಲಿ ತಮ್ಮ ಕಷ್ಟ ತಿಳಿಸುತ್ತಾರೆ. ತಮ್ಮ ಆಧ್ಯಾತ್ಮಜೀವನದ ಅಂತರಂಗವನ್ನು ಬಿಚ್ಚಿಟ್ಟು ಬೆಳಕು ಕೋರುವವರು ಕೆಲವರು. ರಾಜಕಾರ ಣದಲ್ಲಿ, ವ್ಯವಹಾರದಲ್ಲಿ ಅವರ ಹಿತವಚನ ಬೇಡಿದವರು ಕೆಲವರು. ಯಾರ ಮೇಲೋ ದೂರು ಹೇಳುವವರು ಕೆಲವರಾದರೆ ಇವರನ್ನೇ ನಿಂದಿಸುವವರು ಕೆಲವರು. ಇವರ ಸಿದ್ಧಾಂತ ವಿಮರ್ಶೆ ಮಾಡುವವರು ಒಬ್ಬರು. ಕಾಂಗ್ರೆ

---

† ವರ್ಧಾಯಾತ್ರೆ-"ಆಶ್ರಮದಲ್ಲಿ; ಗಾಂಧೀಜಿ-ಒಂದು ದಿನ" ಎಂಬ ಭಾಗಗಳನ್ನು ಓದಿದರೆ ಆ ಚಿತ್ರ ಕಣ್ಣಿಗೆ ಕಟ್ಟುತ್ತದೆ.

ಸ್ಸಿನ ನೀತಿ ಖಂಡನೆ ಮಾಡುವವರು ಹಲವರು. ಇವರೆಲ್ಲರಿಗೂ ಸರಿಯಾಗಿ ಹದವಾಗಿ ಉತ್ತರ ಬರೆಯಬೇಕು. ಸಂದರ್ಭಕ್ಕೆ ತಕ್ಕಂತೆ ಹಿತವಚನವೋ ಮೆಚ್ಚುಗೆಯ ಮಾತೋ ಬುದ್ಧಿವಾದವೋ ವ್ಯವಹಾರದ ಉತ್ತರವೋ ಬರೆಯಬೇಕು.

ಏನೇ ಬರೆಯಲಿ ಅದರಲ್ಲಿ ಒಂದು ಬಗೆಯ ಸಲಿಗೆ ಇದೆ; ಆತ್ಮೀಯತೆ ಇದೆ. ಆ ಸಲಿಗೆಗೆ ಸೋತುಹೋಗದವರಿಲ್ಲ. ಎಂಥ ನಾಲ್ಕು ಸಾಲಿನ ಕಾಗದವೇ ಆಗಲಿ ಅದರಲ್ಲಿ ಆ ಆದರ ಹೊಳೆಯುತ್ತದೆ. ಆ ನುಡಿ, ಆ ಸಂಬೋಧನೆ, ಆ ಉತ್ತರ–ಎಲ್ಲದರಲ್ಲೂ ಒಂದು ಕಲೆ ಇದೆ. ಆ ಕಲೆ ರಾಜಕಾರಣಿಗಳ ಬೆಡಗು ವ್ಯಾಪಾರಿಗಳ ಲೌಕಿಕ ಮರ್ಯಾದೆಯಲ್ಲ. ಆ ಕಲೆ ಉದಾರ ಚರಿತೆಯದು; ವಿಶ್ವಕುಟುಂಬದ ಭಾವನೆಯ ಫಲ.

ಒಬ್ಬ ದೇಶಸೇವಕನನ್ನು ದೂರದ ಉತ್ಕಲದೇಶಕ್ಕೆ ಕಳಿಸಿದಾರೆ. ಅಲ್ಲಿ ಪಾಂತಿಭೇದಿ ಉಪದ್ರವ ವಕ್ರಿಸಿದೆ. ಅವನಿಗೆ ನಾಲ್ಕು ಹಿತವಚನ ಹೇಳಿ ಸಂತಯಿಸಬೇಕು. "ಪಾಂತಿಭೇದಿ ಉಪದ್ರವಕ್ಕೆ ಹೆದರಬೇಡ. ಸರಿಯಾದ ನೇಮದಿಂದ ಜೋಕೆಯಾಗಿರು. ಮನುಷ್ಯಪ್ರಯತ್ನಕ್ಕೆ ಸಾಧ್ಯವಾದಷ್ಟು ಜಾಗರೂಕತೆಮಾಡಿಯೂ ಕೂಡ ಒಂದುವೇಳೆ ಅನಿಷ್ಟವೇ ಪ್ರಾಪ್ತವಾದರೆ ನಾವು ಮಾಡುವುದಾದರೂ ಏನು? ಈ ಲೋಕದಲ್ಲಿ ವಿಪತ್ತೇ ಇಲ್ಲದ ತಾವು ಉಂಟೆ? ನೋಡು, ನಿನ್ನ ಮನಸ್ಸಿಗೆ ಸರಿತೋರಿದಂತೆ ಮಾಡು."

ಇನ್ನೊಬ್ಬ ಸಾಧಕ. ತನ್ನನ್ನು ತಾನು ಗೆಲ್ಲಲು ಪ್ರಯತ್ನಮಾಡುವ ಆಧ್ಯಾತ್ಮಜೀವಿ. ಅವನಿಗೆ ಬರೆದರು.

"ನಮ್ಮೊಳಗಿನ ರಾಗದ್ವೇಷಗಳ ಹತ್ತುತಲೆಯ ಹುಳು ರಾವಣನನ್ನು ನಾವು ಶ್ರೀರಾಮನ ಬಲದಿಂದ ಗೆಲ್ಲಬೇಕು. ಶ್ರೀರಾಮನನ್ನು ಸಂಪೂರ್ಣವಾಗಿ ನಂಬಿ ಅವನ ಅನುಗ್ರಹಕ್ಕೆ ಕೈಯೊಡ್ಡಿ ಪ್ರಸನ್ನರಾದರೆ ನಮಗೆ ಗೆಲವು ಖಂಡಿತ. ಮುಖ್ಯವಾಗಿ ಆತ್ಮವಿಶ್ವಾಸ ಧೈರ್ಯಗಳನ್ನು ಕಳೆದುಕೊಳ್ಳಬಾರದು. ಆಹಾರ ನಿಯಮ ಬೆಳೆಸು. ನಾಲಗೆಯ ಚಪಲಕ್ಕೆ ಸೋಲಬೇಡ."

ಮತ್ತೊಬ್ಬರು ವ್ರತಹಿಡಿದು ನೂಲುತ್ತಿದಾರೆ. ದಿನವೂ ಮಾಡಿದರೂ ಅವರಿಗೆ ಸಮಾಧಾನವಿಲ್ಲ.

"ಬರೀ ನೂತರೆ ಸಾಲದಯ್ಯ. ಯಜ್ಞಕರ್ಮ ಎಂದು ತಿಳಿದು ನೂಲುವುದಕ್ಕೂ ವಿನೋದಕ್ಕಾಗಿ ನೂಲುವುದಕ್ಕೂ ಹಸ್ತಿಮಶಕಾಂತರ. ನೂಲುವಾಗ ಮೌನವ್ರತ ಹಿಡಿಯುವುದು ಒಳ್ಳೆಯದು. ಹಾಗೆ ಮಾಡಿ ನೋಡು. ಅದರಿಂದ ಮನಶ್ಶಾಂತಿ ಸಿಗುತ್ತದೆ. ದಿನವೂ ಒಂದು ಗೊತ್ತಾದ ಹೊತ್ತಿಗೆ ನೂಲುವ ಪದ್ಧತಿ ಇಟ್ಟುಕೊಂಡರೆ ಇತರ ಕೆಲಸಗಳಲ್ಲೂ ಒಂದು ಕ್ರಮ, ಒಂದು ಹದ ಬರುತ್ತದೆ. ಬಾಳು ಹಸನಾಗಿ ಒಂದು ಕ್ರಮಕ್ಕೆ ಹೊಂದಿಕೊಳ್ಳುತ್ತದೆ."

ಖಾದೀ ಸೇವಕ ಒಬ್ಬನಿಗೆ ತನ್ನ ಮನೆಯವರೆಲ್ಲ ಖಾದೀ ಉಡಲಿ ಎಂದು ಬಯಕೆ. ಅವನ ತಾಯಿ ಅವನಿಗೆ ಮಣಿಯಲಿಲ್ಲ. ಏನು ಮಾಡಬೇಕು? ಬಾಪೂ ಅವನಿಗೆ ಬರೆದರು:

"ನಿಮ್ಮ ತಾಯಿಗೆ ಇಷ್ಟವಿಲ್ಲದೆ ಇದ್ದರೆ ಖಾದೀ ಉಡು ಎಂದು ಆಕೆಯನ್ನು ಬಲವಂತ ಮಾಡಬೇಡ. ನಿನಗೆ ಖಾದಿಯಲ್ಲಿರುವ ಶ್ರದ್ಧೆ ನಿಜವಾದುದೂ ಬಲವಾದುದೂ ಆದರೆ ಅದರ ಪ್ರಭಾವ ತಾನೇ ಆ ಕೆಲಸ ಮಾಡೀತು!"

ಇನ್ನೊಬ್ಬರಿಗೆ ಕೋಮುವಾರು ಕಲಹಗಳ ವಿಷಯ

"ಕೋಮುವಾರು ಕಲಹಗಳಿಗೆ ನನ್ನ ರಾಮಬಾಣೌಷಧಿ ಗೊತ್ತೇ ಇದೆಯಲ್ಲ. ಎರಡು ಪಕ್ಷಗಳಲ್ಲಿ ಯಾವುದಾದರೂ ಒಂದು ಪಕ್ಷ ದ್ವೇಷಬುದ್ಧಿಯನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು, ಇನ್ನೊಂದು ಪಂಗಡದವರು ಮಾಡಿದ ಅನ್ಯಾಯವನ್ನು ಸಮಾಧಾನದಿಂದ ಸೈರಿಸಿಕೊಂಡರೆ ಕೊನೆಗೆ ಇಬ್ಬರ ನಡುವೆ ಗೆಳೆತನ ಬೆಳೆದೀತು. ಅನ್ಯಾಯ ಕಡೆಯಾಗಿ ಎರಡೂ ಕಡೆಯವರೂ ಧೀರರಾದಾರು. ಈಗಂತೂ ಇಬ್ಬರೂ ಶುದ್ಧ ಹೇಡಿಗಳಾಗಿದಾರೆ."

ಇವು ಒಂದೇ ದಿನ ಬರೆದ ಕೆಲವು ಕಾಗದ. ಎಲ್ಲದರಲ್ಲೂ ಆ ವಾತ್ಸಲ್ಯದ ಕೈವಾಡ. ಈ ತೆರದ ಅಂತಃಕರಣ ಅವರದೇ ಸೊತ್ತು. ಹೊಸಬರು ಹಳಬರು ಎನ್ನದೆ ಈ ಧಾರಾಳವನ್ನು ತೋರಿಸುತ್ತಾರೆ. ಅಂತಲೇ ಅವರನ್ನು ಬಾಪು ಎಂದು ಕರೆಯುವುದು. ಬಾಪು ಎಂದರೆ ತಂದೆ. ಗಾಂಧೀಜಿಯ ನಡತೆಯಲ್ಲಿ ಆ ಗೌರವಕ್ಕೆ ಅವರು ನಿಜವಾಗಿ ತಕ್ಕವರು ಎಂದು ತಿಳಿದು ಬರುತ್ತದೆ. ವಲ್ಲಭಭಾಯಿಯನ್ನು ಕಂಡರೆ ಅವರಿಗೆ ತುಂಬಾ ಪಕ್ಷಪಾತ.

ರಾಜಗೋಪಾಲಚಾರ್ಯರ ಮೇಲೆ ಬಹಳ ವಿಶ್ವಾಸ. ಇನ್ನೊಬ್ಬರಿಗೆ ಗಾಂಧೀಜೀ ತುಂಬ ಬೇಕಾದವರು. ಹೀಗೆ ಜನ ಲೆಕ್ಕ ಹಾಕುವುದೂ ಉಂಟು. ಬಾಪು ವನ್ನು ಕೊಂಚಮಟ್ಟಿಗಾದರೂ ಬಲ್ಲವರಿಗೆ ಆ ವಿಶ್ವಾಸದ ಗುಟ್ಟು ಗೊತ್ತಾಗುತ್ತದೆ. ತಮ್ಮ ಹಾದಿಯಲ್ಲಿ ಇರುವವರೆಗೆ ಎಲ್ಲರ ಮೇಲೂ ಅವರಿಗೆ ಅಭಿಮಾನ. ಬೇರೆ ದಾರಿ ಹಿಡಿದರೆ ಆ ಅಭಿಮಾನಕ್ಕೆ ಬೇಲಿ ಹಾಕುತ್ತಾರೆ. ವಲ್ಲಭಭಾಯಿಯನ್ನು ಜನ ಹುಚ್ಚಪಚ್ಚಾ ಟೀಕಿಸಿದಾಗ 'ವಲ್ಲಭಭಾಯಿಯ ಗೌರವವೇ ನನ್ನ ಗೌರವ. ಆತ ಕೆಳಕ್ಕೆ ಬಿದ್ದರೆ ನಾನೂ ಬಿದ್ದ ಹಾಗೆಯೇ ಎಂದರು. ಜನಜಂಗುಳಿ ಹೋ ಎಂದಿತು. ಅದೇ ಭಾಯಿ ಅಹಿಂಸೆಯನ್ನು ಒಪ್ಪದೆ ರಾಜ್ಯತಂತ್ರದಲ್ಲಿ ಕೊಂಚ ಹಿಂಸೆಯೂ ಬೇಕು ಎಂದಾಗ-' ಭಾಯಿಗೆ ಹುಚ್ಚು ಹಿಡಿದಿದೆ' ಎಂದರು. ಸರದಾರರನ್ನೂ ರಾಜಗೋಪಾಲಚಾರ್ಯರನ್ನೂ ಕಟುವಾಗಿ ಟೀಕಿಸಿದರು. ೨೦ ವರ್ಷಗಳ ಗೆಳೆತನ ಅದು. ಅದಕ್ಕೆ ಎಷ್ಟು ಬೇಕು ಮಾತು. ರೋಮ್ ಚಕ್ರವರ್ತಿ ಸೀಜರ್‌ನನ್ನು ದುಷ್ಟರು ಇರಿದು ಕೊಂದರು. ಆ ಗುಂಪಿನಲ್ಲಿ ಚಕ್ರವರ್ತಿಯ ಬಲಗೈಯಾದ ಬ್ರೂಟಸ್ ಕೂಡ ಇದ್ದ. ಅವನೂ ಇರಿದ. ಆಗ ಸೀಜರ್ ಏನೆನ್ನಬೇಕು? 'ಬ್ರೂಟಸ್! ನೀನೂ ಸಹ' ಎಂದ. ಅಷ್ಟೆ. ಜಗತ್ತಿನ ಎಲ್ಲ ಕಟುತ್ವವೂ ಆ ಮಿದುವಾದ ಮಾತಿನಲ್ಲಿ ಇದೆ.

ಬಾಪೂವಿನ ಕುಟುಂಬ ಭಾವನೆ ಸಂಕುಚಿತವಾದುದಲ್ಲ. ಅವರಿಗೆ ನಾಲ್ಕು ಜನ ಮಕ್ಕಳಿದಾರೆ. ಸೊಸೆಯರೂ ಇದಾರೆ. ಆದರೆ ಅವರ ಸೇವಾಗ್ರಾಮದ ಕುಟುಂಬದಲ್ಲಿ ಕಸ್ತೂರಿಬಾನನ್ನು ಬಿಟ್ಟರೆ ಅವರ ಮನೆತನದವರು ಯಾರೂ ಇಲ್ಲ. ರಾಜಕೀಯ ಪ್ರಪಂಚದಲ್ಲಿ ಹತ್ತಾರು ನಾಯಕರ ಹೆಸರು ಅವರ ಶಿಷ್ಯಕೋಟಿಯಲ್ಲಿ ಪ್ರಧಾನವಾಗಿ ಬರುತ್ತವೆ. ಆದರೆ ಬುದ್ಧನನ್ನು ಆನಂದನು ಅನುಸರಿಸಿದಂತೆ, ಶ್ರೀರಾಮನನ್ನು ಲಕ್ಷ್ಮಣ ಅನುಸರಿಸಿದಂತೆ, ರಾಮಾನುಜಾಚಾರ್ಯರನ್ನು ಕೂರೇಶ ಸೇವಿಸಿದಂತೆ, ಬಾಪುವನ್ನು ಅನುಸರಿಸುವವರು ಆ ಪಟ್ಟಿಯಲ್ಲಿ ಬರುವುದಿಲ್ಲ. ಬಾಪುವಿನ ಅಭಿಮಾನ ಎಷ್ಟು ಮಿದುವೋ ಅಷ್ಟು ಕಠಿನ. ಒಂದು ಸಮಯದಲ್ಲಿ ಹೂವಿನ ಹಾಗೆ ಇದ್ದವರು ಮತ್ತೊಂದು ಹೊತ್ತಿನಲ್ಲಿ ವಜ್ರದಂತೆ ಕಠಿನವಾಗಿಬಿಡುತ್ತಾರೆ. ತಮ್ಮ ಹಿರಿಯ ಮಗ ಹೀರಾಲಾಲನ ಬಗ್ಗೆ ಅವರು ತೋರಿದ ರೀತಿ ಸಾಲದೆ?

ಕಸ್ತೂರಿಬಾನನ್ನೇ ಬೇರೆ ಇದ್ದು ಬಿಡು ಎಂದು ಹೇಳಲಿಲ್ಲವೇ? ಅಂಥವರು ಡಾಕ್ಟರ್ ಪಟ್ಟಾಭಿಸೀತಾರಾಮಯ್ಯ ಕಾಂಗ್ರೆಸ್ ಅಧ್ಯಕ್ಷ ಪದವಿಯ ಪೋಟಿಯಲ್ಲಿ ಸೋತಾಗ "ಪಟ್ಟಾಭಿಯಲ್ಲ ಸೋತದ್ದು; ನಾನು" ಎಂದು ಆ ಅವಮಾನವನ್ನು ತಮ್ಮ ತಲೆಯಮೇಲೆ ಹೊತ್ತರು. ಇದಕ್ಕೆಲ್ಲ ಕಾರಣ ಅವರಿಗೆ ಸತ್ಯದಲ್ಲಿ ಇರುವ ಆಸಕ್ತಿ. ಉಳಿದುದರಲ್ಲಿ ಇರುವ ಅನಾಸಕ್ತಿ. ದೇಹ–ರಕ್ತ ಅಲ್ಲ ಅವರ ಕುಟುಂಬದ ಭಾವನೆಯ ಆಧಾರ, ಸತ್ಯ–ಅಹಿಂಸೆ.

ಈ ಭಾವನೆಗೆ ಹೊಸತು–ಹಳದು ಎಂಬ ಭೇದವಿಲ್ಲ. ಹಿರಿದು ಕಿರಿದು ಎಂಬ ತೂಕವಿಲ್ಲ. ಕಳೆದವರ್ಷ ಬಾಪು ಗಡಿನಾಡಿಗೆ ಹೋಗಿದ್ದರು. ಅಬಟಾಬಾದಿನಲ್ಲಿ ತಂಗಿದ್ದರು. ಪ್ರವಾಸದಲ್ಲಿ ಪತ್ರವ್ಯವಹಾರ ಸರಿಯಾಗಿ ಸಾಗುವುದಿಲ್ಲ. ಎಷ್ಟೋ ಪತ್ರ ಉತ್ತರಕೊಡದೆ ನಿಂತುಹೋಗುತ್ತವೆ. ಬಾಪೂಜಿಯ ಪ್ರವಾಸದ ಗದ್ದಲ ಅವಸರಗಳನ್ನು ನೋಡಿದರೆ ಗೊತ್ತಾಗುತ್ತದೆ, ವಿರಾಮಕ್ಕೆ ಪ್ರಪಂಚದಲ್ಲಿ ಏನು ಬೆಲೆ ಎಂಬುದು. ಅವರಿಗೆ ಅರವತ್ತು ತುಂಬಿದಾಗ ಹುಟ್ಟಿದ ಹಬ್ಬದದಿನ ಸಂಯುಕ್ತಪ್ರಾಂತದಲ್ಲಿ ಅವರು ಪ್ರವಾಸ ಮಾಡುತ್ತಿದ್ದರು. ಆ ದಿನ ಬೆಳಗಿನ ಜಾವ ೩ ಗಂಟೆಗೆ ಫೈಜಾಬಾದ್ ಬಿಟ್ಟರು. ೫ ಗಂಟೆಗೆ ಜಾನ್‌ಪುರ; ೬ ಗಂಟೆಗೆ ದಾರಿಯಲ್ಲೇ ಮೋಟಾರಿನಲ್ಲಿ ಫಲಾಹಾರ. ೭ಕ್ಕೆ ಒಂದು ಕಡೆ ಹೆಂಗಸರ ಸಭೆ. ಮತ್ತೆ ಜಾನ್‌ಪುರದಲ್ಲಿ ದೊಡ್ಡ ಸಭೆ, ಮಾನಪತ್ರ. ೮ ಗಂಟೆಗೆ ಅಲ್ಲಿಂದ ಕಾಶಿಗೆ. ನಡುವೆ ಹಾದಿಯಲ್ಲಿ ಒಂದು ಕಡೆ ನಿಧಿಸ್ವೀಕಾರಕ್ಕಾಗಿ ಮೂರು ನಿಮಿಷ ಕಾರು ನಿಲ್ಲಿಸಿದರು. ದಾರಿಯುದ್ದಕ್ಕೂ ಕಾಗದಗಳನ್ನು ಓದುತ್ತ ಕೂತಿದ್ದವರು ಹಾಗೆಯೆ ಮೂಗಿನಮೇಲೆ ಕನ್ನಡಕ ಇಟ್ಟೇ ನಿದ್ದೆಹೋಗಿದ್ದರು. ಜನ ತುಂಬ ಗದ್ದಲ ಮಾಡಿದರು. ಆದರೂ ಏಳಲಿಲ್ಲ. ಸರಿ, ನಿಧಿ ತೆಗೆದುಕೊಂಡು ಮುಂದೆ ಬಾರಾಗಾಂವ್‌ಗೆ. ಅದನ್ನು ಮುಗಿಸಿ ಹತ್ತುಗಂಟೆಗೆ ಕಾಶಿ ಮುಟ್ಟಿದರು. ಲೆಕ್ಕವಿಲ್ಲದಷ್ಟು ತಂತಿ, ಕಾಗದ ಅಲ್ಲಿಗೆ ಬಂದಿದ್ದವು. ಸಾವಿರಾರು ಜನ ದರ್ಶನಕ್ಕೆ, ಮಾತಿಗೆ ಕಾದಿದ್ದರು. ಬಿಡುವೇ ಇಲ್ಲ. ಸಂಭಾಷಣೆ ಆಯಿತು. ನೂತು ಆಯಿತು. ೩ ಗಂಟೆಗೆ ಗಾಜೀಪುರಕ್ಕೆ. ನಡುವೆ ಗೋಮತಿ ನದಿಯನ್ನು ದಾಟಿದರು. ಕಾರಿನಲ್ಲೇ ಕಸ್ತೂರಿಬಾ; ಕಸ್ತೂರಿಬಾ ಜೊತೆಗೇ

ಊಟದ ಪೆಟ್ಟಿಗೆ. ಆ ಸಂಜೆ ಆದಮೇಲೆ ಬಾಪು ಊಟಮಾಡರು. ೫ ಗಂಟೆಗೆ ಕಾರಿನಲ್ಲೇ–ನಿಲ್ಲಿಸಿ ಅಲ್ಲ, ಹೋಗುವಾಗಲೇ – ಊಟ. ಅಷ್ಟು ಹೊತ್ತಿಗೆ ಸೈದಾಪುರ. ಅಲ್ಲಿಂದ ಗಾಜೀಪುರಕ್ಕೆ ಹೊರಟರೆ ಊರಿಗೆ ೩ ಮೈಲು ದೂರ ದಲ್ಲಿ ಗಾಡಿ ನಡೆಸುವವನಿಗೆ ಮುಂದಾಲೋಚನೆ ಇಲ್ಲದೆ ಪೆಟ್ರೋಲು ಮುಗಿ ಯಿತು. ಬಾಪೂ ಅಲ್ಲಿಂದ ನಡೆದೇ ಹೊರಟರು. ಗಾಜೀಪುರದ ಸಭೆ ತಪ್ಪಿ ಸುವುದು ಹೇಗೆ? ದಾರಿಯಲ್ಲಿ ಒಂದು ಒಂಟೆತ್ತಿನ ಗಾಡಿ ಸಿಕ್ಕಿತು. ಆದರಲ್ಲಿ ಪ್ರಯಾಣ ಸಾಗಿತು. ಅಂತೂ ಇಂತೂ ತಡವಾಗಿ ಊರು ಮುಟ್ಟಿದರು. ಈ ಪ್ರವಾಸಕ್ಕೆ ಶ್ರೀ ಪ್ರಕಾಶರು ಕಾರ್ಯದರ್ಶಿ. ಅವರು ತುಂಬಾ ನಾಚಿಕೆಪಟ್ಟು ಈ ಜಯಂತಿ ಪ್ರಯಾಣವನ್ನು ವರ್ಣಿಸಿದಾರೆ.

ಇಂಥ ಗಡಿಬಿಡಿಯಲ್ಲಿ ಪತ್ರವ್ಯವಹಾರ ಸಾಗದು. ಒಂದು ನೆಲೆ ಮುಟ್ಟಿದ ಮೇಲೆ ಅದಕ್ಕೆಲ್ಲ ಉತ್ತರಕೊಡುತ್ತಾರೆ. ಅಬಟಾಬಾದಿಗೆ ಹೋದ ಮೇಲೆ ಒಬ್ಬರಿಗೆ ಬಾಪೂಜೀ ಕಾಗದ ಬರೆದರು. ಇವರು ಪ್ರವಾಸದಲ್ಲಿ ಮೂರು ನಾಲ್ಕು ಪತ್ರ ಅವರಿಗೆ ಬರೆದಿದ್ದರು. ಬಾಪೂಜಿಯ ಪತ್ರಕ್ಕೆ ಏನು ಉತ್ತರ ಬರೆಯಬೇಕು ಎಂದು ಯೋಚಿಸುತ್ತಿದ್ದಾಗ ಮರುದಿನವೇ ಮತ್ತೊಂದು ಕಾಗದ.

‘ನಿನ್ನ ಕಾಗದ ಇನ್ನೂ ಎರಡು ಗಂಟೆನಲ್ಲಿತ್ತು. ಅದಕ್ಕೆ ಇದು ಉತ್ತರ........ನಿನಗೆ ಇನ್ನೂ ಸಂದೇಹಗಳಿದ್ದರೆ, ಏನಾದರೂ ಉಳಿದಿದ್ದರೆ, ಅರ್ಥವಾಗದೆ ಇದ್ದರೆ ಕಾಗದ ಬರೆ. ನಿನ್ನ ಈ ಎರಡೂ ಕಾಗದದಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಆಗಲೇ ಉತ್ತರ ಬರೆದಿದೇನೆ ಎಂದು ಅನಿಸುತ್ತಿದೆ....’

ಈ ಕಾಗದ ಬಂದದ್ದು ತೀರ ಹೊಸಬರಿಗೆ. ಈ ಆದರವನ್ನು ಪಡೆ ಯುವ ಯಾವ ಯೋಗ್ಯತೆಯು ಇವರಿಗೆ ಇರಲಿಲ್ಲ. ಇದರಲ್ಲಿ ಏನೋ ಓಲೆಗೆ ಮಾರೋಲೆ ಬರೆಯಬೇಕೆಂಬ ಕಾಟಾಚಾರವಿಲ್ಲ. ಬರೆದವರಿಗೆ ಉತ್ತರ ಬರೆಯುವ ವ್ಯವಹಾರದ ಶಿಷ್ಟಾಚಾರವೂ ಅಲ್ಲ. ಅದರಲ್ಲಿ ಈ ಜೀವ ತನ್ನದು ಎಂಬ ಭಾವ ಇದೆ. ಅಂತಃಕರಣ ಮೂಡಿಬರುತ್ತದೆ. ಭಗವಾನ್ ಶ್ರೀಕೃಷ್ಣ ತನ್ನ ಹದಿನಾರು ಸಾವಿರ ಗೊಲ್ಲ ಗೆಳತಿಯರನ್ನು ಸಮನಾಗಿ ನೋಡಿ ಕೊಂಡನೋ ಇಲ್ಲವೋ! ಬಾಪು ತಮ್ಮ ಸಾವಿರಾರು ಜನ ಗೆಳೆಯರಿಗೆ, ಪರಿಚಿತರಿಗೆ ಒಂದೇ ಸಮನಾದ ಶ್ರದ್ಧೆ ವಿಶ್ವಾಸ ತೋರುತ್ತಾರೆ. ಆ ಸಹ

ನೆಗೆ ಔದಾರ್ಯಕ್ಕೆ ಪರಿಚಿತರು ಅಪರಿಚಿತರು ಎಂಬ ಭೇದವೂ ಇಲ್ಲ. ನೆರಳು ಕೊಡುವ ಮರಕ್ಕೆ, ನೀರು ಕೊಡುವ ಹೊಳೆಗೆ, ತನ್ನ ನೆರಳಿನಲ್ಲಿ ಕೂತು ಕೊಳ್ಳುವವರು ತನ್ನ ನೀರು ಕುಡಿಯುವವರು ಯಾರು ಎಂಬ ಚಿಂತೆ ಉಂಟೆ? ಎಲ್ಲರಿಗೂ ಒಂದೇ.

ಕೆಲವು ದಿನ ಹರಿಜನ ಸೇವೆಯ ಬಗ್ಗೆ ಸದಾ ವಿಚಾರಮಾಡುತ್ತಿದ್ದರು. ಆಗ ಬರೆದ ಪತ್ರಗಳಲ್ಲಿ ಆ ಮಾತು ಇದ್ದೇ ಇರುತ್ತಿತ್ತು.

"ಹರಿಜನರಿಗಾಗಿಯೆ ಬದುಕುವುದು ಬಲು ಕಷ್ಟ. ಅವರಿಗಾಗಿಯೆ ಮಡಿಯುವುದಂತೂ ತುಂಬಾ ಕಷ್ಟ. ಅದಕ್ಕೆ ಬಹಳ ಹೆಚ್ಚಿನ ಯೋಗ್ಯತೆ ಬೇಕು. ಸತ್ಯನಾರಾಯಣನ ಇದಿರಿನಲ್ಲಿ ನಾವೆಲ್ಲರೂ ಹೇಡಿಗಳೇ. ಎಷ್ಟು ಸೂಕ್ಷ್ಮ ಪರೀಕ್ಷೆ ಅವನದು! ಅವನ ಪಾದಕ್ಕೆ ಒಪ್ಪಿಸುವ ಬಲಿ ಅಪಾಪ ವಾಗಿರಬೇಕು. ಉತ್ತಮೋತ್ತಮವಾದುದನ್ನೆ, ಕೇವಲ ಪುಣ್ಯಜೀವಿಗಳನ್ನೇ ಅವನು ಸ್ವೀಕರಿಸುವುದು. ಅಂಥವರನ್ನು ಎಲ್ಲಿ ತರಲಿ? ಒಂದೇ ಒಂದು ಪಾಪವಿಚಾರ ತಲೆಯಲ್ಲಿ ಬಂದರೂ ಆ ಜೀವ ನಿವೇದನಕ್ಕೆ ಸಲ್ಲದಾಗುತ್ತದೆ. ಆದರೂ ನಾನು ಅವನನ್ನು ಹೇಗೆ ಬಿಡಲಿ? ಕವಿಗಳಲ್ಲಿ ಕವಿಯಾದ ಅವನಿಗೆ ತುಂಬಾ ಮತ್ಸರ. ಇನ್ನೊಬ್ಬ ಕವಿಯ ಪೂಜೆಮಾಡಲು ಯಾರನ್ನೂ ಬಿಡ ನಲ್ಲ! ಎಲ್ಲಿ ಹೋಗಲಿ. ಇದೆಲ್ಲ ಯಾರಿಗೆ ಹೇಳಿಕೊಳ್ಳಲಿ?"

ಬಾಪೂಜಿಗೆ ತೀರ ಹತ್ತಿರ ನಿಂತು ತಮ್ಮ ಬಾಳಗುಡಿಯಲ್ಲಿ ಬಾಪೂಜಿ ಯನ್ನು ಪ್ರತಿಷ್ಠಿಸಿಕೊಂಡವರೊಡನೆ ಅವರು ಮಾಡುವ ಪತ್ರವ್ಯವಹಾರ ಕಾವ್ಯಮಯವಾಗಿರುತ್ತದೆ. ಅಂಥವನ್ನೆಲ್ಲ ಯಾರಾದರೂ ಕಲೆಹಾಕಿ ಪ್ರಕ ಟಿಸಿದರೆ ಅದರ ಸವಿ ಸೊಬಗು ಜನರಿಗೆ ತಿಳಿದೀತು. ಫೈಜಪುರದ ಕಾಂಗ್ರೆ ಸ್ಸಿನ ಸ್ವಯಂಸೇವಿಕಾದಳದ ನಾಯಕಿ ಪ್ರೇಮಾ ಕಂಟಕ್ ಸತ್ಯಾಗ್ರಹಾ ಶ್ರಮದಲ್ಲಿದ್ದಾಕೆ. ಆಕೆಗೆ ಬಾಪೂಜೀ ಬರೆದ ಕಾಗದಗಳನ್ನೆಲ್ಲ ಒಂದು ಸಂಪುಟವಾಗಿ ಸೇರಿಸಿ ಆಕೆ ಪ್ರಕಟಿಸಿದಾಳೆ.* ದೊಡ್ಡವರೆಲ್ಲ ಹಾಗೆ ಮಾಡಿದರೆ ಆ ಸಾಹಿತ್ಯವೂ ಒಂದು ರೂಪಕ್ಕೆ ಬಂದೀತು.

---

* ಆ ಪುಸ್ತಕದ ಹೆಸರು 'ಪ್ರಸಾದ ದೀಕ್ಷಾ' ಎಂದು. ಇದರ ಕನ್ನಡ ಭಾಷಾಂತರವೆ ಗಾಂಧೀ ಸಾಹಿತ್ಯದ ಮೊದಲ ಪುಸ್ತಕ.

ರಾಜಕೋಟಿಯ ಪ್ರಕರಣ ನಡೆದಾಗ ಬಾಪೂಜೀ ಮಹಾದೇವದೇಸಾಯಿಗೆ ಕೆಲವು ಕಾಗದ ಬರೆದಿದ್ದರು. ಅದರಲ್ಲಿ ಕೆಲವನ್ನು ಅವರು 'ಹರಿಜನ'ದಲ್ಲಿ ಪ್ರಕಟಿಸಿದರು.

ಮೊದಲನೆಯದು ರಾಜಕೋಟಿಗೆ ಹೊರಟಾಗ—'ನೀನು ಗಾಬರಿಯಾಗಬೇಡ. ಈ ಪ್ರವಾಸದಲ್ಲಿ ನೀನು ಜೊತೆಗೆ ಇಲ್ಲವಲ್ಲ ಎನಿಸುತ್ತದೆ. ದೇವರು ಕರೆದುಕೊಂಡು ಹೋಗುತ್ತಿದಾನೆ ಎಂದು ರಾಜಕೋಟಿಗೆ ಹೋಗುತ್ತಿದೇನೆ. ಅಂತರಂಗದಲ್ಲಿ ಆನಂದ ಉತ್ಸಾಹಗಳಿವೆ. ಯಾರು ಬಲ್ಲರು? ಇದೆಲ್ಲ ಬರಿಯ ಬಿಸಿಲುಗುದುರೆಯೋ ಏನೋ! ನನಗೆ ಇಷ್ಟುಮಾತ್ರ ಗೊತ್ತು. ರಾಜಕೋಟಿಯಿಂದ ಆಶಾಭಂಗವಾಗಿ ಹಿಂದಿರುಗಲಾರೆ.'

ಮಾರನೆಯ ದಿನ ದಾರಿಯಲ್ಲಿ—"ದೇವರ ಲೀಲೆ ಎಷ್ಟು ಅಗಮ್ಯ, ಅಗಾಧ! ರಾಜಕೋಟಿಯ ಪ್ರಯಾಣ ನನಗೇ ಅಚ್ಚರಿಯಾಗಿದೆ. ಏಕೆ ಹೋಗುತ್ತಿದೇನೋ ಎಲ್ಲಿಗೆ ಹೋಗುತ್ತಿದೇನೋ ನನಗೇ ತಿಳಿಯದು. ಕಾರಣವೇನೋ ಈ ವಿಷಯವಾಗಿ ಏನೂ ಯೋಚನೆಮಾಡಿಲ್ಲ. ಯೋಚನೆಯಾದರೂ ಏಕೆ? ದೇವರೇ ದಾರಿ ತೋರಿಸುವಾಗ ನಾನೇನು ಯೋಚನೆ ಮಾಡಲಿ? ಯೋಚನೆಯಾದರೂ ಏಕೆ ಮಾಡಲಿ? ದೇವರು ದಾರಿ ತೋರುವಾಗ ನಮ್ಮ ಯೋಚನೆಯೂ ಅದಕ್ಕೆ ಒಂದು ಆತಂಕ ಆದೀತು.

ಯೋಚನೆ, ವಿಚಾರವನ್ನು ನಿಲ್ಲಿಸಲು ಕಷ್ಟವೇ ಆಗುವುದಿಲ್ಲ. ಅದಕ್ಕಾಗಿ ಪ್ರಯತ್ನ ಕೂಡಾ ಬೇಕಾಗಿಲ್ಲ, ವಿಚಾರ ಬರುವುದೇ ಇಲ್ಲ. ಹಾಗೆಂದರೆ ಮನಸ್ಸು ಶೂನ್ಯವಾಗಿದೆ ಎಂದಲ್ಲ. ಈ ಪ್ರಯಾಣದ ಉದ್ದೇಶದ ವಿಚಾರವೇ ಬರುವುದಿಲ್ಲ."

೧೯೨೭ರಲ್ಲಿ ಬಾಪೂಜೀ ತುಂಬಾ ಬೇನೆ ಬಿದ್ದರು. ಮೂರು ನಾಲ್ಕು ತಿಂಗಳು ಮೈಸೂರು ದೇಶದಲ್ಲಿ ವಿಶ್ರಾಂತಿ ಪಡೆಯಬೇಕಾಯಿತು. ಆಗ ಅವರು ಬರೆದ ಕೆಲವು ಕಾಗದ ಬಹಳ ಚೆನ್ನಾಗಿವೆ. ಸಾಬರ್ಮತಿ ಆಶ್ರಮದ ಹೆಂಗಸರಿಗೆ ವಾರಕ್ಕೊಂದು ಕಾಗದ ಬರೆವ ರೂಢಿ ಇಟ್ಟಿದ್ದರು. ಒಂದು ಕಾಗದ ಹೀಗಿತ್ತು:

"ನನ್ನ ಗಾಡಿಯ ಚಕ್ರ ಕೆಸರಿನಲ್ಲಿ ಹೂತುಹೋಗಿದೆ. ಈ ಹೊತ್ತೇನೊ

ಕೆಸರಿನಲ್ಲಿ ಇದೆ. ಸರಿಮಾಡಲು ಕೂಡ ಬಾರದಹಾಗೆ ನಾಳೆ ಚೂರುಚೂರು ಆಗಬಹುದು. ಹಾಗೆ ಆದರೆ ಏನು ಗತಿ? ಗೀತೆಯಲ್ಲಿ ಹೇಳಲಿಲ್ಲವೆ. ಹುಟ್ಟಿದವರೆಲ್ಲ ಸಾಯಲೇಬೇಕು. ಸತ್ತವರೆಲ್ಲ ಹುಟ್ಟಬೇಕು* ಪ್ರತಿಯೊಬ್ಬನೂ ಇಲ್ಲಿಗೆ ಬರುವುದು; ತನ್ನ ಪಾಲಿನ ಋಣ ಎಷ್ಟೋ ತೀರಿಸುವುದು; ಮುಂದೆ ಸಾಗುವುದು; ಇಷ್ಟೇ. ಹೊಟ್ಟೆಯೊಳಗೆ ಕಾಮಕ್ರೋಧ ಇಲ್ಲದೆ ಯಾರಿಗೂ ರೋಗರುಜಿನ ಬಾರದೆಂದು ನನಗೆ ಖಂಡಿತವಾಗಿ ಅನಿಸುತ್ತಿದೆ. ಹಾಗೆಂದರೆ ಕಾಮಕ್ರೋಧ ಇಲ್ಲದವರಿಗೆ ಸಾವು ಇಲ್ಲ ಅಂತಲ್ಲ. ಕಾಮಕ್ರೋಧ ಇಲ್ಲದವರೂ ಸತ್ತೇ ಸಾಯುತ್ತಾರೆ. ಯಾರೂ ಕಡೆತನಕ ಬದುಕಲಾರರು. ಆದರೆ ಅಂಥವರು ಕಳಿತಹಣ್ಣು ಕೆಳಗೆ ಉದುರುವಂತೆ ಉದುರಿಹೋಗುತ್ತಾರೆ. ಅವರಿಗೆ ತಲೆನೋವು, ಬೇನೆ ಯಾವುದೂ ಇಲ್ಲದೆಯೆ ಹಾಗೆ ಹೊರಟು ಹೋಗುತ್ತಾರೆ. ಅಂಥ ಸ್ಥಿತಿ ನನಗೆ ಬರಲಿ ಎಂದು ನಾನು ಬಯಸಿದೇನೆ. ಇನ್ನೂ ಆ ಬಯಕೆ ಇದೆ. ಆದರೆ ಯಾರು ಬಲ್ಲರು? ಯಾವ ಹೊತ್ತಿಗೆ ಏನಾಗುವುದೋ! ನನಗೆ ಕಾಮಕ್ರೋಧ ಇನ್ನೂ ಪೂರ್ಣವಾಗಿ ಅಳಿದಿಲ್ಲ. ಅವು ಅಳಿಯುವ ಕಾಲವೂ ಹತ್ತಿರ ಇದ್ದಹಾಗೆ ಇಲ್ಲ."

ಬಾಪೂಜಿಯ ಮನಸ್ಸು ಮೆದುವಾಗಿ ಕೊನೆಯ ಗಳಿಗೆಯನ್ನು ಯೋಚಿಸುತ್ತಿದೆ. ಕೊನೆಯಕಾಲದಲ್ಲಿ ದೇವರನ್ನು ನೆನೆದು ದೇಹವನ್ನು ಬಿಟ್ಟವರಿಗೆ ಪರಾಗತಿ ಇದೆ† ಎಂಬುದು ಅವರಿಗೆ ಗೊತ್ತಿದೆ. ಅದಕ್ಕೆ ಬೇಕಾದ ಅಭ್ಯಾಸ ಬಲವೂ ಇದೆ. ಆದರೂ ಗಾಂಧೀಜಿಯ ವಿನಯಕ್ಕೆ ಮಿದುವಾದ ಎದೆಗೆ, ಅದರಲ್ಲೂ ಆಶ್ರಮದ ಹೆಂಗಸರಿಗೆ ಬರೆವಾಗ ಒಂದು ಮುಗ್ಧಮನೋಹರ ಭಾವ ಬಂದಿದೆ.

ಇದೇ ರೀತಿಯಲ್ಲಿ ಮನಸ್ಸು ಮುಂದೆ ಸಾಗಿ ಕರ್ಮವಿಚಾರದಲ್ಲಿ ಪ್ರವೇಶಿಸಿತು. ಮತ್ತೊಂದು ಕಾಗದದಲ್ಲಿ—

---

* ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ ।
ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ ॥ ೨-೨೭ ॥

† ಅಂತಕಾಲೇಚ ಮಾಮೇವ ಸ್ಮರನ್ ಮುಕ್ತ್ವಾ ಕಳೇಬರಂ ।
ಯಃಪ್ರಯಾತಿ ಸಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥ ೮-೫ ॥

"ಯಜ್ಞಕರ್ಮ ಮಾಡದೆ ಊಟಮಾಡುವವನು ಅನ್ನವನ್ನು ಕದ್ದು ತಿಂದ ಹಾಗೆ ಎಂದು ಗೀತೆ ಹೇಳುತ್ತದೆ. ಈ ವಾಕ್ಯ ನನಗೆ ಅನ್ವಯಿಸ ದೇನು? ಬದುಕಬೇಕೆಂದರೆ ನಾವು ನೂಲಲೇಬೇಕು, ಅಲ್ಲವೆ? ಅನ್ನ ನೀರು ನಿದ್ದೆಯನ್ನು ಪಶುಪಕ್ಷಿಗಳೂ ನಡೆಸುತ್ತವೆ. ವಿಚಾರ ಮಾಡುವುದು ಒಂದು ನಮಗೆ ಹೆಚ್ಚಿನದು. ವಿಚಾರ ಕೂಡ ಬಾರದು ಎಂದು ವೈದ್ಯರು ಹೇಳುತ್ತಾರೆ. ನನಗೋ–ವಿಚಾರ–ಆಚಾರ ಎರಡೂ ಒಂದೇ. ವಿಚಾರ ಮಾಡುವುದೂ ಅದನ್ನು ಕಾರ್ಯರೂಪವಾಗಿ ಮಾಡುವುದೂ ಎರಡೂ ಅಷ್ಟೆ. ಮಾಡದೆ ಇರಲು ಸಾಧ್ಯವಲ್ಲ. ಓದು ಬರಹ–ನೂಲುವುದು ಮೂರನ್ನೂ ಮಾಡುತ್ತೇನೆ. ಬಿಡಲಾರೆ; ಬಿಡುವುದಿಲ್ಲ. ಇದು ಸಾಧ್ಯವಿಲ್ಲದ ಸ್ಥಿತಿ ಬಂದರೆ, ಅಂಥ ಕೆಲಸ ಮಾಡಲಾರದ ಮೈಗೆ ಉಪವಾಸವೇ ಸರಿಯಾದ ಔಷಧ ಎನಿಸುತ್ತದೆ."

ಹೀಗೆ ಇದೇ ರೀತಿ ಹೋದರೆ ಮನಸ್ಸಿಗೆ ಭಾರವಾಗುತ್ತದೆ. ಅದನ್ನು ತಿಳಿದು ಮುಂದಿನ ಕಾಗದದಲ್ಲಿ ಸ್ವಲ್ಪ ಉತ್ಸಾಹ ವಿನೋದ ತುಂಬಿದರು. ತಮ್ಮ ಹಾಗೆಯೆ ಕಾಯಿಲೆ ಆಗಿದ್ದ ಗೆಳೆಯನೊಬ್ಬನನ್ನು ನೆನೆದರು. ಮನಸ್ಸು ಆ ಮಟ್ಟಕ್ಕೆ ಹೊಂದಿಕೊಂಡಿತು. ಆತನಿಗೆ ನಾಲ್ಕು ಸಮಾಧಾನದ ಮಾತು ಬರೆದರು. ಆತನಿಗೆ ಕಾಯಿಲೆ, ತಾವು ಸಮಾಧಾನ ಹೇಳುವವರು. ತಮಗೂ ಕಾಯಿಲೆಯೇ ಅಲ್ಲವೆ! ಆ ಮಾತು ಸೂಚಿಸಿ ನಗೆ ಹರಿಸಿದರು.

"ಇದೇ ಅಲ್ಲವೆ ತಮಾಷೆ! ಕಾಗೆ ಕೋಗಿಲೆಯನ್ನು ಕಪ್ಪು ಎಂದು ಜರಿಯುವುದು. ಆದರೆ ನೋಡು. ಸದಾ ಆರೋಗ್ಯವಾಗಿರಲು ನಮಗೆ ಸಾಧ್ಯ ವಿಲ್ಲದಿದ್ದರೂ ಸದಾ ನಗುತ್ತ ಇರಲು ಏನು ಅಡ್ಡಿ? ಇರಬಹುದಲ್ಲ. ಕೊನೆಯಹೊತ್ತು ಬಂದಾಗಲೂ ನಗುತ್ತ ಇರಬಹುದಲ್ಲವೆ. ನೀನೇನು ಅನ್ನುತ್ತೀ? ಅದೇ ಸರಿ ಅಲ್ಲವೆ?"

ಬಾಪೂಜಿಗೆ ನಗೆ ಅನಾಸಕ್ತಿಯ ಗುರುತು. ಮನಸ್ಸಿನ ಆರೋಗ್ಯದ ಗುರುತು. ಅದನ್ನು ಸಾಧಿಸಿದವರಿಗೆ ಆ ಶಾಂತಿ ಅಂಗೈನೆಲ್ಲೀಕಾಯಿ.

ಗಾಂಧೀಜಿಗೆ ೫೦ ತುಂಬಿದಾಗ ಅನೇಕರು ಅವರಿಗೆ ಕಾಗದ ಬರೆದು, ತಾರು ಕಳಿಸಿ ತಮ್ಮ ಶುಭಾಕಾಂಕ್ಷೆ ತಿಳಿಸಿದರು. ಅವರೆಲ್ಲ ಗಾಂಧೀ

ಜಯಂತಿಯನ್ನು ಆಚರಿಸುವವರು. ಅವರಿಗೆ ಉತ್ತರವಾಗಿ 'ನವಜೀವನ' ದಲ್ಲಿ ಬಾಪು ಒಂದು ಪತ್ರ ಬರೆದರು :

ಸೋದರ ಸೋದರಿಯರೆ,

೫೧ ನೆಯ ಹುಟ್ಟಿದ ಹಬ್ಬದ ನಿಮಿತ್ತ ಅನೇಕ ಕಾಗದ ತಂತಿ ಬಂದಿವೆ. ಎಲ್ಲರೂ ಶುಭ ಬಯಸಿದಾರೆ. ಈ ಒಲವನ್ನು ನಾನು ಹೇಗೆ ತಿರುಗಿಕೊಡಲಿ. ನನ್ನ ಕೃತಜ್ಞತೆಯನ್ನು ಹೇಗೆ ತಿಳಿಸಲಿ. ಕುರುಡು ಪ್ರೀತಿ ನನಗೆ ಸೇರದು. ವಿವೇಕಯುತ ಅಭಿಮಾನವನ್ನು ನಾನು ಮೆಚ್ಚುತ್ತೇನೆ. ಆದರೆ ನಿಜ. ಆದುದರಿಂದ ಹಲವುಕಡೆ ಆ ಅಭಿಮಾನವು ವ್ಯಾವಹರಿಕವಾಗಿ ಉಪಯುಕ್ತ ವಾದ ರೂಪವನ್ನು ಪಡೆದುದು ನನಗೆ ತುಂಬ ಸಂತೋಷವಾಗಿದೆ. ನನಗೆ ಹಿಂದುಸ್ತಾನದ ಬಡತನ ಬಹಳ ತೀಕ್ಷ್ಣವಾಗಿ ಅನುಭವ ಆಗಿದೆ. ಅಂತಲೇ ಹಣವನ್ನು ಹಾಳುಮಾಡಿ ವ್ಯರ್ಥವಾಗಿ ವೆಚ್ಚಮಾಡಿದರೆ ಬಡವರ ಪಾಲಿನಿಂದ ಅಷ್ಟು ದೋಚಿದ ಹಾಗಾಯಿತಲ್ಲ ಎನಿಸುತ್ತದೆ. ನನಗೆ ತಂತಿ ಕಳಿಸಲು ವೆಚ್ಚ ಮಾಡಿದ ಹಣವನ್ನೆಲ್ಲ ಖಾದಿ-ಸ್ವದೇಶಿ ಪದಾರ್ಥಕೊಳ್ಳಲು ಬಳಸಿದ್ದರೆ ಅನಾಥರಿಗೆ ನಾಲ್ಕು ತುತ್ತು ಅನ್ನ ಸಿಗುತ್ತಿರಲಿಲ್ಲವೆ; ಅರೆಬೆತ್ತಲೆಯಾಗಿ ಬದುಕುವವರಿಗೆ ಬಟ್ಟೆ ಆಗುತ್ತಿರಲಿಲ್ಲವೆ? ಅವರು ಈ ಉದಾರಿಗಳನ್ನು ಆಶೀರ್ವದಿಸುತ್ತಿರಲಿಲ್ಲವೆ? ಬಡವರ ಶಾಪ ದೇಶಗಳನ್ನು ನಿರ್ನಾಮಮಾಡಿದೆ; ಸಿಂಹಾಸನಗಳನ್ನು ಉರುಳಿಸಿದೆ; ಶ್ರೀಮಂತರನ್ನು ಬೀದಿಯ ತಿರುಪೆಗೆ ಎಳೆದಿದೆ. ಬಡವರ ಹರಕೆ ದೇಶಕೋಶಗಳಿಗೆ ಕಳೆ ಕೊಟ್ಟಿದೆ; ಅವರನ್ನು ಬೆಳೆಸಿದೆ.

ನನ್ನ ಮೇಲೆ ನಿಮಗೆಲ್ಲ ಪ್ರೀತಿ ಇದೆ. ಅದನ್ನು ತೋರಿಸಲು ನಿಜವಾದ ರೀತಿ ಎಂದರೆ ನಾನು ಮಾಡುವ ಕೆಲಸಗಳಲ್ಲಿ ನಿಮ್ಮ ಮನಸ್ಸಿಗೆ ಬಂದದ್ದನ್ನು ಅನುಸರಿಸುವುದು. ತಾನು ತುಳಿದ ದಾರಿಯನ್ನು ಹಿಡಿಯುವುದಕ್ಕಿಂತ ಹೆಚ್ಚಿನ ಆದರವನ್ನು ಏನು ತೋರಬಹುದು ಜನ? ಹಲವು ಜನ ತಂಗಿಯರು ತಾವೇ ತೆಗೆದ ನೂಲನ್ನು ಕಳಿಸಿದಾರೆ. ಹಲವರು ದಲಿತಜನರ ಸೇವೆಯ ವ್ರತ ಹಿಡಿಯುವೆವೆಂದು ಪ್ರತಿಜ್ಞೆಮಾಡಿದಾರೆ. ಅಹಮದಾಬಾದಿನ ಸ್ವದೇಶೀ ಸಂಗ್ರಹಾಲಯದವರು ಅನೇಕ ಕಷ್ಟನಷ್ಟಗಳನ್ನು ಅಸಡ್ಡೆಮಾಡಿ ಪದಾರ್ಥ ಗಳ ಬೆಲೆ ಇಳಿಸಿದಾರೆ. ಸೂರತ್ತಿನ ಸ್ವದೇಶೀ ಭಾಂಡಾರದವರೂ ಅಷ್ಟೆ.

ಜಯಂತಿಗಳನ್ನು–ಹುಟ್ಟಿದ ಹಬ್ಬ–ಹೀಗೆ ಮಾಡುವುದು ವಿವೇಕಯುಕ್ತವಾದ ಅಭಿಮಾನದ ಗುರುತು. ಇಂಥ ಹುಟ್ಟಿದ ಹಬ್ಬ ಸದಾ ಬರಲಿ ಎನಿಸುತ್ತದೆ. ಅದರಿಂದ ಗಂಡು ಹೆಣ್ಣು ಇಬ್ಬರೂ ತಮ್ಮ ಬಾಳಿನಲ್ಲಿ ಮುಂದೆ ಹೆಜ್ಜೆ ಇಡಲು ಅನುಕೂಲವಾಗುತ್ತದೆ.

ಭಗಿನೀ ಸಮಾಜದವರು ಒಂದು ನಿಧಿಯನ್ನು ಕೊಡುತ್ತಾರಂತೆ. ಇದು ಒಂದು ದೊಡ್ಡ ಜವಾಬುದಾರಿ. ಆ ಹಣವನ್ನು ಹೇಗೆ ಬಳಸಿದರೆ ಯೋಗ್ಯ ಎಂಬುದನ್ನು ಯೋಚಿಸಬೇಕಷ್ಟೆ.

ಏನೂ ಆಲೋಚನೆ ಮಾಡದೆಯೆ ಹಿಂದುಸ್ತಾನದ ಹೆಂಗಸರಿಗಾಗಿ ಆ ಹಣವನ್ನು ಬಳಸುತ್ತೇನೆ. ಇಷ್ಟು ಹೇಳಲು ದೂರಾಲೋಚನೆ ಬೇಕಿಲ್ಲ. ನಿಧಿಗಳನ್ನು ಹೇಗೆ ಬಳಸಬೇಕು ಎಂಬ ಪ್ರಶ್ನೆಗೆ ಉತ್ತಮವಾದ ಸಲಹೆಗಳನ್ನು ಕೊಟ್ಟರೆ, ಅಂಥ ಸೋದರ ಸೋದರಿಯರಿಗೆ ನಾನು ತುಂಬಾ ಕೃತಜ್ಞ.

ಎಲ್ಲರೂ ನನಗೆ ದೀರ್ಘಾಯುಸ್ಸನ್ನು ಕೋರಿದಾರೆ. ಸತ್ಯವನ್ನು ಶೋಧಿಸುತ್ತ, ಸತ್ಯವನ್ನೇ ಆಡುತ್ತ ಮಾಡುತ್ತ, ವಿಚಾರಮಾಡುತ್ತ ಈ ಬದುಕನ್ನು ಮುಕ್ತಾಯಗೊಳಿಸಬೇಕೆಂದು ನನಗೆ ಆಸೆ. ನನ್ನ ಈ ಆಸೆ ಸಫಲವಾಗುವಂತೆ ನಾಡು ನನ್ನನ್ನು ಹರಸಲಿ.

ಮೋಹನದಾಸ ಕರಮಚಂದ ಗಾಂಧೀ.

ಕೆಲವರು ತಮಗೆ ತೋಚಿದ ಪ್ರಶ್ನೆ ಕೇಳುತ್ತಾರೆ. ತಮಗೆ ಬಂದ ಕಷ್ಟ-ಸಮಸ್ಯೆಗಳನ್ನು ಅವರ ಮುಂದೆ ಇಟ್ಟು ಉತ್ತರ ಕೇಳುತ್ತಾರೆ. ಅವಕ್ಕೆಲ್ಲ ಉತ್ತರ ಕೊಡಬೇಕು. ಒಬ್ಬರು ದೇಶೀ ಸಂಸ್ಥಾನದ ಪ್ರಜೆ ಹೇಗೆ ನಡೆಯಬೇಕೆಂದು ಕೇಳಿದರು.

“ನನ್ನ ರಾಜಕೋಟೆಯ ಪ್ರಕಟನೆಯನ್ನು ಸಾವಧಾನವಾಗಿ ಓದಿ. ನಿಮ್ಮ ನಡತೆಗೆ ಒಂದು ಕ್ರಮ–ಒಂದು ಶಿಸ್ತು ಕೊಡಲು ಅದರಿಂದ ಸಹಾಯ ಆದೀತು.”

ಇನ್ನೊಂದರಲ್ಲಿ ಹಿಂದುಸ್ತಾನಕ್ಕೆಲ್ಲ ಒಂದೇ ಲಿಪಿ ಆಗಬೇಕು ಎಂಬ ವಿಚಾರ. ನಮ್ಮ ನಾಡಿನ ಹತ್ತಾರು ನುಡಿ ಇವೆ. ಇದ್ದರೇನು? ಎಲ್ಲಕ್ಕೂ ಒಂದೇ ಲಿಪಿ ಸಾಲದೇ? ಲಿಪಿಗೆ ಲಿಪಿ ಭಾರ. ಅಲ್ಲದೆ ಏಕಲಿಪಿ ಆದರೆ ನಾಡಿ

ನಲ್ಲಿ ಒಂದು ಐಕ್ಯತೆ ಬಂದೀತಲ್ಲವೆ. ಆಗಾಗ ಗಾಂಧೀಜೀ ಈ ವಿಷಯ ಬರೆಯುತ್ತಾರೆ.

ಒಂದೇ ಲಿಪಿಯ ದುಸ್ಸಾಧ್ಯ ಪ್ರಯತ್ನಕ್ಕಿಂತ ದಕ್ಷಿಣ ಭಾರತಕ್ಕೊಂದು ಲಿಪಿ, ಉತ್ತರ ಭಾರತಕ್ಕೊಂದು ಲಿಪಿ ಆದರೆ ಅನುಕೂಲವಲ್ಲವೆ ಎಂದು ಗಾಂಧೀಜಿಗೆ ಸೂಚಿಸಲಾಗಿತ್ತು. ಅದು ಸಹಜವೂ ಸುಲಭವೂ ಆದೀತೆಂದು ಆ ಸೂಚನೆ ಮಾಡಲಾಗಿತ್ತು. ಗಾಂಧೀಜಿಗೆ ಆ ಸೂಚನೆ ಸಮ್ಮತವಾಗಲಿಲ್ಲ.

'ದ್ರಾವಿಡ ಭಾಷೆಗಳೆಲ್ಲ ಸಂಸ್ಕೃತಕ್ಕೆ ದತ್ತುಬಂದ ಪುತ್ರಿಯರು; ಪಾಲಿತ ಪುತ್ರಿಯರು. ಇದು ನನ್ನ ಅಭಿಪ್ರಾಯ. ಕಾರಣ: ಕನ್ನಡ, ಮಲೆಯಾಳಿ, ತೆಲುಗುಗಳಲ್ಲಿ ನೂರಕ್ಕೆ ಐವತ್ತರಷ್ಟು ಇನ್ನೂ ಹೆಚ್ಚು ಶಬ್ದಗಳು ಸಂಸ್ಕೃತದಿಂದ ಬಂದಿವೆ. ತಮಿಳಿನಲ್ಲೂ ಕಾಲುಪಾಲಿಗಿಂತ ಕಡಮೆ ಇಲ್ಲ ಸಂಸ್ಕೃತ. ಈ ಅಕ್ಕತಂಗಿಯರು ಸಂಸ್ಕೃತದಿಂದ ಸಾಲ ಪಡೆದು ಬಲಗೊಳ್ಳುತ್ತಾರೆ. ನಿನಗೆ ಗೊತ್ತೇನು? ಮಲೆಯಾಳಿ ಅಥವಾ ಕನ್ನಡ ಮಾತು ಆಡಿದರೆ ನನಗೆ ತಕ್ಕಮಟ್ಟಿಗೆ ಅದರ ಅರ್ಥ ತಿಳಿಯುತ್ತದೆ. ಸಂಸ್ಕೃತದಿಂದ ನೇರಾಗಿ ಅದೇ ರೂಪದಿಂದಲೇ ಎಷ್ಟೋ ಪದಗಳು ಬಂದಿರುವುದೇ ಅದಕ್ಕೆ ಕಾರಣ. ತಮಿಳು ಲಿಪಿ ಕೂಡ ದೇವನಾಗರಿಯ ಅನುಕರಣ. ಇಷ್ಟೆಲ್ಲ ಇದ್ದರೂ ಈ ನಾಲ್ಕು ನುಡಿಗಳಾಗಲಿ ಮತ್ತೆ ಯಾವುದೇ ಆಗಲಿ ದೇವನಾಗರಿ ಲಿಪಿಯನ್ನು ಬಳಸಲು ಒಪ್ಪಲಿಲ್ಲ ಎನ್ನೋಣ. ಒಪ್ಪದಿದ್ದರೆ ಅದಕ್ಕಾಗಿ ಕಾಯಲು ನನಗೆ ಸಾಕಷ್ಟು ಸಹನೆ ಇದೆ. ನಿರಂಕುಶಾಧಿಕಾರದ ಸರ್ವಾಧಿಕಾರಿಯ ದೇಶಗಳ ಮಾತು ಬೇರೆ. ಉಳಿದಕಡೆ ಇಂಥ ಮಹತ್ವಾದ ಸುಧಾರಣೆ ಅಭಿಪ್ರಾಯ ಪರಿವರ್ತನದಿಂದಲೇ ಆಗಬೇಕಲ್ಲವೆ."

ಆಚಾರ್ಯ ಕೃಪಲಾನಿ ತಮ್ಮ ಪ್ರಾಂತವಾದ ಸಿಂಧಕ್ಕೆ ಒಮ್ಮೆ ಹೋಗಿದ್ದರು. ಆಗ ಅವರ ತಂದೆಗೆ ಬಹಳ ಕಾಯಿಲೆ. ರೋಗಿಗೆ ಆರೈಕೆ ಮಾಡಲು ಬೇಕಾದಷ್ಟು ಜನ ಇದ್ದರು. ಕೃಪಲಾನಿ ಅಲ್ಲಿ ಇರಬೇಕಾದ ಅಗತ್ಯವಿರಲಿಲ್ಲ. ಆದರೂ ಮಗ ಮತ್ತೆ ಅಸಹಕಾರ ಚಳುವಳಿಗೆ ಸೇರಿಯಾನಲ್ಲ ಎಂಬ ಕಳವಳ ಮುದುಕನಿಗೆ. ಆರೈಕೆಗಾಗಿ ಇರು ಎಂದು ಮಗನಿಗೆ ಹೇಳಿದರು. ಅಲ್ಲಿಗೆ ಹೋಗುವ ಮುಂಚೆ ವಿಾರತ್ತಿನಲ್ಲಿ ಕೃಪಲಾನಿ

ಗಾಂಧೀ ಆಶ್ರಮವನ್ನು ಸ್ಥಾಪಿಸಿ ಚೆನ್ನಾಗಿ ನಡೆಸಿಕೊಂಡು ಬಂದಿದ್ದರು. ಈಗೇನು ಮಾಡಬೇಕು? ತಂದೆಯ ಮಾತು ಕೇಳಬೇಕೋ ಬೇಡವೋ?

ಈ ಧರ್ಮಸಂದೇಹವನ್ನು ಗಾಂಧೀಜಿಗೆ ತಿಳಿಸಿದರು. ಗಾಂಧಿಜೀಯ ಉತ್ತರ ಪ್ರತಿಯೊಬ್ಬ ದೇಶಸೇವಕನೂ ಮನನಮಾಡಬೇಕಾದ ಉತ್ತರ. ಕ್ಲೈಬ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ಎಂದು ಅರ್ಜುನನಿಗೆ ಶ್ರೀಕೃಷ್ಣ ಹೇಳಿದ ಸಂದೇಶ ಅದು.

"ನನ್ನ ಅಭಿಪ್ರಾಯ ಹೀಗೆ. ನಮಗೆ ತಂದೆ ತಾಯಿ ಹೆಂಡತಿ ಮಕ್ಕಳು ಯಾರೂ ಇಲ್ಲ. ನಮ್ಮ ಬಂಧುಬಳಗ ಎಲ್ಲವೂ ಹಿಂದುಸ್ತಾನ. ಮುದುಕರಾದವರೆಲ್ಲ ಯಾರೇ ಆಗಲಿ ನಮ್ಮ ಸೇವೆ ಬಯಸುತ್ತಾರೆ. ಆಚಾರ್ಯನ ತಂದೆಗೆ ಆರೈಕೆಮಾಡಲು ಬೇಕಾದಷ್ಟು ಜನ ಇದಾರೆ. ಸಾಧ್ಯವಾದಷ್ಟು ಸವಿನಯವಾಗಿ ಆ ಕೆಲಸವನ್ನು ಇತರರಿಗೆ ಬಿಟ್ಟುಕೊಟ್ಟು ಬರಬೇಕು. ಹಿಂದುಸ್ತಾನದ ಸೇವೆಯಲ್ಲಿ ತನ್ನ ತಂದೆಯ ಸೇವೆಯೂ ಅಡಕವಾಗಿದೆ. ಇದರಲ್ಲಿ ಅಂತರ್ಗತವಾಗಿ ಅದೂ ಬಂತು ಎಂಬ ನಂಬಿಗೆ ಇರಲಿ. ಅವರ ತಂದೆಗೆ ಬೇರೆ ಯಾರೂ ಆರೈಕೆ ಮಾಡುವವರಿಲ್ಲದೆ ಇದ್ದರೆ ಆಗ ತಂದೆಯ ಸೇವೆಯೇ ದೇಶಸೇವೆ ಆಗುತ್ತಿತ್ತು."

ವೈಯಕ್ತಿಕ ಪತ್ರಗಳಲ್ಲಿ ಈ ಸೊಬಗಾದರೆ ರಾಜಕೀಯ ಪತ್ರಗಳಲ್ಲಿ ಒಂದು ಗಾಂಭೀರ್ಯ, ಒಂದು ಬಿಗಿ ಕಾಣಬರುತ್ತದೆ. ಅದರಲ್ಲಿನ ಔಚಿತ್ಯ ಚಾತುರ್ಯಗಳು ಮುಂದೆ ಬರಲಿರುವ ರಾಜಕಾರಣಿಗಳಿಗೆ ಮೇಲ್ಪಂಗ್ತಿಯಾಗಿವೆ. ಅವುಗಳಲ್ಲಿ ಬರುವ ಕೆಲವು ಪ್ರಯೋಗ, ಕೆಲವು ಭಾವ ಸಾಹಿತ್ಯದ ಮೇಲ್ಮಟ್ಟಕ್ಕೆ ಸೇರಿದ ರಚನೆ. ಅಹಿಂಸಾಮಾರ್ಗಗಾಮಿಗೆ ವೀರರಸ ಎಂದರೆ ಏನು ಎಂಬುದು ಅದರಲ್ಲಿ ಕಾಣಬರುತ್ತದೆ. ವೀರತನ ಪರುಷವಾದ ಮಾತಿನಲ್ಲಿಲ್ಲ, ಮಿದುವಾದ ಮಾತಿನಲ್ಲೂ ಇದೆ. ಮಾತು ಮಿದುವೇ ಇರಬೇಕು ನಿಜವಾದ ಧೀರತೆಗೆ; ಭಾವ ದೃಢವಾಗಿದ್ದರೆ ಸಾಕು ಎಂದು ತಿಳಿಸುತ್ತದೆ ಆ ಸಾಹಿತ್ಯ. 'ಹಿಟ್ಟು ಬೇಡಲು ಮಟ್ಟಿಯೆ?' 'ಸಹನೆಗೂ ಮಿತಿ ಇದೆ.' 'ಸತ್ಯಕ್ಕೆ ಸೋಲಿಲ್ಲ.' 'ಅಹಿಂಸೆಗೆ ಹಗೆಯಿಲ್ಲ'........ಮೊದಲಾದ ಪ್ರಯೋಗಗಳು ರಾಜಕೀಯ ಲೋಕದಲ್ಲಿ ಈಚೆಗೆ ಕವಿಸಮಯದಂತೆ ಆಗಿವೆ.

ಗಾಂಧೀಜೀ ವೈಸ್ರಾಯರಿಗೆ ಬರೆದ ಪತ್ರಗಳು, ಜನರಲ್ ಸ್ಮಟ್ಸ್‌ಗೆ ಬರೆದ ಕಾಗದಗಳು ಗಾಂಧೀಸಾಹಿತ್ಯದಲ್ಲಿ ಬಹಳ ದಿನ ಬಾಳುವಂಥವು. ಒಂದು ಕಡೆ ಅತ್ಯಂತ ವಿನಯ, ಇನ್ನೊಂದು ಕಡೆ ಅತ್ಯಂತ ದಾರ್ಢ್ಯ. ಹೀಗೆ ಎರಡೂ ಪ್ರವಾಹಗಳನ್ನು ಒಂದೇ ಹೊಳೆಯಲ್ಲಿ, ಗಂಗೆ ಯಮುನೆಯರಂತೆ ಹರಿಯಬಿಡುವುದು ಅವರಿಗಲ್ಲದೆ ಇತರರಿಗೆ ಸಾಧ್ಯವಿಲ್ಲ. ಆ ಶಕ್ತಿ ಆ ಸತ್ಯ ಪರಾಕ್ರಮಕ್ಕೇ ಸಂದೀತು.

ಗಾಂಧೀಜೀ ಯಾರಿಗಾದರೂ ಕಾಗದ ಬರದಾರು. ಅವರು ಬರೆದ ಕಾಗದ ಓದಿ ಅರ್ಥಮಾಡಿಕೊಳ್ಳುವುದು ಮಾತ್ರ ಬಲು ಕಷ್ಟ. ಅಷ್ಟು ಡೊಂಕು ಅವರ ಕೈ ಬರಹ. ಶಾಸನದ ಅಕ್ಷರ ಬಿಡಿಸಿದ ಹಾಗೆ ಬಿಡಿಸಬೇಕು. ಸುಮ್ಮನೆ ಟಯಿಪು ಮಾಡಿದರಾಯಿತಲ್ಲ. ಅಲ್ಲದೆ ದಿನವೂ ಇಷ್ಟು ಪತ್ರವ್ಯವ ಹಾರ. ಬಾಪೂಗೆ ಅದು ಇಷ್ಟವಿಲ್ಲ. ಎಲ್ಲ ಕಾಗದಗಳನ್ನೂ ಕೈಯಿಂದ ತಯಾರುಮಾಡಿದ ಕರಡುಕಾಗದದ ಮೇಲೆ ತಾವೇ ಬರೆಯುತ್ತಾರೆ. ಆಶ್ರಮ ದಲ್ಲಿ ಟಯಿಪುರಯಿಟರ್ ಯಂತ್ರ ಇಲ್ಲ ಎಂದಲ್ಲ. ಇದೆ. ಹರಿಜನ ಪತ್ರಿಕೆಗೆ ಕಳಿಸುವ ವಿಷಯ, ಕೆಲವು ಪ್ರತ್ಯೇಕ ಸ್ಥಳಗಳಿಗೆ ಬರೆವ ಕಾಗದ ಟಯಿಪು ಆಗಬಹುದು. ಉಳಿದುದೆಲ್ಲ ಕೈಯಿಂದಲೇ. ಕೆಲವುಸಲ ಕಾಗದಗಳನ್ನೋ ಇನ್ನೇನಾದರೂ ಮಹತ್ವದ ಬರೆವಣಿಗೆಯನ್ನೋ ನಕಲುಮಾಡಿ ಇಡ ಬೇಕಾಗುತ್ತದೆ. ಆಗಲೂ ಟಯಿಪುರಯಿಟರ್ ಬಳಸುವುದಿಲ್ಲ. ಸುಶೀಲಾ ನಾಯರೋ ಅಮೃತ ಕುವರಿಯೋ ನಕಲು ಮಾಡುತ್ತಾರೆ. ಗಾಂಧೀಜೀ ಒಂದು ಸಂಸ್ಥಾನದ ಪ್ರಜಾಮಂಡಲದ ಪರವಾಗಿ ಆ ಸಂಸ್ಥಾನದ ಪ್ರಧಾನ ರೊಡನೆ ಕಾಗದ ಪತ್ರ ನಡೆಸಿದ್ದರು. ಒಂದು ಸಲ ಪ್ರಜಾಮಂಡಲದ ಕಾರ್ಯದರ್ಶಿಗೆ ಆ ಓಲೆ ಮಾರೋಲೆಗಳ ನಕಲು ಕಳಿಸಬೇಕಾಗಿತ್ತು. ಅವೆರಡನ್ನೂ ರಾಜಕುಮಾರಿ ಪ್ರತಿಮಾಡಿ ಕಳಿಸಿದರು.

ಕಾಗದ ಪತ್ರ, ಲೇಖನ, ಹೇಳಿಕೆ – ಬರೆದು ಬಾಪೂಜಿಗೆ ಒಂದೊಂದು ಸಲ ಕೈ ಸೋತು ಹೋಗುತ್ತದೆ. ಅಷ್ಟಾದರೂ ಅವರು ಬರೆಯುವುದು ಬಿಡು ವುದಿಲ್ಲ. ಕೂತು ಕೂತು ಸಾಕಾದರೆ ಎದ್ದು ನಿಂತು ಬರೆಯುತ್ತಿದ್ದರು. ಬೆಳ ಗಾವಿ ಕಾಂಗ್ರೆಸ್ಸಿನಲ್ಲಿ 'ಖಾದೀ ಅರಮನೆ'ಯಲ್ಲಿ ಒಂದು ಮೇಜು. ಅದರ ಮೇಲೊಂದು ಜಾರುಮೇಜು. ನೋಡಿದವರೆಲ್ಲ ಇದೇಕೆ ಎಂದುಕೊಳ್ಳುತ್ತಿ

ದ್ದರು. ಕೂತು ಸಾಕಾದರೆ ನಿಂತು ಬರೆಯಲಿಕ್ಕೆ ಇದು ಉಪಾಯ ಎಂಬುದು ಗಾಂಧೀಜೀ ಎದ್ದು ನಿಂತು ಬರೆದಾಗ ಗೊತ್ತಾಯಿತು. ಆ ಕಾಂಗ್ರೆಸ್ಸಿಗೆ ಅವರೇ ಅಧ್ಯಕ್ಷರು. ಆ ಉತ್ಸವದಲ್ಲೂ ಇವರು ಬರೆಯಬೇಕು. ಆಗಲೂ ಕೆಲಸ ನಿಲ್ಲಿಸುವ ಹಾಗಿಲ್ಲ. ಇನ್ನೊಬ್ಬರಿಗೆ ಒಪ್ಪಿಸುವ ಹಾಗೆ ಇಲ್ಲ.

ಬರೆದು ಬರೆದು ಕೈ ಸೋತರೆ ಎಡಗೈಯಿಂದ ಬರೆಯುತ್ತಾರೆ. ಅದೂ ಅವರಿಗೆ ರೂಢಿ ಇದೆ. ಎರಡು ಕೈಯಲ್ಲೂ ಅಕ್ಷರ ಅದೇ ರೀತಿ. ಒಂದು ಸಲ ಹೀಗೊಂದು ಪತ್ರ ಬಂದಿತ್ತು.

'ಬಲಗೈ ಸೋತುಹೋದುದರಿಂದ ಎಡಗೈಯಲ್ಲಿ ಬರೆಯುತ್ತಿದೇನೆ. ನೀನು ಸರಕಾರಕ್ಕೆ ಬರೆದ ಪತ್ರ ಸರಿಯಾಗಿದೆ. ನಾನೂ ಪ್ರಯತ್ನಮಾಡುತ್ತಿದೇನೆ.'

ವ್ರತನಿಯಮಗಳಿಂದ ಆ ಮೈಗೆ ಅಂಥ ಹದ ಬಂದಿದೆ. ಗಾಂಧೀಜಿಗೆ ಈ ಮೈ ಒಂದು ಯಂತ್ರ, ಒಂದು ಸಾಧನೆ.§ ಹಾಗೆ ಪಳಗಿಸಿದಾರೆ ಮೈಯನ್ನು. ಪಳಗಿಸಿ ಅದರಲ್ಲಿ ಒಂದು ದಿವ್ಯತೇಜಸ್ಸನ್ನು ತುಂಬಿದಾರೆ. ಅವರ ಕರ್ಮಶೀಲತೆಯನ್ನು ನೋಡಿದರೆ ಮನುಷ್ಯನೇನು ಬರೀ ಕಲ್ಲುಮಣ್ಣಿನ ಗೋಪುರವೆ? ಸುಮ್ಮನೆ ಹುಟ್ಟಿ ಸಾಯುವ ಹುಳುವೆ? ಮರದ ಎಲೆಯೆ ಎನಿಸುತ್ತದೆ. ಹಾಗಿದ್ದರೆ ಈ ಸಾವಿರ ಕಣ್ಣೇಕೆ, ಈ ಸತತ ಪರಿಶೀಲನೆ ಏಕೆ? ಈ ನಿಯಮಗಳ ಗೊಂದಲವೇಕೆ? ಮನುಷ್ಯ ನಿಜವಾಗಿ ಯೋಗಭ್ರಷ್ಟನಾದ ದೇವತೆ. ಕಡಲಿನಿಂದ ಸಿಡಿದು ಬಂದ ಹನಿ. ಈ ಮಣ್ಣು ಮೈಯ ಸಂಸಾರ ಕಮಲಕ್ಕೆ ಹತ್ತಿದ ಕೆಸರಿನ ಹಾಗೆ. ಕೆಸರಿನಲ್ಲಿ ಹುಟ್ಟಿದರೇನು ಕಮಲಕ್ಕೆ ಬಾಧಕ? ಕಮಲ ಕಮಲವೇ–ಎನಿಸುತ್ತದೆ.

---

‡ ಅನೇಕ ದೋಷದುಷ್ಟಸ್ಯ ಕಾಯಸ್ಯೈಕೋ ಮಹಾ ಗುಣಃ ।
ಯೋ ಯಥಾ ವರ್ತಯತ್ಯೇನಂ ತಂ ತಥಾನುವರ್ತತೇ ।

ಅನಾಸಕ್ತಿಯ ಕನಸು

ಹಿಂದೂ ಧರ್ಮದಲ್ಲಿ ಪ್ರಸ್ಥಾನತ್ರಯ ಎಂದು ಮೂಲಾಧಾರವಾದ ಧರ್ಮಗ್ರಂಥಗಳಿಗೆ ಹೆಸರು. ಪ್ರಸ್ಥಾನ ಎಂದರೆ ಶಾಸ್ತ್ರ. ಬ್ರಹ್ಮಸೂತ್ರ, ಉಪನಿಷತ್ತು, ಭಗವದ್ಗೀತೆಗಳೇ ಆ ಮೂರು. ವೇದವು ಪರಮ. ಹಾಗೆ ಕರೆದ ಹಿರಿಯರು ಹಿಂದೂ ಧರ್ಮಕ್ಕೆ ಸಂಬಂಧಿಸಿದ ದೊಡ್ಡದೊಂದು ಸತ್ಯವನ್ನೇ ಹೇಳಿ ನಮ್ಮ ಹಾದಿಯನ್ನು ಸುಲಭಗೊಳಿಸಿದಾರೆ. ಇಂದಿಗೂ ಆ ಮೂರನ್ನು ದಾಟಿ ನಮ್ಮ ಬುದ್ಧಿ ಹರಿದಿಲ್ಲ.

ಆ ಹಿರಿಯರು ಪಂಡಿತರು, ವೇದಾಭ್ಯಾಸಿಗಳು. ಸಹಜವಾಗಿಯೇ ಕಾವ್ಯರೀತಿಯ ಗೀತೆ ಅವರಿಗೆ ಅಷ್ಟು ಪ್ರಧಾನವಾಗಲಿಲ್ಲ. ಬ್ರಹ್ಮಸೂತ್ರಗಳಿಗೆ ಅಗ್ರತಾಂಬೂಲ ಕೊಟ್ಟು ಉಪನಿಷತ್ತು ಗೀತೆಗಳನ್ನು ಎರಡನೆಯ ಸಾಲಿನಲ್ಲಿ ನಿಲ್ಲಿಸಿದರು. ಸೃಷ್ಟಿರಹಸ್ಯದ ಶೋಧನೆಯಲ್ಲಿ ಅವರ ದೃಷ್ಟಿ ನಟ್ಟು ಹೋಯಿತು. ಉಪನಿಷತ್ತಿನ ಭಾವಾನಂದವಾಗಲಿ ಗೀತೆಯ ಕರ್ಮಕೌಶಲವಾಗಲಿ ಅವರ ಮನಸ್ಸಿಗೆ ಬರಲಿಲ್ಲ.

ಗಾಂಧೀಜಿಗೆ ಹಾಗಲ್ಲ. ಇವರಿಗೆ ಗೀತೆಯೇ ಸರ್ವಸ್ವ. ಇವರಿಗೆ ಅದು ಒಂದೇ ಪ್ರಸ್ಥಾನ. ಉಳಿದ ಎರಡರ ಕಡೆ ಇವರ ಗಮನ ಹರಿದಿಲ್ಲ. ಹಗಲೂ ಇರುಳೂ ಕರ್ಮದಲ್ಲಿ ತೊಡಗಿಕೊಂಡು ಕರ್ಮಬ್ರಹ್ಮವನ್ನು ನಂಬಿದ ಈ ಸೋಮಯಾಜಿಗೆ ಇದು ಸಹಜವೇ ಆಗಿದೆ. ಬೇಲಿಯೇ ಹೊಲವನ್ನು ಮೇಯುತ್ತಿರುವ ಕಾಲ ಇದು. ನಮ್ಮ ಸುಖಸಮೃದ್ಧಿಗಾಗಿ ಹುಟ್ಟಿದ ಭೂಮಿಯೇ–ಪ್ರಕೃತಿಯೇ–ನಮ್ಮನ್ನು ನುಂಗಲು ಬರುತ್ತಿದೆ. ಜನಸಂದಣಿಯನ್ನು ಬಿಟ್ಟು ಗುಡ್ಡಗಾಡಿನಲ್ಲಿ ಏಕಾಂತ ಪಡೆಯಬಹುದಾದ ಕಾಲ ಕಳೆದು ಹೋಯಿತು. ಹಿಂದೆ ಎಂದೂ ಕಾಣದ ಅತಿವೇಗದಿಂದ ಜಗತ್ತು ಸಾಗುತ್ತಿದೆ. ಈ ಗತಿಯಲ್ಲಿ ಎಲ್ಲಿಯೂ ಏಕಾಂತವಿಲ್ಲ. ಅಂತೇ ಕರ್ಮಯೋಗದ ಅಗತ್ಯ.

ಹೇಗಾದರೂ ಆಗಲಿ. ಗಾಂಧೀಜಿಗೆ ಗೀತೆ 'ಕಾಮಧೇನು ಇದ್ದ ಹಾಗೆ.' 'ಅನೇಕರಿಗೆ ಅದು ಅವರ ಬಾಳಿನ ಒಗಟನ್ನು ಬಿಡಿಸಿದೆ. ಅನೇಕ ಸಾವಿರ ಜನಕ್ಕೆ ಅದೇ ನಿಜವಾದ ತಾಯಿ. ಅವರಿಗೆ ಕಷ್ಟಬಂದಾಗ ಅದೇ

ಶಾಂತಿ-ಸಮಾಧಾನದ ಶ್ರೇಷ್ಠವಾದ ಅಮೃತವನ್ನು ಕರೆಯುತ್ತದೆ.' ಅಂತಲೇ ಅದನ್ನು ಗೀತಾಮೃತ ಎಂದು ಜನ ಕರೆದಿದಾರೆ. ಗಾಂಧೀಜಿಗೆ ಅನೇಕ ಕ್ಲಿಷ್ಟ ಸಂದರ್ಭಗಳಲ್ಲಿ ಗೀತೆಯೇ ಬೆಳಕು ತೋರಿದೆ. ಅವರಿಗೆ ಅದು ಅಮೂಲ್ಯವಾದ ಧರ್ಮಗ್ರಂಥ; ಬ್ರಹ್ಮಜ್ಞಾನದ ಉತ್ತಮೋತ್ತಮ ಶಾಸ್ತ್ರ. ಸಂದೇಹ ಧರ್ಮಸಂಕಟಗಳು ಬಂದಾಗೆಲ್ಲ ಅವರು ಗೀತೆಯನ್ನೆ ಶರಣು ಹೋಗಿದಾರೆ. 'ಆಪತ್ತಿನಲ್ಲಿ ಎಂದೂ ಗೀತೆ ಕೈಬಿಟ್ಟಿಲ್ಲ.' ಕೈಹಿಡಿದಿದೆ. ದಾರಿ ತೋರಿದೆ. ಅದಕ್ಕೇ ಗೀತೆ ತಮ್ಮ 'ಆಧ್ಯಾತ್ಮ ನಿಘಂಟು' ಎನ್ನು ತ್ತಾರೆ ಗಾಂಧೀಜೀ. 'ಗೀತೆ ಆಧ್ಯಾತ್ಮಿಕವಾದ ವಿದ್ಯಾವಿಧಾನ. ಆತ್ಮ ಸಂಬಂಧವಾದ ಸಮಸ್ತ ಸಮಸ್ಯೆಗಳನ್ನೂ ಪರಿಷ್ಕರಿಸುವ ಸಾಧನರಾಜ. ಅದು ಸೂತ್ರ ಗ್ರಂಥವಲ್ಲ. ಮಹತ್ತರವಾದ ಒಂದು ಧರ್ಮಕಾವ್ಯ. ಅದನ್ನು ಸೂಕ್ಷ್ಮವಾಗಿ ಓದಿದ ಹಾಗೆಲ್ಲ ಹೊಸ ಹೊಸದಾದ ಮನೋಹರವಾದ ಅರ್ಥ ಹೊಳೆಯುತ್ತವೆ. ಅದರಲ್ಲಿ ತರ್ಕದ ಛಲವಾಗಲಿ ಮೊಂಡ ಸಿದ್ಧಾಂತವಾಗಲಿ ಇಲ್ಲ. ಅದು ಯಾವ ಜಾತಿ ಮತ ಪಂಥಕ್ಕೂ ಒಳಗಾಗಿಲ್ಲ. ಅದರ ಸಂದೇಶ ಸಂಕುಚಿತವಲ್ಲ. ಇಡೀ ವಿಶ್ವಕ್ಕೇ ಸಾರಲ್ಪಟ್ಟಿದೆ.' ಅದರ ಶ್ರುತಿ ವಿಶ್ವಶ್ರುತಿ.

ಕಾರ್ಲೈಲ್ ಪಂಡಿತ ತನ್ನ ಪುಸ್ತಕ ಒಂದರಲ್ಲಿ 'ನಿನಗೆ ಸಾಮ್ರಾಜ್ಯ ಬೇಕೋ ಷೇಕ್ಸ್‌ಪಿಯರ್ ಬೇಕೋ?' ಎಂದು ಇಂಗ್ಲೀಷು ಜನವನ್ನು ಕೇಳಿ, ಅದಕ್ಕೆ ತಾನೇ ಉತ್ತರ ಕೊಟ್ಟಿದಾನೆ-'ಸಾಮ್ರಾಜ್ಯ ಬೇಡ. ಷೇಕ್ಸ್ ಪಿಯರೇ ಇರಲಿ.' ನಿಜ. ಸಾಮ್ರಾಜ್ಯವೇನು ಬರೀ ಮಣ್ಣು, ಹುಸಿ. ಷೇಕ್ಸ್ ಪಿಯರನ ಸಾಹಿತ್ಯ ಅವರ ಸಂಸ್ಕೃತಿಯ ಸಾರ. ಅದನ್ನು ಕಾಪಾಡಿಕೊಂ ಡರೆ ಇಂಥವು ಹತ್ತು ಸಾಮ್ರಾಜ್ಯ ಕಟ್ಟಬಹುದು, ಕಾಲ ಬಂದಾಗ. ಕಾರ್ಲೈ ಲನ ಪ್ರಶ್ನೆ ಚಿರಂತನ ಪ್ರಶ್ನೆ. ಆತನ ಉತ್ತರವೂ ಚಿರಕಾಲದ ಉತ್ತರ.

ಗಾಂಧೀಜಿಯೂ ಹಾಗೆಯೇ ಅಂದಾರು. ಇಡೀ ಜಗತ್ತು ಒಂದು ತೂಕ; ಗೀತೆ ಒಂದು ತೂಕ. ಇದೇ ಇರಲಿ. ಅದರಲ್ಲಿ ಸಂದೇಹವೇ ಇಲ್ಲ. ಗೀತೆ ಇವರ ಕಂಠಮಾಲೆ, ತಾಯತ್ತು. ಮೊದಮೊದಲು ಸದಾ ಗೀತೆಯ ಪ್ರತಿ ಒಂದನ್ನು ಸಂಗಡಲೇ ಇಟ್ಟಿರುತ್ತಿದ್ದರು. ಅವರ ಆಶ್ರಮದ ದಿನದ ಪ್ರಾರ್ಥನೆಯಲ್ಲಿ ಗೀತಾಪಠನ ಪ್ರಧಾನಾಂಗ. ಗೀತೆ ಜನಸಾಮಾ ನ್ಯಕ್ಕೆ ತಿಳಿಯಲಿ ಎಂದೇ ಸುಲಭವಾಗಿ ಬರೆಯಲ್ಪಟ್ಟಿದೆ. ಪಂಡಿತರು

ಅವರಲ್ಲಿ ನಾನಾರೀತಿಯ ಗುಹ್ಯಸಿದ್ಧಾಂತಗಳನ್ನು ಕಂಡುಹಿಡಿದಿದಾರೆ. ಅವರ ಪಾಂಡಿತ್ಯವೇ ಅಂಥದು. 'ಕಂಡುದುದರಲ್ಲೆಲ್ಲ ಗೂಢ ತತ್ವರಹಸ್ಯಗಳನ್ನು ಕಾಣಬಲ್ಲ' ಅದ್ಭುತ ಶಕ್ತಿ ಅವರದು. ಗಾಂಧೀಜೀ ಅಂಥ ಪಾಂಡಿತ್ಯಕ್ಕೆ ದೂರದಿಂದಲೇ ಕೈಮುಗಿಯುತ್ತಾರೆ. ಗೀತೆಯಲ್ಲಿ ಅಂಥ ಕ್ಲಿಷ್ಟವೇನು ಬಂತು? ಸುಲಿದ ಬಾಳೆಯ ಹಣ್ಣಿನಂಥ ಗ್ರಂಥ. 'ಅದರ ಸಂಸ್ಕೃತ ಭಾಷೆ ಸುಲಭ ಎಂದರೆ ನಂಬಲಾರದಷ್ಟು ಸುಲಭ. ಹಿಂದೂಧರ್ಮದಲ್ಲಿ ಅಲ್ಲಿ ಇಲ್ಲಿ ಸಿಕ್ಕಾಪಟ್ಟೆ ಚದರಿಬಿದ್ದಿರುವ ತತ್ವಸಮುದಾಯವನ್ನು ಭಗವದ್ಗೀತೆ ಬಹು ರೂಪಗಳಲ್ಲಿ, ಅನೇಕ ಶಬ್ದಗಳಲ್ಲಿ, ಪುನರುಕ್ತಿಗೆ ಗುರಿಯಾಗಿ ಸ್ಪಷ್ಟವಾಗಿ ಹೇಳಿದೆ.'

ಗೀತೆ ಎಲ್ಲರಿಗೂ ಬೇಕಾದ ಗ್ರಂಥ. ಎಲ್ಲ ಪಂಥದವರಿಗೂ ಆಧಾರವಾದ ವಿರಾಟ್ ಸ್ವರೂಪಿ. ಮೊದಲಲ್ಲಿ ಕಾಲಾನುಸಾರವಾಗಿ ತಮ್ಮತಮ್ಮ ರುಚಿಗೆ ತಕ್ಕಂತೆ ಆಚಾರ್ಯರು ಅದರಲ್ಲಿ ಜ್ಞಾನ ಭಕ್ತಿ ಪ್ರಪತ್ತಿಗಳನ್ನು ಕಂಡರು. ಸರ್ವಸಂಗ ಪರಿತ್ಯಾಗ ಎಂದರೆ ಬೈರಾಗಿ ವಿದ್ಯೆ ಎಂದವನಿಗೂ, ಸನ್ಯಾಸ ಎಂದರೆ ಕರ್ಮಸನ್ಯಾಸ ಎಂದವರಿಗೂ ಅದೇ ಆಶ್ರಯ. ವೈದಿಕ ಯಜ್ಞಕರ್ಮಕ್ಕೂ ಜ್ಞಾನದ ನಿಷ್ಕಾಮಕರ್ಮಕ್ಕೂ ಅಲ್ಲೇ ತೌರು. ಗಾಂಧೀಜೀ ಈಗ ಅನಾಸಕ್ತಿಯೋಗವೇ ಗೀತೆಯ ಸಂದೇಶ ಎನ್ನುತ್ತಿದಾರೆ. ಅನಾಸಕ್ತಿಯಿಂದ ಕರ್ಮಮಾಡುವುದೇ ಯೋಗ ಎಂದು ಅವರ ಮತ. 'ಅಸಕ್ತೋಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ.' ನಿಷ್ಕಾಮಕರ್ಮ ಎಂಬ ಮಾತು ನಮ್ಮಲ್ಲಿ ರೂಢಿಯಿತ್ತು. ನೈಷ್ಕರ್ಮ್ಯಸಿದ್ಧಿಗೆ, ಮೋಕ್ಷಕ್ಕೆ ನಿಷ್ಕಾಮಕರ್ಮ ಹಾದಿ ಎಂದು ಹೇಳಿತ್ತು. ಅದನ್ನೆ ಇನ್ನೂ ಸರಳವಾಗಿ ಅನಾಸಕ್ತಿಯೋಗ ಎಂದಿದಾರೆ ಗಾಂಧೀಜೀ. ಅವರು ಬರೆದಿರುವ ಗೀತಾವ್ಯಾಖ್ಯೆಗೆ ಅದೇ ಹೆಸರು. ಕರ್ಮಫಲ ತ್ಯಾಗ ಎಂದರೆ ಕರ್ಮತ್ಯಾಗವೂ ಅಲ್ಲ, ಕರ್ತೃತ್ವ ತ್ಯಾಗವೂ ಅಲ್ಲ. ನಮ್ಮ ಅಧಿಕಾರ ಬರೀ ಕರ್ಮಮಾಡುವುದು; ಫಲ ನಮ್ಮ ಕೈಯೊಳಗಿನದಲ್ಲ—ಎಂಬುದರ ಅರ್ಥ ನಾವು ಮಾವು ನಟ್ಟರೆ ಬೇವು ಆದೀತೆಂದಾಗಲಿ, ಬಿತ್ತಿದ ಕಡೆ ಭೂಮಿಯೇ ಮಾಯವಾದೀತೆಂದಾಗಲಿ ಅಲ್ಲ. ನಾವು ಮಾಡುವ ಕೆಲಸದ ಫಲವೇನು ಎಂಬುದೇ ಗೊತ್ತಿಲ್ಲದ ಕರ್ಮಕ್ಕೆ ಕಣ್ಣೇ ಇಲ್ಲ. ನಮ್ಮ ಕರ್ಮ ಕುರುಡೂ ಅಲ್ಲ, ಕುಹಕವೂ ಅಲ್ಲ. 'ಮಾಡುವ ಕೆಲಸದ ಗುರಿ ಕಣ್ಣಿಗೆ ಕಟ್ಟಬೇಕು.' ಕರ್ಮದ ಹಾದಿಯಲ್ಲಿ

ಕೈಗೆ ಬಂದ ಕಹಿಯ ತುತ್ತನ್ನು ಬಾಯಿಗೆ ಇಡುವ ಧೈರ್ಯಬೇಕು. ಇದಕ್ಕೆ ಎದೆ ಬೇಕು. ಎದೆಯಲ್ಲಿ 'ನಿಸ್ವಾರ್ಥ ಬೇಕು.' ಅಷ್ಟು ಸಾಲದು. ತನ್ನ ಕಲ್ಯಾಣಕೃತಿಯ ಅಂತಿಮ ಪರಿಣಾಮದಲ್ಲಿ ತನಗೆ ಅಚಲ ಶ್ರದ್ಧೆ ಬೇಕು. 'ಕಾಲಕ್ರಮದಲ್ಲಿ ಅದು ನಿರ್ದಿಷ್ಟ ಫಲವಾಗಿ ಪರಿಣಮಿಸೀತು ಎಂಬ ನಂಬಿಕೆ ಬೇಕು.' ಇಷ್ಟೆಲ್ಲ ಆದರೂ ಸಾಲದು. 'ಅನೇಕವೇಳೆ ತುತ್ತು ಬಾಯಿಗೆ ಬರುವುದೇ ಇಲ್ಲ. ಬರಿಯ ಕೈಕೆಸರು ಆದುದಷ್ಟೇ ಆಗುತ್ತದೆ. ಆಗ ಸಾವಧಾನ ಬೇಕು; ತಾಳ್ಮೆ ಬೇಕು.' ಅರಳಿಯ ಮರಕ್ಕೆ ನಾಲ್ಕು ಪ್ರದಕ್ಷಿಣೆ ಹಾಕಿ ಹೊಟ್ಟೆ ನೋಡಿಕೊಳ್ಳುವ ಆತುರಗಾತಿಯ ರೀತಿ ಸಲ್ಲದು. ಇವೆಲ್ಲವೂ ಅನಾಸಕ್ತಿಯೋಗದ ಲಕ್ಷಣ.

ಫಲದ ಆಸೆ ಬಿಟ್ಟರೆ– ಫಲವೇನು ಜಾರಿ ಹೋಗುತ್ತದೆಯೆ? ಇಲ್ಲ. 'ಗೀತೆಯಲ್ಲಿ ಇಂಥ ಅರ್ಥ ಎಲ್ಲೂ ಇಲ್ಲ. ಉಳಿದವರಿಗಿಂತ ಫಲತ್ಯಾಗಿಗೇ ನಿಜವಾಗಿ ಸಾವಿರ ಪಾಲು ಹೆಚ್ಚಾಗಿಯೇ ಫಲ ಸಿಗುತ್ತಿದೆ. ಗೀತೆ ಹೇಳುವ ಫಲಪರಿತ್ಯಾಗ ಅಖಂಡ ಶ್ರದ್ಧೆಯ ಅಗ್ನಿಪರೀಕ್ಷೆ. ಯಾವಾಗಲೂ ಫಲ–ಪರಿಣಾಮವನ್ನು ಕುರಿತು ಯೋಚಿಸುವವನು ಸಾಮಾನ್ಯವಾಗಿ ಕರ್ತವ್ಯಭ್ರಷ್ಟನಾಗುತ್ತಾನೆ. ಅಲ್ಲಿಂದ ಧೀರತೆ ಉಡುಗುತ್ತದೆ. ಅದರ ಹಿಂದೆಯೆ ಕ್ರೋಧ. ಕಡೆಗೆ ಅಕಾರ್ಯಗಳನ್ನು ಮಾಡುತ್ತಾನೆ. ಒಂದರಿಂದ ಮತ್ತೊಂದು; ಅದರಿಂದ ಮೂರನೆಯದು. ಹೀಗೆ ಕರ್ಮದ ಸುಳಿಯಲ್ಲಿ ಸಿಗುತ್ತಾನೆ. ಫಲಚಿಂತನೆ ಮಾಡುವವನ ಗತಿ ವಿಷಯಾಂಧನ ಗತಿ. ಅವನ ಹಾಗೆಯೆ ಸಾರಾಸಾರ ವಿವೇಚನೆ, ನೀತಿ–ಅವಿನೀತಿ ವಿವೇಕಗಳನ್ನು ಬಿಟ್ಟು ಫಲ ಸಿದ್ಧಿಗಾಗಿ ಮನಸ್ಸಿಗೆ ಬಂದ ಉಪಾಯಗಳನ್ನು ಅನುಸರಿಸಿ ಅದನ್ನೇ ಧರ್ಮವೆಂದು ತಿಳಿಯುತ್ತಾನೆ. ಫಲದಾಸೆ ಉಳ್ಳವನು ಪತಿತನಾಗುತ್ತಾನೆ. ಕರ್ಮತ್ಯಾಗಿಯೂ ಪತಿತನಾಗುತ್ತಾನೆ. ಅಸಕ್ತನಾಗಿ ಕರ್ಮ ಆಚರಿಸಿ ಫಲತ್ಯಾಗ ಮಾಡುವವನಿಗೇ ಅಭ್ಯುದಯ.'

ಗೀತೆಯ ಮುಖ್ಯ ಸಂದೇಶ ಇದು: 'ಮನುಷ್ಯ ತನ್ನ ವಿಧಿಗೆ ತಾನೇ ಕರ್ತ. ತನಗೆ ಬೇಕಾದ ಕರ್ಮವನ್ನು ಮಾಡಬಹುದು; ಬೇಕಾದ ರೀತಿಯಲ್ಲಿ ಮಾಡಬಹುದು. ಆದರೆ ಫಲದ ಗೋಜಿಗೆ ಹೋಗಬಾರದು. ಅಲ್ಲೇ ಇರುವುದು ನಂಜು, ನೋವು.' 'ಪಂಜಾಬ್ ಮೇಲಿನಂತೆ ಚಕಚಕ ಕೆಲಸ

ಮಾಡಬೇಕು. ಆದರೆ ಡಬ್ಬಿಗಳಂತೆ ನಮ್ಮ ಕೆಲಸಕ್ಕೇ ಜೋತು ಬೀಳ ಬಾರದು. ಗಾಡಿ ನಡೆಸುವ ಡ್ರೈವರಿನಂತೆ ಇರಬೇಕು.' ಬೇಕಾದಾಗ ಬ್ರೇಕ್ ಹಾಕಿ ನಿಲ್ಲಿಸುವಂತೆ ಇರಬೇಕು. 'ನಮ್ಮ ನಿಗ್ರಹವನ್ನು ಕಾಯ್ದು ಕೊಂಡು ಶಾಂತವಾಗಿ ಕೆಲಸಮಾಡಬೇಕು. ತೂಕ ತಪ್ಪಬಾರದು.' ಇಷ್ಟ ಬಂದಾಗ ಕೈಕಾಲನ್ನು ಚಿಪ್ಪಿನೊಳಗೆ ಎಳೆವ ಆಮೆಯಂತೆ 'ಬೇಕಾದಾಗ ಕೆಲಸದಿಂದ ಮುಕ್ತರಾಗುವ ತೂಕ ಹಿಡಿಯಬೇಕು.'

ಅನಾಸಕ್ತಿ–ನಿಷ್ಕಾಮಬುದ್ಧಿ ಎಂದರೆ ಬರಿಯ ಬಾಯಿ ಮಾತೆ? ಮಂತ್ರದ ಮಾವಿನಕಾಯೆ? ಇದು ಬರಿಯ ಬುದ್ಧಿಗೆ ಸಿಗುವುದಿಲ್ಲ. ಹೃದಯ ಮಥನ ಬೇಕು. ಈ ತ್ಯಾಗಶಕ್ತಿ ಗಳಿಸಲು ಜ್ಞಾನ ಬೇಕು. ವೇದಾದಿ ಗಳನ್ನು ಬಾಯಿಪಾಠ ಮಾಡಿ ಭೋಗಾದಿಗಳಲ್ಲಿ ಮುಳುಗಿದ, ಶೀಲದಲ್ಲಿ ಶುಚಿಯಿಲ್ಲದ ಪಾಂಡಿತ್ಯದಲ್ಲಿ ಇಲ್ಲ ಜ್ಞಾನ. ಅದೆಲ್ಲ ಒಣ ವೇದಾಂತ; ಶುಷ್ಕ, ಶೂನ್ಯ. ಜ್ಞಾನ ಶುಷ್ಕವಾಗಬಾರದೆಂದೇ ಗೀತೆಯಲ್ಲಿ ಅದಕ್ಕೆ ಭಕ್ತಿಯ ಶ್ರುತಿ ಕೂಡಿಸಲ್ಪಟ್ಟಿದೆ. ಭಕ್ತಿಗೇ ಅಗ್ರಸ್ಥಾನ ಕೊಟ್ಟಿದೆ. 'ನಾ ತಪ ಸ್ಕಾಯ ನಾ ಭಕ್ತಾಯ ಕದಾಚನ.' ಗೀತೆ ಶ್ರದ್ಧೆ ಇಲ್ಲದವರಿಗೆ ಅಲ್ಲ; ಭಕ್ತರಿಗೆ. ಸಾಬರ್ಮತಿಯಲ್ಲಿ ಇದ್ದಾಗ ದಿನಾಲೂ ಬೆಳಗ್ಗೆ ಪ್ರಾರ್ಥನೆಯ ಹೊತ್ತಿನಲ್ಲಿ ಗಾಂಧೀಜೀ ಪ್ರವಚನ ಮಾಡುವ ಪದ್ಧತಿ ಇಟ್ಟುಕೊಂಡಿದ್ದರು. ಪ್ರವಚನಗಳಿಗೆ ಯಾವುದಾದರೂ ಒಂದು ಗೀತಾಶ್ಲೋಕ ಆಧಾರವಾಗು ತ್ತಿತ್ತು. ಪಂಡಿತರ ಕಾಲಕ್ಷೇಪದಂತೆ ವ್ಯಾಕರಣ ತರ್ಕಗಳಲ್ಲಿ ಗಾಂಧೀಜೀ ಕಾಲ ಕಳೆಯುತ್ತಿರಲಿಲ್ಲ. ಅದರಲ್ಲಿ ಯಾವುದಾದರೂ ಒಂದು ಸಿದ್ಧಾಂತವನ್ನು ಪ್ರತಿಪಾದಿಸುವ ಕುದಿ ಇರುತ್ತಿರಲಿಲ್ಲ. ಆ ದಿನ ಪ್ರಾರ್ಥನೆಯಲ್ಲಿ ಹೇಳಿದ ಗೀತಾಧ್ಯಾಯದ ಬಗ್ಗೆ ಒಂದೆರಡು ಮಾತು; ಪೀಠಿಕೆಯ ಹಾಗೆ; ಆ ಅಧ್ಯಾ ಯದ ಅರ್ಥದ ಬಾಗಿಲು ತೆರೆವ ಹಾಗೆ. ಅವುಗಳಲ್ಲಿ ಕೆಲವನ್ನು ಮಹಾದೇವ ದೇಸಾಯಿ ಜಗತ್ತಿಗಾಗಿ ಕಾದಿಟ್ಟಿದ್ದಾರೆ.

'ಒಂಬತ್ತನೆಯ ಅಧ್ಯಾಯದಲ್ಲಿ ಸರ್ವದುಃಖ ನಿವಾರಿಣಿಯಾದ ಅಮೃತಾಂಜನ ಇದೆ. ಆದಿಭೌತಿಕವಷ್ಟೇ ಅಲ್ಲದೆ ಆಧ್ಯಾತ್ಮಿಕವಾದ ರೋಗ ಗಳಿಂದಲೂ ಪೀಡಿತರಾದ ನಮಗೆ ಸರ್ವರೋಗಹರವಾದ ದಿವ್ಯೌಷಧ ಅದು.

ದೇವರನ್ನು ನಂಬಿದವರಿಗೆ ನೋವಿಲ್ಲ, ನಾಶವಿಲ್ಲ. ಗೀತೆಯ ಕಾಲಕ್ಕೆ ವರ್ಣಾಶ್ರಮವು ನಿಜಾರ್ಥವನ್ನೂ ಪವಿತ್ರತೆಯನ್ನೂ ಕಳೆದುಕೊಂಡು ಈಗಿನ ಮೇಲುಕೀಳುಗಳ ಗೊಂದಲದಲ್ಲಿ ಕಾಲಿಟ್ಟಿದ್ದಿತು ಎಂದು ಈ ಅಧ್ಯಾಯ ದಿಂದ ತಿಳಿಯಬಹುದಾಗಿದೆ. ಆದರೆ ಗೀತೆಯ ಅಭಯಹಸ್ತ ಆ ಭೇದಗಳೆಲ್ಲ ವನ್ನೂ ಮೀರಿದೆ. ಅವರಿವರೆನ್ನದೆ ಎಲ್ಲರಿಗೂ ದೇವರು ತನ್ನ ಅಭಯ ಹಸ್ತವನ್ನು ನೀಡಿದಾನೆ. ಮಾನವರು ಸುಲಭಾಪರಾಧಿಗಳು. ಸಾಧಾರಣ ಮನುಷ್ಯರಿಗಷ್ಟೇ ಅಲ್ಲ, ಪಾಪಯೋನಿಗಳಿಗೂ ಪಾಪಸಂಭವರಿಗೂ ಆ ವರ ಕರುಣಿಸಲ್ಪಟ್ಟಿದೆ; ಆ ಆಶ್ವಾಸನ ಕೊಡಲ್ಪಟ್ಟಿದೆ. ಅಲ್ಲಿಗೇ ಮುಗಿಯಲಿಲ್ಲ. ಅಪಿ ಚೇತ್ಸ ದುರಾಚಾರೋ–ಪಾಪದಲ್ಲೇ ಮುಳುಗಿದ್ದರೂ ಭಾಧಕವಿಲ್ಲ; ನಮ್ಮ ಯೋಗಕ್ಷೇಮ ಆತನಿಗೆ ಸೇರಿದುದು. ಆದರೆ ನಮ್ಮಲ್ಲಿ ಯಾರು ಪಾಪಾತ್ಮರಲ್ಲದವರು? ಯಾರು ದುರಾಚಾರಿಗಳಲ್ಲದವರು? ಯಾರ ಕಡೆ ಯಾರು ಬೆರಳು ತೋರಿಸಬಲ್ಲರು? ಆ ಧೈರ್ಯ ಯಾರಿಗೆ ಉಂಟು?

'ನಮೇ ಭಕ್ತಃ ಪ್ರಣಶ್ಯತಿ–ನನ್ನನ್ನು ನಂಬಿದವರು ಯಾರೂ ನಾಶ ವಾಗರು. ಪ್ರತಿಜಾನೀಹಿ-ಇದನ್ನು ಗಟ್ಟಿಯಾಗಿ ತಿಳಿ. ಹೀಗೆ ಭಗವಂತನು ಮುಕ್ತಕಂಠನಾಗಿ ಹೇಳಿದಾನೆ ಆದರೆ ಯಾವ ಪ್ರಯತ್ನವನ್ನೂ ಮಾಡದೆ ಬರಿಯೆ ನಂಬಿದರೆ ಸಾಕೆ? ಸಾಲದು. ಅಷ್ಟುಮಾತ್ರದಿಂದಲೇ ನಮ್ಮ ಪಾಪವೆಲ್ಲ ಹರಿಯುತ್ತದೆ ಎಂದು ಯಾರೂ ತಿಳಿಯಬಾರದು. ಇಂದ್ರಿಯ ಗಳ ಮೋಹವನ್ನು ಗೆಲ್ಲಲು ಪೂರಾ ಪ್ರಯತ್ನಪಟ್ಟು ಕಷ್ಟದಲ್ಲಿಯೂ ಕಂಬ ನಿಯಲ್ಲಿಯೂ ದೇವರನ್ನು ಮೊರೆಹೋದವನಿಗೆ ಆ ಸಮಾಧಾನ, ಆ ಯೋಗ ಕ್ಷೇಮ, ಔಷಧಿ ಸಿಕ್ಕೀತು.'

ಹನ್ನೊಂದು ಹನ್ನೆರಡು:

'ಅದ್ಭುತವಾದ ಈ ವಿಶ್ವರೂಪ ಸಂದರ್ಶನಕ್ಕಿಂತ ನಮ್ಮ ಮನಸ್ಸನ್ನು ದೇವರ ಕಡೆ ಸೆಳೆಯಲು ಮತ್ತೇನು ಬಲವತ್ತರ ಸಾಧನ ಇದ್ದೀತು! ಹೀಗೆ ನಮ್ಮ ಮನಸ್ಸನ್ನು ಭಕ್ತಿಗೆ ಹದಗೊಳಿಸಿ ಹಸನುಮಾಡಿ ಹನ್ನೆರಡನೆಯ ಅಧ್ಯಾಯದಲ್ಲಿ ಶ್ರೀಕೃಷ್ಣ ನಮಗೆ ಭಕ್ತಿಯ ಸಾರಸಂಗ್ರಹವನ್ನೇ ಕೊಟ್ಟಿ ದಾನೆ. ಆ ಅಧ್ಯಾಯ ಬಹಳ ಚಿಕ್ಕದು, ಅತಿಸಂಗ್ರಹ. ಸಂಕಟದ ಸಮ

ಯದಲ್ಲಿ ತಟ್ಟನೆ ನೆನಪುಮಾಡಿಕೊಳ್ಳಲು ಅನುಕೂಲವಾಗುವಂತೆ ಸುಲಭವಾಗಿ ಬಾಯಿಪಾಠ ಮಾಡಬಹುದು.

'ಗೀತೆಯ ಭಕ್ತಿ ಮಿಥ್ಯಾವಸ್ತುವೂ ಅಲ್ಲ, ಅಂಧಶ್ರದ್ಧೆಯೂ ಅಲ್ಲ. ಅಲ್ಲಿ ಬಂದಿರುವ ಕೆಲವು ಮಾತು ಬಾಹ್ಯೋಪಚಾರಕ್ಕೆ ಸಂಬಂಧಿಸಿವೆ. ನಿಜ. ಭಕ್ತರು ಜಪಮಾಲೆ ತಿಲಕ ಅರ್ಘ್ಯ ಮೊದಲಾದ ಉಪಾಯ ಹೂಡಿದರೆ ಹೂಡಲಿ. ಅವು ಭಕ್ತಿಯ ಲಕ್ಷಣಗಳೇನೂ ಅಲ್ಲ. ಯಾರೊಡನೆಯೂ ಹಗೆ ಇಲ್ಲದೆ, ಕಾರುಣ್ಯನಿಧಿಯಾಗಿ, ಅಹಂಕಾರ ಮಮಕಾರ ಬಿಟ್ಟು ಶೀತೋಷ್ಣ ಸುಖದುಃಖಗಳನ್ನು ಸಮವಾಗಿ ತಿಳಿದು, ನಿತ್ಯಸಂತುಷ್ಟನಾದ ಸಹನಶೀಲನು ಭಕ್ತ. ಅವನಿಗೆ ದೃಢನಿಶ್ಚಯ, ಭಗವದರ್ಪಿತ ಚಿತ್ತಗಳು ಬೇಕು. ಲೋಕಕ್ಕೆ ಅವನಿಂದ ಹೆದರಿಕೆ ಇಲ್ಲ. ಅವನು ಲೋಕಕ್ಕೆ ಅಂಜುವ ಹಾಗಿಲ್ಲ. ಇದು ಶುಭ, ಅದು ಅಶುಭ ಎಂಬುದಿಲ್ಲ. ಶತ್ರು ಮಿತ್ರ ಎಂಬುದಿಲ್ಲ. ಎಲ್ಲರೂ ಸಮ. ಮಾನಾವಮಾನವೂ ಅಷ್ಟೆ. ಇಂಥವನಿಗೆ ನಿಂದೆ ಸ್ತುತಿಗಳು ಎರಡೂ ಒಂದೇ. ಮೌನ ಸ್ಥಿರಬುದ್ಧಿಗಳು ಅವನ ಸ್ವಭಾವ. ಇಂಥ ಪವಿತ್ರ ಭಕ್ತಿ ಆಸಕ್ತರಿಗೆ ಸಾಧ್ಯವೇ?

ಹದಿನಾಲ್ಕು–ಹದಿನೈದು :

'೧೪ನೆಯ ಅಧ್ಯಾಯದ ಗುಣತ್ರಯ ವಿಭಾಗ ೩೦ ವರ್ಷದ ಕೆಳಗೆ ನಾನು ಓದಿದ್ದ ಹೆನ್ರಿ ಡ್ರಮ್ಮಂಡರ 'ಆಧ್ಯಾತ್ಮಪ್ರಪಂಚದಲ್ಲಿ ಪ್ರಾಕೃತಿಕ ನಿಯಮ' ಎಂಬ ಪುಸ್ತಕವನ್ನು ನೆನಪುಮಾಡುತ್ತಿದೆ. ನಿಯಮಗಳು ಬೇಕಾದಷ್ಟು ಇವೆಯಾಗಲಿ ಮುಖ್ಯ ವಿಭಾಗಗಳು ಮೂರು. ಈ ಅಧ್ಯಾಯ ಮನುಷ್ಯ ಜೀವನವನ್ನು ನಡೆಯಿಸುವ ನಿಯಮಗಳನ್ನು ತಿಳಿಸುತ್ತದೆ.

೧೫ ರಲ್ಲಿ ಪರಿಪೂರ್ಣ ಮಾನವನ–ಪುರುಷೋತ್ತಮನ–ಚಿತ್ರ ಇದೆ. ಈ ಅಧ್ಯಾಯದಿಂದ ನಾವು ತಿಳಿಯಬೇಕಾದುದು ಮಾನವನ 'ಸ್ವರ್ಗಾರೋಹಣ' ರಹಸ್ಯ. ಮನುಷ್ಯರಲ್ಲಿ ಯಾರೂ ಒಂದೇ ಗುಣದವರಿಲ್ಲ. ಸತ್ವ ರಜಸ್ ತಮಸ್ ಮೂರೂ ಎಲ್ಲರಲ್ಲಿಯೂ ಇವೆ. ನಾವೆಲ್ಲ, ಪ್ರತಿಯೊಬ್ಬರೂ, ಸತ್ವಗುಣ ಪ್ರಧಾನವಾದ ಸ್ಥಿತಿಗೆ ಏರಬೇಕು. ಕಡೆಗೆ ಮೂರೂ ಗುಣಗಳನ್ನು ಮೀರಿ 'ಪುರುಷೋತ್ತಮ'ರಾಗಬೇಕು. ಭೌತಪ್ರಪಂಚದ

ಉದಾಹರಣೆ ಹೀಗೊಂದು ಹೇಳಬಹುದು: ನೀರು ನೋಡಿ. ಘನ ಸ್ವರೂಪದಲ್ಲಿ ನೆಲದಮೇಲೆಯೇ ಇರುತ್ತದೆ. ಮೇಲೇರಲಾರದು. ಅದನ್ನೇ ಹಬೆಯಾಗಿ ಮಾಡಿದರೆ ಮೇಲೆ ಏರುತ್ತದೆ. ಮೇಲೇರಿ ಆಕಾಶದಲ್ಲಿ ಸೇರಿ ಅಲ್ಲಿ ಮೋಡವಾಗುತ್ತದೆ: ಮತ್ತೆ ಮಳೆಯಾಗಿ ಭೂಮಿಗೆ ಇಳಿದು ಫಲ ದಾಯಿನಿಯೂ ವರಪ್ರಸಾದಿನಿಯೂ ಆಗುತ್ತದೆ, ನಾವು ಎಲ್ಲರೂ ನೀರಿ ನಂತೆ. ನಮ್ಮ ಒಳಗಿನ ಅಹಂಕಾರ ಸಾಯುವಂತೆ ನಮ್ಮನ್ನು ಹಬೆ ಆಗಿಸಿ ಕೊಳ್ಳಬೇಕು. ಆಗ ನಾವೂ ಅನಂತನಾದ ಪರಮೇಶ್ವರನಲ್ಲಿ ಬೆರೆತು ಜಗದ್ಧಿತ ಆದೀತು.'

ಗಾಂಧೀಜೀ ಆರೋಗ್ಯಕ್ಕಾಗಿ ನಂದೀ ಬೆಟ್ಟದಲ್ಲಿ ವಾಸವಾಗಿದ್ದರಲ್ಲ. ಅಲ್ಲಿಯೂ ದಿನವೂ ಪ್ರಾರ್ಥನೆ ನಡೆದೇ ಇತ್ತು. ನಂದೀ ಬೆಟ್ಟವನ್ನು ಬಿಡು ವಾಗ ಕಡೆಯ ದಿನ ಬೆಳಗಿನ ಪ್ರಾರ್ಥನೆಯಲ್ಲಿ ಸ್ವಯಂಸೇವಕರಿಗೆಲ್ಲ ಗಾಂಧೀಜೀ ಸ್ವಯಂ ಗೀತೆಯ ಪ್ರತಿಗಳನ್ನು ಹಂಚಿದರು. ಎಲ್ಲದರಲ್ಲಿಯೂ ಅವರ ಸ್ವಹಸ್ತಾಕ್ಷರ. ಆ ದಿನ ಮೂರನೆಯ ಅಧ್ಯಾಯ. ಅದರ ಬಗ್ಗೆಯೇ ಮಾತಾಡಿದರು.

'ಗೀತೆ ನಮಗೆ ನಡೆನುಡಿಯ ಕೈಪಿಡಿ. ನಿಮಗೆ ಸಂದೇಹ ಬಂದಾಗ, ಅಶಾಂತಿ ಆಪತ್ತು ಕಾಡಿದಾಗ, ಗೀತೆಯನ್ನು ಶರಣು ಹೋಗಿರಿ. ಮೂರನೆಯ ಅಧ್ಯಾಯಕ್ಕಿಂತ ಹೆಚ್ಚಿನ ಶಾಂತಿ ಉಂಟೆ? ಯಜ್ಞಚಕ್ರದ ರಹಸ್ಯವೆಲ್ಲ ಅದರಲ್ಲಿ ಅಡಗಿದೆ. ದೇವರು ನರನನ್ನು ಹುಟ್ಟಿಸಿದ. ಹುಟ್ಟಿಸಿ ಅವನ ಕತ್ತಿಗೆ ಯಜ್ಞದ ತಾಳೀ ಕಟ್ಟಿದ. ಯಜ್ಞ ಅಂದರೆ ತ್ಯಾಗ. ಎರಡೂ ಅಷ್ಟೇ, ಆತ್ಮಶುದ್ಧಿಗಾಗಿ. ಯಜ್ಞದಿಂದಲೇ ಕುಲವೃದ್ಧಿ ಎಂದು ಭಗವಂತ ಹೇಳಿದಾನೆ. ಯಜ್ಞ ಎಂದರೆ ಸೇವೆ. ಗೀತೆ ಹೇಳಿಲ್ಲವೆ? ಕೇವಲ ತನಗಾಗಿಯೇ ಕರ್ಮ ಮಾಡುವವನು ಕಳ್ಳ. 'ದೇವಾನ್ ಭಾವ ಯತಾನೇನ ತೇ ದೇವಾ ಭಾವಯಂತು ವಃ' ದೇವತೆಗಳನನ್ನು ಯಜ್ಞದಿಂದ ನೀವು ಪೋಷಿಸಿರಿ. ಅವರೂ ನಿಮ್ಮನ್ನು ಪೋಷಿಸಿಯಾರು. ಇಷ್ಟಭೋಗ ಗಳನ್ನು ಕೊಟ್ಟಾರು. ಅಯ್ದು ನೋಡಿದರೆ ಯಜ್ಞ ಎಂಬುದು ಜಗದ್ಧಿತ ಕ್ಕಾಗಿ ಮಾಡಿದ ತ್ಯಾಗ. ನಮಗೆ ಕಷ್ಟಬಂದರೆ ಬರಲಿ. ಅದರಿಂದ ಇತರರಿಗೆ ಸುಖವಾದರೆ ಸಾಕು. ಸಂಗಾತಿಗಳಿಗಾಗಿ ನರಕೋಟಿಗಾಗಿ ಆತ್ಮ

ತ್ಯಾಗ ಮಾಡುವುದೇ ಪವಿತ್ರ ಉದಾತ್ತ ಸೇವೆ. ಸಾವು ಬಾಳುಗಳ ನಡುವೆ ಸದಾ ಕದನ ಆಗುತ್ತಿದೆ. ಅದು ನಿತ್ಯಯುದ್ಧ, ಸಾವು ಬದುಕುಗಳ ಅಂತಿಮ ಪರಿಣಾಮ ಸಾವು ಅಲ್ಲ, ಬದುಕು. ಏಕೆ? ಸಾವಿನ ನಡುವೆ ಬಾಳು ಬದುಕುತ್ತಿದೆ; ಸಾಗುತ್ತಲೇ ಇದೆ. ಅಹಿಂಸೆಯ ಹೆಚ್ಚಳಕ್ಕೆ ಇದೇ ಪ್ರತ್ಯಕ್ಷ ಪ್ರಮಾಣ. ಯಜ್ಞದಿಂದ ಅಲ್ಲದೆ ಅಹಿಂಸೆಯ ಈ ವಿಜಯ ಅನ್ಯಥಾ ಸಾಧ್ಯವಿಲ್ಲ. ಯಜ್ಞಕ್ಕಿಂತ ಹೆಚ್ಚಿನ ನಿಯಮ ಇಲ್ಲ. ಅದು ಸೇವಾ ನಿಯಮ, ಕೈಂಕರ್ಯ.

'ಈಗ ನಾವು ಗೀತಾಪಾಠವನ್ನು ಮರೆತಿದೇವೆ. ನಮ್ಮ ಮಕ್ಕಳಿಗಂತೂ ಇದರ ಗಂಧವನ್ನೇ ತೋರಿಸುವುದಿಲ್ಲ. ಹೀಗಿರುವಾಗ ಗೀತಾನಾಯಕ ಕೃಷ್ಣನ ಬೆಲೆ ನಮಗೆ ಹೇಗೆ ತಿಳಿದೀತು? ಪ್ರತಿ ಗೋಕುಲಾಷ್ಟಮಿಯ ದಿನವೂ ಕೃಷ್ಣನನ್ನು ನೆನೆದು ಗೀತೆ ಓದಿ, ಅದರ ತತ್ವಗಳನ್ನು ಆಚರಿಸುವ ಪ್ರಯತ್ನಮಾಡಿದ್ದರೆ ನಮಗೆ ಈಗ ಬಂದಿರುವ ಗತಿ ಬರುತ್ತಿತ್ತೆ? ಶ್ರೀಕೃಷ್ಣ ನಿಜವಾದ ಸಮಾಜಸೇವಕ. ತನ್ನ ಬದುಕನ್ನೆಲ್ಲ ಜನಸೇವೆಯಲ್ಲಿಯೆ ಕಳೆದ. ನಾಯಕನಾಗಿ ಪಡೆಗಳನ್ನು ನಡೆಸಬಹುದಾಗಿತ್ತು ಕುರುಕ್ಷೇತ್ರದಲ್ಲಿ. ಹಾಗೆ ಮಾಡದೆ ಅರ್ಜುನನ ಸಾರಥಿಯಾಗಲು ಒಪ್ಪಿಕೊಂಡ. ಅವನ ಜೀವನವೆಲ್ಲ ಇಡಿಗೆ ಇಡಿಯೆ ಅವಿಚ್ಛಿನ್ನಕರ್ಮದ ಒಂದು ಗೀತೆ ಆಗಿದೆ. ಚಕ್ರವರ್ತಿ ದುರ್ಯೋಧನನ ಮಿಷ್ಟಾನ್ನ ಬಿಟ್ಟು ದರಿದ್ರ ವಿದುರನ ಗಂಜಿಗೆ ಬಾಯೊಡ್ಡಿದ. ಬಾಲ್ಯದಲ್ಲಿ ದನ ಕಾಯ್ದು ಇಂದಿಗೂ ಗೋಪಾಲ ಎನಿಸಿಕೊಂಡಿದಾನೆ. ಕೃಷ್ಣನಿಗೆ ನಿದ್ದೆ ಇಲ್ಲ, ನಿರುದ್ಯೋಗ ಇಲ್ಲ. ಪ್ರಪಂಚದ ಯೋಗಕ್ಷೇಮವನ್ನೇ ನಿದ್ದೆಯಿಲ್ಲದೆ ಹೊತ್ತು ಕಾಪಾಡಿದ. ಭಕ್ತಿ ಎಂದರೆ ಕರ್ಮ. ಲೋಕಮಾನ್ಯ ತಿಲಕರು ಹೇಳಿಲ್ಲವೆ? ಜ್ಞಾನಕ್ಕಾಗಲಿ ಭಕ್ತಿಗೇ ಆಗಲಿ ಕರ್ಮವೇ ದಾರಿ. ಇಷ್ಟೇ; ಆ ಕರ್ಮವನ್ನು ಸ್ವಾರ್ಥಕ್ಕಾಗಿ ಮಾಡಬಾರದು. ಪರಹಿತಕ್ಕಾಗಿ ಮಾಡಬೇಕು. ಸ್ವಾರ್ಥಕರ್ಮ ಬಂಧನ. ಪರಾರ್ಥಕರ್ಮ ಅದನ್ನು ಬಿಡಿಸುತ್ತದೆ.'

ಗಾಂಧೀಜಿಗೆ ಮೊದಲು ಗೀತೆಯ ಪರಿಚಯ ಆದುದು ಇಂಗ್ಲೀಷು ಭಾಷಾಂತರದ ಮೂಲಕ. ತರುವಾಯ ಅವರ ಭಿನ್ನಭಿನ್ನ ಮತ ಪರಿಚಯವೂ ಸತ್ಯಶೋಧನೆಯೂ ಬೆಳೆದಿವೆ. ಎಲ್ಲ ಧರ್ಮಗ್ರಂಥಗಳನ್ನೂ

ನೋಡಿದಾರೆ. ಬೈಬಲಿನ ಹಲವು ಭಾಗಗಳನ್ನು ಓದಿ ಮುಗ್ಧರಾಗಿದಾರೆ. ಇಸ್ಲಾಮಿನಲ್ಲಿ ಅಹಿಂಸೆಗೆ ಸ್ಥಾನ ಇದೆ ಎಂಬ ಸಾಹಸ ಮಾಡಿದಾರೆ. ಆದರೆ ಅವರಿಗೆ ಚುಕ್ಕಾಣಿ ಗೀತೆಯೇ.

ಗೀತೆಯ ದ್ವಿತೀಯಾಧ್ಯಾಯದ

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಭಿಜಾಯತೇ
ಕ್ರೋಧಾತ್ ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ
ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥

ಎಂಬ ಶ್ಲೋಕಗಳು ಮನಸ್ಸಿಗೆ ನಾಟಿದವು ಗಾಂಧೀಜೀಗೆ. ಅವರಿಗೆ 'ಆ ಶ್ಲೋಕಗಳ ದನಿ ಇಂದಿಗೂ ಕಿವಿಯಲ್ಲಿ ಗುಂಯಿ ಅನ್ನುತ್ತಿದೆ. ಗೀತೆಯ ತತ್ವವೆಲ್ಲ ಎರಡನೆಯ ಅಧ್ಯಾಯದಲ್ಲಿ ಅಡಕವಾಗಿದೆ. ಮೂರನೆಯದರಲ್ಲಿ ಈ ಸಂದೇಶದ ಹಾದಿ ಇದೆ. ಹೀಗೆಂದರೆ ಉಳಿದ ಅಧ್ಯಾಯಗಳಿಗೆ ಬೆಲೆ ಕೀಳು ಎಂದಲ್ಲ. ಪ್ರತಿ ಅಧ್ಯಾಯಕ್ಕೂ ಅದರದರ ಬೆಲೆ ಇದ್ದೇ ಇದೆ.' ಮಾನವರ ಗುರಿ ಎರಡನೆಯ ಅಧ್ಯಾಯದಲ್ಲಿ ವರ್ಣಿತವಾಗಿದೆ. ಮಾನವ 'ಸ್ಥಿತಪ್ರಜ್ಞ'ನಾಗಬೇಕು. 'ಬ್ರಾಹ್ಮೀಸ್ಥಿತಿ'ಯನ್ನು ಪಡೆಯಬೇಕು. ಅದುವೆ ಲಕ್ಷ್ಯ. ಮೂರನೆಯ ಅಧ್ಯಾಯದಲ್ಲಿ ಉಪಾಯ ನಿರೂಪಣೆ. ಅಲ್ಲಿಂದ ಮುಂದೆ ಅದೇ.

ಗೀತೆ ಎಲ್ಲರಿಗೂ ಬೇಕಾದ ಗ್ರಂಥ ಎಂದು ಹೇಳಿತು. ಆ ಸರ್ವ ಜನಾದರಣೆಯ ಗುಟ್ಟು ಎಲ್ಲ ಧರ್ಮಗ್ರಂಥಗಳ ಗುಟ್ಟು. 'ಸ್ವಾನುಭವದ ಸತ್ಯ ಚಿತ್ರಗಳು' ಅವು. 'ತಮ್ಮ ತತ್ವಗಳಿಗೆ ಅನುಸಾರವಾಗಿ ಆಯಾ ಜನ ಸಾಧ್ಯವಿದ್ದಷ್ಟು ನಡೆದುಕೊಂಡಿದಾರೆ. ಕೃತಿಕರ್ತರು ತಮ್ಮ ಕೃತಿಗಳಲ್ಲಿ ಪ್ರಾಣ ತುಂಬಿದಾರೆ. ಭಕ್ತರು ಅವನ್ನು ಅನುಸರಿಸಿ ಬಾಳಿ ಅವಕ್ಕೆ ಪುಷ್ಟಿ ಕೊಟ್ಟದಾರೆ. ಗೀತೆಯ ಗುಟ್ಟಾದರೂ ಇದೇ.'

ಗೀತೆಯಲ್ಲಿ ಸಂಪ್ರದಾಯವಾದ ಇದೆಯೆ? ಎಂದು ಪಂಡಿತರೊಬ್ಬರು ಎರಡು ಲೇಖನ ಬರೆದು ಅದನ್ನು ಗಾಂಧೀಜಿಗೆ ಪರಾಂಬರಿಕೆಗಾಗಿ ಕಳಿಸಿದರು. ಅವರು ಆಗ ಯರವಾಡ ಜೈಲಿನಲ್ಲಿ ಇದ್ದರು. ಅದಕ್ಕೆ ಬರೆದ ಉತ್ತರ ಸ್ವಾರಸ್ಯವಾಗಿ ಇದೆ. "ಗೀತೆಯ ಬಗ್ಗೆ ನೀವು ಬರೆದ ಎರಡೂ ಲೇಖನ

ಓದಿದೆ. ಚೆನ್ನಾಗಿವೆ. ನಾನು ಬೇರೆ ಹಾದಿಯಿಂದ ಬಂದ ನಿರ್ಣಯಕ್ಕೇ ನೀವೂ ಬಂದಿದೀರಿ. ಆದರೆ ನಿಮ್ಮದು ಪಾಂಡಿತ್ಯದ ದಾರಿ. ನನ್ನದು ಹಾಗಲ್ಲ." ವ್ಯಾಕರಣ ತರ್ಕಗಳಲ್ಲ ಗಾಂಧೀಜಿಯ ಒರೆಗಲ್ಲು-ಜೀವನ.

ನಾವು ಬುದ್ಧಿ ವಿಲಾಸ ಪ್ರಿಯರು. ಬರೀ ಪೃಥಕ್ಕರಣವಾದಿಗಳು. ಆಚರಣೆ ನಂಬಿಕೆಗಳು ಇಲ್ಲ. ಸಿದ್ಧಾಂತಗಳ ಬಾಯಿಪಾಠದಲ್ಲಿ ನಮ್ಮನ್ನು ಮೀರಿಸಿದವರು ಇಲ್ಲ. ಗಾಂಧೀಜೀ ನಮ್ಮ ಹಾಗೆ ಸಿದ್ಧಾಂತಿ ಅಲ್ಲ. ಜೀವನ, ಆಚಾರ, ನಂಬಿಕೆ, ಅನುಭೂತಿ, ಎಲ್ಲವೂ ಅವರಿಗೆ ಆಧಾರ. ಅವರಲ್ಲಿ ಪೃಥಕ್ಕರಣ ಇಲ್ಲ; ಸಾಮಾಂಜಸ್ಯ, ಮೇಳನ. ಅವರ ದೃಷ್ಟಿ ವಸ್ತುಸಂಗ್ರಹದ್ದಲ್ಲ; ಲೋಕಸಂಗ್ರಹದ್ದು. ಒಂದು ಗೆರೆಯಲ್ಲಿ ಕಣ್ಣಿಗೆ ಕಾಣದೆ ಇದ್ದರೂ ಅನಂತಬಿಂದುಗಳು ಇವೆ. ಬಾಳಿನಲ್ಲಿ ಸತ್ಯ ಕಾಣದೆ ಇದ್ದರೂ ಎಲ್ಲವನ್ನೂ ಕವಿದಿದೆ. ವಿಶ್ವದಲ್ಲಿಯೂ ಅಷ್ಟೆ. ಸತ್ಯ ಇಲ್ಲ ಎಂಬ ಸ್ಥಳವೇ ಇಲ್ಲ. ಆದುದರಿಂದಲೇ ಎಲ್ಲ ರಂಗಗಳಲ್ಲಿಯೂ ಸತ್ಯದರ್ಶನ ಮಾಡಿಕೊಳ್ಳಬೇಕು. ಅಂದರೆ ಬಾಳಿನಲ್ಲಿ ನಿರಂತರ ನಿರೀಕ್ಷೆ ಪರಿಷ್ಕರಣದ ಹಾದಿಹಿಡಿಯಬೇಕು. ಪ್ರಯತ್ನಶೀಲತೆ ಜಾಗರೂಕತೆಗಳ ಬದುಕು ಆಗಬೇಕು. ಅಭ್ಯಾಸ ಯೋಗವನ್ನು ಪಾಲಿಸಬೇಕು. ಸರ್ವಭೂತಗಳಲ್ಲಿ ಕತ್ತಲು ಇದ್ದಲ್ಲಿ ತಾನು ಎಚ್ಚರದಿಂದ ಇರಬೇಕು. ಆ ಯೋಗಜೀವನದ ಮಾದರಿ ಗಾಂಧೀಜೀ.

ಅನಾಸಕ್ತಿಯಿಂದ ಮೋಕ್ಷ ದೊರೆತೀತೇ ಎಂಬ ಪ್ರಶ್ನೆ ಗಾಂಧೀಜಿಗೆ ದೊಡ್ಡದಾಗಿ ಕಂಡಿಲ್ಲ. ಅವರಿಗೆ ಮೋಕ್ಷದ ಬಗ್ಗೆ ಅಷ್ಟಾಗಿ ರಾಗವಿಲ್ಲ. ಮೋಕ್ಷದಲ್ಲಿ ಏನೋ ಸ್ವಾರ್ಥದ ದೋಷ ಇದ್ದಹಾಗೆ ಇದೆ ಎಂಬುದು ಅವರ ಅಭಿಪ್ರಾಯವೋ ಏನೋ. ಮೋಕ್ಷವೆಂದರೆ ದೇಹಾವಸಾನದ ತರುವಾಯ ದೊರೆವ ಸ್ಥಿತಿ ಎಂದು ಅವರು ತಿಳಿದಂತೆ ತೋರುವುದಿಲ್ಲ. ಇಲ್ಲಿ ಸಿಗಲಾರದ ಮೋಕ್ಷ ಅಲ್ಲಿ ಇನ್ನೇನು? ಬದುಕಿನೊಳಗೆ ಇಲ್ಲದ ಮುಕ್ತಿ ಸಾವಿನೊಳಗೆ ಇರಬಹುದೆ ಎಂದಿದಾನೆ ಕಬೀರದಾಸ. ಬಹುಶಃ ಅವರೂ ಹಾಗೆಯೇ ತಿಳಿದಿರಬೇಕು. 'ಒಮ್ಮೆ ಸಂಕಲ್ಪಮಾಡಿ ಕೂತು ಮುಕ್ತಿಸಾಧನೆಗಾಗಿ ಪೂರ್ಣ ಧ್ಯಾನಮಗ್ನನಾದೆನೆಂದರೆ ಸಿದ್ಧಿ ಆಗುವವರೆಗೆ 'ಕದಲಲಿಕ್ಕಿಲ್ಲ' ಎಂದಿದಾರೆ. ಅಲ್ಲದೆ ಹೀಗೂ ಇರಬಹುದು. ಗಾಂಧೀಜಿಗೆ ನಿಷ್ಠೆಯೇ ಸಾಕ್ಷಾ

ತ್ಕಾರ. ಸಾಧನೆಯೂ ಸಿದ್ಧಿಯೂ ಅವರಿಗೆ ಒಂದೇ. ಸಾಧನೆಯೇ ಮೋಕ್ಷ. ಸಿದ್ಧಿ ಬಂದಾಗ ಬರಲಿ ಎಂಬ ಅನಾಸಕ್ತಿ.

ಆದರೆ ಗಾಂಧೀಜಿಯ ಅನಾಸಕ್ತಿಯಲ್ಲಿ ಮೈಗಳ್ಳತನ ಇಲ್ಲ. ತಾಟಸ್ಥ್ಯ ಇಲ್ಲ. ತಾನು ಒಬ್ಬನು ಒಳ್ಳೆಯವನು ಆದರೆ ಸಾಲದು. ತನ್ನ ಸುತ್ತಲಿನ ವಾತಾವರಣ ಒಳ್ಳೆಯದಾಗಬೇಕು. ಅಸತ್ಯ ಹಿಂಸೆಗಳು ಸುತ್ತಲೂ ಉರಿಯು ವಾಗ ಸತ್ಯವಂತನ ಸತ್ಯ ಸುಮ್ಮನೆ ಇರುವುದರಲ್ಲಿ ಇಲ್ಲ. ತನ್ನ ಪಾಲಿನ ದಾಗಲಿ ಮುಂದಿಯ ಮೇಲಿನದೆ ಆಗಲಿ ದೌರ್ಜನ್ಯವನ್ನು ಇದುರಿಸಬೇಕಾ ದುದು ಅವನ ಕರ್ತವ್ಯ. ಆತ್ಮರಕ್ಷಣೆ ಆತ್ಮೋನ್ನತಿಗಳು ಎಲ್ಲರಿಗೂ ಸಹಜ ಗುಣ. ಅನಾಸಕ್ತರಿಗೆ ತಾನು ಅವರು ಎಂಬ ಸ್ವಪರ ಭೇದ ಇಲ್ಲ. ನೆರೆಮನೆಯ ಹುಡುಗಿಯ ಮೇಲೆ ದುಷ್ಟ ಒಬ್ಬ ಅತ್ಯಾಚಾರ ಮಾಡಲು ಬಂದರೆ ಆಕೆ ನನ್ನ ತಂಗಿಯಲ್ಲ ಎಂದು ಸುಮ್ಮನಿರಬಹುದೆ? ಅದು ಮಾನವಧರ್ಮವೆ? ಅನ್ಯಾಯ ಯಾರಿಗೆ ನಡೆದರೆ ಏನು? ನ್ಯಾಯ ವಂತ ನೋಡಿ ಸಹಿಸಬಲ್ಲನೇ? ಇದು ಅನಾಸಕ್ತಿ ಅಲ್ಲ. ನಿಜವಾಗಿ ಪೂರಾ ಆಸಕ್ತಿ. ಇಡೀ ಮಾನವಜೀವನದಲ್ಲೇ ದೃಢವಾದ ತೀವ್ರವಾದ ಆಸಕ್ತಿ.

ವಾಲ್ಜೀ ದೇಸಾಯಿ ಗಾಂಧೀ ಶಿಷ್ಯರಲ್ಲಿ ಒಬ್ಬರು. ಗೀತೆಯ ಶ್ಲೋಕ ಗಳಲ್ಲಿ ಎರಡನ್ನು ಕೂಡಿಸಿ ಒಂದು ಶ್ಲೋಕ ಮಾಡಿ ಗಾಂಧೀಜಿಯ ಸಿದ್ಧಾಂತ ವನ್ನು ತಿಳಿಸಲು ಯತ್ನಿಸಿದಾರೆ.

ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ತಸ್ಮಾತ್ ಯುಧ್ಯಸ್ವ ಭಾರತ ॥

ಭಾರತ ಎಂದಾಗ ಶ್ರೀಕೃಷ್ಣ ಪಾರ್ಥನಿಗೆ ಒಬ್ಬನಿಗೆಯೆ ಹೇಳಿಲಿಲ್ಲ. ಸಾಧಕ ನಾದ ಪ್ರತಿಯೊಬ್ಬ ಜೀವಿಗೂ ಹೇಳಿದಾನೆ. ಪಾರ್ಥರಲ್ಲದವರು ಯಾರು? ಭಾರತಯುದ್ಧ ದಾಯಾದಿಗಳ ಕಲಹವಲ್ಲ; ರಾಜ್ಯದಾಹದ ರಣಕೇಳಿ ಅಲ್ಲ. ಜ್ಞಾನ ಅಜ್ಞಾನಗಳ ಘರ್ಷಣೆ. ಸತ್ಯ ಅಸತ್ಯಗಳ ಕಾದಾಟ. ಯುಧ್ಯಸ್ವ ಎಂಬ ಸ್ಪಷ್ಟವಾದ ಸಂದೇಶ ಇದೆ. ಅಪ್ಪಣೆ ಇದೆ. ಆದರೆ ಏತಕ್ಕಾಗಿ ಈ ಭಾರತನು ಯುದ್ಧಮಾಡಬೇಕು? ಧರ್ಮಸಂಸ್ಥಾಪನೆಗಾಗಿ. ಆಸಕ್ತಿಗೆ ಇದು ಪಥ್ಯವಾದೀತೆ?

ನಿಜವಾಗಿ ನೋಡಿದರೆ ಅನಾಸಕ್ತಿ ಮನುಷ್ಯನ ವಿಲಕ್ಷಣ ಗುಣ. ಜನರಲ್ಲಿ ಉತ್ತಮರಾದವರನ್ನು ನಾವು ವಿವೇಕಿಗಳು ಎನ್ನುತ್ತೇವೆ. ವಿವೇಕ ಇಲ್ಲದ ವಿದ್ಯೆ ವ್ಯಾಸನೇ ಬಂದು ಹೇಳಿದರೂ ಅದರ ಬೆಲೆ ಏನು? ವಿವೇಕ ವಿಜಯ ಎಂದು ಆಧ್ಯಾತ್ಮಜೀವನದ ರೂಪಕ ಒಂದನ್ನು ನಮ್ಮಲ್ಲಿ ಆಡುತ್ತಾರೆ. ಈ ವಿವೇಕ ಎಂಬುದು ಏನು? ಆತ್ಮಾನಾತ್ಮವಿವೇಕ, ಸದಸದ್ವಿವೇಕ ಎಂದು ಆಧ್ಯಾತ್ಮಜ್ಞಾನಕ್ಕೆ ಹೆಸರಿದೆ. ತನ್ನ ರಾಗರುಚಿಗಳಿಗೆ ಒಳಗಾಗದೆ, ತನ್ನ ಬಯಕೆಯೇ ಸರಿ ಎನ್ನದೆ, ತನಗೆ ಬೇಕಾದುದೇ ಸತ್ಯ ಎನ್ನದೆ, ಕಣ್ಣಿಗೆ ಕಾಣುವ ನೋಟದ ಹಿಂದಿನ ನೈಜವನ್ನು ಶಾಸ್ತ್ರೀಯವಾಗಿ ನಿಷ್ಪಾಕ್ಷಿಕವಾಗಿ ತಿಳಿದು, ಅದರಂತೆ ನಡೆಯುವುದೇ ವಿವೇಕ. ಮನುಷ್ಯ ಯಾವುದರಲ್ಲಿ ಯಾದರೂ ಆಸಕ್ತನಾದರೆ ಆ ವಿವೇಕ ಸಾಧ್ಯವೇ? ಅಭಿಮಾನ ನ್ಯಾಯ ಹೇಳಬಹುದೇ? ನಿರಭಿಮಾನ ಅನಾಸಕ್ತಿ ಇಲ್ಲದೆ ವಿವೇಕ ಇಲ್ಲ ಅಥವಾ ಅನಾಸಕ್ತಿಯೇ ವಿವೇಕ ಎಂದರೂ ಸರಿಯೆ.

ಈ ಅನಾಸಕ್ತಿ ಅಸಹಕಾರವಲ್ಲ. ವಿಷಯದಲ್ಲಿ ಅನಾಸಕ್ತಿ ಎಂದರೆ ವಿಷಯತ್ಯಾಗವಾಗಲಿ ವಿಷಯವಿಮುಖತೆ ಆಗಲಿ ಅಲ್ಲ. ತನ್ನ ಮನೆ ಮಾರು ಎಂಬ ಅಭಿಮಾನ ಇದ್ದವನು ಆಸಕ್ತ. ಇಡೀ ಜಗತ್ತೇ ತನ್ನ ಕುಟುಂಬ ಎಂದು ತಿಳಿದವನು ಅನಾಸಕ್ತ. ನಮ್ಮ ಅಭಿಮಾನ ಆಸಕ್ತಿ ಗಳನ್ನು ಹಿಗ್ಗಿಸಿ. ಅವರ ಕೋಟೆಯನ್ನು ಒಡೆದು, ವಿಶಾಲವಾದ ಸತ್ಯದಲ್ಲಿ ಆಸಕ್ತಿ ಇಡುವುದೇ ಅನಾಸಕ್ತಿ. ದೇವರಿಗೆ ಯಾವುದರಲ್ಲೇನು ಆಸಕ್ತಿ? ಅವನ ಅನಾಸಕ್ತಕರ್ಮದ ಶಕ್ತಿ ಎಂಥ ದೊಡ್ಡದು? ಅನಾಸಕ್ತಿ ಯೋಗದ ಬಲವೂ ಅಂಥದೇ.

ಗಾಂಧೀಜಿಯ ವಿಚಿತ್ರ ಪ್ರಭಾವದ ತಳ ಅಲ್ಲಿದೆ. ಅವರ ಇಂದ್ರಿಯ ಸಂಯಮ ಆ ಅನಾಸಕ್ತಿಯೋಗದ ಶಾರೀರ ಸ್ವರೂಪ. ಮನಸ್ಸಿಗೆ ಬಂದಾಗ ಗಾಂಧೀಜಿ ಮನಸ್ಸಿಗೆ ಬಂದಷ್ಟೇ ಹೊತ್ತು ನಿದ್ದೆಹೋಗಬಲ್ಲರು. ಸುತ್ತಲೂ ಕಾಂಗ್ರೆಸ್ಸಿನ ಗದ್ದಲ ಮೊಳಗುತ್ತಿರುವಾಗ ವೇದಿಕೆಯ ಮೇಲೆ ಕೂತೇ ಐದು ಹತ್ತು–ನಿಮಿಷ ಲೆಕ್ಕ ಇಟ್ಟು ನಿದ್ದೆಹೋಗುವುದುಂಟು. ರೈಲಿನಲ್ಲಿ ಹಾಯಾಗಿ ನಿದ್ದೆಮಾಡುತ್ತಾರೆ. ಕಾರಿನಲೇ ಮಲಗಿಬಿಡುತೀರಲ್ಲ ಎಂದರೆ 'ಅದು ಸುಖ ವಾಗಿರುತ್ತದೆ; ಕಾರೇ ಏಕೆ, ಒಂಟೆಯ ಮೇಲೆ ಕೂಡಾ ಮಲಗಿದೇನೆ'

ಎನ್ನುತ್ತಾರೆ. ಪಂಡಿತ ಮೋತಿಲಾಲ ನೆಹ್ರೂ ತೀರಿಕೊಂಡಾಗ ಗಾಂಧೀಜೀ ಅಲಹಾಬಾದಿನಲ್ಲಿಯೇ ಇದ್ದರು. ದಹನ ಕರ್ಮವನ್ನು ಮುಗಿಸಿ ಹಿಂದಿರುವಾಗ ಮೋಟಾರಿನಲ್ಲಿ ಗಾಂಧೀಜೀ ನಿದ್ದೆಹೋದರು. ದಾರಿಯಲ್ಲಿ ಏನೋ ಹೆಚ್ಚು ಕಡಮೆ ಆಗಿ ಮೋಟಾರೂ ಢಂ ಎಂದಿತು. ತಲೆಕೆಳಗಾಗಿ ಮಗುಚಿ ಬಿತ್ತು. ಎಲ್ಲರೂ ಕೆಳಗೆ ಬಿದ್ದರು. ಬಿದ್ದವರೆಲ್ಲ ಎದ್ದು ಬಂದು ನೋಡುವಾಗ ರಸ್ತೆಯ ಪಕ್ಕದಲ್ಲಿ ಗಾಂಧೀಜೀ ಹಾಯಾಗಿ ನಿದ್ದೆಹೋಗುತ್ತಿದ್ದರು. ಅವರು ಎದ್ದೇ ಇರಲಿಲ್ಲ. ಆಹಾರದಲ್ಲಿ ಏನೂ ಹೆಚ್ಚು ಕಡಿಮೆಮಾಡದೆ ತಮ್ಮ ತೂಕ ಹೆಚ್ಚು ಕಡಿಮೆಮಾಡಿಕೊಳ್ಳಲು ಬಲ್ಲರು. ಒಂದು ಸಲ ಗಾಂಧೀಜಿಯ ತೂಕ ಬಹಳ ಇಳಿದುಹೋಗಿತ್ತು, ೬೯ ಪೌಂಡು ಆಗಿತ್ತು. ಡಾಕ್ಟರ್ ಬಿಧಾನ ಚಂದ್ರ ರಾಯ್ ನೋಡಿದರು. ೭ ಪೌಂಡು ತೂಕ ಹೆಚ್ಚಾಗಬೇಕು; ಆಹಾರ ಹೆಚ್ಚು ಮಾಡಿ ಎಂದು ಹೇಳಿದರು. ಗಾಂಧೀಜೀ ಅದಕ್ಕೆ ಒಪ್ಪಲಿಲ್ಲ. ಒಂದು ವಾರ ಆದಮೇಲೆ ತೂಕಮಾಡಿದಾಗ ೭ ಪೌಂಡು ತೂಕ ಹೆಚ್ಚಾಗಿತ್ತು.

ಅವರ ಸಮನಿಸಿಕೊಂಡು ಹೋಗುವ ಸ್ವಭಾವ (Compromising nature) ಅನಾಸಕ್ತಿಯ ಮನಃಸ್ವರೂಪ. ಅನಾಸಕ್ತಿಗೆ ತನ್ನದೇ ಸರಿ ಎಂಬ ಹಟವಿಲ್ಲ ಯಾತರ ಹೂವಾದರೇನು ನಾತರದು ಸಾಲದೇ ಎಂಬ ವೈಶಾಲ್ಯವಿದೆ. ಹರಿಯ ಸೇರಲು ಹಲವು ದಾರಿ ಎಂಬ ಅರಿವು ಇದೆ. ಇಂದು ಅಸಹಕಾರಮಾಡಿ ಎಂದವರು ನಾಳೆ ಸಹಕಾರ ಮಾಡಿ ಎಂದರು. ಹಾಗೆ ಅಂದಾಗಲೂ ಹೀಗೆ ಅಂದಾಗಲೂ ಎರಡೂ ಎರಡು ದಾರಿ ಸಿದ್ಧಿಗೆ. ಗಾಂಧೀಜೀ ಇಂಥ ವಿರೋಧಗಳ ಕೂಡಲಿ. ಹಿಂದೆ ಮುಂದೆ ಇಲ್ಲದ ಧ್ಯೇಯವಾದಿ ಆಗಿದ್ದೂ ಸಾಟಿಯಿಲ್ಲದ ವ್ಯವಹಾರ ಕುಶಲಿ. ಒಂದುಕಡೆ ಮಿತಿಗಾಣದ ಕ್ಷಾತ್ರ ಧೈರ್ಯ; ಮತ್ತೊಂದೆಡೆ ಮೀನ ಮೇಷದ ವೈಶ್ಯ ವಿವೇಕ. ಇತ್ತ ಸುಧಾರಣೆಯ ಕ್ರಾಂತಿನಾಥ ಪರಶುರಾಮ; ಅತ್ತ ಸನಾತನ ಸಂಪ್ರದಾಯ ಸಂರಕ್ಷಕ ಶ್ರೀರಾಮ. ಹಳೆಯದರ ಪೂಜೆ ಬಿಟ್ಟಿಲ್ಲ; ಹೊಸದರ ಸೃಷ್ಟಿಗೋ ಎತ್ತಿದ ಕೈ. ವೈರಾಗ್ಯದ ಚಕ್ರವರ್ತಿ ಆಗಿದ್ದೂ ರಾಗಪೂರ್ಣವಾದ ರಾಜಕಾರಣದಲ್ಲಿ ಮುಳುಗಿದಾರೆ ಪಾರ ಲೌಕಿಕದಲ್ಲಿ ಗುರಿ, ಕ್ರಿಯಾರಂಗ ತೀರಾ ಲೌಕಿಕ. ಬೆಳಿಗ್ಗೆ ಧ್ಯಾನದಲ್ಲಿ; ಮಧ್ಯಾಹ್ನ ಕಾಂಗ್ರೆಸ್ ಕಮಿಟಿಯಲ್ಲಿ. ಗಂಭೀರವಾದ ರಾಜಕೀಯ ಚರ್ಚೆ

ನಡೆದಿದ್ದಾಗ ತಟ್ಟನೆ ರೋಗಿಗಳ ಆರೈಕೆಗಾಗಿ ಹೊರಟುಹೋಗುತ್ತಾರೆ. ವೈಸರಾಯ್ ತಮ್ಮ ಸಂಧಾನವನ್ನು ಸಂಪೂರ್ಣವಾಗಿ ತಿರಸ್ಕರಿಸಿದಾಗ ನಗು ನಗುತ್ತ ನಿದ್ದೆಹೋಗುತ್ತಾರೆ. ಆದರೆ ತಮ್ಮ ಅನುಯಾಯಿಗಳು ಯಾರಾದರೂ ಮರೆತು ದೇವಾಲಯ ಪ್ರವೇಶಮಾಡಿದರೆ-ಹರಿಜನರಿಗೆ ಪ್ರವೇಶ ಮಾಡಲು ಅಧಿಕಾರ ಇಲ್ಲದ ಗುಡಿಗಳಿಗೆ ತಮ್ಮವರು ಯಾರೂ ಹೋಗಬಾರದು ಎಂದು ಗಾಂಧೀಜಿಯ ಅಪ್ಪಣೆ-ಕಠೋರವಾದ ಉಪವಾಸವನ್ನೇ ಮಾಡುತ್ತಾರೆ. ಸನ್ಯಾಸಿಯ ವೈರಾಗ್ಯ ಗೃಹಸ್ಥನ ಪ್ರೇಮ ಧರ್ಮಗಳ ಹದವಾದ ಬೆರಿಕೆ. ವಸಿಷ್ಠ ಮಹರ್ಷಿಯ ಧರ್ಮಜೀವನ - ಚಾಣಿಕ್ಯ ಮಂತ್ರಿಯ ಲೌಕಿಕ ಚಾತುರ್ಯಗಳ ಅಪೂರ್ವ ಮೇಳನ. ಅನಾಸಕ್ತಿ ಯೋಗವೇ ಈ ಅದ್ಭುತ ಪರಿಣಾಮದ ಗುಟ್ಟು. ಅಂತೇ ಗಾಂಧೀಜಿಯ ಪ್ರಭಾವ ಅನಿರ್ವಚನೀಯವಾದುದು.*

ಜಗದ್ಧಿತಾಯ ಆತ್ಮನೋ ಮೋಕ್ಷಾಯ ಎಂಬ ಆದರ್ಶ ಎಲ್ಲರಿಗೂ ಒಪ್ಪಿಗೆ ಇದೆ. ಇಹ ಪರ-ಸ್ವಕಾರ್ಯ ಸ್ವಾಮಿಕಾರ್ಯ-ವ್ರತ ಸುಖ, ಇವೆಲ್ಲ ಆ ರೀತಿಯ ಕಲ್ಪನೆ. ವಿಶ್ವಕಲ್ಯಾಣದ ವ್ಯಕ್ತಿಕಲ್ಯಾಣಗಳೆರಡೂ ದೀಪ-ಪ್ರಭೆಗಳಂತೆ. ಬರಿಯ ಆತ್ಮಕಲ್ಯಾಣ ಅರ್ಥವಿಲ್ಲ ಶಬ್ದ, ನಿರ್ಗಂಧ ಚಂದನ; ಆತ್ಮಜ್ಞಾನ ಇಲ್ಲದ ವಿಶ್ವಕಲ್ಯಾಣ ಲೋಕಸಂಗ್ರಹದ ಹೆಸರಿನ ಸೋಗು. ಶಬ್ದ ಇಲ್ಲದಲ್ಲಿ ಅರ್ಥ ಆರಿಸಿದಂತೆ. ಇವೆರಡೂ ಹಾದಿ ಅಪೂರ್ಣವಾದುವು. ನಮ್ಮ ಹಿರಿಯರು ಮೊದಲಿನದಕ್ಕೆ ಪಟ್ಟಕಟ್ಟಿ ಎರಡನೆಯದನ್ನು ಮರೆತರು. ಸಮಾಜ ಸೇವೆಯ ಇಂದಿನ ಕರ್ಮವಾದಿಗಳು ಎರಡನೆಯದು ಒಂದೇ ಸತ್ಯ ಎಂದು 'ಸೊಣಗನಂ ಸಿಂಹಾಸನವೇರಿಸಿ'ದರು. ಗಾಂಧೀಜೀ ಇವೆರಡನ್ನೂ ಮೇಳಯಿಸಿದಾರೆ. ಉಳಿದವರು ಪರಮೈಕಾಂತದ ವೈಯಕ್ತಿಕನಿಷ್ಠೆಯೆಂದು ಕಲಿಸಿದುದನ್ನು ಅವರು ವಿಶ್ವಕಲ್ಯಾಣದ ಸಮಷ್ಟಿಸಾಧನೆಯಾಗಿ ಮಾಡಿದಾರೆ. 'ಎಲ್ಲರದೂ ಒಂದೇ ಆತ್ಮ. ನಾನು ಹೇಗೆ ಪಾಪಕರ್ಮಿಯಿಂದ ಬೇರೆ ಆಗಲಿ ? ಹೇಗೆ ಅಲಿಪ್ತನಾಗಲಿ ? ನನ್ನ ಸತ್ಯಾಗ್ರಹ ಪ್ರಯೋಗ

---

*ನೆತ್ತದಾ ಹಾಸಂಗಿ ಎತ್ತ ಬಿದ್ದರು ದಾಯ ।
ತತ್ವದ ನೆಲೆಯನರಿದಾತನೊಲಿದು ತಾ ।
ನೆತ್ತಿರ್ದಡೇನು ಸರ್ವಜ್ಞ ॥

ದಲ್ಲಿ ಇಡೀ ಮಾನವನ ಜಾತಿಯನ್ನೇ ನಾನು ಸೇರಿಸಿಕೊಳ್ಳಲು ಬಯಸು ತ್ತೇನೆ.' ಇಲ್ಲಿ ತನ್ನ ಪಾಪ ಹರಿಯಲಿ, ತನಗೆ ಮೋಕ್ಷ ಸಿಗಲಿ ಎಂಬ ಭಾವ ಇಲ್ಲ. ಮಂದಿಯ ಪಾಪ ತನ್ನ ತಲೆಯ ಮೇಲೆ ಇರಲಿ. ತನ್ನ ನಾಯಿ ಮಾಡಿದ ತಪ್ಪಿಗೆ ತನಗೆ ಪ್ರಾಯಶ್ಚಿತ್ತ ಆಗಲಿ ಎಂಬ ಭಾವ. ಜಗತ್ತೆಲ್ಲ ಸುಖವಾಗದೆ ನಮಗೆ ಏಕೆ ಸುಖ? ಎಲ್ಲರೂ ಪುಣ್ಯಶಾಲಿಗಳಾಗದೆ ನನಗೆ ಏಕೆ ಪುಣ್ಯ? ಎಂಬ ವಿಶಾಲದೃಷ್ಟಿ. ಆ ಜಗದ್ಧಿತದಲ್ಲೇ ಆತ್ಮ ಕಲ್ಯಾಣವೂ ಇದೆ. ಅದಕ್ಕಾಗಿಯೇ ಅವರಿಗೆ ಗೀತೆಯು ಹಿಂಸೆಯ ಉಪದೇಶ ಅಲ್ಲ, ಅಹಿಂಸೆಯ ಸಂದೇಶ, ವ್ಯಕ್ತಿವಿಕಾಸಕ್ಕೆ ಸರ್ವ ಮಾನವನ ಪ್ರಗತಿಗೆ ಅಹಿಂಸೆ ವಿನಾ ಬೇರೆ ದಾರಿಯೇ ಇಲ್ಲ.

ಅಂತಲೇ ಗಾಂಧೀಜಿಗೆ 'ಭಗವತ್ಸೇವೆಯೇ ಧರ್ಮ' ಅಂದರೆ ಜನ ತೆಯ ಸೇವೆ; ಶುದ್ಧಪ್ರೇಮ.' ಅದು ರಾಗದ್ವೇಷ ಇಲ್ಲದ ಅನಾಸಕ್ತಪ್ರೇಮ. ಜಗತ್ತೆಲ್ಲ ಭಗವಂತನ ಸ್ವರೂಪವೇ ಅಲ್ಲವೆ! ನಶ್ವರವಿರಲಿ ಶಾಶ್ವತವಿರಲಿ ಮಿಥ್ಯೆಯಾಗಲಿ–ಜಗತ್ತು ದೇವರ ಸೃಷ್ಟಿ, ಅವನ ಪ್ರಾಕಟ ರೂಪ. ಕಲಾ ವಿದನ ಕಲಾಕೃತಿಯಲ್ಲಿ ಅವನನ್ನು ಕಾಣದೆ ಬೇರೆ ಎಲ್ಲಿಯೋ ಅರಸುವುದು ಸಹೃದಯತೆಯ ಲಕ್ಷಣವೆ? ರಸಿಕತೆಯ ಗುರುತೆ?

ಮೇಲೆ ಮೇಲೆ ಮನುಷ್ಯ ಪಶುವಾಗಿದಾನೆ. ಎಷ್ಟೇ ವಿದ್ವಾಂಸನಾ ದರೂ ಇಂದ್ರಿಯಗ್ರಾಮ ಎಳೆಯುತ್ತಿದೆ. ಆದರೂ ಒಳಗೆ ಸತ್ಯ ಒಂದು ಹುದುಗಿದೆ. ನಮ್ಮ ಭಾವನಾತರಂಗಗಳಲ್ಲಿ ಬೆರೆತು ತೇಲಿಬರುತ್ತದೆ. ಆ ನಿತ್ಯ ಸತ್ಯ. ಕ್ಷುದ್ರಮಾನವನೂ ದೇವದೇವನಾಗಬಲ್ಲ, ಬೀಜದಲ್ಲಿ ಮರ ಅಡಗಿದಂತೆ ಕೀಳುಮನುಷ್ಯನಲ್ಲೂ ಮಹಾಪುರುಷ ಅಡಗಿದಾನೆ. ಆ ಪುರುಷೋತ್ತಮನ ಇರವಿನ ಅರಿವು ಮುಕ್ತಿ. ಇದಕ್ಕೆ ಆತ್ಮಶುದ್ಧಿ ಬೇಕು. 'ಆತ್ಮಶುದ್ಧಿ ಇಲ್ಲದೆ ಆತ್ಮವತ್ ಸರ್ವಭೂತಾನಿಯ ಐಕ್ಯಸಾಧನೆ ಇಲ್ಲವೇ ಇಲ್ಲ. ಆತ್ಮಶುದ್ಧಿ ಇಲ್ಲದೆ ಅಹಿಂಸಾಧರ್ಮ ಇಲ್ಲ ಪರಮಾತ್ಮ ದರ್ಶನವೂ ಇಲ್ಲ.' ಆತ್ಮಶುದ್ಧಿ ಎಂದರೆ ನಿರ್ವಿಕಾರ. ಕಾಯಾ ವಾಚಾ ಮನಸಾ ರಾಗ ನಿಗ್ರಹ. ಅಂದರೆ ಅನಾಸಕ್ತಿ. ಆತ್ಮಮೋಕ್ಷಕ್ಕಾಗಿ ಆತ್ಮ ಶುದ್ಧಿ; ಜಗದ್ಧಿತಕ್ಕಾಗಿ ಸ್ವಾರ್ಥತ್ಯಾಗ.

ಮಾನವನು ಹುಲುಮರ್ತ್ಯನಲ್ಲ. ಯೋಗಭ್ರಷ್ಟನಾದ ದೇವತೆ.

ಸ್ವರ್ಗ ಮಾನವನ ಆತ್ಮಜ್ಯೋತಿ. ಅವನು ಹಚ್ಚಿದ ಜ್ಞಾನದ ನಿತ್ಯ ನಂದಾದೀಪ. ಆ ದೀಪವನ್ನು ಇಲ್ಲಿ–ಈ ಭೂಮಿಯ ಮೇಲೆ–ಹಚ್ಚಲು ಬೇಕು. ಆ ಕ್ಷೀರಸಾಗರದ ಆನಂದ ಇಲ್ಲಿ ಹರಿಯಲು ಬೇಕು.

ಇದು ಬರಿಯ ಕನಸೇ ಆಗಬಹುದು. ಉಳಿದ ಎಲ್ಲ ವೇದಾಂತದ ಕನಸುಗಳಂತೆ ಇದೂ ಒಂದು ಮನೋಹರವಾದ ಕನಸು. ಅವಕ್ಕೂ ಇದಕ್ಕೂ ಭೇದ ಇಷ್ಟೇ. ಅದರಲ್ಲಿ ಮಾನವನು ವೈಕುಂಠಕ್ಕೆ ಏರಬೇಕು. ಇದರಲ್ಲಿ ವೈಕುಂಠವನ್ನು ಇಲ್ಲಿಯೇ ಸ್ಥಾಪಿಸುವ ಮಹಾ ಸಾಹಸ.

ಅದೇ ಗಾಂಧೀಜಿಯ ಕನಸು. ಅನಾಸಕ್ತಿಯೋಗವೇ ಅದರ ಹಾದಿ.

ಈ ಹಾದಿ ಹಿಡಿದು ಗಾಂಧೀಜಿ ತಮ್ಮ ಹೆಸರನ್ನು ಋಷಿ ಮುನಿದ್ರಷ್ಟಾರರ ಪಟ್ಟಿಯಲ್ಲಿ ಸೇರಿಸಿದ್ದಾರೆ. ಅದಕ್ಕೆ ಅವತಾರದ ಬಣ್ಣ ಬಳಿದಿದಾರೆ. ಜಗತ್ತಿನ ಮೂಲೆಮೂಲೆಯಲ್ಲೂ ಅವರ ಅನಾಸಕ್ತಿಯ ಅಮರ ತೇಜಸ್ಸು ಹರಡಿದೆ.

ಕರುಣಾಳು ಬೆಳಕೆ

ಸಾಧಾರಣವಾಗಿ ಮನುಷ್ಯನ ನೋಟ ಹೊರಗೆ ಹರಿಯುತ್ತದೆ. ಪ್ರಪಂಚದ ಕೊನೆಗಾಣದ ಚೆಲುವು ನಲವುಗಳನ್ನು ನೋಡಿ ಮುಗ್ಧನಾಗುತ್ತಾನೆ. ಅವನ ಕಣ್ಣು ಆ ಚೆಲುವಿನಲ್ಲಿ ನಟ್ಟುಹೋಗುತ್ತದೆ; ಕಣ್ಣಿನ ಹಿಂದೆ ಮನಸ್ಸು ಹರಿದು ಆ ನಲವಿನಲ್ಲಿ ಆಡುತ್ತದೆ. ಬರೀ ಹೊರಗೇ ಅಲ್ಲದೇ ಒಳಗೆ ಏನಾದರೂ ಉಂಟೇ ಎಂಬ ಕುತೂಹಲವೇ ಹುಟ್ಟುವುದಿಲ್ಲ.

ಸ್ವಲ್ಪ ವಿಚಾರಪರರಾದವರಿಗೆ ಒಮ್ಮೊಮ್ಮೆ ಇದರೊಳಗೆ ಏನಾದರೂ ಉಂಟೇ ಎಂಬ ಪ್ರಶ್ನೆ ಬರುತ್ತದೆ. ಸಕ್ಕರೆ ಸವಿ, ಆಲಯ ಬಯಲುಗಳ ಕೂಟಪ್ರಶ್ನೆ ಕನಕದಾಸನಿಗೆ ಬಿದ್ದಂತೆ ಈ ಹೊಗೆಯಲ್ಲಿ ಬೆಂಕಿಯಿಲ್ಲದೆ ಉಂಟೆ ಅನಿಸುತ್ತದೆ. ಒಳಗು ಹೊರಗುಗಳ ಬೆಳಕು ನೆಳಲುಗಳಂತೆ. ಈ ಜಿಜ್ಞಾಸೆಯಲ್ಲಿ ನಮ್ಮನ್ನು ಮೀರಿದ ಮಹಾಶಕ್ತಿಯೊಂದು ಇದೆ ಎನ್ನಿಸುತ್ತದೆ. ಅದನ್ನು ಹಲವು ಜನ ಹಲವುರೀತಿಯಲ್ಲಿ ಅರ್ಥಮಾಡಿಕೊಂಡಿ

ದಾರೆ. ಅದನ್ನು ನಿರಾಕಾರ ನಿರ್ಗುಣವಾದ 'ತತ್' ಎಂದವರುಂಟು; ಸಾಕಾರಸಗುಣವಾದ 'ನಾರಾಯಣ'ನೆಂದವರುಂಟು. ಇನ್ನೂ ಅನೇಕ ವಿಧದಲ್ಲಿ ಕರೆದವರುಂಟು. ಹಾಗೆಲ್ಲ ಯಾವುದೂ ಇಲ್ಲ, ಬರೀ ನಿಸರ್ಗ ಇದು ಎಂದವರೂ ಇಲ್ಲದಿಲ್ಲ.

ಯಾರು ಏನೇ ಹೇಳಲಿ ಗಾಂಧೀಜಿಗೆ ಮಾತ್ರ ದೇವರು ಸತ್ಯ, ಎಲ್ಲದರ ನೆಲೆ. ಆ ನಂಬಿಗೆಯೇ ಅವರ ಅದ್ಭುತ ಜೀವನದ ತಳಹದಿ. ಅವರ ಎಲ್ಲ ಕೆಲಸಕ್ಕೂ ಭಗವಂತನೇ ಸಾಕ್ಷಿ. 'ಯಾವುದನ್ನೂ ನೋಡದೆ ಬಿಡದ ಸರ್ವಸಾಕ್ಷಿಯೊಬ್ಬನ ಇರವನ್ನು ಅವರು 'ಗುರುತಿಸಿಕೊಳ್ಳದ ಗಳಿಗೆಯೇ ಇಲ್ಲ.' ಅವರ ಸರ್ವಬಲವೂ ಅವನೇ. 'ದೇವರು ನೀಡಿದ ಬಲವಲ್ಲದೆ ನನಗೆಲ್ಲಿಯ ಬಲ?' 'ನನ್ನ ಮಹಾಸ್ತ್ರವೆಂದರೆ ಮೂಕ ಪ್ರಾರ್ಥನೆ.' ಅದೇ ಅವರ ಚರಮಬಲ. ಆದುದರಿಂದಲೇ ಕೈಮೀರಿ ಬಂದಾಗ, ದಾರಿಗಾಣದಾದಾಗ ಧರ್ಮಸಂದೇಹ ಕಂಡಾಗ, ಅವರು ಅದನ್ನು 'ದೇವರ ದಿವ್ಯ ಹಸ್ತಗಳಲ್ಲಿ ಒಪ್ಪಿಸುತ್ತಾರೆ. 'ರಾಮನೇ ನಿರ್ಬಲರ ಬಲ'ವಲ್ಲವೆ. ಧರ್ಮಸಮ್ಮೂಢನಾದ ನರನಿಗೆ ಶ್ರೀಕೃಷ್ಣ ಎಷ್ಟು ಸತ್ಯವೂ ಸಮೀಪವೂ ಆಗಿದ್ದನೋ ಗಾಂಧೀಜಿಗೆ ದೇವರು ಹಾಗೆಯೇ. ಶಿಷ್ಯಸ್ತೇಹಂ ಶಾಧಿಮಾಂ ತ್ವಾಂ ಪ್ರಪನ್ನಂ ಎಂದು ಅವನು ಗೀತಾಚಾರ್ಯರನ್ನು ಮೊರೆಹೋದ. ಗಾಂಧೀಜಿಯ ಬಾಳಿನಲ್ಲಿ ಅದು ದಿನಾಲೂ ನಡೆವ ದೃಶ್ಯ.

'ಎಲ್ಲರಿಗೂ ದೇವರಲ್ಲಿ ನಂಬಿಗೆಯಿದೆ. ಅನೇಕವೇಳೆ ನಂಬಿಗೆ ಇದೆ ಎಂಬುದು ಅವರಿಗೇ ಗೊತ್ತಿರುವುದಿಲ್ಲ. ಮನುಷ್ಯನಿಗೆ ತನ್ನಲ್ಲಿ ನಂಬಿಗೆ ಇಲ್ಲವೇ? ಅದನ್ನೇ ಪರಕೋಟಿ ಪಾಲು–ಅನಂತವಾಗಿ ಬೆಳೆಸಿದರೆ ಅದೇ ದೇವರು. ಚೇತನಾ ಚೇತನಾಪ್ರಾಣಿಸ್ತೋಮಸಾಕಲ್ಯವೇ ದೇವರು-' ನಮ್ಮ ಸುತ್ತಲೂ ಇರುವದೆಲ್ಲ ಸದಾ ಬದಲಾಗುತ್ತಿದೆ, ಸದಾ ಸಾವಿಗೆ ಬಲಿಯಾಗುತ್ತಿದೆ. ಇದೆಲ್ಲದರ ನಡುವೆ ಬದಲಾಗದ, ಎಲ್ಲವನ್ನೂ ಹಿಡಿದಿರುವ ಸೃಷ್ಟಿಸುವ ಸಾಯಿಸುವ, ಪುನಃ ಸೃಷ್ಟಿಸುವ ಮಹಾ ಚೈತನ್ಯ ಶಕ್ತಿಯೊಂದಿದೆ. ಆ ಶಕ್ತಿಯೇ ದೇವರು. ಇಂದ್ರಿಯಗಳಿಗೆ ಗೋಚರವಾಗುವ ಯಾವ ವಸ್ತುವೂ ಶಾಶ್ವತವಲ್ಲವೆಂಬುದು ತಿಳಿಯುತ್ತಲಿದೆ. ಅಂತಲೇ ದೇವರೊಬ್ಬನೇ ನಿಜ.' ಆ ಶಕ್ತಿ ಅವರ್ಣನೀಯ, ಗೂಢ. ಅದು ಸರ್ವವ್ಯಾಪಿ.

ಕಣ್ಣಿಗೆ ಕಾಣದಿದ್ದರೂ ಆ ಶಕ್ತಿ ಇದೆ ಎಂದು ನನಗೆ ಅನಿಸುತ್ತಿದೆ. ಅದನ್ನು ಪ್ರಮಾಣಮಾಡಿಕೊಡಲು ಸಾಧ್ಯವಿಲ್ಲ. ಇಂದ್ರಿಯಗೋಚರವಾದ ಪದಾರ್ಥಗಳ ಹಾಗಲ್ಲ ಅದು. ಅದು ಇಂದ್ರಿಯಾತೀತ.' 'ಈ ಕ್ಷಣಿಕದಲ್ಲಿ ಹುದುಗಿರುವ ಪರಮತತ್ತ್ವ ಯಾವಾಗಲೂ ಪ್ರಕಟವಾಗುತ್ತಿದೆ. ಅದರ ಅನ್ವೇಷಣವೇ ಪರಮ ಪುರುಷಾರ್ಥ.'

ಈ ಮಾತನ್ನು ತರ್ಕದಿಂದ ಸಾಧಿಸಬಂದೀತೇ! ಬುದ್ಧಿಗೆ ದೇವರು ಎಟುಕುತ್ತಾನೆಯೇ? ಈ ಸಂದೇಹ ಇಂದಿನದಲ್ಲ. ಮನುಷ್ಯನ ಜೊತೆಯಲ್ಲೇ ಹುಟ್ಟಿದ ಪ್ರಶ್ನೆ ಅದು. ಆಸ್ತಿಕತೆ ನಾಸ್ತಿಕತೆಗಳು ಅದರ ಪರಿಣಾಮ. ಬರೀ ಬುದ್ಧಿಗೆ ನಾಸ್ತಿಕತೆಯೊಂದು ತೆರೆ. ಆ ತೆರೆಯನ್ನು ಹರಿದು ಬುದ್ಧಿಯಿಂದ ಬ್ರಹ್ಮವನ್ನು ಅರಿತವರು ಒಬ್ಬಿಬ್ಬರು ಇದಾರೆ. 'ಆದರೆ ಬರೀ ಬುದ್ಧಿಗೆ ಎಟುಕುವ ದೇವರು ದೇವರಲ್ಲ. ಹೃದಯವನ್ನಾಳಿ ಅದನ್ನು ಶುದ್ಧ ಮಾಡಬಲ್ಲವನಾದರೆಯೇ ದೇವರು. ಇಂದ್ರಿಯಾತೀತವಾದ ಅನುಭವವೇ ಅದರ ಸತ್ಯಸಾಕ್ಷಿ. ಹೊರಗಣ ಸಾಕ್ಷ್ಯದಿಂದ ಅದನ್ನು ಪ್ರಮಾಣಿಸಲಾಗದು. ತಮ್ಮೊಳಗೇ ದೇವರನ್ನು ಗುರುತಿಸಿಕೊಂಡವರ ಬಾಳು ಬುದುಕಿನಲ್ಲಿ ಕಾಣುವ ಭೇದದಲ್ಲಿ–ಆ ಬದಲಾವಣೆಯಲ್ಲಿ–ಅದರ ಪ್ರಮಾಣವಿದೆ. ಇಂಥ ಪ್ರಮಾಣ ಎಲ್ಲ ದೇಶದ ಎಲ್ಲ ಕಾಲದ ಋಷಿ ಪೈಗಂಬರರ ಧಾರಾವಾಹಿಯಾದ ಅನುಭವದಲ್ಲಿ ಕಂಡುಬರುತ್ತದೆ. ಈ ಪ್ರಮಾಣವನ್ನು ತಿರಸ್ಕರಿಸುವುದೆಂದರೆ ತನ್ನನ್ನೇ ತಾನು ನಂಬದಂತೆ.'

ಬುದ್ಧಿಗೆ ನಿಲುಕದ್ದು ತರ್ಕಕ್ಕೆ ಸಿಲುಕದ್ದು ಬರೀ ಶೂನ್ಯ. ಅಂಥ ದೇವರಿಂದೇನಾಗಬೇಕು. ಹೀಗೆ ಮನುಷ್ಯಬುದ್ಧಿಗೆ ಹೊಳೆಯುತ್ತದೆ ಸಾಮ್ಯವಾದಿಗಳಾದ ತರುಣರನೇಕರಿಗೆ ಕರ್ಮವೇ ದೇವರಾಗಿ ಕಾಣುತ್ತದೆ ಕ್ರಿಯೆ-ಪ್ರತಿಕ್ರಿಯೆ, ಕರ್ಮ–ಕಾರಣ–ಕರ್ಮಗಳ ಚಕ್ರವೇ ಅದರ ಸತ್ಯ. ಹೃದಯಪರಿವರ್ತನ ಸುಳ್ಳು. ಒಂದುವೇಳೆ ನಡೆಯಲ್ಲಿ ವ್ಯತ್ಯಾಸ ಕಂಡರೆ ಅದು ಭೌತಿಕ ವ್ಯಾವಹಾರಿಕ ಕಾರಣಗಳ ಲೌಕಿಕವ್ಯಾಪಾರ. ನಮ್ಮ ಕೈಲಾಗದಾಗ ನಾವು ತಗ್ಗುತ್ತೇವೆ, ಕೈಲಾದರೆ ಹಾರುತ್ತೇವೆ; ಆದರೆ ಅಡಿ ಇಲ್ಲದಿರೆ ಮುಡಿ. ಇದರಲ್ಲಿ ದೇವರೇನು ಅವನ ಅನುಗ್ರಹವೇನು? ಇಸ್ಲಾಮಿಯಾ ಕಾಲೇಜಿನ ಪ್ರೊಫೆಸರರೊಬ್ಬರು ಇಂಥ ಸಂದೇಶಗಳನ್ನು ಒಮ್ಮೆ

ಗಾಂಧೀಜಿಯ ಮುಂದೆ ಇಟ್ಟರು. ಗಾಂಧೀಜಿಗೆ ತುಂಬಾ ನೋವಾಯಿತು. ದೇವರದು ಕಾಣದ ಕೈಯಾದರೂ ಸಲಹುವ ಕೈ. ವಿಪತ್ತಿನಲ್ಲಿ ಪೊರೆವ ಕೈ. ಅದನ್ನು ಚರ್ಚಿಸುತ್ತ ಕೂತರೆ ಬಂದ ಫಲವೇನು ಎಂದರು.

'ಇದು ಚರ್ಚೆಗೆ ಯೋಗ್ಯವೆ? ತರ್ಕದಿಂದ ಇದನ್ನು ಸಿದ್ಧಮಾಡಿ ಇತರರಿಗೆ ಒಪ್ಪಿಸುವುದೆಂದರೆ ನಾನು ಸೋತೆ; ನನ್ನ ಕೈಲಾಗದು. ಆದರೆ ಇದು ಮಾತ್ರ ನಿಜ; ನೀನೂ ನಾನೂ ಈ ಕೋಣೆಯಲ್ಲಿ ಕೂತು ಮಾತನಾಡುತ್ತಿರುವುದು ಎಷ್ಟು ದಿಟವೋ ಅದಕ್ಕಿಂತ ಹೆಚ್ಚಾಗಿ ನನಗೆ ದೇವರ ಅಸ್ತಿತ್ವ ದಿಟ. ಗಾಳಿ ನೀರಿಲ್ಲದೆ ನಾನು ಬದುಕಿದರೂ ಬದುಕಬಹುದು, ದೇವರನ್ನು ಬಿಟ್ಟು ಬಾಳಲಾರೆ, ಬದುಕಲಾರೆ. ನನ್ನ ಕಣ್ಣು ಕಿತ್ತಿಹಾಕಿ, ನಾನೇನು ಸಾಯುವದಿಲ್ಲ; ನನ್ನ ಮೂಗೇ ಕುಯ್ಯಿರಿ ನನಗೆ ಸಾವು ಬಾರದು. ನನ್ನ ಭಕ್ತಿ ಆಸ್ತಿಕ್ಯಗಳನ್ನು ಸುಡಿ; ನಾನು ಸತ್ತೆ.'

ಇಂಥಾ ಗಾಢಭಕ್ತಿಗೆ ಅಚಲ ವಿಶ್ವಾಸ ಬೇಕು. ಅದೇ ಪೀಠಿಕೆ. 'ಎಲ್ಲವನ್ನೂ ಮೀರಿ ನಿಲ್ಲುವ ನಂಬಿಗೆಯೇ ನಮ್ಮ ಸನಾತನೋಪಾಯ. ನನ್ನ ಭಕ್ತಿ ನನ್ನನ್ನು ಕುತ್ತಿನಿಂದ ಕಾಯ್ದಿದೆ, ಕಾಯುತ್ತಿದೆ. ಎಂದೂ ಅದು ನನ್ನ ಕೈಬಿಟ್ಟಿಲ್ಲ.' 'ಭಕ್ತಿ ಬಾಹ್ಯಪ್ರಮಾಣ ಸಾಧ್ಯವಲ್ಲ. ಆದ್ದರಿಂದ ಪ್ರಪಂಚದ ನೈತಿಕ ನಿಯಮವನ್ನೂ ಸತ್ಯಪ್ರೇಮಗಳೇ ಆ ನಿಲಯದ ಶಿಖರಗಳೆಂಬುದನ್ನೂ ನಂಬುವುದೇ ರಾಜಮಾರ್ಗ.

ಆದರೂ ತರ್ಕದಿಂದ ಸ್ವಲ್ಪಮಟ್ಟಿಗೆ ದೇವರ ಅಸ್ತಿತ್ವವನ್ನು ಸಾಧಿಸಲೂ ಬಹುದು. 'ನಾವು ಇರುವುದೂ ನಮ್ಮ ತಂದೆ ತಾತಂದಿರೂ ಅವರ ಹಿರಿಯರೂ ಇದ್ದುದೂ ನಿಜವಾದರೆ ಇಡೀ ಸೃಷ್ಟಿಯ ತಂದೆಯೊಬ್ಬನ ಅಸ್ತಿತ್ವವನ್ನು ನಂಬುವುದು ಸರಿ.' 'ಸಾಧಾರಣವಾಗಿ ನಮ್ಮನ್ನು ಯಾರು ಆಳುತ್ತಾರೆಂಬುದೂ ಹೇಗೆ ಅಥವಾ ಏಕೆ ಆಳುತ್ತಾರೆಂಬುದೂ ನಮಗೆ ತಿಳಿಯದು. ಏನೋ ಒಂದು ಪ್ರಭುತ್ವ ನಮ್ಮನ್ನು ಆಳುತ್ತಿದೆಯೆಂಬುದು ಮಾತ್ರ ಗೊತ್ತು. ಮೈಸೂರಿನ ಪ್ರವಾಸದಲ್ಲಿ ನಾನು ನೋಡಿದ ರೈತರಲ್ಲಿ ಅನೇಕರಿಗೆ ತಮ್ಮ ಪ್ರಭು ಯಾರೆಂಬುದೇ ಗೊತ್ತಿರಲಿಲ್ಲ. ಯಾರೋ ದೇವಾಂಶಸಂಭೂತರೊಬ್ಬರು ಆಳುತ್ತಿದಾರೆಂದು ಹೇಳಿದರು. ಈ ಬಡ ಜನರಿಗೆ ತಮ್ಮ ಮಹಾರಾಜರು ಯಾರೆಂಬುದೇ ಗೊತ್ತಿರದಿದ್ದರೆ ಅಲ್ಪನಾದ ನನಗೆ ರಾಜರ ರಾಜನಾದ

ದೇವರ ನೆಲೆ ತಿಳಿಯದೆ ಇದ್ದರೆ ಅಚ್ಚರಿಯೇನು? ವೈಸೂರಿನ ಆ ಬಡ ಜನಕ್ಕೆ ಗೊತ್ತಿದ್ದ ರೀತಿಯಲ್ಲಿ ಈ ಜಗತ್ತಿನಲ್ಲಿ ಕ್ರಮವೊಂದು ಇದೆಯೆಂದೂ ಚರಾಚರಾವನ್ನೆಲ್ಲ ಆಳುವ ವ್ಯತ್ಯಾಸರಹಿತವಾದ ನಿಯಮವೊಂದು ಇದೆ ಯೆಂದೂ ನನಗೆ ಅನಿಸುತ್ತದೆ. ಆ ನಿಯಮವೇನು ಕುರುಡಲ್ಲ; ಚೇತನ ಪ್ರಾಣಿಗಳನ್ನು ಕುರುಡುನಿಯಮ ಆಳಲಾರದು. ಸಮಸ್ತ ಪ್ರಾಣವನ್ನೂ ಆಳುವ ಆ ನಿಯಮವೇ ದೇವರು. ದೇವರು ಬೇರೆ, ಅವನ ನಿಯಮು ಬೇರೆ ಅಲ್ಲ, ಎಲ್ಲಾ ಒಂದೇ.'

ಈ ಶಕ್ತಿ, ಈ ನಿಯಮ ಕಠೋರವೋ ಕರುಣೆಯದೋ? ಅದು ಕೇವಲ ಕರುಣಾಪೂರ್ಣವಾದುದು. ಅಗಾಧವಾದ 'ಸಾವಿನ ನಡುವೆ' ಅನಂತವಾಗಿ 'ಅಮೃತಪ್ರಾಣ ಸಾಗುತ್ತಲೇ ಇರುವದನ್ನು ನಾವು ನೋಡು ತ್ತಿಲ್ಲವೆ? ಅಸತ್ಯದ ನಡುವೆ ಸತ್ಯವೂ ಕತ್ತಲೆಯ ನಡುವೆ ಬೆಳಕೂ ತಲೆ ಎತ್ತಿ ನಿಂತೇ ಇವೆ. ಇದರಿಂದಲೇ ಗುರುತಿಸಿಕೊಳ್ಳಬಹುದು. ದೇವರು ಜ್ಯೋತಿ, ಸತ್ಯ.' ಗಾಂಧೀಜಿಗೆ ದೇವರು ಕಲ್ಯಾಣಗುಣಸಂಪನ್ನ, ನೀತಿಯ ನಿಕ್ಷೇಪ. ಅವನ ನಿಯಮ ಕಠೋರವಾದುದು; ಬಿತ್ತಿದ್ದನ್ನೇ ಬೆಳೆದುಕೊಡುವ ನಿಷ್ಠುರತೆ ಅದರದು. ಮಾಡಿದವನಿಗೆ ಮಣಿಯಂಥ ಕಡು ಬನ್ನು ತಿನಿಸಿಯೇಬಿಟ್ಟಿತು. ಆದರೆ ದೇವರು ನಿಗ್ರಹದ ನಿಯಮವನ್ನು ಮೀರಿ ನಿಂತಿದಾನೆ; ಅವನು ಅನುಗ್ರಹಸಮರ್ಥ. 'ದೇವರು ಪ್ರೇಮಮಯ. ಶುಭದ ಶಿವದಗೋಪುರ.' 'ಅವನು ತಾಳ್ಮೆಯ ಮೂರ್ತಿ' ಈ ಹಾದಿಯ ಮೇಲೆ ಗಾಂಧೀಜೀ ದೇವರು ಸಗುಣನೆಂಬ ನಿಲುಕಿಗೆ ಬರುತ್ತಾರೆ.

ದೇವರ ಕಲ್ಯಾಣಗುಣಗಳಲ್ಲಿ ಆರ್ತತ್ರಾಣಪರಾಯಣತೆಯೇ ಮುಖ್ಯವೆಂದು ಸಗುಣವಾದ ಹೇಳುತ್ತಿದೆ. ಕೋತಿಯ ಮರಿ ತನ್ನ ತಾಯ ಹೊಟ್ಟೆಗೆ ಅವಚಿಕೊಂಡರಾಯಿತು; ಅದರ ಇಡೀ ಯೋಗಕ್ಷೇಮ ತಾಯಿಗೆ ಸೇರಿದುದು. ಭಕ್ತ ಭಗವಂತರ ಮಾತೂ ಹಾಗೆಯೇ. ಗಾಂಧೀಜೀ ಈ ಮರ್ಕಟ ಕಿಶೋರ ನ್ಯಾಯಕ್ಕಿಂತ ತುಸು ಮುಂದೆ ಹೋಗುತ್ತಾರೆ. ಅವರಿಗೆ 'ರಾಮ ನಿರ್ಬಲರ ಬಲ.' ಅವನಿಗೆ ಸಾವಿರ ಕಣ್ಣು; ನಮಗೆ ತಿಳಿಯದೆಯೇ ನಮ್ಮನ್ನು ಕಾಯುತ್ತಾನೆ. 'ಮನುಷ್ಯ ಎಷ್ಟು ಪ್ರಯತ್ನ ಮಾಡಿದರೂ ವಿಕಾರಹೊಂದುತ್ತಾನೆಂಬುದು ನಮಗೆ ಗೊತ್ತಿದೆ.' ಇಂದ್ರಿಯ

ಗ್ರಾಮವು ಬಲವಾನ್ ; ಅಂಥ ಹೊತ್ತಿನಲ್ಲಿ ದೇವರು ಅಡ್ಡನಿಂತು ಕಾಯು ವುದನ್ನೂ ನಾವು ಬಲ್ಲೆವು. ಈಶ್ವರಾನುಗ್ರಹದಿಂದ ಕರ್ತನಿಗೂ ಆತನಿಗೆ ಹೊಂದಿದವರಿಗೂ ಹತ್ತದೆ ಹೋಗುವ ಕೆಲವು ಕರ್ಮಗಳಿವೆ. ಹಾಗೆ ತಪ್ಪಿ ಹೋದಮೇಲೆ ಸರಿಯಾದ ತೀರ್ಪುಬಂದೊಡನೆ ಆ ರಕ್ಷಣೆಗಾಗಿ ಅವನು ಈಶ್ವರಾನುಗ್ರಹವನ್ನು ಮನನಮಾಡಿಕೊಳ್ಳುತ್ತಾನೆ.' ಆ ಘಟನೆಗಳಲ್ಲಿ 'ನನ್ನ ಪ್ರಯತ್ನಕ್ಕಿಂತ ನನ್ನ ಅದೃಷ್ಟವೇ ನನ್ನನ್ನು ಕಾಯ್ದಿತು.' ಅನೇಕ ವೇಳೆ ನಮ್ಮ ಪ್ರಯತ್ನ ಸೊನ್ನೆ. 'ಆ ಸಮಯದಲ್ಲಿ ದೇವರು ಕಾಪಾಡಿದ ನೆಂಬುದು ನಮಗೆ ತಿಳಿಯದು. ಅನುಭವದಿಂದಲೇ ಅದು ತಿಳಿದೀತು.' ಒಂದು ಸಲ ಪಾಪದಲ್ಲಿ ಕಾಲಿಡಲಿದ್ದಾಗ ಗಾಂಧೀಜಿಯ ಗೆಳೆಯನೊಬ್ಬನ 'ಹೃದಯದಲ್ಲಿ ದೇವರು ಪ್ರವೇಶಿಸಿದ.' ಅದಕ್ಕೆ ಅಡ್ಡಿಯಾಗಿ ನಿಂತ. ಇನ್ನೊಂದು ಪ್ರಸಂಗದಗ ಒಬ್ಬ ತುಂಟ ಅಡಿಗೆಯ ಪರಿಚಾರಕ ಅವರಿಗೆ 'ದೇವರು ಕಳಿಸಿದ ದೂತ'ನಾದ; ಅವರನ್ನು ಅಧರ್ಮದಿಂದ ಉಳಿಸಿದ. ಒಮ್ಮೆ ಅವರ ಮಗ ಮಣಿಲಾಲನಿಗೆ ತುಂಬಾ ಕಾಯಿಲೆಯಾಗಿತ್ತು. ಗಾಂಧೀಜಿಗೆ ಜಲಚಿಕಿತ್ಸೆಯಲ್ಲಿ ತುಂಬಾ ನಂಬಿಗೆ. ಎಲ್ಲರೂ ಈ ವೈದ್ಯ ವನ್ನು ಹುಚ್ಚು ಎಂದರು. ಗಾಂಧೀಜೀ ತಮ್ಮ ಪಿತ್ತವನ್ನೇ ಕೊನೆಗಾಣಿಸಿ ದರು. ಮಣಿಲಾಲ ಬದುಕಿದ. 'ಅದು ದೇವರ ಕೃಪೆ.' ಇನ್ನೊಮ್ಮೆ ಜಾಂಜಿಬಾರಿನಲ್ಲಿ. ಇವರು ಪ್ರಯಾಣಮಾಡುತ್ತಿದ್ದ ಹಡಗಿನ ಕಪ್ತಾನ ಅವರನ್ನು ನೀಗ್ರೋ ವಿಹಾರವೊಂದಕ್ಕೆ ಕರೆದೊಯ್ದ. ಅಲ್ಲಿನ ಕುಂಟಲ ಗಿತ್ತಿಯೊಬ್ಬಳು ಇವರಿಗೆ ಒಂದು ಕೋಣೆ ತೋರಿಸಿ ಒಳಗೆ ನೂಕಿದಳು. 'ನಾಚಿಕೆಯಿಂದ ನಾನು ದಂಗುಬಡಿದು ಮೂಕನಾಗಿ ನಿಂತೆ. ಪಾಪ, ಆ ಹೆಂಗಸು ನನ್ನನ್ನು ಏನೆಂದುಕೊಂಡಳೋ ದೇವರೇ ಬಲ್ಲ. ಕಪ್ತಾನ ಕರೆದಾಗ, ಒಳಗೆ ಹೋದವನು ಹೋದಂತೆಯೆ ಹೊರಗೆ ಬಂದೆ. ದಯಾ ಪೂರ್ಣನಾದ ದೇವರೇ ನನ್ನನ್ನು ಕಾಪಾಡಿದ.'

ಆ ನಾಚಿಕೆಯಲ್ಲಿ ದೇವರ ಕೃಪೆಯಿದೆ. 'ಈಶ್ವರನೇ ಅಡಿಗೆಯವ ನನ್ನ ಪ್ರೇರಿಸಲಿಲ್ಲವೆನ್ನಲು ಬಂದೀತೆ?' ಆ ಗೆಳೆಯನ ಎದೆಯಲ್ಲಿ ದೇವರು ಮೂಡದಿದ್ದರೆ ವೇಶ್ಯಾಗೃಹದ 'ಭೀಭತ್ಸವಿನೋದದಲ್ಲಿ ಕಡುಜಾಣ'ನಾದ ಅವನಿಗೆ ಇವರ ಮೇಲೇಕೆ ಕನಿಕರ ಹುಟ್ಟಬೇಕು? ಮೊಂಡಬಾಲದ ನರಿ

ಇನ್ನೊಂದರ ಬಾಲ ಉದ್ದವಾಗಿದ್ದರೆ ಸಹಿಸೀತೇ? ವಿಗ್ರಹದ ಹೊಕ್ಕಳಲ್ಲಿ ಕೈಯಿಟ್ಟು ಚೇಳು ಕಡಿಸಿಕೊಂಡ ಕೋಮಟಿಗೆ ಹಿಂದಿನವರು ಕಡಿಸಿಕೊಳ್ಳದೆ ಇರಲಿ ಎಂಬ ಸದ್ಬುದ್ಧಿ ಹುಟ್ಟೀತೇ? 'ದೇವರು ಸಣ್ಣಪುಟ್ಟದ ಸಂದರ್ಭಗಳಲ್ಲೂ, ಕ್ಷುದ್ರವಿಷಯದಲ್ಲೂ ಪ್ರಕಟವಾಗುತ್ತಲೇ ಇದಾನೆ.' ನಮ್ಮ ಕ್ಷುದ್ರಬುದ್ಧಿಗೆ ಅದರ ಅರಿವು ಆಗುವದಿಲ್ಲ, ಅಷ್ಟೆ.

ಇಂಥ ಪ್ರಸಂಗ ಎಷ್ಟೋ ಎಲ್ಲರ ಬಾಳಿನಲ್ಲೂ ನಡೆಯುತ್ತವೆ. ಘೋರವಾದ ಆಪತ್ತಿನಲ್ಲಿ ಶುದ್ಧಸ್ವಭಾವಿಗೆ ತಪ್ಪದೆ ನೆರವು ಒದಗುತ್ತದೆ. 'ಈಶ್ವರ ರಕ್ಷಿತನಿಗೆ ಯಾವಾಗಲೂ ಅಪಾಯವಿಲ್ಲ.' ನ ಮೇಭಕ್ತಃ ಪ್ರಣಶ್ಯತಿ ಎಂದು ದೇವರು ಅಭಯಕೊಟ್ಟಲ್ಲವೆ? ಕಬೀರದಾಸನಿಂದ ದೇವರೇ ಅರಿವೆ ಕೊಂಡನಂತೆ. ಭಕ್ತರಾಮದಾಸರ ಸೆರೆ ಬಿಡಿಸಲು ಜೀವ ಉಳಿಸಲು ರಾಮಲಕ್ಷ್ಮಣರು ಹಣವನ್ನು ತಂದುಕೊಟ್ಟರು. ಪುರಂದರದಾಸರ ಬಳಿ ಮೂಗುತಿ ವ್ಯಾಪಾರಕ್ಕೆ ದೇವರೇ ಬಂದ. ಒಬ್ಬ ಭಕ್ತನ ಮನೆಗೆ ಆಹಾರ ಪದಾರ್ಥ ಹೊತ್ತಿಗೆ ಸರಿಯಾಗಿ ಎಲ್ಲಿಂದಲೋ ಬಂದು ಅವರ ಮಾನ ಉಳಿಯಿತು. ಇನ್ನೊಂದುಕಡೆ ಅಬಲೆಯರ ಮೇಲೆ ದುಷ್ಟರು ಕೈಮಾಡಿದಾಗ ಯಾರೋ ಬಂದು ಕಾಪಾಡಿದರು. ಇಂಥದರಲ್ಲೆಲ್ಲ ಪಕ್ವಹೃದಯ ದೇವರ ಕೈಯನ್ನು ಕಂಡಿತು. ಇನ್ನೂ ಹಣ್ಣಾಗದ ಮನಸ್ಸಿಗೆ ಅದರ ಗುರುತು ಹತ್ತಲಿಲ್ಲ. ಅದೃಶ್ಯಲಕ್ಷ್ಮಿ ಬರುವಾಗ ಆಕೆಯ ಗೆಜ್ಜೆಯಕಾಲು ಗಲ್ಲುಗಲ್ಲೆನ್ನುತ್ತದೆ. ಆದರೆ ಆಕೆ ಹೆಜ್ಜೆಯಮೇಲೆ ಹೆಜ್ಜೆಯಿಕ್ಕುತ, ಮೆಲುವಾಗಿ ನಡೆಯುತ್ತಾಳೆ. ಕಾಲಿಟ್ಟರೆ ಹೂವಿನಂತೆ ಮೆದುವಾದ ನಮ್ಮ ಸುಖಸ್ವಪ್ನ ಕೆಟ್ಟೀತಲ್ಲ ಎಂಬ ಹದ ಆಕೆಯದು. ಎಚ್ಚರವಿಲ್ಲದೆ ಆ ಗೆಜ್ಜೆ ಕೇಳಬಾರದು.

ಇಂಥ ಅನೇಕ 'ಘಟನೆಯಲ್ಲಿ ದೇವರ ಕೈವಾಡ ಸ್ಪಷ್ಟವಾಗಿ ಕಂಡು ಬರುತ್ತದೆ. ನನ್ನ ಬಾಳಿನಲ್ಲಿ ಇಂಥವು ಎಷ್ಟೋ ಆಗಿವೆ. ಪದೇಪದೇ ಆಗುತ್ತವೆ. ಇವು ಬರೀ ಆಕಸ್ಮಿಕ ಘಟನೆಯಲ್ಲ.' ಕಳೆದ ವರ್ಷ ಗಾಂಧೀಜಿಯ ದಕ್ಷಿಣ ಆಫ್ರಿಕದ ಜರ್ಮನ್ ಗೆಳೆಯ ಕಾಲೆನ್‌ಬಾಕ್‌ರು ಸೇವಾಗ್ರಾಮಕ್ಕೆ ತಮ್ಮ ಹಳೆಯ ಗೆಳೆಯನ ಭೇಟಿಗಾಗಿ ಬಂದಿದ್ದರು. ಅದೇ ಹೊತ್ತಿಗೆ ಇಂಗ್ಲೆಂಡಿನ ಪ್ರಸಿದ್ಧ ಡಾಕ್ಟರ್ ಚೆಸ್ಟರ್‌ಮನ್ ಬಂದಿದ್ದರು. ಆಗ ಕಾರ್ಲಬಾಕರಿಗೆ ಕಾಯಿಲೆ. ಚೆಸ್ಟರ್‌ಮರ್ನ ಹೊರಟುಹೋದ ಮೇಲೆ ರೋಗ

ಬಲವಾಯಿತು. ಸುಶೀಲಾನಾಯರಿಗೆ ಅದು ಸಾಧ್ಯವಾಗದಾಗಿ ಬೇರೆ ಯಾರಾದರೂ ಡಾಕ್ಟರನ್ನು ಕರೆಸಲು ತಾರುಮಾಡಬೇಕೆನ್ನುವಷ್ಟರಲ್ಲಿ ಚೆಸ್ಟರ್‌ಮನ್ ಆಶ್ರಮದಲ್ಲಿ ಕಾಲಿಟ್ಟರು. ಮರಳಿ ಬರುವದು ಅವರ ಲೆಕ್ಕದಲ್ಲಿರಲಿಲ್ಲ. ಹಾಗೇ ಇಂಗ್ಲೆಂಡಿಗೆ ಹೊರಡಬೇಕಾಗಿತ್ತು. ಅಂಥವರು ಯೋಗಾಯೋಗವಾಗಿ ಬಂದದ್ದು ನಮಗೆಲ್ಲ ಅಚ್ಚರಿಯಾಯಿತು. ಇದು 'ಆಕಸ್ಮಿಕ ಘಟನೆಯಲ್ಲ' ಎಂದು ಗಾಂಧೀಜೀ ತಮ್ಮ ನಂಬಿಗೆಯನ್ನು ತಿಳಿಸಿದರು.

ದೇವರನ್ನು ಪ್ರತ್ಯಕ್ಷವಾಗಿ ಕಾಣಬೇಕೆಂಬ ಹಂಬಲವೂ ಗಾಂಧೀಜಿಗೆ ಇಲ್ಲವೇ ಇಲ್ಲ. 'ಇದಿರುಬದಿರು ನಿಂತು' ಕಣ್ಣಮುಂದೆ 'ದೇವರನ್ನು ನೋಡಬೇಕೆಂದು ಮುಕ್ತಿಪಡೆಯಬೇಕೆಂದು' ಅವರು ಮೂವತ್ತು ವರುಷದಿಂದ ಒಂದೇಸವನೆ ಹೆಣಗುತ್ತಿದಾರೆ. ಅದಕ್ಕಾಗಿ ಬ್ರಹ್ಮಚರ್ಯ, ಅಹಿಂಸೆ, ತ್ಯಾಗ, ಆಹಾರಸಂಯಮಗಳನ್ನು ಅವಲಂಬಿಸಿ, 'ಅಸಿಧಾರಾವ್ರತವನ್ನು ಪಾಲಿಸಿದಾರೆ. ಇಷ್ಟು ತೀವ್ರತಪಸ್ಸು ನಡೆಸಿಯೂ ಅವರಿಗೆ 'ಪರಮತತ್ವದ ಪೂರ್ಣ ದರ್ಶನವಾಗಿಲ್ಲ; ಹಣಿಕಿಹಾಕಿದಂತೆ' ಆಗಿದೆ. ಇದರ ಪರಿಣಾಮ ಅವರ ನುಡಿಯಲ್ಲಿ ಆದಂತೆ ಕಾಣುತ್ತದೆ. 'ದೇವರು ಸತ್ಯಸ್ವರೂಪಿ' ಎಂದು ಮೊದಮೊದಲು ಹೇಳುತ್ತಿದ್ದವರು 'ಸತ್ಯವೇ ಬ್ರಹ್ಮ' ಎನ್ನುತ್ತಿದಾರೆ ಈಗ. 'ಈಶ್ವರ ಸತ್ಯವೆಂಬುದಕ್ಕಿಂತ ಸತ್ಯವೇ ಈಶ್ವರ ಎನ್ನುವದೇ ಸರಿ' ಎನ್ನುತ್ತಿದಾರೆ. ಸಾಕಾರದಲ್ಲಿದ್ದ ಅವರ ನಂಬಿಗೆ ನಿರಾಕಾರದ ಕಡೆಗೆ ಒಲಿಯುತ್ತಿದ್ದಂತೆ ಕಾಣುತ್ತಿದೆ. ಈ ಅಂತವಂತ ಜಗತ್ತಿನ ಅನಂತ್ರಕಾರಣ, ಈ ಮರ್ತ್ಯವಿಶ್ವದ ಅಮೃತಾಧಾರ, ಈ ಕಾಲ ರೂಪ ದೇಶಾದಿ ಮರ್ಯಾದಿತ ಪ್ರಪಂಚದ ಅತೀತ ಸತ್ಯವೇ ಈಶ್ವರನೆಂದು ಅವರು ತಿಳಿದಿದಾರೆ. ಆ ತತ್ವವನ್ನು ಬಾಳಿನಲ್ಲಿ ತರುವದೇ ಮಾನವನ ಗುರಿ, ಅದೇ ಅವನ ಧರ್ಮ. 'ಭಕ್ತನ ಪ್ರತಿಯೊಂದು ಕರ್ಮದಲ್ಲೂ ಆ ನಂಬಿಗೆ ಪ್ರಕಟವಾಗಬೇಕು.' ಮಾಡಿದುದೆಲ್ಲ ಅದರ ದ್ಯೋತಕವಾಗಬೇಕು. ಆ ಶ್ರುತಿಗೆ ಮೇಳಯಿಸದ ಕೆಲಸ ಸಲ್ಲದು.

'ದೇವರು ಪ್ರತ್ಯಕ್ಷವಾಗಿ ರೂಪಗೊಂಡು ನಮಗೆ ಕಾಣಬಾರನೆಂದು' ಗಾಂಧೀಜಿಗೆ ಈಚೆಗೆ 'ನಂಬಿಗೆ'ಯಾಗಿದೆ. ಮೊದಲಸಾರಿ ನಾಸೀಮಾತು

ಕೇಳಿದುದು ಎರಡು ವರ್ಷದ ಕೆಳಗೆ ಅಮೆರಿಕದ ಡಾಕ್ಟರ್ ಮೋರ್ಟರು ಸೇವಾಗ್ರಾಮಕ್ಕೆ ಬಂದಿದ್ದಾಗ. ಡಾಕ್ಟರರು ಅಮೆರಿಕಾ ದೇಶದ ಪ್ರಸಿದ್ಧ ತತ್ವಜ್ಞಾನಿಗಳು. ಅನುಭಾವಿಜಾತಿ. ಅವರು ಆಡಿದ ಮಾತಿನಲ್ಲಿ ಬಹು ಭಾಗ ಅಧ್ಯಾತ್ಮದ ಪ್ರಶ್ನೆಗಳೇ ಇದ್ದವು. ಅವರು–ನಿಮ್ಮ ಜೀವನದ ದುರ್ಭರ ಪ್ರಸಂಗದಲ್ಲಿ ನಿಮಗೆ ಶಾಂತಿ ಕೊಟ್ಟುದು ಏನು? ಎಂದಾಗ ಗಾಂಧೀಜೀ 'ದೇವರಲ್ಲಿ ನಿಶ್ಚಲವಾದ ಭಕ್ತಿ' ಎಂದವರು, ನಿಮಗೆ ಯಾವಾಗಲಾದರೂ ಸಾಕ್ಷಾತ್ಕಾರದ ಅನುಭವವಾಗಿದೆಯೇ ಎಂದಾಗ ಮೇಲೆ ಹೇಳಿದ ಹಾಗೆ ಉತ್ತರಕೊಟ್ಟರು. ಹಾಗಾದರೆ ಗಾಂಧೀಜಿಯ ಅಪಾರ ಭಕ್ತಿ ವ್ಯರ್ಥವೇ? ಅವರ ಶುದ್ಧಹೃದಯದ ಪ್ರಾರ್ಥನೆಗೆ ದೇವರ ಉತ್ತರವಿಲ್ಲವೇ ಎನಿಸಿತು. ಅವರಿಗೆ ಶ್ರೀರಾಮಭಕ್ತಿ ಬಹಳ. ಗಾಂಧೀಜೀ ಮುಂದೆ ಹೇಳಿದರು: 'ಆಪತ್ತಿನಲ್ಲಿ ದೇವರು ಕ್ರಿಯಾರೂಪವಾಗಿ ಅವತರಿಸುತ್ತಾನೆ.' 'ಅಂದರೆ, ದೇವರ ಹೊರತು ಅನ್ಯಕಾರಣದಿಂದ ಆಗಲಾರದ ಕೆಲವು ಪ್ರಸಂಗ ನಡೆ ಯುತ್ತವೆ.' 'ಹೌದು. ಅವು ನಮಗೆ ತಿಳಿಯದೆಯೇ ಅಕಸ್ಮಾತ್ತಾಗಿ ಆಗಿ ಹೋಗುತ್ತವೆ.' 'ದೇವರು ವ್ಯಕ್ತಿ ಎಂದು ನಾನು ತಿಳಿದಿಲ್ಲ; ದೇವರು ಒಂದು ಭಾವ, ಒಂದು ಅರಿವು.'

ಗಾಂಧೀಜೀ ಒಮ್ಮೆ ಅಸ್ಪೃಶ್ಯತಾನಿವಾರಣೆಗಾಗಿ ೨೧ ದಿನದ ದೀರ್ಘೋ ಪವಾಸ ಮಾಡಿದರು. ಅದಕ್ಕೆ ಸಂಬಂಧಿಸಿದ ಅವರಿಗೆ ಅಂಥದೊಂದು ವಿಲಕ್ಷಣ ಅನುಭವವಾಯಿತು. ಗಾಂಧೀಜಿಗೆ ಹಿಂದಿನ ರಾತ್ರಿ ನಿದ್ದೆ ಹೋದಾಗ "ಮರುದಿನ ಬೆಳಿಗ್ಗೆ ಉಪವಾಸವೊಂದನ್ನು ಹಿಡಿಯಬೇಕಾ ದೀತೆಂಬ ವಿಚಾರ ಲೇಶಮಾತ್ರವೂ ಇರಲಿಲ್ಲ. ರಾತ್ರಿ ಹನ್ನೆರಡು ಗಂಟೆಯು ಹೊತ್ತಿನಲ್ಲಿ ಏನೋ ಯಾರೋ ನನ್ನನ್ನು ತಟ್ಟನೆ ಎಬ್ಬಿಸಿದಂತಾಯಿತು. ಒಳಗಿನಿಂದಲೋ ಹೊರಗಿನಿಂದಲೋ ಸರಿಯಾಗಿ ಹೇಳಲು ಸಾಧ್ಯವಿಲ್ಲವಾ ಗಲಿ, ಅಂತೂ 'ನೀನು ಉಪವಾಸ ಮಾಡು' ಎಂದು ಕಿವಿಯಲ್ಲಿ ಒಂದು ವಾಣಿ ಹೇಳಿದಹಾಗಾಯಿತು. 'ಎಷ್ಟು ದಿನ' ಎಂದು ಕೇಳಿದೆ. ಆ ಧ್ವನಿ ಮತ್ತೆ '೨೧ ದಿನ' ಎಂದಿತು. 'ಯಾವಾಗ ಮೊದಲಾಗಬೇಕು?' ನನ್ನ ಪ್ರಶ್ನೆ. 'ನಾಳೆ ಮೊದಲು ಮಾಡು' ಅದರ ಉತ್ತರ. ಹಾಗೇ ನಿರ್ಧಾರ ಮಾಡಿ ನಾನು ಸದ್ದಿಲ್ಲದೆ ನಿದ್ದೆಹೋದೆ. ಮರುದಿನ ಬೆಳಿಗ್ಗೆ ಪ್ರಾರ್ಥನೆ

ಮುಗಿಯುವವರೆಗೆ ನನ್ನ ಸಂಗಾತಿಗಳಿಗೆ ಯಾರಿಗೂ ಅದನ್ನು ಹೇಳಲಿಲ್ಲ. ಅವರ ಕೈಯಲ್ಲಿ ನನ್ನ ನಿರ್ಧಾರ ತಿಳಿಸಲು ಒಂದು ಚೀಟಿ ಕೊಟ್ಟೆ. ಆ ಉಪವಾಸದಲ್ಲಿ ಡಾಕ್ಟರರು ತುಂಬಾ ಹೆದರಿದರು. ನಾನು ಉಳಿಯುವದೇ ಕಷ್ಟವೆಂದರು. ಆದರೆ ನನ್ನೊಳಗಿನ ಏನೋ ಒಂದು ಹೇಳುತ್ತಿತ್ತು; ಹೆದರಬೇಡ, ನೀನು ಕೊನೆಸಾಗಿಸಬಲ್ಲೆ, ಕೊನೆಸಾಗಿಸು. ಅಂಥ ಅನುಭವ ಆದುದು ಅದೊಂದೇ ಸಲ. ಹಿಂದೆ ಆಗಿಲ್ಲ, ಆದರ ಮುಂದೆ ಮತ್ತೆ ಆಗಿಲ್ಲ."

ಆ ಧ್ವನಿ ಕೇಳಿಬಂದಾಗ ಗಾಂಧೀಜಿಯ 'ಮನಸ್ಸು ಅದನ್ನೊಪ್ಪಲು ಸಿದ್ಧವಿರಲಿಲ್ಲ. ಆ ಉಪವಾಸಕ್ಕೂ ಮನಸ್ಸಿರಲಿಲ್ಲ. ಅವತ ಆ ಅನುಭವ ಸ್ಪಷ್ಟಾತಿಸ್ಪಷ್ಟವಾಗಿತ್ತು.' ಇಂಥ ಸಂದೇಶವನ್ನೇ ಗಾಂಧೀಜೀ ಅಂತರ್ವಾಣಿಯೆನ್ನುತ್ತಾರೆ. ಈ ಅಂತರ್ವಾಣಿ ಎಲ್ಲರಲ್ಲೂ ಇದೆ. 'ಅದರ ಧ್ವನಿ ಕೇಳಲು ಶಿಕ್ಷಣ, ಸಾಧನೆ ಬೇಕು. ಮನಸ್ಸಿಗೆ ಬಂದ ಭ್ರಾಂತಿಯೆಲ್ಲಾ ಅಂತರ್ವಾಣಿಯಲ್ಲ. ನಿಗ್ರಹಜೀವನವಿಲ್ಲದೆ ಬರುವ ವಾಣಿ ಪಿತ್ತದ ಆಟ.' ಇದೇ ಅಲ್ಲ, ಗಾಂಧೀಜೀ ಮಾಡಿದ ಮಹತ್ವದ ಕೆಲಸವೆಲ್ಲ ಹೀಗೆ ಆಕಸ್ಮಿಕ. ಸ್ಫೂರ್ತಿಯಿಂದ 'ದೈವಪ್ರೇರಣೆ'ಯಿಂದ ಆಗಿದೆ. ೧೯೩೦ರ ದಾಂಡಿ ದಂಡಯಾತ್ರೆ ತೆಗೆದುಕೊಳ್ಳಿರಿ. 'ಉಪ್ಪಿನ ಸತ್ಯಾಗ್ರಹ ಹೇಗೆ ಪರಿಣಮಿಸೀತೆಂಬುದರ ವಿಚಾರ ನನಗೇನೂ ಇರಲಿಲ್ಲ. ಪಂಡಿತ ಮೋತೀಲಾಲರು ಉಳಿದಗೆಳೆಯರೂ ಕಾತರರಾಗಿದ್ದರು. ನಾನೇನು ಮಾಡುವೆನೆಂಬುದೇ ಅವರಿಗೆ ತಿಳಿಯಲಿಲ್ಲ. ನನಗೆ ಗೊತ್ತಿದ್ದರಲ್ಲವೇ ಅವರಿಗೆ ಹೇಳುವುದು. ಮಿಂಚಿನಂತೆ ಬಂತು ಅದು : ದೇಶವನ್ನು ಅಲ್ಲಿಂದಿಲ್ಲಿಗೆ ಅಲ್ಲಾಡಿಸಿಬಿಟ್ಟಿತು.' ಹರತಾಳದ ಜನ್ಮವೂ ಹಾಗೇ. '೧೯೧೯ರ ಏಪ್ರಿಲ್ ೬ನೇ ತಾರೀಖಿನ ದಿನ ಹರತಾಳದ ದಿನವೆಂದು ಹಿಂದಿನ ದಿನದವರೆಗೆ ನನಗೇ ಗೊತ್ತಿರಲಿಲ್ಲ. ರಾತ್ರಿ ಕನಸಿನಲ್ಲಿ ಅದು ಬಂತು–ಧ್ವನಿಯಾಗಲಿ ದರ್ಶನವಾಗಲಿ ಆಗಲಿಲ್ಲ. ಅದೇ ಸರಿಯೆಂದು ಅನಿಸಿತು. ಬೆಳಿಗ್ಗೆ ರಾಜಾಜಿಗೆ ಹೇಳಿದೆ. ಅವರೂ ಒಪ್ಪಿದರು. ಪರಿಣಾಮ ಎಲ್ಲರಿಗೂ ತಿಳಿದೇ ಇದೆ.'

'ಇದೇನು ಹೊಸದಲ್ಲ. ದೇವರ ವಾಣಿ ನನಗೆ ಕೇಳಿ ಬಂದು ಬಹಳ ದಿನವಾಯಿತು. ಈ ಮಾತನ್ನು ಹೇಗೆ ಪ್ರಮಾಣಮಾಡಿಕೊಡಬೇಕೋ ನನಗೆ ತಿಳಿಯದು. ದಿನ ಕಳೆದಂತೆ, ವಯಸ್ಸು ಆದಹಾಗೆ ಆ ವಾಣಿ

ಹೆಚ್ಚುಹೆಚ್ಚು ಸ್ಪಷ್ಟವಾಗಿ ಕೇಳಿಬರುತ್ತಿದೆ. ಎಷ್ಟೆಷ್ಟುದೂರ ನನ್ನ ಶರಣಾಗತಿಯೋ ಅಷ್ಟಷ್ಟು ಹೆಚ್ಚು ನನ್ನ ಸಂತೋಷ.'

ಭಕ್ತಿಯ ಹಾದಿಯಲ್ಲಿ ಗಾಂಧೀಜಿಯ ದೇವರು ಎಷ್ಟು ಸುಲಭನೋ ತತ್ವದ ರೀತಿಯಲ್ಲಿ ಅಷ್ಟು ಉಕ್ಕಿನ ಕಡಲೆ. 'ಜಗತ್ತು ನಶ್ವರವಿದ್ದರೂ ಅದರಲ್ಲಿ ಅವಿನಾಶಿಯಾದ ಏನೋ ಒಂದಿದೆ. ಆ ಮಿಥ್ಯೆಯಲ್ಲಿ ಅಷ್ಟು ಸತ್ಯವೂ ಇದೆ. ಆದ್ದರಿಂದ ಜಗತ್ತು ಮಿಥ್ಯವೂ ಹೌದು, ಸತ್ಯವೂ ಹೌದು ಎನ್ನುತ್ತೇನೆ. ನಾನು ಅದ್ವೈತಿಯಿದ್ದೂ ದ್ವೈತವನ್ನು ಒಪ್ಪುತ್ತೇನೆ. ನನ್ನನ್ನು ನೀವು ಅನೇಕಾಂತವಾದಿ ಅಥವಾ ಸ್ಯಾದ್ವಾದಿ ಎನ್ನಬಹುದು. ಆದರೆ ನನ್ನ ಸಾದ್ವಾದ ಪಂಡಿತರದಲ್ಲ. ಆನೆಯನ್ನು ಆರುಜನ ಕುರುಡರು ಮುಟ್ಟಿ ಆರು ರೀತಿಯಾಗಿ ವರ್ಣಿಸಿದರೆಂದು ಒಂದು ಕತೆಯಿದೆ. ಅವರು ಹೇಳಿದುದು ಅವರ ಪಾಲಿಗೆ ಸರಿ, ಇನ್ನೊಬ್ಬನಿಗೆ ತಪ್ಪು. ಕಣ್ಣಿದ್ದವನಿಗೆ ಅವರಲ್ಲಿ ಪ್ರತಿಯೊಬ್ಬನದೂ ಸರಿಯೂ ಹೌದೂ, ತಪ್ಪೂ ಹೌದು. ಇದರೊಳಗಿನ ತತ್ವ ಸತ್ಯ ಅನಂತರೂಪ ಎಂಬುದು. ಈ ಅನೇಕಾಂತವಾದಕ್ಕೆ ಸತ್ಯ ಅಹಿಂಸೆಗಳೇ ಆಧಾರ. ಇದರಿಂದ ದೇವರು ಸೃಷ್ಟಿಕರ್ತನೆಂಬುದು ಸರಿ, ಅಲ್ಲವೆಂದರೂ ಸರಿಯೆ. ರಾಮಾನುಜನ ಹಾದಿಯಲ್ಲಿ ದೇವರ ಸೃಷ್ಟಿಶಕ್ತಿಯನ್ನೂ ನಾನು ಸಮರ್ಥಿಸುತ್ತೇನೆ. ಜೈನರ ಶಾಸ್ತ್ರಗಳನ್ನುಹಿಡಿದು ದೇವರ ಶಕ್ತಿ ಅಸೃಷ್ಟಿಯೆಂದೂ ತಿಳಿಯುತ್ತೇನೆ. ನಿಜವಾಗಿ ನಾವೆಲ್ಲ ಅವರ್ಣನೀಯವನ್ನು ವರ್ಣಿಸಬಯಸುತ್ತೇವೆ, ಅಚಿಂತ್ಯನನ್ನು ಚಿಂತಿಸುತ್ತೇವೆ. ಅಜ್ಞೇಯನನ್ನು ತಿಳಿಯಬಯಸುತ್ತೇವೆ. ಅಂತಲೇ ಮಾತು ಸಾಲದೆ ಬರುತ್ತದೆ. ತಪ್ಪಾಗುತ್ತದೆ, ವಿರುದ್ಧವೂ ಆಗುತ್ತದೆ. ಅದಕ್ಕಾಗಿಯೇ ವೇದಗಳು 'ನೇತಿ ನೇತಿ' ಎಂದು ಬ್ರಹ್ಮನನ್ನು ವರ್ಣಿಸುತ್ತವೆ. ಅವನು ಏಕಂ-ಒಬ್ಬನೇ ಆದರೂ-ಬಹುಧಾ-ಅನೇಕವೂ ಆಗಿದಾನೆ; ಅಣುವಿಗಿಂತ ಅಣುವಾಗಿಯೂ ಮಹತ್ತಿಗಿಂತ ಮಹತ್ತಾಗಿದ್ದಾನೆ; ಸಮುದ್ರದ ಒಂದು ಹನಿಯಲ್ಲೂ ಅವನಿದಾನೆ. ಆದರೆ ಸಪ್ತಸಮುದ್ರಗಳೂ ಅವನನ್ನು ಮುಚ್ಚಲಾರವು.'

'ಈ ಅನೇಕಾಂತವಾದವೇ ನನಗೆ ಮುಸ್ಲಿಮನನ್ನೂ ಕ್ರೈಸ್ತನನ್ನೂ ಅವನವನ ನಿಟ್ಟನಿಂದ ನೋಡುವಂತೆ ಕಲಿಸಿತು. ಒಬ್ಬರ ಧರ್ಮವನ್ನೊಬ್ಬರು ಹಳಿವುದು, ಸ್ವೇಚ್ಛೆಯಾಗಿ ಆಡುವದೂ, ಸುಳ್ಳು ಹೇಳುವದೂ,

ನಿರಪರಾಧಿಗಳ ತಲೆ ಒಡೆವುದೂ, ಮಸೀದಿ ಮಂದಿರಗಳನ್ನು ಅಪವಿತ್ರಗೊಳಿಸುವುದೂ ಆಸ್ತಿಕತೆಯಲ್ಲ; ನಾಸ್ತಿಕತೆ.' ಕಾಶಿಯಲ್ಲೂ ಇಲ್ಲ, ಕಾಬಾದಲ್ಲೂ ಇಲ್ಲ; ಅಲ್ಲಿಲ್ಲ ಇಲ್ಲಿಲ್ಲ, ಎಲ್ಲೆಲ್ಲೂ ಇರುವನೆಂದು ಹೇಳಿದ ಕಬೀರದಾಸನಂತೆ ಗಾಂಧೀಜೀ 'ಇಸ್ಲಾಮಿನ ಅಲ್ಲಾ, ಕ್ರೈಸ್ತರ ಗಾಡ್, ಹಿಂದೂಗಳ ಈಶ್ವರ–ಎಲ್ಲರೂ ಒಂದೇ. ಹಿಂದೂಧರ್ಮದಲ್ಲಿ ದೇವರಿಗೆ ಅನೇಕ ಹೆಸರಿದ್ದಂತೆ ಇಸ್ಲಾಮಿನಲ್ಲೂ ದೇವರ ಬಹಳ ಹೆಸರಿವೆ. ಈ ಹೆಸರೆಲ್ಲ ಒಂದೊಂದು ಗುಣದ ರೂಪ, ಇಡೀ ವ್ಯಕ್ತಿಯಲ್ಲ. ದೈವಭಕ್ತಿಯಲ್ಲಿ ಸರ್ವಧರ್ಮಕ್ಕೂ ಸಮಾನ ಗೌರವವಿರಬೇಕು ನನ್ನ ಧರ್ಮವೇ ಶ್ರೇಷ್ಠ, ಇತರರ ಧರ್ಮ ಹೇಯವೆಂಬ ಭಾವನೆ ಅಸಹನೆಯ ಪರಮಾವಧಿ; ಅಸಹನೆ ಹಿಂಸೆಯ ಮರಿ.' 'ಪರಮಧರ್ಮದಲ್ಲಿ ಎಲ್ಲವೂ ಬಂತು; ಹಿಂದೂ, ಇಸ್ಲಾಂ, ಕ್ರೈಸ್ತ, ಎಲ್ಲಾ. ಇವೆಲ್ಲವನ್ನೂ ಮೀರಿದುದು ಅದು. ಅದರ ಹೆಸರು ಸತ್ಯ.' ಇತರ ಧರ್ಮಗಳನ್ನು ಸುಮ್ಮನೆ ಸಹಿಸುವದಲ್ಲ. ಪರಮತ ಗುಣಗ್ರಹಣ ಗಾಂಧೀಜಿಯ ಸ್ವಭಾವ. ಮಹಮ್ಮದ್ ಪೈಗಂಬರನ ಗುಣಗಳನ್ನೂ ಇಸ್ಲಾಮಿ ಸತ್ಪುರುಷರ ಕತೆಗಳನ್ನೂ ಅವರು ಮೇಲಿಂದಮೇಲೆ ನೆನೆಯುತ್ತಾರೆ. ಕ್ರೈಸ್ತನ ಬಗ್ಗೆ ತುಂಬಾ ಆದರ. ಅವರ ಬಾಳಿನಮೇಲೆ ಅವನ ಪ್ರಭಾವ ತುಂಬಾ ಬಿದ್ದಿದೆ. ಪಾರ್ಸೀಜನರ ಅವೆಸ್ತಾವನ್ನು ಆದರಿಸುತ್ತಾರೆ. ತಮ್ಮಮಟ್ಟಿಗೆ ತಮಗೆ ಗೀತೆಯ ವಾಕ್ಯವೇ ಸತ್ಯ 'ಸ್ವಧರ್ಮೇ ನಿಧನಂ ಶ್ರೇಯಃ' ಹಿಂದೂಧರ್ಮವೇ ಅವರ ಹಾದಿ. ಅಲ್ಲಿ ಭಕ್ತಿ ಪ್ರಪತ್ತಿ-ಪ್ರಾರ್ಥನೆಗಳೇ ಅವರ ಊರುಗೋಲು.

'ದೇವರು ಬಳಿಯಲ್ಲೇ ಇದಾನೆಂದು ಅನಿಸುತ್ತಿದೆಯಾಗಲಿ ದೂರದಲ್ಲೇ ಇರುವಹಾಗಿದೆ. ನನಗೆ ನೇರಾದ ಹಾದಿ ತೋರಿಸಲೊಲ್ಲ, ಸರಿಯಾಗಿ ನಡೆಯಿಸಲೊಲ್ಲ. ಗೋಪಿಯರನ್ನು ಗೋಳಾಡಿಸಿದ ಕೃಷ್ಣನಂತೆ ಕಾಣಿಸಿಕೊಂಡೂ ಮರೆಯಾಗುತ್ತಾನೆ.

'ಪ್ರಾಣಕ್ಕೂ ಎರವಾಗಿಯಾದರೂ ಪಾಪದೊಡನೆ ಹೋರಾಡದೆ ದೇವರನ್ನು ತಿಳಿದುಕೊಳ್ಳಲಾರನೆಂಬುದು ನನಗೆ ಗೊತ್ತಿದೆ. ತನ್ನ ಅಲ್ಪಾನುಭವದಿಂದ ಈ ನಂಬಿಗೆಯ ಕೋಟೆಯನ್ನು ಕಟ್ಟಿದೇನೆ. ಎಷ್ಟೆಷ್ಟು ಪವಿತ್ರನಾಗುತ್ತೇನೋ ಅಷ್ಟಷ್ಟು ದೇವರಿಗೆ ಹತ್ತಿರವಾಗುತ್ತೇನೆ ಎಂಬ ನಂಬಿಗೆ ಇದೆ.


ಇಂದು ನನ್ನ ಭಕ್ತಿ ಬರೀ ಕ್ಷಮಾಯಾಚನೆ. ಅದೇ ಹಿಮಾಲಯದಂತೆ ಅಚಲವೂ, ಅದರ ಉತ್ತುಂಗ ಶಿಖರದಂತೆ ಧವಳವೂ ತೇಜಃಪುಂಜವೂ ಆದರೆ ಹೇಗಿರಬೇಡ ಅದು! ನ್ಯೂಮನ್‌ನೊಡನೆ ನಾವೂ ಹೇಳುವ

ಕರುಣಾಳು ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ,
ಕೈಹಿಡಿದು ನಡಸೆನ್ನನು.
ಇರುಳು ಕತ್ತಲೆಯ ಗವಿ; ಮನೆ ದೂರ; ಕನಿಕರಿಸಿ
ಕೈ ಹಿಡಿದು ನಡಸೆನ್ನನು.
ಹೇಳಿ ನನ್ನಡಿಯಿಡಿಸು; ಬಲುದೂರ ನೋಟವನು
ಕೇಳೆನೊಡನೆಯೆ—ಸಾಕು ನನಗೊಂದು ಹೆಜ್ಜೆ.
ಮುನ್ನ ಇಂತಿರದಾದೆ; ನಿನ್ನ ಬೇಡದೆ ಹೋದೆ,
ಕೈ ಹಿಡಿದು ನಡಸು ಎನುತ.
ನನ್ನ ದಾರಿಯ ನಾನೆ ನೋಡಿ ಹಿಡಿದೆನು; ಇನ್ನು
ಕೈ ಹಿಡಿದು ನಡಸು ನೀನು.
ಮಿರುಗು ಬಣ್ಣಕೆ ಬೆರೆತು, ಭಯಮರೆತು, ಕೊಬ್ಬಿದೆನು;
ಮರೆದಾಯ್ತು; ನೆನೆಯದಿರು ಹಿಂದಿನದೆಲ್ಲ.
ಇಷ್ಟು ದಿನ ಸಲಹಿರುವೆ ಮೂರ್ಖನನು ಮುಂದೆಯೂ
ಕೈಹಿಡಿದು ನಡಸದಿಹೆಯಾ?
ಕಷ್ಟದಡವಿಯ ಕಳೆದು, ಬೆಟ್ಟ ಹೊಳೆಗಳ ಹಾದು,
ಇರುಳನ್ನು ನೂಕದಿಹೆಯಾ?
ಬೆಳಗಾಗ ಹೊಳೆಯದೇ ಹಿಂದೊಮ್ಮೆ ನಾನೊಲಿದು
ಈ ನಡುವೆ ಕಳೆಕೊಂಡ ದಿವ್ಯಮುಖ ನಗುತ?'

('ಶ್ರೀ'ಯವರ ಭಾಷಾಂತರ.)

The Recipe

Into a bare handful of bone and skin
Pour just an ounce of flesh and blood;
Put in a heart love-full as sea in flood,
Likewise a mind profound and free from sin;
Fix on two jumbo ears, two goo-goo eyes;
Paint on a smile of babe at mother's breast;
Inclose a soul that caps Himavat's crest
And speaks with tongue which honey's sweet defies;
The "stuffing"? goat's milk soya beans and dates!
Now, cover to brim with suffering humans' tears
And bake this dish in gaol for umpteen years:
Take out and 'garnish' it with pariah mates;
Wrap up in rags, prop up with lithe bamboo
And serve: The World Redeemer: OUR BAPOO !!!



November 30th, 1942

ಮುದ್ರಕರು:

ಎಸ್. ನಂಜಪ್ಪನವರು,

ಉಷಾ ಪ್ರೆಸ್,

೮೪೩, ಚಿಕ್ಕಪೇಟೆ, ಬೆಂಗಳೂರು ಸಿಟಿ